ಸಂಪುಟ: 67 ಸಂಚಿಕೆ: 80 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ದಿನಕ್ಕೊಂದು ಬಿಜೆಪಿ ಹಗರಣ ಬಹಿರಂಗ: ಡಿ.ಕೆ. ಶಿವಕುಮಾರ್

ಬೆಂಗಳೂರು: ಬಿಜೆಪಿಯವರು ಪಾದಯಾತ್ರೆ ಆರಂಭಿಸಲಿ. ಅವರು ಪಾದಯಾತ್ರೆ ಮಾಡುವಾಗ ಪ್ರತಿನಿತ್ಯ ಒಂದೊಂದು ಅವರ ಅವಧಿಯಲ್ಲಿನ ಅಕ್ರಮಗಳನ್ನು ಬಯಲು ಮಾಡುತ್ತಾ ಹೋಗುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸವಾಲು ಹಾಕಿದರು. ವಿಧಾನಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯವರು ಪಾದಯಾತ್ರೆ, ಹೋರಾಟ ಮಾಡುವ ಮುನ್ನ, ಅವರ ಕಾಲದಲ್ಲಿ ಆಗಿರುವ ಅಕ್ರಮಗಳ ಬಗ್ಗೆ ಮೊದಲು ಉತ್ತರ ನೀಡಲಿ. ಅವರ ಕಾಲದ ಅಕ್ರಮಗಳಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು ಭಾಗಿಯಾಗಿದ್ದಾರೋ, ಮಂತ್ರಿಗಳು ಭಾಗಿಯಾಗಿದ್ದರೋ, ಅಧಿಕಾರಿಗಳು ಭಾಗಿಯಾಗಿದ್ದಾರೋ ಎಂದು ಉತ್ತರ ನೀಡಲಿ ಎಂದರು.

ಕರ್ನಾಟಕ ಸರ್ಕಾರ

ಜಲ ಸಂಪನ್ಮೂಲ ಇಲಾಖೆ

ಕಾವೇರಿ ನೀರಾವರಿ ನಿಗಮ ನಿಯಮಿತ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಕೃಷ್ಣರಾಜಸಾಗರ ಮತ್ತು ಕಬಿನಿ ಜಲಾಶಯಗಳು

ಭರ್ತಿಯಾಗಿರುವ ಸಮೃದ್ಧಿಯ ಸಂಕೇತದ ಶುಭ ಸಂದರ್ಭದಲ್ಲಿ
ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ರವರು
ಹಾಗೂ
ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ರವರಿಂದ

ಶ್ರೀ ಕಾವೇರಿ ಮಾತೆಗೆ ಪೂಜೆ ಹಾಗೂ ಬಾಗಿನ ಸಮರ್ಪಣೆ

ಕೃಷ್ಣರಾಜಸಾಗರ ಜಲಾಶಯಕ್ಕೆ ಬಾಗಿನ ಸಮರ್ಪಣೆ ಕಾರ್ಯಕ್ರಮ

ದಿನಾಂಕ : 29.07.2024, ಸೋಮವಾರ, ಬೆಳಿಗ್ಗೆ 11.00 ಗಂಟೆಗೆ
ಸ್ಥಳ : ಕೃಷ್ಣರಾಜಸಾಗರದ ಶ್ರೀ ಕಾವೇರಿ ಮಾತೆ ಪ್ರತಿಮೆಯ ಬಳಿ

ಘನ ಉಪಸ್ಥಿತಿ

ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಮಾನ್ಯ ಕೇಂದ್ರ ಸಚಿವರು, ಬೃಹತ್ ಕೈಗಾರಿಕೆ ಹಾಗೂ ಉಕ್ಕು ಇಲಾಖೆ, ಭಾರತ ಸರ್ಕಾರ

ಶ್ರೀ ಚಲುವರಾಯಸ್ವಾಮಿ
ಮಾನ್ಯ ಸಚಿವರು, ಕೃಷಿ ಇಲಾಖೆ
ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಎನ್.ಎಸ್. ಬೋಸರಾಜು
ಮಾನ್ಯ ಸಚಿವರು, ಸಣ್ಣ ನೀರಾವರಿ ಹಾಗೂ ವಿಜ್ಞಾನ, ತಂತ್ರಜ್ಞಾನ ಇಲಾಖೆ
ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಕೆ. ವೆಂಕಟೇಶ್
ಮಾನ್ಯ ಸಚಿವರು, ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ

ಅಧ್ಯಕ್ಷತೆ :
ಶ್ರೀ ರಮೇಶ್ ಬಾಬು ಬಂಡಿ ಸಿದ್ದೇಗೌಡ
ಮಾನ್ಯ ಶಾಸಕರು
ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ

ಮಾನ್ಯ ಜಲ ಸಂಪನ್ಮೂಲ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್ ರವರು ಮಾನ್ಯ ಕೃಷಿ ಸಚಿವರಾದ ಶ್ರೀ ಚಲುವರಾಯಸ್ವಾಮಿ ಯವರೊಂದಿಗೆ ಕೆ.ಆರ್.ಎಸ್. ಜಲಾಶಯವನ್ನು ವೀಕ್ಷಿಸುತ್ತಿರುವುದು.

ಕಬಿನಿ ಜಲಾಶಯಕ್ಕೆ ಬಾಗಿನ ಸಮರ್ಪಣೆ ಕಾರ್ಯಕ್ರಮ

ದಿನಾಂಕ : 29.07.2024, ಸೋಮವಾರ, ಅಪರಾಹ್ನ 3.00 ಗಂಟೆಗೆ
ಸ್ಥಳ : ಕಬಿನಿ ಜಲಾಶಯ, ಬೀಚನಹಳ್ಳಿ, ಹೆಗ್ಗಡದೇವನಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ

ಘನ ಉಪಸ್ಥಿತಿ

ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಮಾನ್ಯ ಕೇಂದ್ರ ಸಚಿವರು, ಬೃಹತ್ ಕೈಗಾರಿಕೆ ಹಾಗೂ ಉಕ್ಕು ಇಲಾಖೆ, ಭಾರತ ಸರ್ಕಾರ

ಶ್ರೀ ಹೆಚ್.ಸಿ. ಮಹದೇವಪ್ಪ
ಮಾನ್ಯ ಸಚಿವರು, ಸಮಾಜ ಕಲ್ಯಾಣ ಇಲಾಖೆ
ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಎನ್.ಎಸ್. ಬೋಸರಾಜು
ಮಾನ್ಯ ಸಚಿವರು, ಸಣ್ಣ ನೀರಾವರಿ ಹಾಗೂ ವಿಜ್ಞಾನ, ತಂತ್ರಜ್ಞಾನ ಇಲಾಖೆ
ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಕೆ. ವೆಂಕಟೇಶ್
ಮಾನ್ಯ ಸಚಿವರು, ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ

ಅಧ್ಯಕ್ಷತೆ :
ಶ್ರೀ ಅನಿಲ್ ಚಿಕ್ಕಮಾದು
ಮಾನ್ಯ ಶಾಸಕರು
ಹೆಗ್ಗಡದೇವನಕೋಟೆ ವಿಧಾನಸಭಾ ಕ್ಷೇತ್ರ

ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಶ್ರೀ ಹೆಚ್. ಸಿ. ಮಹದೇವಪ್ಪ ರವರು ಮಾನ್ಯ ಜಲ ಸಂಪನ್ಮೂಲ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್ ರವರೊಂದಿಗೆ ಸಮಾರಂಭವೊಂದರಲ್ಲಿ ಭಾಗವಹಿಸಿರುವುದು.

ಮುಖ್ಯ ಅತಿಥಿಗಳು

ಮಾನ್ಯ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರುಗಳು, ವಿಧಾನಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳು, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು, ನಿಗಮ ಮಂಡಳಿ ಅಧ್ಯಕ್ಷರುಗಳು ಹಾಗೂ ಎಲ್ಲಾ ಚುನಾಯಿತ ಜನಪ್ರತಿನಿಧಿಗಳು

ಕಾವೇರಿ ನ್ಯಾಯಾಧೀಕರಣದಂತೆ ತಮಿಳುನಾಡಿಗೆ ಬಿಳಿಗುಂಡ್ಲುವಿನಲ್ಲಿ ಹರಿಸಬೇಕಾದ ನೀರಿನ ಪ್ರಮಾಣ ಹಾಗೂ ವಾಸ್ತವವಾಗಿ ಹರಿಸಿದ ನೀರಿನ ಪ್ರಮಾಣದ ವಿವರಗಳು

ಕಳೆದ 6 ವರ್ಷಗಳಲ್ಲಿ

ಜಲವರ್ಷ	ಕಾವೇರಿ ನ್ಯಾಯಾಧೀಕರಣದಂತೆ ಹರಿಸ ಬೇಕಾದ ನೀರಿನ ಪ್ರಮಾಣ (ಟಿ.ಎಂ.ಸಿ)	ವಾಸ್ತವವಾಗಿ ಬಿಳಿಗುಂಡ್ಲುವಿನಲ್ಲಿ ಹರಿಸಿರುವ ನೀರಿನ ಪ್ರಮಾಣ (ಸಿ.ಡಬ್ಲ್ಯೂ.ಸಿ ಯ ಮಾಪನದ ಪ್ರಕಾರ) (ಟಿ.ಎಂ.ಸಿ)
2018-19	ದಿ: 16.02.2018 ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ 177.250	404.444
2019-20		275.40
2020-21		211.316
2021-22		281.084
2022-23		667.533
2023-24		81.417

ಪ್ರಸಕ್ತ ಜಲವರ್ಷದಲ್ಲಿ (2024-25)

ತಿಂಗಳು	ಕಾವೇರಿ ನ್ಯಾಯಾಧೀಕರಣದಂತೆ ಮಾಸಿಕವಾರು ಹರಿಸಬೇಕಾದ ನೀರಿನ ಪ್ರಮಾಣ (ಟಿ.ಎಂ.ಸಿ)	ವಾಸ್ತವವಾಗಿ ಬಿಳಿಗುಂಡ್ಲುವಿನಲ್ಲಿ ಮಾಸಿಕವಾರು ಹರಿಸಿರುವ ನೀರಿನ ಪ್ರಮಾಣ (ಸಿ.ಡಬ್ಲ್ಯೂ.ಸಿ ಯ ಮಾಪನದ ಪ್ರಕಾರ) (ಟಿ.ಎಂ.ಸಿ)
ಜೂನ್ 2024	9.19	2.252
ಜುಲೈ 2024	25.19 (25.07.2024)	43.081
25 ಜುಲೈ 2024ರ ಸಂಚಿತ ಅವಧಿಗೆ	34.38	45.33

ನುಡಿದಂತೆ ನಡೆದಿದ್ದೇವೆ...

ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಗೃಹ ಜ್ಯೋತಿ – ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ | ಅನ್ನಭಾಗ್ಯ – 10 kg | ಗೃಹಲಕ್ಷ್ಮಿ – ₹2000 | ಯುವನಿಧಿ – ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

ಸರ್ವರಿಗೂ ಆದರದ ಸುಸ್ವಾಗತ

ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ | ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ | ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ

ನಾಡಿನ ನೈಸರ್ಗಿಕ ಪರಿಸರವನ್ನೊಳಗೊಂಡ ಅರಣ್ಯಗಳು, ಸರೋವರಗಳು, ನದಿಗಳು ಹಾಗೂ ವನ್ಯ ಜೀವಿಗಳನ್ನು ಸಂರಕ್ಷಿಸುವುದು ಹಾಗೂ ಉತ್ತಮಗೊಳಿಸುವುದು ಪ್ರತಿಯೊಬ್ಬ ನಾಗರಿಕನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸಮಾಚಾರ ಸಣ್ಣದಲ್ಲ

ಬೆಳೆಗಳು ರೋಗಕ್ಕೆ ತುತ್ತಾಗದಂತೆ ಕ್ರಮ

ಬೈಲಹೊಂಗಲ: ಅತಿಯಾದ ಮಳೆಯಿಂದ ಬೆಳೆಗಳಿಗೆ ವಿವಿಧ ರೋಗಗಳಿಗೆ ತುತ್ತಾಗದಂತೆ ಮುಂಜಾಗ್ರತಾ ಕ್ರಮವಾಗಿ ಗುರುವಾರ ವಿಜ್ಞಾನಿಗಳಾದ ಡಾ. ಎಸ್.ಎಸ್.ಹಿರೇಮಠ, ಡಾ.ಜಿ.ಬಿ.ವಿಶ್ವನಾಥ, ಸವದತ್ತಿ ಸಹಾಯಕ ಕೃಷಿ ನಿರ್ದೇಶಕರು ಶಿವಪ್ರಕಾಶ ಪಾಟೀಲ, ವಿಷಯ ತಜ್ಞ ಸಿ.ಐ.ಹೂಗಾರ ಹಾಗೂ ಕೃಷಿ ಸಂಜೀವಿನಿ ಸಿಬ್ಬಂದಿಗಳು ರೈತರ ಜಮೀನುಗಳಿಗೆ ಭೇಟಿ ನೀಡಿ, ಬೆಳೆಗಳ ವಿಕ್ಷಣೆ ಮಾಡಿ ಹೆಸರು ಬೆಳೆಗೆ ಹಳದಿ ನಂಜು ರೋಗ, ಎಲೆ ಚುಕ್ಕೆ ರೋಗ, ಬೂದು ರೋಗ, ಸೊಯಾಬಿನ್ ಬೆಳೆಯಲ್ಲಿ ಕೀಟ ಬಾಧೆ, ಗೋವಿನಜೋಳ ಬೆಳೆಯಲ್ಲಿ ಲದ್ದಿ ಹುಳು ಕಾಟ ಕುರಿತು ರೋಗ ಮತ್ತು ಕೀಟ ಬಾಧೆಗಳ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಕೃಷಿ ಅಧಿಕಾರಿ ಎಂ.ಎ.ಅಮತೆ, ರೈತರಾದ ರವಿ ಕುರಬೆಟ್ಟ, ಮಂಜುನಾಥ ಮುರಕೀಭಾಂವಿ, ಬಸವರಾಜ ರೇವಣ್ಣವರ, ಮಡಿವಾಳಪ್ಪ ಗುರಕನವರ, ಮಲ್ಲಿಕಾರ್ಜುನ ಬೈಲವಾಡ, ಮಂಜುನಾಥ ಮೇಟಿ ಉಪಸ್ಥಿತರಿದ್ದರು.

ಸೈನಿಕ, ಕೃಷಿಕ, ಶಿಕ್ಷಕ ದೇಶದ ನಿಜವಾದ ಆಸ್ತಿ

ಅಥಣಿ: ದೇಶವನ್ನು ಕಾಯುವ ಸೈನಿಕ, ದೇಶಕ್ಕೆ ಅನ್ನ ನೀಡುವ ಕೃಷಿಕ ಮತ್ತು ಭವಿಷ್ಯ ಭಾರತದ ಪ್ರಜೆಗಳಿಗೆ ಮಾರ್ಗದರ್ಶನ ಮಾಡುವ ಶಿಕ್ಷಕ ಈ ದೇಶದ ತ್ರಿನೇತ್ರಗಳು. ಇವರೇ ಭಾರತದ ನಿಜವಾದ ಆಸ್ತಿಯಾಗಿದ್ದಾರೆ ಎಂದು ಸುಕ್ಷೇತ್ರ ಗಚ್ಚಿನಮಠದ ಶಿವಬಸವ ಸ್ವಾಮೀಜಿ ಹೇಳಿದರು. ಪಟ್ಟಣದ ಗಚ್ಚಿನಮಠದ ಸಭಾಂಗಣದಲ್ಲಿ ಅಥಣಿ ತಾಲೂಕ ಮಾಜಿ ಸೈನಿಕರ ಸಮಿತಿ ವತಿಯಿಂದ ಆಯೋಜಿಸಲಾಗಿತ್ತು ಕಾರ್ಗಿಲ್ ವಿಜಯೋತ್ಸವದ ರಜತ ಸಂಭ್ರಮ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು. ದೇಶದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸಬೇಕಾದರೆ ಸೈನಿಕರ ಪಾತ್ರ ಬಹಳ ಮಹತ್ತರವಾಗಿದೆ. ನಮ್ಮ ಭಾರತದ ಇತಿಹಾಸದಲ್ಲಿ ಕಾರ್ಗಿಲ್ ಯುದ್ಧವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. 74 ದಿನಗಳ ಕಾಲ 20 ಸಾವಿರಕ್ಕೂ ಅಧಿಕ ಸೈನಿಕರು ಯುದ್ಧದಲ್ಲಿ ಹೋರಾಡಿದ್ದಾರೆ. 590 ಸೈನಿಕರು ಹುತಾತ್ಮರಾಗಿದ್ದಾರೆ.

ಉಚಿತ ಔಷಧಿ ವಿತರಣೆ ಶಿಬಿರ

ಗೋಕಾಕ: ರೋಟರಿ ಸೇವಾ ಸಂಘ, ರೋಟರಿ ಸಂಸ್ಥೆ ಹಾಗೂ ಇನರವ್ಹಿಲ್ ಸಂಸ್ಥೆ ಗೋಕಾಕ ಇವುಗಳ ಸಂಯುಕ್ತಾಶ್ರಯದಲ್ಲಿ ಭಾನುವಾರ ಜು.28 ರಂದು ಸ್ತ್ರೀಯರಿಗೆ ಹಾಗೂ ಚಿಕ್ಕ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಉಚಿತ ಔಷಧಿ ವಿತರಣೆ ಶಿಬಿರವನ್ನು ಮುಂಜಾನೆ 10 ಗಂಟೆಯಿಂದ ಮಧ್ಯಾಹ್ನ 2 ಘಂಟೆಯವರೆಗೆ ನಗರದ ಸಬ್ ಜೈಲು ಎದುರಿಗಿನ ರಸ್ತೆಯಲ್ಲಿರುವ ವಣ್ಣೂರ ಚಿಕ್ಕಮಕ್ಕಳ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಶಿಬಿರದಲ್ಲಿ ಡಾ.ಪ್ರೀತಿ ವಣ್ಣೂರ, ಡಾ.ಅಶೋಕ ಜಿರಗ್ಯಾಳ, ಹಾಗೂ ಡಾ. ಶೃತಿ ಹೊಸಮನಿ ಪಾಲ್ಗೊಳ್ಳಲ್ಲಿದ್ದು, ಹೆಸರು ನೊಂದಯಿಸುವವರು ಡಾ.ಕಮತ್ ಆಸ್ಪತ್ರೆ, ವಣ್ಣೂರ ಚಿಕ್ಕಮಕ್ಕಳ ಆಸ್ಪತ್ರೆ ಹಾಗೂ ಜವಳಿ ವರ್ತಕರಾದ ಆರ್.ಪಿ.ಗುಲ್ ಇವರಲ್ಲಿ ನೊಂದಾಯಿಸುವಂತೆ ರೋಟರಿ ಅಧ್ಯಕ್ಷ ಡಾ.ಸಿದ್ದಣ್ಣ ಕಮತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಅಥಣಿ: ಇಲ್ಲಿನ ಹೆಸ್ಕಾಂ ವ್ಯಾಪ್ತಿಯಲ್ಲಿನ ನಂದಗಾಂವ, ಶಿರಹಟ್ಟಿ, ಸಂಕೋನಟ್ಟಿ, ಯಕ್ಕಂಚಿ ಗುಂಡೆವಾಡಿ ಮಸರಗುಪ್ಪಿ ತಂಗಡಿ, ಕಟಗೇರಿ ಬಸವಗುಡಿ, ಬಡಚಿ, ಮಿನಿ ವಿಧಾನ ಸೌಧಾ ಮತ್ತು ಮುರಗುಂಡಿ ಗ್ರಾಮಗಳಿಗೆ ಸಂಬಂಧಿಸಿದ ವಿದ್ಯುತ್ ಘಟಕಗಳಲ್ಲಿ ಉಪಕರಣ ಹಾಗೂ ಪರಿವರ್ತಕಗಳ ತ್ರೈಮಾಸಿಕ ಕಾರ್ಯನಿರ್ವಹಣೆ ಇರುವುದರಿಂದ ಶನಿವಾರ ಜು.27ರಂದು ಮುಂಜಾನೆ 11:00 ಯಿಂದ ಸಾಯಂಕಾಲ 5:00 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಆದ್ದರಿಂದ ಸಾರ್ವಜನಿಕರು ಸಹಕರಿಸಬೇಕೆಂದು ಅಥಣಿ ಹೆಸ್ಕಾಂ ಉಪಯೋಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಗೆ ತಿಳಿಸಿದ್ದಾರೆ.

ಅಗಲಿದ ಜೀವ

ಚಂದ್ರಕಾಂತ ಶಿರೋಳ

ಗೋಕಾಕ:ನಗರದ ವೀರಶೈವ ಹಡಪದ ಅಪ್ಪಣ್ಣ ಸಮಾಜದ ಹಿರಿಯರು, ಸಾಯಿ ಮಂದಿರದ ಹತ್ತಿರದ ನಿವಾಸಿ ನಿವೃತ್ತ ಕೆಇಬಿ ನೌಕರ ಚಂದ್ರಕಾಂತ ಹನಮಂತಪ್ಪ ಶಿರೋಳ 79 ಇವರು ಜು.25ರಂದು ನಿಧನರಾದರು. ಮತೃರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂದು ಬಳಗವನ್ನು ಬಿಟ್ಟು ಅಗಲಿದ್ದಾರೆ.

{ ಸತೀಶ ಜಾರಕಿಹೊಳಿ } ಸಚಿವ

ಖಾನಾಪುರದ ಹಲವು ಹಳೆಯ ಸೇತುವೆಗಳಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಭಾರಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಇನ್ನೂ ಖಾನಾಪುರದಿಂದ ಗೋವಾ ರಾಜ್ಯದ ಗಡಿಯವರೆಗೂ ರಾಷ್ಟ್ರೀಯ ಹೆದ್ದಾರಿ ರಸ್ತೆ ದುರಸ್ತಿ ಮತ್ತು ಸೇತುವೆಗಳ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ. ಮಳೆಗಾಲ ಮುಗಿದ ಬಳಿಕ ಹೊಸ ಸೇತುವೆ ನಿರ್ಮಾಣಕ್ಕೆ ಸೂಚಿಸಲಾಗುವುದು.

ಅಹವಾಲು ಸ್ವೀಕರಿಸಿದ ಸಚಿವ ಸತೀಶ ಜಾರಕಿಹೊಳಿ | ಸಮಸ್ಯೆಗಳ ಪರಿಹಾರಕ್ಕೆ ಸೂಚನೆ
ಜಿಲ್ಲೆಯ ಖಾನಾಪುರ ತಾಲೂಕಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಸಚಿವ ಭೇಟಿ, ಪರಿಶೀಲನೆ

ಗ್ರಾಮಸ್ಥರಿಂದ ಸ್ಥಳಾಂತರಕ್ಕೆ ಮನವಿ

ಬೆಳಗಾವಿ: ಜಿಲ್ಲೆಯಲ್ಲಿ ಅತಿವೃಷ್ಟಿ ಹಿನ್ನೆಲೆಯಲ್ಲಿ ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಶುಕ್ರವಾರ (ಜು.26) ಖಾನಾಪೂರ ತಾಲೂಕಿನ ಪ್ರವಾಹ ಪೀಡಿತ, ಮಳೆ ಹಾನಿಗೊಳಗಾದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಾಂಬೋಟಿ ರಸ್ತೆಯ ಕುಸುಮಳ್ಳಿ ಸೇತುವೆ, ವೀಕ್ಷಿಸಿ, ಬಳಿಕ ಖಾನಾಪುರದಿಂದ ಜಾಂಬೋಟಿಗೆ ಸಂಪರ್ಕ ಕಲ್ಪಿಸುವ ಮಧ್ಯದಲ್ಲಿ ಮಲಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯ ಸ್ಥಿತಿ ಪರಿಶೀಲಿಸಿದರು.

ನಂತರ ಖಾನಾಪುರ ಪ್ರವಾಸಿಮಂದಿರದಲ್ಲಿ ವಿವಿಧ ಗ್ರಾಮಗಳ ಜನರ ಅಹವಾಲುಗಳನ್ನು ಆಲಿಸಿದರು.

ಈ ಸಂದರ್ಭದಲ್ಲಿ ಸಚಿವರನ್ನು ಭೇಟಿ ಮಾಡಿದ ಮಲಪ್ರಭಾ ನದಿತೀರದ ಹಿರೇಹಟ್ಟಿಹೊಳಿ ಗ್ರಾಮದ ಜನರು, ಸಂಪೂರ್ಣ ಗ್ರಾಮವೇ ಜಲಾವೃತಗೊಳ್ಳುವುದರಿಂದ ಕೂಡಲೇ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಮನವಿ ಮಾಡಿಕೊಂಡರು.

ಪ್ರತಿವರ್ಷ ಮಳೆಗಾಲದಲ್ಲಿ ಹಿರೇಹಟ್ಟಿಹೊಳಿ ಮುಳುಗಡೆಯಾಗುವುದರಿಂದ ವೈದ್ಯಕೀಯ ಸೌಲಭ್ಯ, ಶಿಕ್ಷಣ ಮತ್ತಿತರ ಮೂಲಸೌಕರ್ಯಗಳು ಗ್ರಾಮಸ್ಥರಿಗೆ ಸಿಗುತ್ತಿಲ್ಲ ಆದ್ದರಿಂದ ಇದಕ್ಕೆ ಶಾಶ್ವತ ಪರಿಹಾರ ಒದಗಿಸಬೇಕು ಎಂದು ಸಚಿವರಿಗೆ ಒತ್ತಾಯಿಸಿದರು. ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಬೇಕು ಅಧಿಕಾರಿಗಳಿಗೆ ಸೂಚನೆ ನೀಡಿದರು. ಹೊಸ ರಸ್ತೆ ನಿರ್ಮಿಸಲು ಅರಣ್ಯ ಇಲಾಖೆಯಿಂದ ಅನುಮತಿಯಿಲ್ಲ, ನೂರಾರು ವರ್ಷಗಳಿಂದ ಜನರು ಅಂತಹ ಪ್ರದೇಶದಲ್ಲಿ ವಾಸವಿದ್ದಾರೆ. ಈ ಕುರಿತು ಈಗಾಗಲೇ ಅರಣ್ಯ ಸಚಿವರು ಹಾಗೂ ಸ್ಥಳೀಯ ಶಾಸಕರೊಂದಿಗೆ ಬೆಂಗಳೂರಿನಲ್ಲಿ ಸಭೆ ನಡೆಸಲಾಗಿದೆ. ಅರಣ್ಯ ಸಚಿವರಿಗೆ ಇಲ್ಲಿನ ಸ್ಥಳೀಯ ಸ್ಥಿತಿಯನ್ನು ವಿವರಿಸಲಾಗುವುದು ಎಂದು ಹೇಳಿದರು. ಇತ್ತೀಚೆಗೆ ಕಾಡಂಚಿನ ಅಮಗಾಂವ ಗ್ರಾಮದ ಮಹಿಳೆ ಆರೋಗ್ಯ ಸಮಸ್ಯೆಯಿಂದ ಸಾವನ್ನಪ್ಪಿರುವ ಪ್ರಕರಣಕದ ಬಗ್ಗೆ ಜಿಲ್ಲಾಧಿಕಾರಿಯಿಂದ ಮಾಹಿತಿ ಪಡೆಯಲಾಗಿದೆ. ಸರಿಯಾದ ಸಮಯಕ್ಕೆ ಆಸ್ಪತ್ರೆಗೆ ಸೇರಿಸಲು ವಾಹನ ವ್ಯವಸ್ಥೆ, ಆ್ಯಂಬುಲೆನ್ಸ್ ಹೋಗಲು ಸರಿಯಾದ ರಸ್ತೆ ಇಲ್ಲ, ನೆಟವರ್ಕ್ ಸಮಸ್ಯೆ ಇದೆ ಎಂಬುದು ತಿಳಿದು ಬಂದಿದೆ. ಅದೇ ರೀತಿಯಲ್ಲಿ ರೇಶನ್ ಪಡೆಯಲು ಕಾಡಂಚಿನ ಗ್ರಾಮಸ್ಥರು ಪರದಾಡುವಂತಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಶುಕ್ರವಾರ ಖಾನಾಪುರದಲ್ಲಿ ಮಲಪ್ರಭಾ ನದಿಯ ಹರಿವು ವೀಕ್ಷಿಸಿದರು.

ಖಾನಾಪುರದ ಹಲವು ಹಳೆಯ ಸೇತುವೆಗಳಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಭಾರಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಇನ್ನೂ ಖಾನಾಪುರದಿಂದ ಗೋವಾ ರಾಜ್ಯದ ಗಡಿಯವರೆಗೂ ರಾಷ್ಟ್ರೀಯ ಹೆದ್ದಾರಿ ರಸ್ತೆ ದುರಸ್ತಿ ಮತ್ತು ಸೇತುವೆಗಳ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ. ಮಳೆಗಾಲ ಮುಗಿದ ಬಳಿಕ ಹೊಸ ಸೇತುವೆ ನಿರ್ಮಾಣಕ್ಕೆ ಸೂಚಿಸಲಾಗುವುದು ಎಂದು ಹೇಳಿದರು.
-ಸತೀಶ ಜಾರಕಿಹೊಳಿ, ಸಚಿವ

15 ಗ್ರಾಮಗಳ ಜನರ ಸ್ಥಳಾಂತರಕ್ಕೆ ಸಿದ್ಧ

ಖಾನಾಪೂರ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಖಾನಾಪುರ ತಾಲೂಕಿನ ಕಾಡಂಚಿನ 15 ಗ್ರಾಮಗಳನ್ನು ಪಟ್ಟಿ ಮಾಡಲಾಗಿದ್ದು, ಅವರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಇಲ್ಲವೇ ಅಲ್ಲಿನ ಜನರನ್ನು ಸ್ಥಳಾಂತರಿಸುವ ಕುರಿತು ಯೋಚಿಸಲಾಗುವುದು ಎಂದರು.

ಶೇ.80ರಷ್ಟು ಜನರು ಒಪ್ಪಿದರೆ ಅವರನ್ನು ಬೇರೆಡೆ ಸ್ಥಳಾಂತರ ಮಾಡಬಹುದು ಎಂದು ಸಚಿವ ಸತೀಶ ಜಾರಕಿಹೊಳಿ ಸ್ಪಷ್ಟಪಡಿಸಿದರು. ಜಿಲ್ಲೆಯಲ್ಲಿ ಪ್ರವಾಹ ಅಷ್ಟೊಂದು ಅಪಾಯಕಾರಿ ಮಟ್ಟದಲ್ಲಿಲ್ಲ. ಸದ್ಯದ ಪ್ರವಾಹ ಪರಿಸ್ಥಿತಿ ನಿಯಂತ್ರಣದಲ್ಲಿದೆ. ನಿನ್ನೆ ಚಿಕ್ಕೋಡಿ ಭಾಗದ ವಿವಿಧೆಡೆ ಭೇಟಿ ಪರಿಶೀಲನೆ ನಡೆಸಲಾಗಿದೆ. ಸದ್ಯಕ್ಕೆ ಯಾವುದೇ ಸಮಸ್ಯೆ ಇಲ್ಲ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಈ ಸಂದರ್ಭದಲ್ಲಿ ಖಾನಾಪುರ ಶಾಸಕರಾದ ವಿಠ್ಠಲ ಹಲಗೇಕರ, ಮಾಜಿ ಶಾಸಕರಾದ ಅಂಜಲಿ ನಿಂಬಾಳ್ಕರ್, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಸೇರಿದಂತೆ ವಿವಿಧ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಸಂಭಾವ್ಯ ಪ್ರವಾಹ ಎದುರಿಸಲು ಕ್ರಮ

ಗೋಕಾಕ: ಪಶ್ಚಿಮ ಘಟ್ಟ ಮತ್ತು ಹಿಡಕಲ್ ಡ್ಯಾಂ ಜಲಾನಯನ ಪ್ರದೇಶದಲ್ಲಿ ಸತತವಾಗಿ ಮಳೆ ಸುರಿಯುತ್ತಿರುವದರಿಂದ ಘಟಪ್ರಭಾ ನದಿ ತೀರದ ಸಾರ್ವಜನಿಕರನ್ನು ಸುರಕ್ಷತಾ ದೃಷ್ಟಿಯಿಂದ ಸ್ಥಳಾಂತರಿಸಲು ಈಗಾಗಲೇ ಮೂಡಲಗಿ ಮತ್ತು ಗೋಕಾಕ ತಾಲೂಕಾಡಳಿತಕ್ಕೆ ಸೂಚನೆ ನೀಡಲಾಗಿದೆ ಎಂದು ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಹೇಳಿದ್ದಾರೆ.

ಈ ಬಗ್ಗೆ ಶುಕ್ರವಾರದಂದು ಮಾಧ್ಯಮಗಳಿಗೆ ಹೇಳಿಕೆ ನೀಡಿರುವ ಅವರು, ಸಂಭಾವ್ಯ ಪ್ರವಾಹವನ್ನು ಎದುರಿಸಲು ಎಲ್ಲ ರೀತಿಯ ಕ್ರಮ ಗಳನ್ನು ಕೈಕೊಳ್ಳಲಾಗಿದೆ. ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸುವ ಮೂಡಲಗಿ ಮತ್ತು ಗೋಕಾಕ ತಹಸೀಲ್ದಾರರಿಗೆ ಸೂಚಿಸಲಾಗಿದೆ. ನದಿ ತೀರದ ಗ್ರಾಮಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಆಡಳಿತ ಅಧಿಕಾರಿಗಳ ಜತೆಗೆ ನಮ್ಮ ಟೀಂ ಎನ್‌ಎಸ್‌ಎಫ್ ಕಚೇರಿಯ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ನದಿ ತೀರದ ಸಾರ್ವಜನಿ ಕರನ್ನು ಸ್ಥಳಾಂತರಿಸಿ ಸುರಕ್ಷಿತ ಸ್ಥಳಗಳಿಗೆ ಕರೆದೊ ಯ್ಯಲು ಅಗತ್ಯವಿರುವ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಕೈಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ. ಸಂತ್ರಸ್ತ ಕುಟುಂಬಗಳಿಗೆ ಅಗತ್ಯವಿರುವ ಕಾಳಜಿ ಕೇಂದ್ರಗಳನ್ನು ತೆರೆಯುವಂತೆ ಅಧಿಕಾರಿಗಳಿಗೆ ಸೂಚಿಸಿರುವುವಾಗಿ ಅವರು ತಿಳಿಸಿದ್ದಾರೆ. ನದಿ ತೀರದ ಗ್ರಾಮಗಳಾದ ಅಡಿಬಟ್ಟಿಯಿಂದ ತಳಕಟ್ನಾಳ ವರೆಗೆ ಅಬ್ದುಲ್ ಮಿರ್ಜಾನಾಯಿಕ (7795367 576) ಲೋಳಸೂರದಿಂದ ಹುಣಶ್ಯಾಳ ಪಿ.ಜಿ.ವರೆಗೆ ಸಿಪಿ. ಯಕ್ಕಂಬಿ (9972619149) ವಡೇರಟ್ಟಿ ಯಿಂದ ಮುನ್ಯಾಳವರೆಗೆ ದಾಸಪ್ಪ ನಾಯಿಕ (9900161986) ಮತ್ತು ತಿಗಡಿಯಿಂದ ಅವರಾದಿ ಗ್ರಾಮದವರೆಗೆ ಭಾಸ್ಕರ್ (9538389191) ಅವರನ್ನು ಟೀಂ ಎನ್‌ಎಸ್‌ಎಫ್ ದಿಂದ ಸಂತ್ರಸ್ತರಿಗೆ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಕರ್ತವ್ಯಕ್ಕೆ ನಿಯೋಜಿಸಲಾಗಿದೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ತಿಳಿಸಿದ್ದಾರೆ.

ಕಾರ್ಗಿಲ್ ವಿಜಯೋತ್ಸವ ಆಚರಣೆ

ಪದವಿ ಪೂರ್ವ ಹಾಗೂ ಪ್ರಥಮ ದರ್ಜೆ ಮಹಾವಿದ್ಯಾಲಯಗಳ ಸಂಯುಕ್ತಾಶ್ರಯದಲ್ಲಿ ಕಾರ್ಗಿಲ್ ವಿಜಯೋತ್ಸವ ಸಮಾರಂಭ ನೆರವೇರಿತು.

ಹಾರೂಗೇರಿ: ಪಟ್ಟಣದ ಸಮೀಪದ ವಸಂತ ರಾವ ಪಾಟೀಲ ಪದವಿ ಪೂರ್ವ ಹಾಗೂ ಪ್ರಥಮ ದರ್ಜೆ ಮಹಾವಿದ್ಯಾಲಯಗಳ ಸಂಯುಕ್ತ ಆಶ್ರಯದಲ್ಲಿ ಕಾರ್ಗಿಲ್ ವಿಜಯೋತ್ಸವ ಸಮಾರಂಭ ನೆರವೇರಿತು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಚಾರ್ಯ ಸಾಹಿತಿ ಟಿ.ಎಸ್.ವಂಟಗೂಡಿ ಮಾತನಾಡಿ, ದೇಶದ ಸಲುವಾಗಿ ಪ್ರಾಣದ ಹಂಗು ತೊರೆದು ದೇಶ ಸೇವೆಯೇ ಈಶ ಸೇವೆ, ಜನ ಸೇವೆಯೇ ಜನಾರ್ಧನ ಸೇವೆ ಎಂದು ತಿಳಿದು ಗಡಿಯಲ್ಲಿ ಗನ್ ಹಿಡಿದು ದೇಶಕ್ಕಾಗಿ ಹೋರಾಡಿ ಕಾರ್ಗಿಲ್ ಯುದ್ದದಲ್ಲಿ ಹುತಾತ್ಮರಾದ ವೀರ ಯೋಧರಿಗೆ ನಮನ ಸಲ್ಲಿಸುವುದೆಂದರೆ ಭಾರತ ಮಾತೆಗೆ ನಮಸ್ಕರಿಸಿದಂತೆ. ದೇಹಾಭಿಮಾನಕ್ಕಿಂತ ದೇಶಾಭಿಮಾನ ದೊಡ್ಡದು ಪ್ರತಿಯೊಬ್ಬರು ದೇಶ ಸೇವೆ ಮಾಡಿದರೆ ಭಾರತ ಜಗದ್ಗುರುವಾಗುವುದು ಎಂದು ಟಿ.ಎಸ್ ವಂಟಗೂಡಿ ಅಭಿಮತ ವ್ಯಕ್ತಪಡಿಸಿದರು

ಸಮಾರಂಭದ ಅಧ್ಯಕ್ಷತೆಯನ್ನು ಪ.ಪೂ ಕಾಲೇಜಿನ ಪ್ರಾಚಾರ್ಯ ರಾಜಕುಮಾರ ಎಸ್ ತಳವಾರ ವಹಿಸಿಕೊಂಡಿದ್ದರು ವೇದಿಕೆಯ ಮೇಲೆ ಉಪನ್ಯಾಸಕ ಆರ್.ಟಿ.ಮಾಳಿ, ಸುಲೋಚನಾ ಹಕ್ಕೇರಿ, ಎಸ್.ವಿ ವಗ್ಗಾ, ಡಾ.ರತ್ನಾ ಬಾಳಪ್ಪನವರ, ಶಿವಾನಂದ ಪಾರ್ಥನಳ್ಳಿ, ಸಂಜು ಇಮ್ಮಡಿ, ಗೋಪಾಲ ನಾಗನೂರ, ಡವಳೇಶ್ವರ ಪ್ರಭು ಗೋಳಸಂಗಿ ಉಪಸ್ಥಿತರಿದ್ದರು. ಅಕ್ಷತಾ ವೀರಗೌಡ ನಿರೂಪಿಸಿದರು, ಸುಲೋಚನಾ ಹಕ್ಕೇರಿ ಸ್ವಾಗತಿಸಿದರು, ಮೇಘಾ ತೇಲಿ ವಂದಿಸಿದರು.

ಸೈನಿಕನ ಶಕ್ತಿ ಸದೃಢವಾಗಿದ್ದರೆ ಮಾತ್ರ ದೇಶದ ಭದ್ರತೆ

ಬೈಲಹೊಂಗಲ: ದೇಶದೊಳಗೆ ಸುಭಿಕ್ಷೆಯಿಂದ ಇರಬೇಕಾದರೆ ಯುವಶಕ್ತಿ ಮತ್ತು ಅಲ್ಲಿಯ ಸೈನಿಕನ ಶಕ್ತಿ ಸದೃಢವಾಗಿದ್ದರೆ ಮಾತ್ರ ದೇಶ ಸಂಪೂರ್ಣವಾಗಿ ಇರುತ್ತದೆ ಎಂದು ಗದಗ ಬೃಹನ್ಮಠದ ಸದಾಶಿವಾನಂದ ಸ್ವಾಮಿಜಿ ಹೇಳಿದರು.

ಶುಕ್ರವಾರ ಪಟ್ಟಣದ ಪೃಥ್ವಿ ಗಾರ್ಡನಲ್ಲಿ ಮಾಜಿ ಸೈನಿಕರ ಸಮನ್ವಯ ಸಮಿತಿ, ಮಲಪ್ರಭಾ ಗ್ರಾಮೀಣ ಅಭಿವೃದ್ಧಿ ಸಂಘ ಇವರ ಆಶ್ರಯದಲ್ಲಿ ನಡೆದ 25 ನೇ ಕಾರ್ಗಿಲ ವಿಜಯೋತ್ಸವ ಹಾಗೂ ಸೈನಿಕರಿಗೆ ಸತ್ಕಾರ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿ, ಸೈನಿಕರು ತಮ್ಮ ಸೇವೆಯನ್ನು ಈ ಮಾತೃಭೂಮಿಗಾಗಿ ಅರ್ಪಿಸಿ ಸೈನ್ಯಕ್ಕಾಗಿ ಸೇರ್ಪಡೆಗೊಂಡ ವೀರರ ಗೌರವಾರ್ಪಣೆ ಈ ನಾಡಿಗೆ ಹೆಮ್ಮೆಯ ವಿಚಾರ. ದೇಶಪ್ರೇಮವು ಪ್ರತಿಯೊಬ್ಬ ಭಾರತೀಯರಲ್ಲಿ ಮೂಡಬೇಕು. ಯುವಜನತೆ ದೇಶಸೇವೆ ಮಾಡಲು ಸನ್ನದ್ಧರಾಗಬೇಕು ಎಂದರು.

ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಮಾತನಾಡಿ, ದೇಶ ಸೇವೆಗೆ ಅಪೂರ್ವ ಅವಕಾಶ ಒದಗಿಸುವ ಸೈನಿಕ ವೃತ್ತಿಗೆ ಸೇರ್ಪಡೆಗೊಳ್ಳಲು ಯುವಜನತೆ ಮನಸ್ಸು ಮಾಡುವ ಜತೆಗೆ ಪೋಷಕರು ತಮ್ಮ ಮಕ್ಕಳನ್ನು ಸೈನ್ಯಕ್ಕೆ ಸೇರಿಸುವ ಸಂಕಲ್ಪ ತೊಡಬೇಕು ಎಂದರು.

ಮಾಜಿ ಸೈನಿಕರ ಸಮನ್ವಯ ಸಮಿತಿ ಅಧ್ಯಕ್ಷ ಬಿ.ಬಿ.ಬೋಗುರ ಅಧ್ಯಕ್ಷತೆ ವಹಿಸಿದ್ದರು.

ಮಲಪ್ರಭಾ ಗ್ರಾಮೀಣ ಅಭಿವೃದ್ಧಿ ಸಂಘ ಇವರ ಆಶ್ರಯದಲ್ಲಿ ನಡೆದ 25 ನೇ ಕಾರ್ಗಿಲ ವಿಜಯೋತ್ಸವ ಹಾಗೂ ಸೈನಿಕರಿಗೆ ಸತ್ಕಾರ ಸಮಾರಂಭ ಜರುಗಿತು.

ನ್ಯಾಯವಾದಿ ಎಫ್.ಎಸ್.ಸಿದ್ದನಗೌಡರ ಮಾತನಾಡಿದರು. ಈ ಸಂದರ್ಭದಲ್ಲಿ 75 ವರ್ಷ ಪೂರೈಸಿದ ಹಾಗೂ ಬಾಂಗ್ಲಾ, ಚೀನಾ, ಪಾಕಿಸ್ತಾನ ಯುದ್ಧಗಳಲ್ಲಿ ಭಾಗವಹಿಸಿದ ಹಿರಿಯ ಸೈನಿಕರನ್ನು, ನಿವೃತ್ತ ಯೋಧರನ್ನು ಸತ್ಕರಿಸಲಾಯಿತು.

ವೇದಿಕೆ ಮೇಲೆ ಕಾಶೀನಾಥ ಬಿರಾದಾರ, ಗುರುಪಾದ ಕಳ್ಳಿ, ವೈ ಜಿ ಬಾಳಿಗಟ್ಟಿ, ಸಿ ಕೆ ಮೆಕ್ಕೆದ, ಮಹಾಂತೇಶ ಕಮತ, ಶಂಕರ ಮಾಡಲಗಿ, ರೋಹಿಣಿ ಬಾಬಾಸಾಹೇಬ ಪಾಟೀಲ, ಡಾ ಸಿ ಬಿ ಗಣಾಚಾರಿ, ಮಹಾಂತೇಶ ಮತ್ತಿಕೊಪ್ಪ, ಎಂ ವೈ ಸೋಮನ್ನವರ, ರಾಜು ಜನ್ಮಟ್ಟಿ, ಗುರು ಕೋತಿನ ಅನೇಕರು ಇದ್ದರು.

ಮಾಜಿ ಸೈನಿಕರ ಸಮನ್ವಯ ಸಮಿತಿ ಹಾಗೂ ಮಲಪ್ರಭಾ ಗ್ರಾಮೀಣ ಅಭಿವೃದ್ಧಿ ಸಂಘದ ಪದಾಧಿಕಾರಿಗಳು ಇದ್ದರು.

ಇದಕ್ಕೂ ಮೊದಲು ಪಟ್ಟಣದ ಚೆನ್ನಮ್ಮ ವೃತ್ತದಲ್ಲಿ ಚೆನ್ನಮ್ಮನ ಆಶ್ವಾರೂಢ ಮೂರ್ತಿಗೆ ಗೌರವ ಸಲ್ಲಿಸಿ ರ‍್ಯಾಲಿಗೆ ಚಾಲನೆ ನೀಡಲಾಯಿತು. ಜೈ ಜವಾನ, ಜೈ ಕಿಸಾನ್, ಕಾರ್ಗಿಲ ಯೋಧರಿಗೆ ಜೈ ವಾಗಲಿ, ಭಾರತ ಮಾತಾ ಕೀ ಜೈ ಎಂದು ಜೈ ಘೋಷಣೆ ಮೊಳಗಿದವು. ಬೈಕ್ ರ‍್ಯಾಲಿ ಎಪಿಎಂಸಿ, ಇಂಚಲ ರಸ್ತೆ, ಬಸ್ ನಿಲ್ದಾಣ, ರಾಯಣ್ಣ ವೃತ್ತ, ಮುರಗೋಡ ರಸ್ತೆ ಮಾರ್ಗವಾಗಿ ಪೃಥ್ವಿ ಗಾರ್ಡನ್ ತಲುಪಿತು.



ಹಾರೂಗೇರಿ ರಾಯಬಾಗ ತಾಲೂಕಾ ವಿದ್ಯುತ್ ಗುತ್ತಿಗೆದಾರರ ಸಂಘದ ಚುನಾವಣೆಯಲ್ಲಿ ಅಲಖನೂರ ಗ್ರಾಮದ ಅಜ್ಜಪ್ಪ ಕಲ್ಲಪ್ಪ ಬಾನಿಯವರು ರಾಯಬಾಗ ತಾಲೂಕ ವಿದ್ಯುತ್ ಗುತ್ತಿಗೆದಾರರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಲಗಮಣ್ಣ ಚೌಗಲಾ ಹಾಗೂ ಮಹಮ್ಮದ ಸಾಧಿಕ ದೇಸಾಯಿಯವರು ಉಪಾಧ್ಯಕ್ಷರಾಗಿ,, ಕಾರ್ಯದರ್ಶಿಯಾಗಿ ಬಸವರಾಜ ಬೇವಿನಮಟ್ಟಿ ಹಾಗೂ ಸಹಕಾರ್ಯದರ್ಶಿಯಾಗಿ ಆನಂದ ಘಟನಟ್ಟಿ, ಖಜಾಂಚಿಯಾಗಿ ರಾಮಪ್ಪ ಭಜಂತ್ರಿ, ಸದಸ್ಯರಾಗಿ ಅಣ್ಣಾಸಾಬ ನಿಶಾನ್ದಾರ, ಜಗನ್ನಾಥ ಮಂಗಸೂಳಿ ಮತ್ತು ಬಾಬಾಸಾಹೇಬ ದೇಸಾಯಿಯವರು ಆಯ್ಕೆಯಾಗಿದ್ದಾರೆ.

ಮೂಡಲಗಿ: ಘಟಪ್ರಭ ನದಿಯ ದಡದಲ್ಲಿನ ಮೂಡಲಗಿ ತಾಲೂಕಿನ ಮಸಗುಪ್ಪಿ ಗ್ರಾಮದ ಪ್ರಸಿದ್ಧ ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಶುಕ್ರವಾರದಂದು ಜಲಾವೃತವಾಗಿರುವುದು.

ಕಾರ್ಗಿಲ್ ದಿವಸ್ ಶೌರ್ಯ ಪರಾಕ್ರಮದ ದಿನ

ಯರಗಟ್ಟಿ: ಪಟ್ಟಣದ ಮಹಾಂತ ದುರದುಂಡೇಶ್ವರ ಮಠದಲ್ಲಿ ರಾಷ್ಟ್ರೀಯ ಮಾಜಿ ಸೈನಿಕರ ಸಮನ್ವಯ ಸಮೀತಿ ಹಾಗೂ ಜೈ ಜವಾನ್ ಜೈ ಕಿಸಾನ್ ವಿವಿಧ ಉದ್ದೇಶಗಳ ಸಹಕಾರಿ ಸಂಘ ಮತ್ತು ವಿವಿಧ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ 25ನೇ ಕಾರ್ಗಿಲ್ ವಿಜಯ್ ದಿವಸ್ ಆಚರಿಸಲಾಯಿತು.

ಕಾರ್ಗಿಲ್ ಸೈನಿಕರನ್ನು ಸ್ಮರಿಸಿ ಭಾರತದ ಭೂಪಟ ರಚನೆ ಮಾಡಿ ಸೈನಿಕರ ರೈಪಲ್‌ನ ಚಿತ್ರದೊಂದಿಗೆ, ಶಾಲಾ ಮಕ್ಕಳು ದೀಪ ಬೆಳಗಿಸಿ ಗೌರವ ನಮನ ಸಲ್ಲಿಸಿದರು. ಇದೇ ವೇಳೆ ನಿವೃತ್ತ ಶಿಕ್ಷಕ ಆರ್. ಎಲ್. ಜೂಗನವರ ಮಾತನಾಡಿ ಕಾರ್ಗಿಲ್ ಯುದ್ಧ ಭಾರತೀಯ ಪ್ರತಿಯೊಬ್ಬ ಪ್ರಜೆಯ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವಂತಹ ದಿನವಾಗಿದ್ದು, ಶೌರ್ಯ ಪರಾಕ್ರಮ ಪ್ರದರ್ಶಿಸಿದ ದಿನವಾಗಿದೆ. ಭಾರತೀಯರಲ್ಲಿ ದೇಶ ಪ್ರೇಮ,ಭಕ್ತಿಯನ್ನು ಅರ್ಪಿಸುವ ದಿನವಾಗಿದೆ. ಈ ಸಂದರ್ಭದಲ್ಲಿ ಹುತಾತ್ಮರಾದ ಮನೋಜ್ ಕುಮಾರ್, ವಿಕ್ರಂ ಬಾತ್ರ, ಸಂಜಯ್ ಕುಮಾರ್, ಅನುಜ್ ಮತ್ತು ಯೋಗೇಂದ್ರ ಸಿಂಗ್ ವೀರ ಸೈನಿಕರನ್ನು ಸ್ಮರಿಸಿ ಭಾರತದ ಭೂಪಟ ರಚನೆ ಮಾಡಿ ಸೈನಿಕರ ರೈಪಲ್ ನ ಚಿತ್ರದೊಂದಿಗೆ, ಶಾಲಾ ಮಕ್ಕಳು ನೃತ್ಯ ಮಾಡುವ ಮೂಲಕ ಗೌರವ ನಮನ ಸಲ್ಲಿಸಿದರು.

ಕಾರ್ಗಿಲ್ ಸೈನಿಕರನ್ನು ಸ್ಮರಿಸಿ ಭಾರತದ ಭೂಪಟ ರಚನೆ ಮಾಡಿ ಸೈನಿಕರ ರೈಪಲ್‌ನ ಚಿತ್ರದೊಂದಿಗೆ, ಶಾಲಾ ಮಕ್ಕಳು ದೀಪ ಬೆಳಗಿಸಿ ಗೌರವ ನಮನ ಸಲ್ಲಿಸಿದರು.

ಗೋಕಾಕದಲ್ಲಿ ಕಾರ್ಗಿಲ್ ದಿನಾಚರಣೆ

ಗೋಕಾಕ: ರಾಷ್ಟ್ರ ರಕ್ಷಣೆ, ಪ್ರಜೆಗಳ ಸುಖ ಶಾಂತಿಯೇ ಸೈನಿಕರ ಮುಖ್ಯಧ್ಯೇಯವಾಗಿದೆ ಎಂದು ಮಾಜಿ ಸೈನಿಕರ ವಿವಿಧ ಉದ್ದೇಶಗಳ ನಿಯಮಿತದ ಅಧ್ಯಕ್ಷ ಫಕೀರಪ್ಪ ಗೌಡರ ಹೇಳಿದರು.

ಶುಕ್ರವಾರದಂದು ನಗರದ ಸಮುದಾಯ ಭವನದಲ್ಲಿ ಇಲ್ಲಿನ ಮಾಜಿ ಸೈನಿಕರ ಸೌಹಾರ್ದ ಸಹಕಾರಿ ನಿಯಮಿತ ಹಾಗೂ ಮಾಜಿ ಸೈನಿಕರ ಗ್ರಾಮೀಣಾಭಿವೃದ್ಧಿ ಸೈನಿಕರ ಸಂಘ ಇವುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ 25ನೇ ಕಾರ್ಗಿಲ್ ವಿಜಯೋತ್ಸವದ ಬೆಳ್ಳಿ ಹಬ್ಬದ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೇಶದ ರಕ್ಷಣೆಗಾಗಿ ಸೈನಿಕರು ಜೀವದ ಹಂಗು ತೊರೆದು ಹಗಲಿರುಳು ಕಾರ್ಯನಿರ್ವಹಿಸುತ್ತಿದ್ದಾರೆ. ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದವರಲ್ಲಿ ಏಳು ಜನ ಕರ್ನಾಟಕದವರಾಗಿದ್ದು, ಅದರಲ್ಲಿ ನಾಲ್ಕು ಜನ ಯೋಧರು ಬೆಳಗಾವಿ ಜಿಲ್ಲೆಯವರಾಗಿದ್ದಾರೆ.ದೇಶಕ್ಕಾಗಿ ಹುತಾತ್ಮರಾದವರ ಸ್ಮರಣೆ ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು. ಕಾರ್ಯಕ್ರಮವನ್ನು ಕಾರ್ಮಿಕ ಮುಖಂಡ ಅಂಬಿರಾವ ಪಾಟೀಲ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಯುದ್ಧ ಗಳಲ್ಲಿ ಪಾಲ್ಗೊಂಡು ಮಾಜಿ ಸೈನಿಕರನ್ನು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸತ್ಕರಿಸಿ, ಗೌರವಿಸಲಾಯಿತು.ಕಾರ್ಯಕ್ರಮ ಕ್ಕಿಂತ ಪೂರ್ವದಲ್ಲಿ ನಗರದ ಸಂಗೊಳ್ಳಿರಾಯಣ್ಣ ವೃತದಿಂದ ಬಸವೇಶ್ವರ ವೃತ್ತ ಹಾಗೂ ನಗರದ ಪ್ರಮುಖ ಬೀದಿಗಳಲ್ಲಿ ಭಾರತಾಂಬೆಯ ಮೆರವಣಿಗೆ ನಡೆಯಿಸಲಾಯಿತು. ವೇದಿಕೆಯಲ್ಲಿ ಕರವೇ ತಾಲೂಕು ಘಟಕದ ಅಧ್ಯಕ್ಷ ಬಸವರಾಜ ಖಾನಪ್ಪನವರ, ಸಂಗೀತ ಕಡ್ಲಿಗುಡ್ಡಿ, ಮಹಾದೇವಿ ಸಣ್ಣಪ್ಪನವರ, ಕೆಂಪಣ್ಣ ಮಾಡಂಗೇರೆ ಇದ್ದರು.

ದೇಶದ ಗಡಿ ರಕ್ಷಿಸಿದ ವಿಜಯದ ಕಾರ್ಯಕ್ರಮ

ಬೈಲಹೊಂಗಲ: ನಾವು ನಮ್ಮ ಮನೆಗಳಲ್ಲಿ ಸುರಕ್ಷಿತವಾಗಿ ಇದ್ದೇವೆ ಎಂದರೆ ಅದಕ್ಕೆ ಮುಖ್ಯ ಕಾರಣ ದೇಶದ ಗಡಿಯಲ್ಲಿ ಬಿಸಿಲು, ಮಳೆ, ಗಾಳಿ ಎನ್ನದೆ ಕಾವಲು ಕಾಯುತ್ತಿರುವ ನಮ್ಮ ಸೈನಿಕರು. ತಮ್ಮ ಮನೆ, ಪರಿವಾರವನ್ನು ಬಿಟ್ಟು ದೇಶವೇ ತಮ್ಮ ಮನೆ ಎನ್ನುವಂತೆ ಕಾವಲು ಕಾಯುವ ಇವರು ಭಾರತ-ಪಾಕಿಸ್ತಾನ ಯುದ್ಧ ಸನ್ನಿವೇಶದಲ್ಲಿ ಯಾವುದನ್ನೂ ಲೆಕ್ಕಿಸದೆ ಪ್ರಾಣ ತ್ಯಾಗಕ್ಕೂ ಮುಂದಾಗುತ್ತಾರೆ ಎಂದು ಪಿಕೆಪಿಎಸ್ ಅಧ್ಯಕ್ಷ ನಾನಾಸಾಹೇಬ ಪಾಟೀಲ ಹೇಳಿದರು.

ನೇಗಿನಗಾಳ ಗ್ರಾಮದ ವಿಠ್ಠಲ ರುಕ್ಮೀಣಿ ಮಂದಿರದ ಸಮುದಾಯ ಭವನದಲ್ಲಿ ಆಯೋಜಿಸಿದ್ದ 25ನೆಯ ವರ್ಷದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 25ವರ್ಷಗಳ ಹಿಂದೆ ಕಾರ್ಗಿಲ್ ಯುದ್ಧ ನಡೆಯಿತು. ಪಾಕಿಸ್ತಾನದ ನುಸುಳಿಕೋರರನ್ನು ಹಿಮ್ಮೆಟ್ಟಿಸಲು ನಡೆದ ಕಾರ್ಗಿಲ್ ಯುದ್ಧದಲ್ಲಿ ದೇಶಕ್ಕಾಗಿ ಪ್ರಾಣವನ್ನೇ ಪಣಕ್ಕಿಟ್ಟಿದ್ದರು ಅದರಲ್ಲಿ ಹೋರಾಡಿ ದೇಶಪ್ರೇಮಕ್ಕಾಗಿ ಮಡಿದು ದೇಶವನ್ನು ರಕ್ಷಿಸಿದ ವಿಜಯದ ಕಾರ್ಯಕ್ರಮ ಇದಾಗಿದೆ. ಗ್ರಾ.ಪಂ ಅಧ್ಯಕ್ಷೆ ಮಹಾದೇವಿ ಕೋಟಗಿ ಮಾತನಾಡಿ, ಸೈನಿಕರು ದೇಶಸೇವೆ ಮಾಡಿ ಮರಳಿ ಬಂದರೆ ಅದು ಪುನರಜನ್ಮ ಪಡೆದಂತೆ ಹೀಗಾಗಿ ನಮ್ಮೂರಿನ ಮಾಜಿ ಸೈನಿಕರು ತಮ್ಮ ಸಂಘದ ಕಛೇರಿ ಆರಂಭಿಸಲು ಗ್ರಾ.ಪಂ ಇಂದ ನಿವೇಶನ ಕೇಳಿದ್ದು ಮೇಲಾಧಿಕಾರಿಗಳ ಗಮನಕ್ಕೆ ತಂದು ಆದಷ್ಟು ಶೀಘ್ರವಾಗಿ ಅವರಿಗೆ ನೀವೇಶನ ಕಲ್ಪಿಸಲು ಪ್ರಯತ್ನಿಸಲಾಗುವುದು ಎಂದರು. ಉಪನ್ಯಾಸಕ ತಾನಾಜಿ ಸಾವಂಜಿ, ಮಾಜಿ ಸೈನಿಕ ಸಂಘದ ಅಧ್ಯಕ್ಷ ಅಜೀತ ಜೈನರ ಮಾತನಾಡಿದರು.

ಮೃತರಾದ ಮಾಜಿ ಸೈನಿಕರ ಪತ್ನಿಯರಿಗೆ ವೀರನಾರಿಯರು ಎಂಬ ವಿಶೇಷ ಸತ್ಕಾರ ಮಾಡಿದರು.

ಘಟಪ್ರಭಾ ಪ್ರವಾಹ: ಸಂತ್ರಸ್ತರು ಸುರಕ್ಷಿತ ಸ್ಥಳಕ್ಕೆ ರವಾನೆ

ಗೋಕಾಕ: ಮಹಾಮಳೆಯಿಂದ ಗೋಕಾಕ ತಾಲೂಕಿನಲ್ಲಿ ಪ್ರವಾಹ ಎದುರಾಗಿದ್ದು ಜನವಸತಿ ಪ್ರದೇಶಕ್ಕೆ ನೀರು ನುಗ್ಗುತ್ತಿದ್ದು ತಾಲೂಕಾಡಳಿತ, ಪೊಲೀಸ್ ಇಲಾಖೆ ಸೇರಿ ಅಧಿಕಾರಿಗಳ ತಂಡ ನದಿ ತಟದ ಜನರನ್ನು ಸುರಕ್ಷಿತ ಸ್ಥಳಕ್ಕೆ ರವಾನಿಸುತ್ತಿದ್ದಾರೆ.

ನಗರದ ದಾಳಂಬ್ರಿ ತೋಟ, ಹಳೆದನದ ಪೇಟೆಯ ಜನರನ್ನು ಈಗಾಗಲೇ ಸುರಕ್ಷಿತ ಸ್ಥಳಕ್ಕೆ ರವಾಸಲಾಗಿದ್ದು ಇನ್ನುಳಿದ ಬೋಜಗಾರ ಗಲ್ಲಿ, ಕುಂಬಾರ ಗಲ್ಲಿ, ಮಟನ್ ಮಾರ್ಕೆಟ್ ಸೇರಿದಂತೆ ಜನವಸತಿ ಪ್ರದೇಶಗಳ ಜನರನ್ನು ಅಧಿಕಾರಿಗಳು ಸ್ಥಳಾಂತರಿಸಿ ನಗರದ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಸ್ಥಾಪಿಸಲಾದ ಕಾಳಜಿ ಕೇಂದ್ರಗಳಿಗೆ ಜನರನ್ನು ಕಳುಹಿಸುತ್ತಿದ್ದಾರೆ.

ತಾಲೂಕಿನ ಕುಂದರಗಿ,ಪಾಶ್ಚಾಪುರ ಗ್ರಾಮಗಳಲ್ಲಿ ಮಾರ್ಕಂಡೇಯ ನದಿ ಹಾಗೂ ಬಳ್ಳಾರಿ ನಾಲಾ ಹಾಗೂ ಅಡಿಬಟ್ಟಿ, ಚಿಗಡೊಳ್ಳಿ, ಉದಗಟ್ಟಿ, ತಳಕಟ್ನಾಳ ಗ್ರಾಮಗಳಲ್ಲಿ ಘಟಪ್ರಭಾ ನದಿಯ ಹರಿದು ಬಂದಿರುವದರಿಂದ ಜನರು ತಮ್ಮಮ ಸುತ್ತಮುತ್ತಲಿನ ನೆಂಟರ, ಸಂಬಂಧಿಕರ ಮನೆಗೆ ಮತ್ತು ಕಾಳಜಿ ಕೇಂದ್ರಕ್ಕೆ ಜನರು ಸಾಗುತ್ತಿದ್ದಾರೆ. ಹಿಡಕಲ್ ಜಲಾಶಯದಿಂದ ಇನ್ನು ಹೆಚ್ಚಿನ ನೀರು ಹರಿಬಿಟ್ಟಲ್ಲಿ ಮೆಳವಂಕಿ, ಹಡಗಿನಾಳ, ಕಲಾರಕೊಪ್ಪ ಗ್ರಾಮಸ್ಥರಿಗೂ ಸಹ ಸ್ಥಳೀಯ ಗ್ರಾಮ ಪಂಚಾಯತಗಳಿಂದ ಸುರಕ್ಷಿತ ಸ್ಥಳಕ್ಕೆ ಧಾವಿಸುವಂತೆ ಸಾರಲಾಗುತ್ತಿದೆ.

ಗೋಕಾಕ ತಾಲೂಕಿನಲ್ಲಿ ಈಗಾಗಲೇ ಹಲವು ಸೇತುವೆಗಳು ಮುಳುಗಡೆಯಾಗಿದ್ದು ಜತ್ತ ಜಾಂಬೋಟಿ ರಾಜ್ಯ ಹೆದ್ದಾರಿ ಸಂಕೇಶ್ವರ-ಗೋಕಾಕ ಸಂಪರ್ಕ ಕಲ್ಪಿಸುವ ಲೋಳಸೂರ ಸೇತುವೆ ಮೇಲೆ ಘಟಪ್ರಭಾ ನದಿಯ ನೀರು ಹರಿಯುತ್ತಿರುವದರಿಂದ ರಸ್ತೆ ಸಂಪರ್ಕವನ್ನು ಸ್ಥಗಿತಗೊಳಿಸಿರುವ ಪೊಲೀಸ್ ಇಲಾಖೆ ಬ್ಯಾರಿಕೇಡ್ ಹಾಕುವ ಮೂಲಕ ವಾಹನಗಳನ್ನು ತಡೆಯುತ್ತಿದ್ದಾರೆ. ಮಳೆಪ್ರಮಾಣ ಹೆಚ್ಚಾದಲ್ಲಿ ಗೋಕಾಕ-ಕೊಣ್ಣೂರ ಸಂಪರ್ಕ ಕಲ್ಪಿಸುವ ಚಿಕ್ಕಹೊಳಿ ಸೇತುವೆಯು ಸಹ ಮುಳಗಡೆಯಾಗಲಿದೆ.

ಈಗಾಗಲೇ ಹಿಡಕಲ್ ಜಲಾಶಯದಿಂದ 40ಸಾವಿರ, ಹಿರಣ್ಯಕೇಶಿ ನದಿಯಿಂದ 23ಸಾವಿರ, ಮಾರ್ಕಂಡೇಯ ನದಿ ಮತ್ತು ಬಳ್ಳಾರಿ ನಾಲಾ ಸೇರಿ 10ಸಾವಿರ ಕ್ಯುಸೆಕ್ ಸೇರಿ ಒಟ್ಟು 73ಸಾವಿರ ಕ್ಯುಸೆಕ್ ನೀರು ಘಟಪ್ರಭಾ ನದಿಗೆ ಹರಿದು ಬರುತ್ತಿದ್ದು, ನದಿ ಪಾತ್ರದ ಜನರು ಪ್ರವಾಹದಿಂದ ಮತ್ತೊಮ್ಮೆ ಸಂಕಟ ಅನುಭವಿಸುವಂತಾಗಿದೆ.

ಸ್ಥಳೀಯ ಸಂಘ ಸಂಸ್ಥೆಗಳಿಂದ ಜಾಗೃತಿ: ಘಟಪ್ರಭಾ ನದಿ ತಟದಲ್ಲಿರುವ ಜನವಸತಿ ಪ್ರದೇಶಗಳಲ್ಲಿಯ ಜನರಿಗೆ ಸ್ಥಳೀಯ ಸಂಘ ಸಂಸ್ಥೆಯವರು ಮನೆಗಳನ್ನು ಖಾಲಿ ಮಾಡಲು ಸಹಾಯ ಮಾಡುತ್ತಿದ್ದು ಜನರ ಬಟ್ಟೆ ಬರೆ, ಉಪಯುಕ್ತ ಸಾಮಾನುಗಳು ಸೇರಿ ಎಲ್ಲವನ್ನೂ ಸುರಕ್ಷಿತವಾಗಿ ಸ್ಥಳಾಂತರಿಸಲು ಸಹಕರಿಸುತ್ತಿದ್ದಾರೆ. ಜನರು ಕಾಳಜಿ ಕೇಂದ್ರಗಳಿಗೆ ತೆರಳಲು ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಜತ್ತ ಜಾಂಬೋಟಿ ರಾಜ್ಯ ಹೆದ್ದಾರಿ ಸಂಕೇಶ್ವರ-ಗೋಕಾಕ ಸಂಪರ್ಕ ಕಲ್ಪಿಸುವ ಲೋಳಸೂರ ಸೇತುವೆ ಮೇಲೆ ಘಟಪ್ರಭಾ ನದಿಯ ನೀರು ಹರಿಯುತ್ತಿರುವುದು.

₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 27.07.2024 ಸಂಪುಟ: 67 ಸಂಚಿಕೆ: 80 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ಯಾವತ್ತೂ ನಿಮ್ಮನ್ನು ನೀವು ಕಡಿಮೆ ಎಂದು ಕಡೆಗಣಿಸಿಕೊಳ್ಳಬೇಡಿ. ನೀವು ಅಂದುಕೊಂಡದ್ದಕ್ಕಿಂತ ನೀವು ಬುದ್ಧಿವಂತರು ಮತ್ತು ಸಮರ್ಥರು. ನಿರ್ಣಾಯಕ ಸಮಯದಲ್ಲಿ ನೀವು ಅಂದುಕೊಂಡಿದ್ದಕ್ಕಿಂತ ಚೆನ್ನಾಗಿ ನಿಭಾಯಿಸಬಲ್ಲಿರಿ. ಆದರೆ ಪದೇ ಪದೆ ನಿಮ್ಮನ್ನು ನೀವೇ ಚಿವುಟುತ್ತಾ ಕುಗ್ಗಿಸಿಕೊಳ್ಳಬೇಡಿ.

ವಕ್ರತುಂಡೋಕ್ತಿ

ಪ್ರಸಿದ್ಧಿಯಾಗಲು ಸಾಧನೆಯೇ ಬೇಕಿಲ್ಲ. ಸದ್ದು-ಗದ್ದಲ ಮಾಡಿದರೂ ಸಾಕು.

ಮಹಿಳಾ ಏಷ್ಯಾ ಕಪ್

ಭಾರತ ಫೈನಲ್‌ಗೆ

ಹಾಲಿ ಚಾಂಪಿಯನ್ ಭಾರತ ಮಹಿಳೆಯರ ಕ್ರಿಕೆಟ್ ತಂಡ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್‌ಗೆ ಲಗ್ಗೆ ಇಟ್ಟಿದೆ. ರಣಗಿರಿ ದಂಬುಲಾ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಭಾರತ ತಂಡವು ಬಾಂಗ್ಲಾದೇಶ ಎದುರು 10 ವಿಕೆಟ್‌ಗಳಿಂದ ಗೆದ್ದು ಸತತ ನಾಲ್ಕನೇ ಪ್ರಶಸ್ತಿಯತ್ತ ಚಿತ್ತ ನೆಟ್ಟಿದೆ.

ಪುಟ ತೆರೆದಂತೆ...

ಧನ್ಯವಾದಗಳು ನಿರ್ಮಲಾ ಮೇಡಂ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಸ್ವಾಸ್ಥ್ಯದ ಸಿರಿಯನ್ನು ಸಂಪಾದಿಸಲು ಸರಿಯೇ ಸಿರಿಧಾನ್ಯ?
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
ಸಂ.ಗಮ | 7

ಮೊದಲ ಬಾರಿ ಸಿಎಂ ಆಗಿದ್ದಾಗ ಪತ್ನಿಯ ಬದಲಿ ನಿವೇಶನ ಅರ್ಜಿ ಪರಿಗಣಿಸದಿರಲು ನಾನೇ ತಿಳಿಸಿದ್ದೆ: ಸುದೀರ್ಘ ಸುದ್ದಿಗೋಷ್ಠಿಯಲ್ಲಿ ಪ್ರಕರಣವನ್ನು ಎಳೆಎಳೆಯಾಗಿ ಬಿಚ್ಚಿಟ್ಟ ಸಿಎಂ

ನಿವೇಶನ ಹಂಚಿಕೆಯಲ್ಲಿ ತಪ್ಪಾಗಿಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸದನವನ್ನೇ ನುಂಗಿದ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೊಂದು ಸುತ್ತಿನ ಸುದೀರ್ಘ ಉತ್ತರ ನೀಡಿದ್ದು, ಯಾವುದೇ ತಪ್ಪು ಮಾಡದಿದ್ದರೂ ನಮ್ಮ ವಿರುದ್ಧ ಆರೋಪ ಹೋರಿಸಲಾಗುತ್ತಿದೆ ಎಂದು ಬಿಜೆಪಿ-ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದರು.

ವಿಧಾನಸೌಧದಲ್ಲಿ ನಡೆದ ಸುದೀರ್ಘ ಸುದ್ದಿಗೋಷ್ಠಿಯಲ್ಲಿ ಇಡೀ ಪ್ರಕರಣವನ್ನು ಎಳೆಎಳೆಯಾಗಿ ಬಿಚ್ಚಿಟ್ಟ ಸಿದ್ದರಾಮಯ್ಯ ಅವರು, ನಿವೇಶನ ಹಂಚಿಕೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಆದರೂ ಸಾರ್ವಜನಿಕರಿಗೆ ಈ ಬಗ್ಗೆ ಸ್ಪಷ್ಟ ಮಾಹಿತಿ ನೀಡುವ ಉದ್ದೇಶದಿಂದ ಹಾಗೂ ಮುಡಾದಲ್ಲಿ ಇತರೆ ನಿವೇಶನ ಹಂಚಿಕೆಗಳಿಗೆ ಸಂಬಂಧಿಸಿದಂತೆಯೂ ತನಿಖೆ ನಡೆಸಲು ನ್ಯಾಯಾಂಗ ತನಿಖೆಗೆ ಆದೇಶಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

1935ರಿಂದ ನಡೆದಿರುವ ಪ್ರಕ್ರಿಯೆಗಳನ್ನು ವಿವರಿಸಿದ ಸಿದ್ದರಾಮಯ್ಯ ಅವರು, ನನ್ನ ಪತ್ನಿಗೆ ದಾನವಾಗಿ ಬಂದಿರುವ ಜಮೀನನ್ನು ಮುಡಾ ಅಕ್ರಮವಾಗಿ ಪಡೆದಿತ್ತು. ಇದಕ್ಕೆ 50:50 ಪರಿಹಾರ ನೀಡಲು ಬಿಜೆಪಿ ಶಾಸಕರ ಸಮ್ಮುಖದಲ್ಲಿ ನಡೆದಿರುವ ಸಭೆಯಲ್ಲಿ ಅನುಮೋದಿಸಲಾಗಿದೆ. ಇದೇ ಪ್ರಕರಣದಲ್ಲಿ ಸುನಂದಮ್ಮ ಅವರಿಗೆ ಶೇ.100ರಷ್ಟು ಪರಿಹಾರ ನೀಡಲು ಹೈಕೋರ್ಟ್ ಆದೇಶವಿದೆ. ಆದರೆ ನನ್ನ ಪತ್ನಿ ಪಾರ್ವತಿ ಅವರು ಶೇ.50ರಷ್ಟು ಪರಿಹಾರ ಮಾತ್ರ ಪಡೆದಿದ್ದಾರೆ. ಪರಿಹಾರದ ರೂಪದಲ್ಲಿ ಹಂಚಿಕೆಯಾಗಿರುವ ನಿವೇಶನಗಳನ್ನು ಇದೇ ಜಾಗದಲ್ಲಿ ನೀಡಬೇಕು ಎಂದು ನಾನು ಹೇಳಿಲ್ಲ. ಆದರೆ ವಿನಾಕಾರಣ ಬಿಜೆಪಿಯವರು ನನ್ನ ವಿರುದ್ಧ ಆರೋಪ ಹೋರಿಸುತ್ತಿದ್ದಾರೆ ಎಂದು ಟೀಕಿಸಿದರು.

ರಾಜಕೀಯ ಷಡ್ಯಂತ್ರ: ಈ ನಡುವೆ ಬಿಜೆಪಿ-ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಮ್ಮ ಹೆಸರಿಗೆ ಮಸಿ ಬಳಿಯಬೇಕು ಎನ್ನುವ ಕಾರಣಕ್ಕೆ ಈ ರೀತಿ ಆರೋಪ ಹೋರಿಸಲಾಗುತ್ತಿದೆ. ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗಲೇ ನನ್ನ ಪತ್ನಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಆದರೆ ಅಧಿಕಾರದಿಂದ ಕೆಳಗೆ ಇಳಿಯುವ ತನಕ ಈ ಬಗ್ಗೆ ಪ್ರಸ್ತಾಪ ಮಾಡಬೇಡಿ ಎಂದು ಸೂಚನೆ ನೀಡಿದ್ದೆ. ಸುಮಾರು ಒಂದುವರೆ ಲಕ್ಷ ಚ.ಅಡಿಗೆ ಪ್ರತಿಯಾಗಿ 32ರಿಂದ 33 ಸಾವಿರ ಚ.ಅಡಿ ಭೂಮಿಯನ್ನು ಪಡೆಯಲಾಗಿದೆ. ಕಾನೂನಾತ್ಮಕವಾಗಿ ಪರಿಹಾರವನ್ನು ಪಡೆದುಕೊಂಡಿದ್ದರೂ, ಅಕ್ರಮವೆಂದು ಹೇಳುತ್ತಿರುವುದು ಖಂಡನೀಯ. ಎರಡನೇ ಬಾರಿಗೆ ನಾನು ಮುಖ್ಯಮಂತ್ರಿಯಾಗಿದ್ದೇನೆ ಎನ್ನುವ ಕಾರಣಕ್ಕೆ, ನನ್ನ ಮೇಲೆ ರಾಜಕೀಯ ಷಡ್ಯಂತ್ರ ರೂಪಿಸಲು ಈ ರೀತಿಯ ಆರೋಪ ಮಾಡಲಾಗುತ್ತಿದೆ ಎಂದು ಟೀಕಿಸಿದರು.

ಸುದ್ದಿಗೋಷ್ಠಿ ಪ್ರಮುಖ ಅಂಶಗಳು

- ಇಡೀ ಪ್ರಕರಣದಲ್ಲಿ ಭೂಮಿ ಕಳೆದ ಬೇರೆಯವರಿಗೆ ನಿವೇಶನ ಹಂಚಿದಂತೆ ನಮ್ಮ ಕುಟುಂಬಕ್ಕೂ ಹಂಚಲಾಗಿದೆ.
- ಇದೇ ಪ್ರದೇಶದಲ್ಲಿ ನಿವೇಶನ ನೀಡುವಂತೆ ನಾವ್ಯಾರು ಮುಡಾವನ್ನು ಕೇಳಿಲ್ಲ
- ರಾಜಕೀಯ ಕಾರಣಕ್ಕೆ ನನ್ನ ವಿರುದ್ಧ ಬಿಜೆಪಿ-ಜೆಡಿಎಸ್ ನವರು ವಿನಾಕಾರಣ ಆರೋಪ ಹೋರಿಸಿದ್ದಾರೆ
- 40 ದಶಕದ ಸಾರ್ವಜನಿಕ ಜೀವನದಲ್ಲಿ ಎಲ್ಲಿಯೂ ನನ್ನ ವಿರುದ್ಧ ಈ ರೀತಿಯ ಆರೋಪಗಳಿಲ್ಲ
- ದಮನಿತನೊಬ್ಬ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾನೆ ಎನ್ನುವ ಕಾರಣಕ್ಕೆ ಈ ರೀತಿ ಆರೋಪಿಸಲಾಗುತ್ತಿದೆ.

ಎಚ್‌ಡಿಕೆ ವಿರುದ್ಧ ದಾಖಲೆ ಬಿಡುಗಡೆ ಮಾಡಿದ ಭೈರತಿ

ಇನ್ನು ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪದೇಪದೆ ವಾಗ್ದಾಳಿ ನಡೆಸುತ್ತಿರುವ ಬಿಜೆಪಿ-ಜೆಡಿಎಸ್ ನಾಯಕರಿಗೆ ಟಾಂಗ್ ಕೊಡಲು ಬೈರತಿ ಸುರೇಶ್ ಅವರು ದಾಖಲೆಗಳನ್ನು ಬಿಡುಗಡೆಗೊಳಿಸಿದರು. ಇದರಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ನಿವೇಶನ ಪಡೆದಿರುವ ದಾಖಲೆ ಗಳಿವೆ. ಈ ಮೂಲಕ ಮತ್ತೊಂದು ಸುತ್ತಿನ ರಾಜಕೀಯ ಹೋರಾಟಕ್ಕೆ ಮುಡಾ ವೇದಿಕೆ ಸಿದ್ಧಪಡಿಸಿರುವುದು ಸ್ಪಷ್ಟ. ಆದರೆ ಸುರೇಶ್ ಆರೋಪ ವನ್ನು ಸ್ಪಷ್ಟವಾಗಿ ನಿರಾಕರಿಸಿರುವ ಕುಮಾರಸ್ವಾಮಿ ಅವರು, ಮೈಸೂರಿನಲ್ಲಿ ನನಗೆ ನಿವೇಶನ ಕೊಟ್ಟಿದ್ದಾರೆ ಎಂದಿದ್ದಾರೆ. ಆದರೆ, ಈವರೆಗೆ ಆ ನಿವೇಶನವನ್ನೇ ಕೊಟ್ಟಿಲ್ಲ ಅಧಿಕಾರ ದುರುಪಯೋಗ ಮಾಡಿಕೊಳ್ಳಬೇಕು ಎಂದಿದ್ದರೆ ಮುಖ್ಯಮಂತ್ರಿ ಯಾಗಿದ್ದಾಗಲೇ ನನ್ನ ಹೆಸರಿಗೆ ಬರೆಸಿಕೊಳ್ಳಬಹುದಾಗಿತ್ತು. ಆದರೆ, ಸಿದ್ದರಾಮಯ್ಯ ಅವರಂತೆ ನಾನು ಅಧಿಕಾರ ದುರುಪ ಯೋಗ ಮಾಡಿಕೊಳ್ಳಲಿಲ್ಲ ಎಂದು ತಿರುಗೇಟು ಕೊಟ್ಟಿದ್ದಾರೆ.

ನನ್ನ ಸಾರ್ವಜನಿಕ ಜೀವನ ತೆರೆದ ಪುಸ್ತಕದ ರೀತಿಯಲ್ಲಿದೆ. ನನ್ನ ಪತ್ನಿಯ ಭೂಮಿಯನ್ನು ಮುಡಾ ಸ್ವಾಧೀನಪಡೆಸಿಕೊಂಡಿದ್ದಕ್ಕೆ ಪ್ರತಿಯಾಗಿ ಕಾನೂನಾತ್ಮಕವಾಗಿ ನಿವೇಶನಗಳನ್ನು ನೀಡಿದ್ದಾರೆ. ಆದ್ದರಿಂದ ಈ ಪ್ರಕರಣದಲ್ಲಿ ನಾನು, ನನ್ನ ಪತ್ನಿ ಅಥವಾ ನನ್ನ ಬಾವಮೈದುನ ಯಾವುದೇ ತಪ್ಪು ಮಾಡಿಲ್ಲ.

- ಸಿದ್ದರಾಮಯ್ಯ ಮುಖ್ಯಮಂತ್ರಿ

ನಿವೇಶನ ಹಂಚಿಕೆಯಾಗಿರುವುದು ಬಿಜೆಪಿ ಕಾಲದಲ್ಲಿ. ಭೂಮಿ ಸ್ವಾಧೀನ ಪಡೆಸಿಕೊಂಡಿರುವುದಕ್ಕೆ ಮುಡಾ ಅಧಿಕಾರಿಗಳು ಪರಿಹಾರವಾಗಿ ನಿವೇಶನ ಗಳನ್ನು ಹಂಚಿದ್ದಾರೆ. ಅದರಲ್ಲಿ ಅಕ್ರಮ ಎಲ್ಲಿದೆ? ಮುಖ್ಯಮಂತ್ರಿ ಕುಟುಂಬದವರು ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ನಿವೇಶನ ನೀಡುವಂತೆ ಕೇಳಿಲ್ಲ. ಆದ್ದರಿಂದ ಇಡೀ ಪ್ರಕ್ರಿಯೆ ಕಾನೂನು ಚೌಕಟ್ಟಿನಲ್ಲಿ ನಡೆದಿದೆ.

- ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಶಾಲಿನಿ ರಜನೀಶ್ ನೂತನ ಮುಖ್ಯಕಾರ್ಯದರ್ಶಿ

ಪತಿ ಹುದ್ದೆಗೆ ಪತ್ನಿ ನೇಮಕ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಾಲಿನಿ ರಜನೀಶ್ ಅವರಿಗೆ ಅಭಿನಂದನೆ ಸಲ್ಲಿಸಿದರು.

ಬೆಂಗಳೂರು: ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರ ನಿವೃತ್ತಿಯಿಂದ ತೆರವಾಗಲಿರುವ ಸ್ಥಾನಕ್ಕೆ ಪತ್ನಿ ಶಾಲಿನಿ ರಜನೀಶ್ ಅವರೇ ಉತ್ತರಾಧಿಕಾರಿಯಾಗಿ ನೇಮಕವಾಗಿದ್ದಾರೆ.

ಜುಲೈ ಅಂತ್ಯಕ್ಕೆ ರಜನೀಶ್ ಗೋಯಲ್ ಅವರು ನಿವೃತ್ತರಾಗಿದ್ದಾರೆ. ಆದ್ದರಿಂದ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿ ಸ್ಥಾನಕ್ಕೆ ಶಾಲಿನಿ ರಜನೀಶ್ ಅವರನ್ನೇ ಆಯ್ಕೆ ಮಾಡಲು ತೀರ್ಮಾನಿಸಲಾಯಿತು. ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಚಿವ ಸಂಪುಟದ ಸಹೋದ್ಯೋಗಿಗಳು ಶಾಲಿನಿ ರಜನೀಶ್ ಅವರಿಗೆ ಅಭಿನಂದನೆ ಸಲ್ಲಿಸಿದರು.

ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌ಕೆ ಪಾಟೀಲ್, ರಾಜ್ಯ ಸರಕಾರದ ಮುಂದಿನ ಮುಖ್ಯ ಕಾರ್ಯದರ್ಶಿಯಾಗಿ ಶಾಲಿನಿ ರಜನೀಶ್ ಅವರನ್ನು ನೇಮಕ ಮಾಡಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದರು.

→ 4

ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ

ರಾಮನಗರ ಇನ್ನು ಬೆಂ.ದಕ್ಷಿಣ

- ಭಾರಿ ವಿರೋಧದ ನಡುವೆಯೇ ಬೆಂಗಳೂರು ದಕ್ಷಿಣವೆಂದು ಮರುನಾಮಕರಣ
- ಬ್ರ್ಯಾಂಡ್ ಬೆಂಗಳೂರು ಮೂಲಕ ಅಭಿವೃದ್ಧಿಯ ಕಲ್ಪನೆ ಸಾಕಾರಗೊಳಿಸುವ ಉದ್ದೇಶ

ಬೆಂಗಳೂರು: ಬಿಜೆಪಿ-ಜೆಡಿಎಸ್‌ನ ವಿರೋಧದ ನಡುವೆಯೂ ರಾಮನಗರವನ್ನು ಬೆಂಗಳೂರು ದಕ್ಷಿಣವೆಂದು ಬದಲಾಯಿಸಲು ಸರಕಾರ ಅಧಿಕೃತ ತೀರ್ಮಾನ ಕೈಗೊಂಡಿದೆ.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಂಡಿರುವ ರಾಜ್ಯ ಸರಕಾರ, ಪ್ರಸ್ತುತ ರಾಮನಗರ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಜಿಲ್ಲೆಯೆಂದು ಮರುನಾಮಕರಣ ಮಾಡಲು ಒಪ್ಪಿಗೆ ನೀಡಿದೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಬ್ರ್ಯಾಂಡ್ ಬೆಂಗಳೂರು ಮೂಲಕ ಅಭಿವೃದ್ಧಿಯ ಕಲ್ಪನೆ ಸಾಕಾರಗೊಳಿಸುವ ಉದ್ದೇಶದಿಂದ ಪ್ರಸ್ತುತ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯೆಂದು ಮರನಾಮಕರಣ ಒಪ್ಪಿಗೆ ನೀಡಲಾಗಿದೆ ಎಂದು ತಿಳಿಸಿದರು. ಸರಕಾರದ ಈ ನಿರ್ಧಾರಕ್ಕೆ ಬಿಜೆಪಿ-ಜೆಡಿಎಸ್ ತೀವ್ರ ವಿರೋಧ ವ್ಯಕ್ತಪಡಿಸಿತ್ತು.

ಮಾನವ-ಆನೆ ಸಂಘರ್ಷ: 2,853 ಮಂದಿ ಸಾವು

ದೆಹಲಿ: ಮಾನವ-ಆನೆ ಸಂಘರ್ಷದಿಂದಾಗಿ ಕಳೆದ ಐದು ವರ್ಷಗಳಲ್ಲಿ 2,853 ಮಂದಿ ಮೃತಪಟ್ಟಿದ್ದಾರೆ. 2023ರಲ್ಲಿ ಅತಿ ಹೆಚ್ಚು 628 ಮಂದಿ ಸಾವಿಗೀಡಾಗಿದ್ದಾರೆ ಎಂದು ಕೇಂದ್ರ ಪರಿಸರ ಖಾತೆ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ರಾಜ್ಯಸಭೆಗೆ ತಿಳಿಸಿದ್ದಾರೆ. ಆನೆ ದಾಳಿಯಿಂದಾಗಿ ವಿವಿಧ ರಾಜ್ಯಗಳಲ್ಲಿ 2019ರಲ್ಲಿ 587, 2020ರಲ್ಲಿ 471, 2021ರಲ್ಲಿ 557, 2022ರಲ್ಲಿ 610 ಮತ್ತು 2023ರಲ್ಲಿ 628 ಮಂದಿ ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದಾರೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ಆನೆ ದಾಳಿಯಿಂದಾಗಿ ಒಡಿಶಾದಲ್ಲಿ 624, ಜಾರ್ಖಂಡ್‌ನಲ್ಲಿ 474, ಪಶ್ಚಿಮ ಬಂಗಾಳದಲ್ಲಿ 436, ಅಸ್ಸಾಂನಲ್ಲಿ 383, ಛತ್ತೀಸಗಢದಲ್ಲಿ 303, ತಮಿಳುನಾಡಿನಲ್ಲಿ 256, ಕರ್ನಾಟಕದಲ್ಲಿ 160, ಕೇರಳದಲ್ಲಿ 124 ಮಂದಿ ಪ್ರಾಣ ಕಳೆದುಕೊಂಡಿದ್ದಾರೆಂದು ತಿಳಿಸಿದರು.

ಮಂಡ್ಯ, ಯಾದಗಿರೀಲಿ ಲೀಥಿಯಂ ನಿಕ್ಷೇಪ

ದೆಹಲಿ: ಮಂಡ್ಯ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಲಿಥಿಯಂ ಸಂಪನ್ಮೂಲ ಇರುವುದನ್ನು ಪರಮಾಣು ಖನಿಜ ನಿರ್ದೇಶನಾಲಯ (ಎಎಂಡಿ) ಪತ್ತೆ ಹಚ್ಚಿದೆ ಎಂದು ಅಣುಶಕ್ತಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಲೋಕಸಭೆಗೆ ತಿಳಿಸಿದರು. ಲಿಥಿಯಂ ಸಂಪನ್ಮೂಲಗಳನ್ನು ಗುರುತಿಸಲು ಮತ್ತು ಅಂದಾಜು ಮಾಡಲು ಯಾದಗಿರಿ ಜಿಲ್ಲೆಯಲ್ಲಿ ಪ್ರಾಥಮಿಕ ಸಮೀಕ್ಷೆ ಮತ್ತು ಸೀಮಿತ ಭೂಗರ್ಭದ ಅನ್ವೇಷಣೆಯನ್ನು ಕೈಗೊಳ್ಳಲಾಗಿದೆ. ಮಂಡ್ಯ ಜಿಲ್ಲೆಯ ಮರಳಗಾಲ-ಅಲ್ಲಾಪಟ್ಟಣ ಪ್ರದೇಶದಲ್ಲಿ 1600 ಟನ್‌ಗಳಷ್ಟು ಲಿಥಿಯಂ ನಿಕ್ಷೇಪ ಪತ್ತೆಯಾಗಿದೆ ಎಂದರು.

ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಚಾಲನೆ

ಪ್ಯಾರಿಸ್: ಇಲ್ಲಿನ ಸೀನ್ ನದಿಯ ಮೇಲೆ ಶುಕ್ರವಾರ ರಾತ್ರಿ 11 ಗಂಟೆಗೆ 33ನೇ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್ ಚಾಲನೆ ನೀಡಿದರು. ಈ ಬಾರಿಯ ಒಲಿಂಪಿಯಾಡ್‌ನಲ್ಲಿ ಭಾರತದ 117 ಕ್ರೀಡಾಪಟುಗಳು ಸೇರಿ 206 ದೇಶಗಳ 10 ಸಾವಿರಕ್ಕೂ ಅಧಿಕ ಕ್ರೀಡಾಪಟುಗಳು ಪಾಲ್ಗೊಂಡಿದ್ದಾರೆ.

ರೈಲ್ವೆ ಸ್ವತ್ತುಗಳಿಗೆ ಬೆಂಕಿ: ಪ್ಯಾರಿಸ್ ಒಲಿಂಪಿಕ್ಸ್-2024ಗೆ ಕ್ಷಣಗಣನೆ ಇರುವಾಗಲೇ ಫ್ರಾನ್ಸ್‌ದಾದ್ಯಂತ ರೈಲ್ವೆ ವ್ಯವಸ್ಥೆ ಮೇಲೆ ಸಂಘಟಿತ ದಾಳಿ ನಡೆಸಲಾಗಿದೆ. ಹಲವು ಕಡೆಗಳಲ್ಲಿ ರೈಲ್ವೆ ಸ್ವತ್ತುಗಳಿಗೆ ಬೆಂಕಿ ಹಚ್ಚಲಾಗಿದೆ. ದೇಶಾದ್ಯಂತ ರೈಲು ಸೇವೆಗಳಲ್ಲಿ ವ್ಯತ್ಯಯವುಂಟಾಗಿ ಸುಮಾರು 8 ಲಕ್ಷ ಪ್ರಯಾಣಿಕರು ಸಮಸ್ಯೆ ಅನುಭವಿಸಿದ್ದಾರೆ. ರೈಲು ಪ್ರಯಾಣ ಮುಂದೂಡುವಂತೆ ಪ್ರಯಾಣಿಕರಿಗೆ ಸರಕಾರ ಸೂಚಿಸಿದೆ.

ಕಮಲಾ ಹ್ಯಾರಿಸ್‌ಗೆ ಒಬಾಮ ಬೆಂಬಲ

ಅಟ್ಲಾಂಟಾ: ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಸಂಭವನೀಯ ಅಭ್ಯರ್ಥಿಯಾಗಿರುವ ಕಮಲಾ ಹ್ಯಾರಿಸ್ ಅವರಿಗೆ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಮತ್ತು ಪತ್ನಿ ಮಿಷೆಲ್ ಒಬಾಮ ಅವರು ಬೆಂಬಲ ಸೂಚಿಸಿದ್ದಾರೆ.

ರಾಜ್ಯಸಭೆಯಲ್ಲಿ ಪ್ರತಿಧ್ವನಿಸಿದ ವಾಲ್ಮೀಕಿ ನಿಗಮದ ಹಗರಣ

ದೆಹಲಿ: ಮಹರ್ಷಿ ವಾಲ್ಮೀಕಿ ನಿಗಮದ ಹಗರಣದ ಆರೋ ಪವು ಶುಕ್ರವಾರ ರಾಜ್ಯಸಭೆಯಲ್ಲಿ ಪ್ರತಿಧ್ವನಿ ಸಿತು. ಸದನದ ಎಲ್ಲ ನಿಗದಿತ ಚರ್ಚೆಗಳನ್ನು ಅಮಾನತು ಮಾಡಿ ನಿಯಮ 267ರ ಅಡಿ ಚರ್ಚೆಗೆ ಆಡಳಿತಾರೂಢ ಬಿಜೆಪಿ ಸದಸ್ಯರು ಒತ್ತಾಯಿಸಿದರು. ಅವಕಾಶ ನಿರಾಕರಿಸಿದ ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್, ಬಿಜೆಪಿ ಸದಸ್ಯ ಈರಣ್ಣ ಕಡಾಡಿ ಅವರಿಗೆ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಿದರು. ಚರ್ಚೆಗೆ ಅವಕಾಶ ಕೊಡದ ಸ್ಪೀಕರ್ ನಿರ್ಧಾರದ ವಿರುದ್ಧ ಪ್ರತಿಭಟನೆ ನಡೆಸಲು ಆಡಳಿತ ಪಕ್ಷದ ಸದಸ್ಯರು ಮುಂದಾದರೆ, ಕರ್ನಾಟಕದ ಭ್ರಷ್ಟಾಚಾರದ ವಿಷಯ ಪ್ರಸ್ತಾಪಿಸಲು ಬಿಜೆಪಿ ಸದಸ್ಯ ಈರಣ್ಣ ಕಡಾಡಿಗೆ ಅವಕಾಶ ನೀಡಿರುವುದನ್ನು ಖಂಡಿಸಿ ಪ್ರತಿಪಕ್ಷ ಕಾಂಗ್ರೆಸ್‌ನ ಸದಸ್ಯರು ಪ್ರತಿಭಟನೆ ನಡೆಸಿದ್ದರಿಂದ ಗದ್ದಲದ ವಾತಾವರಣ ನಿರ್ಮಾಣವಾಗಿತ್ತು.

→ 4

ಸಂಸತ್ ಎದುರು ಧರಣಿ

ವಾಲ್ಮೀಕಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರದ ವಿರುದ್ಧ ಸಂಸತ್ ಭವನದ ಎದುರು ರಾಜ್ಯ ಬಿಜೆಪಿ ಸಂಸದರು ಪ್ರತಿಭಟನೆ ನಡೆಸಿದರು. ಸಂಸದರಾದ ಬಸವರಾಜ ಬೊಮ್ಮಾಯಿ, ವಿಶ್ವೇಶ್ವರ ಹೆಗಡೆ ಕಾಗೇರಿ, ಸಿ.ಎನ್.ಮಂಜುನಾಥ್ ಮತ್ತು ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಕ್ಕಿ ಹರಿಯುತ್ತಿರುವ ಕೃಷ್ಣಾ, ತುಂಗೆ, ಜಮೀನು ಜಲಾವೃತ, ರೈತರಿಗೆ ಹೆಚ್ಚಿದ ಆತಂಕ

ಮಹಾ ಮಳೆ: ಉತ್ತರದಲ್ಲಿ ನೆರೆ ಭೀತಿ

ಹುಬ್ಬಳ್ಳಿ: ಮಹಾ ಮಳೆಗೆ ಕೃಷ್ಣಾ, ವೇದಗಂಗಾ, ದೂಧಗಂಗಾ, ಹಿರಣ್ಯಕೇಶಿ, ಭೀಮಾ, ಮಲೆನಾಡು ಮುಸಲಧಾರೆಗೆ ತುಂಗಭದ್ರಾ, ವರದಾ ನದಿಗಳ ಅಬ್ಬರಕ್ಕೆ ಉತ್ತರ ಕರ್ನಾಟಕದಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ.

ಹಲವು ಸೇತುವೆಗಳು ಮುಳುಗಡೆಯಾಗಿ ಸಂಪರ್ಕ ಕಡಿತಗೊಂಡಿದೆ. ತೀರ ಪ್ರದೇಶದ ಜನರನ್ನು ಸುರಕ್ಷಿತ ಸ್ಥಳಕ್ಕೆ ಬೋಟ್‌ಗಳ ಮೂಲಕ ಕರೆತರಲಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ 22, ಬಾಗಲಕೋಟೆ ಜಿಲ್ಲೆಯಲ್ಲಿ 21, ಯಾದಗಿರಿ, ಕಂಪ್ಲಿಯಲ್ಲಿ ತಲಾ 1, ಮಲೆನಾಡಿನಲ್ಲಿ ಮೂರು ಸೇರಿ 48 ಸೇತುವೆಗಳು ಮುಳುಗಡೆಯಾಗಿ ಹಲವೆಡೆ ಸಂಪರ್ಕ ಕಡಿತಗೊಂಡಿದೆ.

ತುಂಗಭದ್ರಾ ಜಲಾಶಯದಿಂದ ನದಿಗೆ ನೀರು ಬಿಡುಗಡೆ ಮಾಡಲಾಗಿದೆ. ಹೀಗಾಗಿ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಐತಿಹಾಸಿಕ ಹಂಪಿಯ ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಐತಿಹಾಸಿಕ ಸ್ಮಾರಕಗಳು ಮುಳುಗಡೆಯಾಗಿವೆ. ಹಂಪಿಯ ವಿಧಿ-ವಿಧಾನ ಮಂಟಪ, ಪುರಂದರ ದಾಸ ಮಂಟಪಗಳು ಕೂಡ ಮುಳುಗಡೆಯಾಗಿವೆ. ನದಿಗೆ ಇಳಿಯದಂತೆ ಪ್ರವಾಸಿಗರಿಗೆ ಸೂಚನೆ ನೀಡಲಾಗಿದೆ.

ಶಾಲೆಗಳಿಗೆ ರಜೆ

ಧಾರವಾಡ, ಬೆಳಗಾವಿ, ಹಾವೇರಿ, ಕೊಡಗು, ಮತ್ತು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಮೂಡಿಗೆರೆ, ಕಳಸ, ಶೃಂಗೇರಿ, ಕೊಪ್ಪ, ಎನ್.ಆರ್. ಪುರ ತಾಲೂಕು, ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಾಟ್ಕಳ, ದಾಂಡೆಲಿ, ಜೋಯಿಡಾ, ಹಳಿಯಾಳ ಮತ್ತು ಯಲ್ಲಾಪುರ ತಾಲೂಕಿನ ಶಾಲಾ ಕಾಲೇಜುಗಳಿಗೆ ಶನಿವಾರ ರಜೆ ನೀಡಲಾಗಿದೆ.

ವಿಜಯೇಂದ್ರ, ಅಶೋಕ ನಡುವೆ ತಾಳಮೇಳವಿಲ್ಲ: ಲಿಂಬಾವಳಿ

ಸ್ವಪಕ್ಷೀಯರ ವಿರುದ್ಧ ಕಿಡಿ

ಬೆಂಗಳೂರು: ರಾಜ್ಯ ಸರಕಾರದ ವಿರುದ್ಧ ಸಾಲು ಸಾಲು ಆರೋಪಗಳಿದ್ದರೂ, ಅವ್ಯಾವುದನ್ನು ಬಳಸಿಕೊಳ್ಳದೇ ಸದನದಲ್ಲಿ ಸರಕಾರದ ವೈಫಲ್ಯಗಳನ್ನು ಎತ್ತಿಹಿಡಿಯುವ ಕೆಲಸ ಮಾಡದ ಬಿಜೆಪಿ ಶಾಸಕರ ವಿರುದ್ಧ ಬಿಜೆಪಿಯ ನಾಯಕ ಅರವಿಂದ ಲಿಂಬಾವಳಿ ಅವರು ಕಿಡಿ ಕಾರಿದ್ದಾರೆ.

ಮುಡಾ ಪ್ರಕರಣ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಗ್ಯಾರಂಟಿ ಯೋಜನೆಗೆ ಎಸ್‌ಸಿಪಿ-ಟಿಎಸ್‌ಪಿ ಅನುದಾನ, ರಾಜ್ಯದಲ್ಲಿ ತೀವ್ರ ಪ್ರಮಾಣದಲ್ಲಿ ಹೆಚ್ಚುತ್ತಿರುವ ಡೆಂಘೀ, ನೆರೆ, ಬರ ಪರಿಹಾರ ವಿತರಣೆಯಲ್ಲಿನ ವಿಳಂಬ ಸೇರಿ ಹತ್ತಾರು ವೈಫಲ್ಯಗಳಿದ್ದರೂ, ಅದರ ವಿರುದ್ಧ ಗಟ್ಟಿಯಾಗಿ ಬಿಜೆಪಿ ಶಾಸಕರು ಧ್ವನಿ ಎತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

→ 4

ಪ್ರತಿಪಕ್ಷವಾಗಿ ವಿಫಲ

ಈ ಬಾರಿಯ ಅಧಿವೇಶನದಲ್ಲಿ ಪ್ರತಿಪಕ್ಷವಾಗಿ ಬಿಜೆಪಿ ಸಂಪೂರ್ಣ ವಿಫಲವಾಗಿದೆ. ಅಧಿವೇಶನದಲ್ಲಿ ನಾಯಕರ ನಡೆ ಗಮನಿಸಿದರೆ, ಮುಂದಿನ ದಿನಗಳಲ್ಲಿ ಬಿಜೆಪಿ ಜನಪರ ಹೋರಾಟಗಳಲ್ಲಿ ಹೇಗೆ ತನ್ನನ್ನು ತೊಡಗಿಸಿಕೊಳ್ಳಬಹುದು ಎಂಬುದು ನಿಷ್ಠಾವಂತ ಕಾರ್ಯಕರ್ತರಿಗೆ ಆತಂಕದ ವಿಷಯವಾಗಿದೆ. ಬೆರಳೆಣಿಕೆಯಷ್ಟು ಶಾಸಕರನ್ನು ಹೊಂದಿದ್ದ ದಿನಗಳಲ್ಲೂ ಕಲಾಪಗಳಲ್ಲಿ ಅರ್ಭಟಿಸುತ್ತಿದ್ದ, ಜನರ ಆಶೋತ್ತರಗಳಿಗೆ ದನಿಯಾಗುತ್ತಿದ್ದ ಬಿಜೆಪಿಯನ್ನು ನೋಡಿದ್ದ ನನಗೆ, ಇಂದಿನ ಪಕ್ಷದ ಈ ಪರಿಸ್ಥಿತಿ ನೋಡಿ ತೀವ್ರ ಬೇಸರ ಮತ್ತು ಆತಂಕವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಅಹೋರಾತ್ರಿ ಧರಣಿ - ಸದನದಲ್ಲೇ ರಾತ್ರಿ ಕಳೆದ ಶಾಸಕರು





ದರ್ಶನ್ ಬಂಧಮುಕ್ತಿಗಾಗಿ ಪತ್ನಿ ಕೊಲ್ಲೂರು ದೇವಿ ಮೊರೆ

ಉಡುಪಿ : ನಟ ದರ್ಶನ್ ಪತ್ನಿ ವಿಜಯಲಕ್ಷ್ಮೀ ಅವರು ಶುಕ್ರವಾರ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿನೀಡಿ ಪತಿಯ ಬಿಡುಗಡೆಗಾಗಿ ಪ್ರಾರ್ಥಿಸಿದರು. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಮತ್ತು ಮತ್ತವರ ತಂಡ ಜೈಲುಪಾಲಾಗಿದ್ದು, ಜಾಮೀನು ಮತ್ತಿತರ ಕಾನೂನು ಪ್ರಕ್ರಿಯೆಗಾಗಿ ದರ್ಶನ್ ಪತ್ನಿ ವಿಜಯಲಕ್ಷ್ಮಿ ಓಡಾಡುತ್ತಿದ್ದಾರೆ. ಈ ನಡುವೆ ಸಂಕಷ್ಟ ಪರಿಹಾರಕ್ಕೆ ಕೊಲ್ಲೂರು ಮೂಕಾಂಬಿಕಾ ದೇವಿಯ ಮೊರೆಹೋಗಿದ್ದಾರೆ. ಶುಕ್ರವಾರ ಬೆಳಗ್ಗೆ 6 ಗಂಟೆಗೆ ಮೂಕಾಂಬಿಕಾ ದೇವಸ್ಥಾನದಲ್ಲಿ ವಿಜಯಲಕ್ಷ್ಮೀ ಹಾಜರಾಗಿದ್ದರು. ದೇವರ ದರ್ಶನ ಮಾಡಿ, ಕೆಲಕಾಲ ಗರ್ಭಗುಡಿಯ ಮುಂದೆ ನಿಂತು ಪ್ರಾರ್ಥನೆ- ಸಂಕಲ್ಪ ಮಾಡಿದ್ದಾರೆ. ದೇವಸ್ಥಾನದ ಪ್ರಾಂಗಣದಲ್ಲಿರುವ ಯಜ್ಞಶಾಲೆಯಲ್ಲಿ ವಿಜಯಲಕ್ಷ್ಮೀ ಮತ್ತು ಆಪ್ತರು ಚಂಡಿಕಾ ಹೋಮದಲ್ಲಿ ಭಾಗಿಯಾದರು. ಕ್ಷೇತ್ರದ ಹಿರಿಯ ಅರ್ಚಕರಾದ ನರಸಿಂಹ ಅಡಿಗ ಮತ್ತು ಸುಬ್ರಹ್ಮಣ್ಯ ಅಡಿಗ ನೇತೃತ್ವದಲ್ಲಿ ಧಾರ್ಮಿಕ ವಿಧಿ-ವಿಧಾನಗಳು ನೆರವೇರಿತು. ಎರಡು ದಿನ ಕೊಲ್ಲೂರು ಕ್ಷೇತ್ರದಲ್ಲಿದ್ದ ವಿಜಯಲಕ್ಷ್ಮಿ ಮಾಧ್ಯಮದ ಜೊತೆ ಮಾತನಾಡಲು ನಿರಾಕರಿಸಿದರು. ಕುಟುಂಬಸ್ಥರು ಕೂಡ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಧಾರ್ಮಿಕ ವಿಧಿವಿಧಾನಗಳನ್ನು ಪೂರೈಸಿ ಬೆಂಗಳೂರಿಗೆ ವಾಪಸ್ ಆಗಿದ್ದಾರೆ.

ಅಪಘಾತ; ಪತ್ರಕರ್ತ ಸಾವು

ನಾಗಮಂಗಲ: ಕಾರು ಮತ್ತು ಲಾರಿ ನಡುವೆ ಮುಖಾಮುಖಿ ಡಿಕ್ಕಿಯಾಗಿ ಹಿರಿಯ ಪತ್ರಕರ್ತ ಮೃತಪಟ್ಟ ಘಟನೆ ಪಟ್ಟಣದ ಹೊರವಲಯ

ಚಾಮರಾಜನಗರ-ಜೇವರ್ಗಿ ರಾ.ಹೆದ್ದಾರಿಯ ತೊಳಲಿ ಗ್ರಾಮದ ಸಮೀಪ ಶುಕ್ರವಾರ ಸಂಜೆ ನಡೆದಿದೆ.

ತಾಲೂಕಿನ ಕಸಬಾ ಹೋಬಳಿಯ ಬ್ಯಾಡರಹಳ್ಳಿ ಗ್ರಾಮದ ನಿವೃತ್ತ ಶಿಕ್ಷಕ ಸಿ.ಚಂದ್ರಪ್ಪ ಅವರ ಪುತ್ರ ಮೋಹನ್ ಕುಮಾರ್(49) ಮೃತರು. ಬೆಳ್ಳೂರಿನಿಂದ ನಾಗಮಂಗಲಕ್ಕೆ ತಮ್ಮ ಕಾರಿನಲ್ಲಿ ಬರುವಾಗ ಮೈಸೂರಿನಿಂದ ಬೆಳ್ಳೂರು ಕಡೆಗೆ ಹೋಗುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ. ಕಾರು ಚಲಾಯಿಸುತ್ತಿದ್ದ ಬಿ.ಸಿ.ಮೋಹನ್ ಕುಮಾರ್ ತಲೆಗೆ ತೀವ್ರ ಪೆಟ್ಟು ಬಿದ್ದು, ಬಿ.ಜಿ ನಗರದ ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದರು. ಮೃತರು ತಾಯಿ , ಪತ್ನಿ ಹಾಗೂ ಸಹೋ ದರ, ಸಹೋದರಿ ಅಪಾರ ಬಂಧುಗಳನ್ನು ಅಗಲಿದ್ದಾರೆ. ಪತ್ರಿಕಾ ರಂಗದ ಸೇವೆ: ಮೃತರು ಪ್ರಜಾವಾಣಿ, ವಿಜಯವಾಣಿ, ಆಂದೋಲನ ಸೇರಿದಂತೆ ಹಲವು ದಿನಪತ್ರಿಕೆಗಳಲ್ಲಿ ಸೇವೆ ಕಾರ್ಯ ನಿರ್ವಹಿಸಿದ್ದರು. ನಾಗಮಂಗಲ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. , ತಾಲೂಕು ಹೇಮಾವತಿ ನೀರು ಬಳಕೆದಾರರ ಸಂಘದ ಅಧ್ಯಕ್ಷರಾಗಿದ್ದರು. ಕನ್ನಡಪರ ಹಲವು ಹೋರಾಟಗಳಲ್ಲಿ ಪಾಲ್ಗೊಂಡಿದ್ದರು.

ಶನಿವಾರ ಅಂತ್ಯಕ್ರಿಯೆ: ಮೃತರ ಹುಟ್ಟೂರಾದ ಬ್ಯಾಡರಹಳ್ಳಿ ಗ್ರಾಮದಲ್ಲಿ ಶನಿವಾರ ಬೆಳಿಗ್ಗೆ 11.30ಕ್ಕೆ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಭಾರಿ ವಿರೋಧದ ನಡುವೆಯೇ ಬೆಂಗಳೂರು ದಕ್ಷಿಣವೆಂದು ಮರುನಾಮಕರಣ

ರಾಮನಗರದ ಹೆಸರು ಬದಲಾವಣೆ

ಬೆಂಗಳೂರು: ಭಾರಿ ವಿವಾದಕ್ಕೆ ಕಾರಣವಾಗಿದ್ದ ರಾಮನಗರ ಜಿಲ್ಲೆಯ ಹೆಸರು ಬದಲಾವಣೆಗೆ ಬಿಜೆಪಿ-ಜೆಡಿಎಸ್‌ನ ತೀವ್ರ ವಿರೋಧದ ನಡುವೆಯೂ ರಾಮನಗರವನ್ನು ಬೆಂಗಳೂರು ದಕ್ಷಿಣವೆಂದು



ಬದಲಾಯಿಸಲು ಸರಕಾರ ಅಧಿಕೃತ ತೀರ್ಮಾನ ಕೈಗೊಂಡಿದೆ.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಂಡಿರುವ ಸರಕಾರ, ಪ್ರಸ್ತುತ ರಾಮನಗರ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಜಿಲ್ಲೆಯೆಂದು ಮರುನಾಮಕರಣ ಮಾಡಲು ಒಪ್ಪಿಗೆ ನೀಡಿದೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಬ್ರ್ಯಾಂಡ್ ಬೆಂಗಳೂರು ಮೂಲಕ ಅಭಿವೃದ್ಧಿಯ ಕಲ್ಪನೆ ಸಾಕಾರಗೊಳಿಸುವ ಉದ್ದೇಶದಿಂದ ಪ್ರಸ್ತುತ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯೆಂದು ಮರುನಾಮಕರಣ ಒಪ್ಪಿಗೆ ನೀಡಲಾಗಿದೆ ಎಂದು ತಿಳಿಸಿದರು.

ಪ್ರೌಢಶಾಲೆಯ ಶಿಕ್ಷಕರು ಪದವಿಪೂರ್ವ ಕಾಲೇಜು ಉಪನ್ಯಾಸಕರ ಹುದ್ದೆಗೆ ಬಡ್ತಿ ಹೊಂದಲು ಸ್ನಾತಕೋತ್ತರ ಪರೀಕ್ಷೆಯಲ್ಲಿ ಶೇ. 55 ಅಂಕಗಳಿಗೆ ಬದಲಾಗಿ ಶೇ. 50ರಷ್ಟು ಅಂಕಗಳನ್ನು ಗಳಿಸಿದವರಿಗೆ ಅವಕಾಶ ಮಾಡಿ ಕೊಡುವ ನಿರ್ಧಾರ ಕೈಗೊಳ್ಳಲಾಯಿತು. ಲೋಕೋಪಯೋಗಿ ಇಲಾಖೆ ವತಿಯಿಂದ ಕಲ್ಯಾಣ ಇಲಾಖೆಯ 15 ಹಾಸ್ಟೆಲ್‌ಗಳನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಎಂದು ವಿವರಿಸಿದರು.

ವಯೋಮಿತಿ ಸಡಿಲಿಕೆ: 2017-18ನೇ ಸಾಲಿನ ಗೆಜೆಟೆಡ್ ಪ್ರೊಬೆಷನರಿ ಪರೀಕ್ಷೆಗೆ ಅರ್ಜಿ ಸಲ್ಲಿಸಿದವರಿಗೆ ಒಂದು ಬಾರಿಗೆ ಮಾತ್ರ ಎರಡು ವರ್ಷಗಳ ವಯೋಮಿತಿ ಸಡಿಲಿಕೆ ಮಾಡಿದ್ದು, ಅದಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು. ವಿಜ್ಞಾನ, ತಂತ್ರಜ್ಞಾನ, ಐಟಿ, ಬಿಟಿ ಇಲಾಖೆಯ ಅನಿಮೇಷನ್ ವಿಶ್ಯುಯಲ್ ಎಫೆಕ್ಟ್‌ಗೆ 16 ಕೋಟಿ ಅನುದಾನ ನೀಡಲು ಒಪ್ಪಿಗೆ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಧಾರವಾಡದ ಗಾಮನಗಟ್ಟಿ ಕೈಗಾರಿಕಾ ಪ್ರದೇಶದ ಸಿ.ಎ ನಿವೇಶನದಲ್ಲಿ 2.64 ಎಕರೆ ಜಮೀನನ್ನು ಲೋಕ ಶಿಕ್ಷಣ ಟ್ರಸ್ಟ್ ಗೆ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ ಸ್ಥಾಪಿಸಲು ಪ್ರಸ್ತುತ ಹಂಚಿಕೆ ದರದ ಮೇಲೆ ಶೇ.75 ರಷ್ಟು ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲು ಕೆಐಎಡಿಬಿಗೆ ಸರಕಾರದಿಂದ ಮರುಪಾವತಿ ಮಾಡಲು ಸಚಿವ ಸಂಪುಟ ಅನುಮೋದನೆ ನೀಡಲಾಗಿದೆ. ಇನ್ನುಳಿದಂತೆ ಬೆಂಗಳೂರು ಆಧಾರಿತ ಅನಿಮೇಶನ್ ಇಂಡಸ್ಟ್ರೀಸ್ ಸಂಘಟನೆಯು ಅನಿಮೇಶನ್ ಮತ್ತು ಗೇಮಿಂಗ್ ಉದ್ಯಮ ಅಭಿವೃದ್ಧಿಪಡಿಸಲು ಬದ್ಧವಾಗಿದ್ದು, ಒಟ್ಟು 16 ಕೋಟಿ ರು. ವೆಚ್ಚದಲ್ಲಿ ಆರಂಭಿಸಲು ತೀರ್ಮಾನಿಸಲಾಗಿದೆ ಎಂದರು.

18 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ: ಬಜೆಟ್‌ನಲ್ಲಿ ಘೋಷಿಸಿದ್ದಂತೆ ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿರುವ 18 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ತಲಾ 100 ವಿದ್ಯಾರ್ಥಿಗಳಿಗೆ ಒಂದು ಹಾಸ್ಟೆಲ್‌ನಂತೆ 15 ಹಾಸ್ಟೆಲ್‌ಗಳ ನಿರ್ಮಾಣ ಕೈಗೊಳ್ಳಲು ಪ್ರತಿ ಹಾಸ್ಟೆಲ್‌ಗೆ 7.00 ಕೋಟಿಯಂತೆ ಒಟ್ಟು 105 ಕೋಟಿ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

198 ಎಕರೆ ಜಾಗದಲ್ಲಿ ಉದ್ಯಾನವನ

ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರ ಜಲಾಶಯದ ಕೆಳಭಾಗದಲ್ಲಿನ 198 ಎಕರೆ ಜಾಗದಲ್ಲಿ ಉದ್ಯಾನವನ ಸೌಂದರ್ಯೀಕರಣ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ಉದ್ದೇಶಿಸಲಾಗಿದ್ದು, ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲು ಈಗಾಗಲೇ ನೀಡಿರುವ ಅನುಮೋದನೆಯಂತೆ ಟೆಂಡರ್ ಕರೆಯಲಾಗಿದ್ದು, ಒಟ್ಟು ಯೋಜನಾ ವೆಚ್ಚ 2663.74 ಕೋಟಿ. ಸುಮಾರು 34.5 ವರ್ಷಗಳ ಅವಧಿಗೆ ಒಟ್ಟು ರಿಯಾಯಿತಿ ಅವಧಿ 4.5 ವರ್ಷ ರಿಯಾಯಿತಿ ಅವಧಿ ಸೇರಿದೆ. ಮಾಸ್ಟರ್‌ಪ್ಲಾನ್‌ನಲ್ಲಿ ಒಟ್ಟು 45 ಘಟಕಗಳನ್ನು ಪರಿಗಣಿಸಲಾಗಿದೆ ಎಂದು ತಿಳಿಸಿದ್ದಾರೆ. ಇದರೊಂದಿಗೆ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ 2263 ಕೋಟಿ ರೂಪಾಯಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗುತ್ತದೆ. ಹೆಲಿಪ್ಯಾಡ್, ಪಾರ್ಕಿಂಗ್, ಜಲಕ್ರೀಡೆ ಸೇರಿದಂತೆ ಎಲ್ಲವೂ ಒಳಗೊಂಡಿರುತ್ತದೆ ಎಂದು ವಿವರಿಸಿದರು.

5 ಕೋಟಿ ಅಧಿಕೃತ ಷೇರು ಬಂಡವಾಳ

ಎಲ್ಲಾ ಅಲ್ಪಾವಧಿ ಕೌಶಲ್ಯಾಭಿವೃದ್ಧಿ ಚಟುವಟಿಕೆಗಳನ್ನು ಒಂದೆಡೆ ತರುವ ಉದ್ದೇಶದಿಂದ 2013ರನ್ವಯ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವನ್ನು ಕಂಪನಿ ಕಾಯ್ದೆಯಾಗಿ ಸ್ಥಾಪಿಸಲಾಗಿದೆ. ರಾಜ್ಯ ಸರಕಾರದ ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ ಮತ್ತು ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ ಮತ್ತು ಸಂಕಲ್ಪ ಯೋಜನೆಗಳನ್ನು ಕೌಶಲ್ಯಾಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಈ ವಿಶೇಷ ಅಭಿವೃದ್ಧಿ ವಾಹಕವು ಐದು ಕೋಟಿ ಅಧಿಕೃತ ಷೇರು ಬಂಡವಾಳವಿದ್ದು, 1 ಕೋಟಿ ಪೇಯ್ಡ್ ಅಪ್ ಕ್ಯಾಪಿಟಲ್ ಸೇರಿದಂತೆ 100 ರು. ಮುಖಬೆಲೆಯ 5 ಲಕ್ಷ ಈಕ್ವಿಟಿ ಷೇರುಗಳನ್ನು ಹೊಂದಲು ಅವಕಾಶ ಕಲ್ಪಿಸಲಾಗಿದೆ. ಈ ಸರಕಾರಿ ಸಂಸ್ಥೆಗೆ ಆರು ನಿರ್ದೇಶಕರಲ್ಲಿ ಮೂವರು ಪುರುಷ, ಇಬ್ಬರು ಮಹಿಳಾ ನಿರ್ದೇಶಕರು, ಐಟಿಬಿಟಿ ನಿರ್ದೇಶಕರಾಗಿ ನೇಮಕ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ತಿಳಿಸಿದರು.

ಸ್ವಪಕ್ಷೀಯರ ವಿರುದ್ಧ ಕಿಡಿ

← ಮೊದಲಪುಟದಿಂದ

ಈ ಹಿಂದೆ ಬೆರಳೆಣಿಕೆಯಷ್ಟು ಶಾಸಕರನ್ನು ಹೊಂದಿದ್ದ ದಿನಗಳಲ್ಲೂ ಕಲಾಪಗಳಲ್ಲಿ ಆರ್ಭಟಿಸುತ್ತಿದ್ದ, ಜನರ ಆಶೋತ್ತರಗಳಿಗೆ ದನಿಯಾಗುತ್ತಿದ್ದ ಬಿಜೆಪಿಯನ್ನು ನೋಡಿದ್ದ ನನಗೆ, ಇಂದಿನ ನಮ್ಮ ಪಕ್ಷದ ಈ ಪರಿಸ್ಥಿತಿ ನೋಡಿ ತೀವ್ರ ಬೇಸರ ಮತ್ತು ಆತಂಕವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಐಟಿ-ಬಿಟಿ ರಾಜಧಾನಿ ಎನಿಸಿರುವ, ವಿಜ್ಞಾನ ಕ್ಷೇತ್ರದಲ್ಲಿ ದೇಶಕ್ಕೆ ಮಾದರಿಯಾಗಿರುವ ಬೆಂಗಳೂರು ಸೇರಿದಂತೆ, ಅನೇಕ ಜಿಲ್ಲೆಗಳಲ್ಲಿ ಡೆಂಘೀ ತಾಂಡವವಾಡುತ್ತಿದೆ. ಈ ಬಗ್ಗೆ ಬೆಳಕು ಚೆಲ್ಲಬೇಕು, ಜನರ ಸಂಕಷ್ಟಕ್ಕೆ ಕನ್ನಡಿಯಾಗಬೇಕು ಎಂದು ನಮ್ಮ ಪಕ್ಷದ ನಾಯಕರಿಗೆ ಅನಿಸದೇ ಹೋದುದು ದುರ್ದೈವ! ಪ್ರವಾಹಕ್ಕೂ ಮೊದಲು ಈ ಹಿಂದಿನ ವರ್ಷದ ಬರ ಪರಿ ಹಾರವೂ ಅನೇಕ ರೈತರಿಗೆ ತಲುಪಿಲ್ಲ. ಆ ಬಗ್ಗೆ ಪ್ರತಿಪಕ್ಷ ದ ನಾಯಕರು ಮಾತಾಡಲೇ ಇಲ್ಲ ಎಂದು ಟೀಕಿಸಿದ್ದಾರೆ.

ಸಾಮರಸ್ಯದ ಕೊರತೆಯಿ: ಶಾಸಕರಾಗಿರುವ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಪ್ರತಿಪಕ್ಷ ನಾಯಕರ ಮಧ್ಯೆ ಸಾಮರಸ್ಯ, ಹೊಂದಾಣಿಕೆ ಮತ್ತು ತಾಳ-ಮೇಳ ಇಲ್ಲದೇ ಹೋದದ್ದು ವಿಷಾದನೀಯ. ಇದರ ಸಂಪೂರ್ಣ ಲಾಭವನ್ನು ಆಡಳಿತ ಪಕ್ಷ ಪಡೆಯಲು ಸಹಾಯಕವಾಯಿತು. ಸಿಕ್ಕ ಅವಕಾಶ ಮತ್ತು ಸಮಯವನ್ನು ಸದನದಲ್ಲಿ ಸಮರ್ಪಕವಾಗಿ ಬಳಸಿಕೊಳ್ಳದೇ, ಇಡೀ ಅಧಿವೇಶನದಲ್ಲಿ ವೃಥಾ ಕಾಲಹರಣ ಮಾಡಿ, ಇನ್ನೂ ಒಂದು ದಿನ ಬಾಕಿ ಇರುವಾಗಲೇ ಸದನದ ಕಲಾಪಗಳನ್ನು ಮೊಟಕುಗೊಳಿಸುವಲ್ಲಿ ಆಡಳಿತ ಪಕ್ಷದವರೊಂದಿಗೆ ಕೈಜೋಡಿಸಿದ ನಮ್ಮ ಪಕ್ಷದ ನಾಯಕರ ನಡೆ ಪ್ರಶ್ನಾರ್ಹ ಎಂದು ಗಂಭೀರ ಆರೋಪ ಹೊರಿಸಿದ್ದಾರೆ. ಮುಡಾ ಹಗರಣ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಗ್ಯಾರಂಟಿ ಯೋಜನೆ ಹಣಕ್ಕೆ ಎಸ್ಸಿ-ಎಸ್ಟಿಗೆ ಮೀಸಲಿಟ್ಟಿರುವ ಅನುದಾನ ದುರ್ಬಳಕೆ. ಹೀಗೆ ಯಾವ ವಿಷಯವನ್ನೂ ಒಂದು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ನಮ್ಮ ಪಕ್ಷಕ್ಕೆ ಸಾಧ್ಯವಾಗಲಿಲ್ಲ. ಈ ವಿಷಯಗಳ ಬಗ್ಗೆ ಪರಿಣಾಮಕಾರಿಯಾಗಿ ವಿಷಯ ಮಂಡಿಸಲು ಪ್ರತಿಪಕ್ಷದ ನಾಯಕರೂ ವಿಫಲರಾದರು. ಆಡಳಿತ ಪಕ್ಷದೊಂದಿಗೆ ಪ್ರತಿಪಕ್ಷ ಶಾಮೀಲಾಗಿದೆಯಾ ಎಂದು ಜನ ಮಾತಾಡಿಕೊಳ್ಳುವಂತಾಯಿತು. ಮೈಸೂರಿನಲ್ಲಿ ಮುಡಾ ವಿರುದ್ಧ ನಡೆಸಿದ ಹೋರಾಟ ಕಣ್ಣೊರೆಸುವ ತಂತ್ರದಂತೆ ಕಂಡಿತು ಎಂದು ಟೀಕಿಸಿದ್ದಾರೆ.

ವಿಶ್ವವಾಣಿ ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಪ್ರತಿದಿನ ಆರಾಮದಿಂದ ಓದಿ

ರಾಜ್ಯಸಭೆಯಲ್ಲಿ ಪ್ರತಿಧ್ವನಿಸಿದ ವಾಲ್ಮೀಕಿ ನಿಗಮದ ಹಗರಣ

← ಮೊದಲಪುಟದಿಂದ

ಬಿಜೆಪಿಯ ರಾಜ್ಯಸಭಾ ಸದಸ್ಯರಾದ ಈರಣ್ಣ ಕಡಾಡಿ, ಬ್ರಿಜ್ ಲಾಲ್, ನರೇಶ್ ಬನ್ಸಾಲ್ ಮತ್ತು ಸುಧಾಂಶು ತ್ರಿವೇದಿಯವರು ಕರ್ನಾಟಕದ ಭ್ರಷ್ಟಾಚಾರ ಕುರಿತ ಚರ್ಚೆಗೆ ಒತ್ತಾಯಿಸಿ ನೋಟಿಸ್ ನೀಡಿದ್ದರು. ತಮ್ಮ ಆದೇಶವನ್ನು ಒಪ್ಪಿಕೊಳ್ಳುವಂತೆ ಉಭಯ ಬಣದ ನಾಯಕರಿಗೂ ಸ್ಪೀಕರ್ ಪದೇ ಪದೆ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ.

ಈ ನಡುವೆ, ಕಡಾಡಿ ಮಾತು ಆರಂಭಿಸಿದಾಗ ಅದಕ್ಕೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು, ಬೆಳಗ್ಗೆ ಸ್ಪೀಕರ್ ಹಾಕಿದ್ದ ಕಲಾಪದ ಶೂನ್ಯವೇಳೆಯ ಪಟ್ಟಿಯಲ್ಲಿ ಇವರ ಹೆಸರು ಇರಲಿಲ್ಲ ಎಂದು ಹೇಳಿದರು. ಕಲಾಪದಲ್ಲಿ ಮಾತನಾಡುವವರ ಪಟ್ಟಿಯಲ್ಲಿ ಕಡಾಡಿ ಹೆಸರು ಇಲ್ಲದ ಕಾರಣ ಅವರಿಗೆ ಬೇರೊಂದು ದಿನ ಮಾತನಾಡಲು ಅವಕಾಶ ಕೊಡಿ ಎಂದು ಕಾಂಗ್ರೆಸ್ ಸದಸ್ಯ ಪಿ. ಚಿದಂಬರಂ ಒತ್ತಾಯಿಸಿದರು.

ನಿಯಮ 267ರ ಅಡಿಯ ನೋಟಿಸ್ ಕುರಿತಂತೆ ಆದೇಶ ನೀಡುವ ವೇಳೆ ಧನಕರ್, ಕಡಾಡಿಗೆ ಮಾತನಾಡಲು ಅವಕಾಶ ನೀಡುವುದಾಗಿ ಹಲವು ಬಾರಿ ಪ್ರಸ್ತಾಪಿಸಿದ್ದರು.

ಇದನ್ನೇ ಹಿಡಿದುಕೊಂಡು ಡಿಎಂಕೆ ಸದಸ್ಯ ತಿರುಚಿ ಶಿವಾ, ಕಡಾಡಿಗೆ ಅವಕಾಶ ನೀಡುವುದಾದರೆ ಬೇರೆ ಸದಸ್ಯರಿಗೂ ಮಾತನಾಡಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು. ಯಾವುದೇ ಸದಸ್ಯರು ಅವಕಾಶ ಕೇಳಿದರೆ ನೀಡಲಾಗುವುದು ಎಂದು ಧನಕರ್ ಪ್ರತಿಕ್ರಿಯಿಸಿದರು.

ಬಳಿಕ, ಪ್ರತಿಪಕ್ಷಗಳ ಸದಸ್ಯರ ಪ್ರತಿಭಟನೆಯ ನಡುವೆಯೇ ಕಡಾಡಿ, ಕರ್ನಾಟಕದ ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣದ ಆರೋಪದ ವಿಚಾರದ ಬಗ್ಗೆ ಮಾತನಾಡಿದರು.

ಕರ್ನಾಟಕದ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ₹187 ಕೋಟಿಗಳ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದ್ದು, ಜನರ ಜೀವನಮಟ್ಟ ಹಾಗೂ ಆರ್ಥಿಕ ಮಟ್ಟ ಸುಧಾರಿಸಲು ಬಳಸಬೇಕಾದ ಹಣವನ್ನು ಲೂಟಿ ಹೊಡೆಯಲಾಗಿದೆ.ಈ ಹಗರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು.

– **ಈರಣ್ಣ ಕಡಾಡಿ** ರಾಜ್ಯಸಭೆ ಸದಸ್ಯ

ಪತಿ ಹುದ್ದೆಗೆ ಪತ್ನಿ ನೇಮಕ

← ಮೊದಲಪುಟದಿಂದ

ಹಾಲಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರು 31ಕ್ಕೆ ನಿವೃತ್ತಿಯಾಗಲಿದ್ದಾರೆ. ಆದ್ದರಿಂದ ನೂತನ ಮುಖ್ಯ ಕಾರ್ಯದರ್ಶಿಯಾಗಿ ಶಾಲಿನಿ ರಜನೀಶ್‌ರನ್ನು ನೇಮಿಸಲು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಲಾಗಿದೆ ಎಂದು ಎಚ್ ಕೆ ಪಾಟೀಲ್ ಅವರು ಮಾಹಿತಿ ನೀಡಿದರು.

ಸೇಠ್‌ಗೆ ಸಿಗದಿರಲು ಕಾರಣ ವೇನು?: ನೂತನ ಮುಖ್ಯ ಕಾರ್ಯದರ್ಶಿ ಯಾರು ಎಂಬ ಚರ್ಚೆ ನಡೆದಿತ್ತು. ಜೇಷ್ಠತೆಯಲ್ಲಿ ಕ್ರಮವಾಗಿ ಕೇಂದ್ರ ಹಣಕಾಸು ಸಚಿವಾಲಯದ ಕಾರ್ಯದರ್ಶಿ ಅಜಯ್ ಸೇಠ್, ಅಭಿವೃದ್ಧಿ ಆಯುಕ್ತರಾಗಿರುವ ಶಾಲಿನಿ ರಜನೀಶ್ ಅವರ ಹೆಸರುಗಳು ಕೇಳಿಬಂದಿದ್ದವು. ಆದರೆ ಅಜಯ್ ಸೇಠ್ ಅವರು ಇನ್ನು 11 ತಿಂಗಳು ಮಾತ್ರ ಅಧಿಕಾರದಲ್ಲಿ ಇರುವುದರಿಂದ ರಾಜ್ಯ ಸರಕಾರವು ಶಾಲಿನಿ ರಜನೀಶ್ ಅವರನ್ನು ನೇಮಕ ಮಾಡಿದೆ ಎಂದು ತಿಳಿದುಬಂದಿದೆ. ಈ ಮೂಲಕ ರಾಜ್ಯ ಮುಖ್ಯ ಕಾರ್ಯದರ್ಶಿಯಾಗಿ ನೇಮಕಗೊಂಡ ದ್ವಿತೀಯ ದಂಪತಿ ಎಂಬ ಖ್ಯಾತಿಗೆ ಶಾಲಿನಿ ರಜನೀಶ್ ಹಾಗೂ ರಜನೀಶ್ ಗೋಯಲ್ ಪಾತ್ರರಾದರು. ಈ ಹಿಂದೆ ಬಿ.ಕೆ.ಭಟ್ಟಾಚಾರ್ಯ ಹಾಗೂ ತೆರೇಸಾ ಭಟ್ಟಾಚಾರ್ಯ ದಂಪತಿಯು ರಾಜ್ಯ ಮುಖ್ಯ ಕಾರ್ಯದರ್ಶಿಯಾಗಿದ್ದರು.

ಶಾಲಿನಿ ರಜನೀಶ್ ಸಾಧನೆ

- ಪಂಜಾಬ್ ವಿವಿಯಿಂದ ಮನಶಾಸ್ತ್ರ ವಿಷಯದಲ್ಲಿ ಬಂಗಾರದ ಪದಕ
- 22ನೇ ವಯಸಿನಲ್ಲಿ ಐಎಎಸ್‌ನಲ್ಲಿ (ಮಹಿಳೆಯರಲ್ಲಿ) ಟಾಪರ್
- ಗ್ರಾಮೀಣಾಭಿವೃದ್ಧಿ ವಿಷಯದಲ್ಲಿ ಮಂಗಳೂರು ವಿವಿಯಿಂದ ಪಿಎಚ್‌ಡಿ
- ರಾಜ್ಯ ಮಹಿಳಾ ವಿವಿ 2013ರಲ್ಲಿ ಸಾಹಿತ್ಯ ಡಾಕ್ಟರೇಟ್ ಗೌರವ
- ಸಕಾಲ ಸೇವೆ ಯಶಸ್ವಿಯಾಗಿ ಜಾರಿಗೊಳಿಸುವ ಹಿಂದಿರುವ ಶಕ್ತಿ

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಇಲಾಖೆ ವಿಭಾಗ ಕಲಬುರಗಿ, ದೂ.:08472-220196, midnglb@rediffmail.com / midnglb1@gmail.com
ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ-1/ಕೆ.ಡಬ್ಲ್ಯೂ-1&3/2024-25/1324 ದಿನಾಂಕ:26.07.2024
-: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-1&3) :-
1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2024-25ನೇ ಸಾಲಿನ ಎಸ್.ಡಿ.ಎಂ.ಎಫ್, ಪ್ರಧಾನ ಕಾಮಗಾರಿಗಳು ಏತ ನೀರಾವರಿ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಕೆಪಿಪಿ ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: **ಗರಿಷ್ಠ ರೂ. 99,30,658.61 ಕನಿಷ್ಠ ರೂ. 2,29,112.44,** 3) ಗುತ್ತಿಗೆದಾರರ ಅರ್ಹತೆ ವಿವರ: 3ನೇ ದರ್ಜೆ ಹಾಗೂ ಮೇಲ್ಪಟ್ಟು, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆ.ಪಿ.ಪಿ.ಪಿ. ಪೋರ್ಟಲನಂತೆ, ಇ.ಎಂ.ಡಿ. ಗರಿಷ್ಠ ರೂ. 1,97,400.00 ಕನಿಷ್ಠ ರೂ. 5,700.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **09-08-2024 ಬೆಳಿಗ್ಗೆ 11.00 ಗಂಟೆಯ ವರೆಗೆ,** 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **12-08-2024 ಸಾಯಂಕಾಲ 17.30 ಗಂಟೆಯ ವರೆಗೆ,** 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **13-08-2024 ಸಾಯಂಕಾಲ 17.30 ಗಂಟೆಯ ವರೆಗೆ,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : **14-08-2024 ಸಾಯಂಕಾಲ 17.30 ಗಂಟೆಯ ವರೆಗೆ,** 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: (https:// KPPP.Karnataka.gov.in)
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/249/ಕೆ.ಎಸ್.ಎಂ.ಸಿ.&ಎ/2024-25

ಪುರಸಭೆ ಯೋಜನಾ ಪ್ರಾಧಿಕಾರ ಇಂಡಿ
ವೆಬ್‌ಸೈಟ್: www.inditown.mrc.gov.in,
ಇ-ಮೇಲ್:itstaff_ulb_indi@yahoo.co.in, ಫೋನ್/ಫ್ಯಾಕ್ಸ್:08359-225025
ಕ್ರ.ಸಂ:ಪು.ಸ.ಇಂ/ಆಡಳಿತ/ನಾ.ಸೌ.ನಿ.ಮಂಜೂರಿ/2024-25 ದಿನಾಂಕ:24.07.2024
ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆಗಾಗಿ ಪ್ರಕಟಣೆ
ಈ ಮೂಲಕ ಕೇಂದ್ರ/ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಶಾಸನಾತ್ಮಕ ನಿಕಾಯ, ಸಂಸ್ಥೆಗಳಿಗೆ, ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಪುರಸಭೆ ಯೋಜನಾ ಪ್ರಾಧಿಕಾರ ಇಂಡಿ ಮಾಲೀಕತ್ವದ ನಾಗರೀಕ ಸೌಲಭ್ಯ ನಿವೇಶನಗಳನ್ನು 30 ವರ್ಷದ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961 ಹಾಗೂ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು 2016 ರನ್ವಯ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ. ಆಸಕ್ತ ಕೇಂದ್ರ/ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಶಾಸನಾತ್ಮಕ ನಿಕಾಯ ಹಾಗೂ ಕ.ನ.ಯೋ.ಪ್ರಾ (ನಾ.ಸೌ.ನಿ.ಹಂ) ನಿಯಮಗಳು-2016 ರಲ್ಲಿ ನಿರ್ದಿಷ್ಟಪಡಿಸಿದ ಇತರೆ ಸಂಸ್ಥೆಗಳು ಈ ಕೆಳಗಿನ ಷರತ್ತುಗಳನ್ವಯ ಅರ್ಜಿ ಸಲ್ಲಿಸಬಹುದಾಗಿದೆ.
➢ ಕಾಯ್ದಿರಿಸಿದ ಉದ್ದೇಶಗಳು
ಅ)ಕೇಂದ್ರ/ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಶಾಸನಾತ್ಮಕ ನಿಕಾಯಗಳು:-ಜಲ ಸಂಸ್ಕರಣ ಘಟಕಗಳು, ಸಂಗ್ರಹಣಾ ಜಲಾಶಯಗಳು ಹಾಗೂ ಮಧ್ಯಂತರ ಪಂಪಿಂಗ್ ಕೇಂದ್ರಗಳನ್ನು ಒಳಗೊಂಡಂತೆ ನೀರು ಸರಬರಾಜು ಘಟಕಗಳು,ರೊಚ್ಚು ತೊಟ್ಟಿಗಳು (ಸೆಪ್ಟಿಕ್ ಟಾಂಕಗಳು) ಜಾಲಾವೃತ ಗುಂಡಿಗಳು(ಸೋಕ್ ಪಿಟ್ಸ್) ಮತ್ತು ಸ್ಥಳೀಯ ಒಳಚರಂಡಿ ಸಂಸ್ಕರಣಾ ಘಟಕಗಳನ್ನು ಒಳಗೊಂಡಂತೆ ಚರಂಡಿ ಮತ್ತು ನೈರ್ಮಲ್ಯ ಘಟಕಗಳು, ಉಪ ಕೇಂದ್ರಗಳು ಮತ್ತು ವಿದ್ಯುತ್ ಪರಿವರ್ತಕ ಪ್ರಾಂಗಣಗಳು, ತ್ಯಾಜ್ಯ ಸಂಗ್ರಹಣೆ , ಪ್ರತ್ಯೇಕಿಕರಣ& ಮರುಬಳಕೆ ಕೇಂದ್ರಗಳು, ಸಾರ್ವಜನಿಕ ಶೌಚಾಲಯಗಳು, ಆರೋಗ್ಯ ಸೌಲಭ್ಯಗಳು & ಶೈಕ್ಷಣಿಕ ಸಂಸ್ಥೆಗಳು, ಮಾರುಕಟ್ಟೆಗಳು, ಹಾಲಿನ ಭೂತಗಳು, ನ್ಯಾಯಬೆಲೆಅಂಗಡಿ, ಬಸ್ ನಿಲ್ದಾಣ, ಕ್ಷೇತ್ರ ಕಛೇರಿ ಅಥವಾ ಸ್ಥಳೀಯ ಪ್ರಾಧಿಕಾರದ ಸೇವಾ ಕೇಂದ್ರ ಅಥವಾ ಕ.ನ.ನಿ.ಸ & ವ.ಚ ಮಂಡಳಿ ಅಥವಾ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಸರ್ಕಾರಿ ಇಲಾಖೆಗಳು ಒದಗಿಸುವ ಇತರ ಸೌಕರ್ಯಗಳು ಹಾಗೂ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುವ ಶಾಸನಬದ್ಧ ಸಂಸ್ಥೆಗಳು, ಅಂಚೆ ಕಛೇರಿ, ಬ್ಯಾಂಕ್, ವ್ಯಾಯಾಮ ಶಾಲೆ, ಗ್ರಂಥಾಲಯ, ಪೋಲೀಸ್ ಠಾಣೆ, ಅಗ್ನಿ ಶಾಮಕ ಕೇಂದ್ರ, ಕೇಂದ್ರ ಮತ್ತು ರಾಜ್ಯ ಸರ್ಕಾರಿ ಕಛೇರಿಗಳು, ಮನೋರಂಜನಾ ಕೇಂದ್ರಗಳು, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆ ಕೇಂದ್ರಗಳು, ರಾಜ್ಯ ಸರ್ಕಾರ ನಡೆಸುತ್ತಿರುವ ಅಂಗನವಾಡಿ ಕೇಂದ್ರ ಹಾಗೂ ಹಾಸ್ಟೇಲ್. ಸ್ಥಳೀಯ ಪ್ರಾಧಿಕಾರದ ಕನ್‌ವೆನಷನ್ ಕೇಂದ್ರಗಳು.
ಬ)ಸಂಸ್ಥೆಗಳು:- ಶೈಕ್ಷಣಿಕ ಸಂಸ್ಥೆಗಳಂಥ ಲಾಭರಹಿತ ವ್ಯವಸ್ಥೆಯ ಆಧಾರದ ಮೇಲೆ ಒಂದು ಸಂಸ್ಥೆಯ ಮೂಲಕ ಬರುವ ಸೌಕರ್ಯ ಮತ್ತು ಲಾಭ ರಹಿತವಾಗಿ ನಡೆಸುವ ಆರೋಗ್ಯ ಸೌಲಭ್ಯಗಳು, ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆ ಕೇಂದ್ರಗಳು, ಧರ್ಮಾರ್ಥ ಅಥವಾ ಪರೋಪಕಾರ ಸೇವೆಗಳು ಮತ್ತು ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರೆ ಯಾವುದೇ ಸೌಕರ್ಯಗಳು.
➢ **ಷರತ್ತುಗಳು :**- 1) ಕೇಂದ್ರ/ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಶಾಸನಾತ್ಮಕ ನಿಕಾಯಗಳಿಗೆ ನಾಗರೀಕ ಸೌಲಭ್ಯದ ಬೇಡಿಕೆ ಪೂರೈಸಿದ ನಂತರ ಉಳಿದ ನಿವೇಶನಗಳನ್ನು ಸಂಘ ಸಂಸ್ಥೆಗಳಿಗೆ ಹಂಚಿಕೆಗಾಗಿಕ್ರಮ ಕೈಗೊಳ್ಳಲಾಗುವುದು. 2) ಕೇಂದ್ರ/ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಶಾಸನಾತ್ಮಕ ನಿಕಾಯಗಳು, ದೈಹಿಕ ವಿಕಲಚೇತನರು ಮತ್ತು ಮಾನಸಿಕ ಅಸ್ವಸ್ಥರ ಅನೂಸೂಚಿತ ಜಾತಿ ಮತ್ತು ಅನೂಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಸ್ಥಾಪಿಸಿದ ಸಂಸ್ಥೆಗಳು, ಸರ್ಕಾರದಿಂದ ಅನುಮೋದನೆಗೊಂಡ ಕನ್ನಡ ಮಾಧ್ಯಮದಲ್ಲಿ ಮಾತ್ರ ನಡೆಯುತ್ತಿರುವ ಶೈಕ್ಷಣಿಕ ಸಂಸ್ಥೆ ಹಾಗೂ ಕ.ನ.ಯೋ.ಪ್ರಾ (ನಾ.ಸೌ.ನಿ.ಹಂ) ನಿಯಮಗಳು-2016 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ (1)ನೇ ಉಪ-ಖಂಡದ (ಎ) ಬಾಬಿನ ಅಡಿಯಲ್ಲಿ ಪಟ್ಟಿ ಮಾಡಿರುವ ಸೌಲಭ್ಯಗಳಿಗಾಗಿ ಶೇ.50% ರರಿಯಾಯಿತಿದರದಲ್ಲಿ ಹಂಚಿಕೆ ಮಾಡಲಾಗುವುದು. 3) ಉಳಿಕೆ ನಿವೇಶನಗಳಲ್ಲಿ ಅನುಸೂಚಿತ ಜಾತಿಗಳಿಗೆ ಸೇರಿರುವ ವ್ಯಕ್ತಿಗಳ ಅನುಕೂಲಕ್ಕಾಗಿ ಪ್ರತ್ಯೇಕವಾಗಿ ಸ್ಥಾಪಿಸಲಾಗಿರುವ ಸಂಸ್ಥೆಗಳಿಗೆ (ಅ.ಜಾ.ವರ್ಗಕ್ಕೆ ಸೇರಿದ ಬಹು ಸಂಖ್ಯೆಯ ಸದಸ್ಯರನ್ನು ಒಳಗೊಂಡಿರುವ) ಶೇ.18%ರಷ್ಟು, ಅನುಸೂಚಿತ ಪಂಗಡಗಳಿಗೆ ಸೇರಿರುವ ವ್ಯಕ್ತಿಗಳ ಅನುಕೂಲಕ್ಕಾಗಿ ಪ್ರತ್ಯೇಕವಾಗಿ ಸ್ಥಾಪಿಸಲಾಗಿರುವ ಸಂಸ್ಥೆಗಳಿಗೆ (ಪ.ಪಂ.ವರ್ಗಕ್ಕೆ ಸೇರಿದ ಬಹು ಸಂಖ್ಯೆಯ ಸದಸ್ಯರನ್ನು ಒಳಗೊಂಡಿರುವ) ಶೇ.3% ರಷ್ಟು ಹಾಗೂ ದೈಹಿಕ ಮತ್ತು ಮಾನಸಿಕ ನ್ಯೂನ್ಯತೆಯನ್ನುಅಸ್ವಸ್ಥ ವ್ಯಕ್ತಿಗಳ ಅನುಕೂಲಕ್ಕಾಗಿ ಸ್ಥಾಪಿಸಿರುವ ಸಂಸ್ಥೆಗಳಿಗೆ ಶೇ.2% ರಷ್ಟು ಮೀಸಲಿಡಲಾಗುವುದು. ಮೀಸಲಿನಡಿ ಸಾಕಷ್ಟು ಸಂಸ್ಥೆಗಳು ಹಂಚಿಕೆಗಾಗಿ ಅರ್ಜಿ ಸಲ್ಲಿಸದಿದ್ದರೆ. ಹಾಗೆ ಮೀಸಲಿರಿಸಿದ ನಿವೇಶನಗಳನ್ನು ಇತರೆ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗುವುದು. 4) ಅರ್ಜಿಯೊಂದಿಗೆ ನಾಗರಿಕ ಸೌಕರ್ಯ ನಿವೇಶನ ಹಂಚಿಕೆಗೆ ಸಂಬಂಧಿಸಿದ ನಿಬಂಧನೆಗಳ ಪಟ್ಟಿಯನ್ನು ಪಡೆಯತಕ್ಕದ್ದು. 5) ಹಂಚಿಕೆ ನಿಯಮ ಹಾಗೂ ಷರತ್ತುಗಳು, ಅರ್ಜಿ ನಮೂನೆ, ನಿವೇಶನದ ಸ್ಥಳ, ವಿಸ್ತೀರ್ಣ, ಅರ್ಜಿಯೊಂದಿಗೆ ಸಲ್ಲಿಸಬೇಕಾದ ಮೊತ್ತ, ನೋಂದಣಿ ಶುಲ್ಕ ಹಾಗೂ ಇತರೆ ವಿವರಗಳನ್ನು ಕಛೇರಿಯ ಸೂಚನಾ ಫಲಕ ಹಾಗೂ ಪ್ರಾಧಿಕಾರದ ವೆಬ್‌ಸೈಟ www.inditown.mrc.gov.in ರಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು. 6) ಪ್ರಾಧಿಕಾರವು ಅಗತ್ಯಕ್ಕನುಸಾರವಾಗಿ ಮತ್ತು ಹಂಚಿಕೆಯ ಸಮಯದಲ್ಲಿಉದ್ಭವಿಸುವ ಪರಿಸ್ಥಿತಿಗನುಗುಣವಾಗಿ ನಾಗರೀಕ ಸೌಕರ್ಯ ನಿವೇಶನದ ಉದ್ದೇಶಿತ ಬಳಕೆಯನ್ನು ಬದಲಾಯಿಸುವ ಹಕ್ಕನ್ನು ಹೊಂದಿರುತ್ತದೆ. 7) ಕೇಂದ್ರ/ರಾಜ್ಯ ಸರ್ಕಾರ,ಸ್ಥಳೀಯ ಪ್ರಾಧಿಕಾರ,ಶಾಸನಾತ್ಮಕ ನಿಕಾಯಗಳಿಗೆ ನೋಂದಣಿ ಶುಲ್ಕ ವಿನಾಯಿತಿಇರುತ್ತದೆ. ಇನ್ನುಳಿದಂತೆ ಅರ್ಜಿ ಸಲ್ಲಿಸುವ ಸಂಸ್ಥೆಗಳು ನೋಂದಣಿ ಶುಲ್ಕವನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡತಕ್ಕದ್ದು.
ಖಾಲಿ ಅರ್ಜಿಗಳನ್ನು ನೀಡುವಕೊನೆಯ ದಿನಾಂಕ: 26-07-2024ರಿಂದ26-08-2024ರವರೆಗೆ,
ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 26-08-2024ರ ಸಾಯಂಕಾಲ 5.30ಗಂಟೆವರೆಗೆ
ಸಹಿ/- ಆಡಳಿತಾಧಿಕಾರಿಗಳು ಪುರಸಭೆ ಇಂಡಿ
ಸಹಿ/- ಮುಖ್ಯಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ, ಪುರಸಭೆ ಯೋಜನಾ ಪ್ರಾಧಿಕಾರ ಇಂಡಿ
ವಾಸಾಸಂಇ/ವಿಜಯಪುರ/140/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ
28ನೇ ವಾರ್ಡ್, 3ನೇ ಕ್ರಾಸ್, ಹಾಗೂ 6ನೇ ಅಡ್ಡ ರಸ್ತೆ ಮೃತ್ಯುಂಜಯನಗರ, ಹೊಸಪೇಟೆ.
ಸಂ.ಕಾನಿ/ಪಂರಾಇಂವಿ/ವಿಜಯನಗರ/ತಾ.ಶಾಖೆ/ಟೆಂಡರ್/ವಿವಿಲೆಶಿ/2024-25/784 ದಿನಾಂಕ:23.07.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
(Through Government of Karnataka e-procurement)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ ಹೊಸಪೇಟೆ ಕನಿಷ್ಠ ರೂ.10.00ಲಕ್ಷಗಳಿಂದ ಗರಿಷ್ಠ ರೂ:200.00ಲಕ್ಷಗಳವರೆಗಿನ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಅನುಮೋದನೆಯಾದ ವಿವಿಧ ಕಾಮಗಾರಿಗಳಿಗಾಗಿ ಹಾಗೂ ವಿಭಾಗ ಮತ್ತು ಉಪ-ವಿಭಾಗ ಕಛೇರಿಗಳಲ್ಲಿ ಹೊರಗುತ್ತಿಗೆ ನೌಕರರ ಸೇವೆಯನ್ನು ಪಡೆಯಲು ಟರ್ನ ಕೀ ಆಧಾರದ ಮೇಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ Standard Bid Document (KW I, II, III & IV) ನಿಯಮಾವಳಿಗಳಂತೆ ವೆಬ್‌ಸೈಟ್‌ನ ಆಯಾ ಇಂಡೆಂಟ್‌ಗಳಲ್ಲಿ ಅಪ್‌ಲೋಡ್ ಮಾಡಲಾಗಿರುವ ನಿಬಂಧನೆಗಳಿಗೊಳಪಟ್ಟು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:31.07.2024ರಂದು ನಿಗಧಿಪಡಿಸಲಾಗಿದೆ. (Auto Extension Specialty up to 4 Days) ಟೆಂಡರ್ ಪ್ರಕ್ರಿಯೆ ದಿನಾಂಕಗಳು/ತಿದ್ದುಪಡಿ/ಮುಂದೂಡಿಕೆಗಳ ಬಗ್ಗೆ ಕಾರಣಾಂತರಗಳಿಂದ ಬದಲಾವಣೆಯಾದಲ್ಲಿ ಕೆಪಿಪಿ ಪೋರ್ಟಲ್ (https://kppp.karnataka.gov.in) ವೆಬ್‌ಸೈಟ್‌ನಲ್ಲಿಯೆ ನೋಡಿಕೊಳ್ಳುವುದು. ಬಾಕಿ ಉಳಿದಂತೆ ಟೆಂಡರ್ ಪ್ರಕಟಣೆಯ ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ.ಪಿ ವೆಬ್‌ಸೈಟ್ ಮತ್ತು ಕಛೇರಿ ವೇಳೆಯಲ್ಲಿ ಖುದ್ದಾಗಿ (eepredvijayanagara@gmail.com) ಸಂಪರ್ಕಿಸಬಹುದು.
ಸಹಿ/- ಕಾಪಅ ಪಂರಾಇಂ ವಿಭಾಗ, ವಿಜಯನಗರ
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/151

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ
E-Mail:ka.mandya.dudc@gmail.com Ph.No:08232-231111
ಸಂ: ಎಂಯುಎನ್(6)1/ಎಸ್.ಡಬ್ಲ್ಯೂ.ಎಂ/2023-24
ದಿನಾಂಕ:26-07-2024
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಮಂಡ್ಯ ಜಿಲ್ಲೆಯ ಬೆಳ್ಳೂರು ಪಟ್ಟಣ ಪಂಚಾಯಿತಿಯಲ್ಲಿ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಘನ ತ್ಯಾಜ್ಯ ವಸ್ತು ನಿರ್ವಹಣೆ ಘಟಕ ಅಭಿವೃದ್ಧಿ ಕಾಮಗಾರಿಗೆ ಸಂಬಂಧ ಅರ್ಹ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಇಂಡೆಂಟ್ ಸಂಖ್ಯೆ: **DMA/2024-25/OW/WORK_INDENT21438** ರಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು **www.kppp.karnataka.gov.in** ವಿದ್ಯುನ್ಮಾನ ಮೂಲಕವೇ ತಮ್ಮ ಟೆಂಡರ್‌ಗಳನ್ನು ಸಲ್ಲಿಸುವುದು. ಬೆಳ್ಳೂರು ಪಟ್ಟಣ ಪಂಚಾಯಿತಿಯಲ್ಲಿ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಘನ ತ್ಯಾಜ್ಯ ವಸ್ತು ನಿರ್ವಹಣೆ ಘಟಕ ಅಭಿವೃದ್ಧಿ ಕಾಮಗಾರಿಯ ಟೆಂಡರ್‌ನಲ್ಲಿ ತಿದ್ದುಪಡಿಗಳಿದ್ದಲ್ಲಿ, ಇ-ಪ್ರೊಕ್ಯೂರ್‌ಮೆಂಟ್‌ನ ಕೆಪಿಪಿಪಿ ಪೋರ್ಟಲ್‌ನಲ್ಲಿ ಪ್ರಚುರಪಡಿಸಲಾಗುವುದು. (1) ಪ್ರೀ ಬಿಡ್ ಸಭೆಗೆ ಭಾಗವಹಿಸುವ ದಿನಾಂಕ:**07.08.2024, ಬೆಳಿಗ್ಗೆ 12.00 ಗಂಟೆಗೆ.** (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:**27.08.2024ರ ಸಂಜೆ 5.30 ಗಂಟೆಯವರೆಗೆ.** (3) ಟೆಂಡರ್ ತೆರೆಯುವ ದಿನಾಂಕ:**29.08.2024 ಬೆಳಿಗ್ಗೆ 11.00 ಗಂಟೆಗೆ**
ಸಹಿ/-ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ ಜಿಲ್ಲೆ, ಮಂಡ್ಯ
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/202/2024-25

ಕರ್ನಾಟಕ ಸರ್ಕಾರ
ಉಪನಿರ್ದೇಶಕರ ಕಚೇರಿ ಶಾಲಾ ಶಿಕ್ಷಣ ಇಲಾಖೆ, ಗದಗ
ಪ್ರ.ಸಂ/ಉನಿಕ/ಲೆ-5/ಆರ್.ಬಿ.ಎಸ್.ಕೆ/ಟೆಂಡರ್ ಸುದ್ದಿ/2024-25 ದಿ: 26/07/2024
ಮರು ಟೆಂಡರ್ ಪ್ರಕಟಣೆ
ಸಾರ್ವಜನಿಕ ಶಿಕ್ಷಣ ಇಲಾಖೆಯ ಸನ್ 2022-23 ನೇ ಸಾಲಿಗೆ ಆರ್.ಬಿ.ಎಸ್.ಕೆ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣಾ ತಂಡಕ್ಕೆ ಅವಶ್ಯವಿರುವ ಸಾಧನ-ಸಲಕರಣೆ ಖರೀದಿಸಲು ಈ ಕುರಿತು ಮರು ಟೆಂಡರ್ ಕರೆದು ವಿವರ ಕೆಳಕಂಡಂತಿದೆ.

ಕ್ರ ಸಂ	ವಿವರ	ಟೆಂಡರ ಮೊತ್ತ (ಲಕ್ಷಗಳಲ್ಲಿ)	ಟೆಂಡರ ಸಂಖ್ಯೆ	ಟೆಂಡರ ಸಲ್ಲಿಸುವ ಅಂತಿಮ ದಿನಾಂಕ
1	ಆರ್.ಬಿ.ಎಸ್.ಕೆ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣಾ ತಂಡಕ್ಕೆ ಅವಶ್ಯವಿರುವ ಸಾಧನ-ಸಲಕರಣೆ ಖರೀದಿಸಲು	9.68	DPI/2024-25/IND/0302	02/08/2024

ಟೆಂಡರಗಳನ್ನು ದಿನಾಂಕ : 26-07-2024 ರಿಂದ ಸಲ್ಲಿಸಬಹುದಾಗಿದ್ದು, ಈ ಕುರಿತು ಅಂತರ್ಜಾಲ ತಾಣದ ವಿಳಾಸ http//:www.kppp.karnataka.gov.in ನ ಮೂಲಕ ಟೆಂಡರ್ ಬುಕ್‌ಲೆಟ್‌ನ್ನು ಪಡೆಯಬಹುದಾಗಿದೆ.
ಸಹಿ/- ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/116/2024-25

ಪುರಸಭಾ ಕಾರ್ಯಾಲಯ, ಬೊಮ್ಮಸಂದ್ರ
ಸ್ವಚ್ಛ ಭಾರತ
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560099
ದೂರವಾಣಿ ಸಂಖ್ಯೆ: 080-27834655, ಇ-ಮೇಲ್: itstaff_ulb_bommasandra@yahoo.com
ಸಂಖ್ಯೆ : ಪು.ಕಾ.ಬೊ./ಆ.ಶಾ./26/2023-24 ದಿನಾಂಕ: 26.07.2024
ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)
ಮುಖ್ಯಾಧಿಕಾರಿ, ಪುರಸಭೆ, ಬೊಮ್ಮಸಂದ್ರ ರವರಿಂದ ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 & 2000 ರ ಪ್ರಕಾರ ಪುರಸಭಾ ನಿಧಿ ಅಡಿಯಲ್ಲಿ 24.10 ಯೋಜನೆಯ ಅಂಗವಾಗಿ ಈ ಕೆಳಕಂಡ ವಿವರಗಳಂತೆ ಟೆಂಡರ್ ಕರೆಯಲಾಗಿರುತ್ತದೆ. ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಗುತ್ತಿಗೆದಾರರು/ಸರಬರಾಜುದಾರರು ಕೆಪಿಪಿಪಿ ಪೋರ್ಟಲ್‌ನ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. "ಹೆಚ್ಚಿನ ವಿವರಗಳನ್ನು ಆರೋಗ್ಯ ಶಾಖೆಯಿಂದ ಮತ್ತು ಕಛೇರಿ ವೆಬ್‌ಸೈಟ್ www.bommasandratown.mrc.gov.in ನಲ್ಲಿ ಪಡೆಯಬಹುದಾಗಿರುತ್ತದೆ".
1. ವಿವರ: ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯಲ್ಲಿ ಬಿ.ಇ/ ಎಂ.ಬಿ.ಬಿ.ಎಸ್ ವ್ಯಾಸಾಂಗ ಮಾಡುತ್ತಿರುವ ವಿಧ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸುವ ಕುರಿತು Indent no. DMA/ 2023-24/ IND1748/ CALL-3. ಟೆಂಡರಿಗಿಟ್ಟ ಮೊತ್ತ : ರೂ.9,60,000/-, ಇಎಂಡಿ ಮೊತ್ತ : ರೂ.24,000/-
ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ: (1) ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **12/08/2024 ರ 16:30 ಘಂಟೆವರೆಗೆ.** (2) ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ತೆರೆಯುವ ದಿನಾಂಕ: **13/08/2024 ರ 16.30 ಘಂಟೆಗೆ.**
ಸಹಿ/- ಅಧ್ಯಕ್ಷರು ಪುರಸಭೆ ಬೊಮ್ಮಸಂದ್ರ
ಸಹಿ/- ಅಧ್ಯಕ್ಷರು ಪುರಸಭೆ ಬೊಮ್ಮಸಂದ್ರ
ಸಹಿ/- ಮುಖ್ಯಾಧಿಕಾರಿ, ಪುರಸಭೆ, ಬೊಮ್ಮಸಂದ್ರ
ವಾಸಾಸಂಇ/ವಾ.ಪ್ರ/1118/ಶಿರಡಿ ಸಾಯಿ/2024-25

ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ
ವಾಣಿಜ್ಯ ಸಂಕೀರ್ಣ, 100 ಅಡಿ ರಸ್ತೆ, ವಿನೋಬನಗರ, ಶಿವಮೊಗ್ಗ-577204
ಫೋನ್ ನಂ. : 08182-249867, 249280
ಸಂ: ಶಿಭನಪ್ರಾ/ತಾಂ.ಶಾ/ಟೆಂಡರ್/03/2023-24 ದಿನಾಂಕ : 24.07.2024
2ನೇ ಕರೆ ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಸಿ-8 ರ ಕಲಂಗಳ ಷರತ್ತಿನನ್ವಯ ಪಿ.ಎಂ.ಸಿ ಮತ್ತು ಮೂರನೇ ವ್ಯಕ್ತಿ ತಪಾಸಣಾ ಸಂಸ್ಥೆ ಎಂದು ನೊಂದಾಯಿತರಾಗಿರುವ ಹಾಗೂ ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಸಂಸ್ಥೆಗಳಿಂದ ದ್ವಿಲಕೋಟಿ ಪದ್ಧತಿಯಲ್ಲಿ ಟೆಂಡರ್‌ನ್ನು ಈ ಕೆಳಗಡೆ ಸಹಿಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಸಂಸ್ಥೆಯವರು ಕೆಪಿಪಿಪಿ ಪೋರ್ಟಲ್ http://kppp.karnataka gov.in ಮುಖಾಂತರ ಈ ಕೆಳಕಂಡ ಸೇವಾ ಟೆಂಡರ್‌ಗಾಗಿ ಭಾಗವಹಿಸಬಹುದು. ಭಾಗವಹಿಸುವ ಸಂಸ್ಥೆಯವರಿಗೆ ಅರ್ಹತಾ ವಿವರಗಳನ್ನು ಹಾಗೂ ವೇಳಾಪಟ್ಟಿಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. ಕೆಪಿಪಿ ಪೋರ್ಟಲ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಹೆಲ್ಪ್ ಡೆಸ್ಕ್ ನಂ.080- 3046010000 & 8068948777ನ್ನು ಸಂಪರ್ಕಿಸಬಹುದಾಗಿರುತ್ತದೆ.
ಹೆಚ್ಚಿನ ವಿವರಗಳನ್ನು ಕಚೇರಿ ಕೆಲಸದ ದಿನದಂದು ಸಂಜೆ 3.30 ರಿಂದ 5.30 ರ ವೇಳೆಯಲ್ಲಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.
ಸಹಿ/- (ವಿಶ್ವನಾಥ ಪಿ ಮುದಜ್ಜಿ) ಆಯುಕ್ತರು, ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ
ಸಹಿ/- (ಹೆಚ್ ಎಸ್. ಸುಂದರೇಶ್ ಬಿ.ಇ) ಅಧ್ಯಕ್ಷರು, ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.149-07/ಝೇಂಕಾರ್/2024-25



ನನ್ನ ರಾಜಕೀಯ ಜೀವನ ತೆರೆದ ಪುಸ್ತಕ

ಬಿಜೆಪಿಯಿಂದ ಮನೆಮುರುಕ ಕೆಲಸ

ಮುಡಾ ತಮ್ಮ ತಪ್ಪನ್ನು ಒಪ್ಪಿಕೊಂಡು ಬದಲಿ ನಿವೇಶನವನ್ನು ನೀಡಿದೆ. ಪರ್ಯಾಯ ನಿವೇಶನ ಪಡೆಯುವ ಪ್ರಕರಣದಲ್ಲಿ ನನ್ನದಾಗಲೀ, ಪತ್ನಿ ಪಾರ್ವತಿಯದಾಗಲೀ, ಭಾವಮೈದುನ ಮಲ್ಲಿಕಾರ್ಜುನ ಸ್ವಾಮಿಯದ್ದಾಗಲೀ ಯಾವುದೇ ಪಾತ್ರವಿಲ್ಲ.

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹಗರಣ ನಡೆದಿದೆ ಎನ್ನುವ ಸುಳ್ಳು ಆರೋಪವನ್ನು ಬಿಜೆಪಿ-ಜೆಡಿಎಸ್‌ನವರು ಮಾಡುತ್ತಿದ್ದಾರೆ. ನಾನು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವ ಕಾರಣಕ್ಕೆ ಅಸೂಯೆಯಿಂದ ಈ ರೀತಿ ಆರೋಪ ಮಾಡುತ್ತಿದ್ದಾರೆ. ಈ ಪ್ರಕರಣದಲ್ಲಿ ನನ್ನ, ನನ್ನ ಪತ್ನಿ ಹಾಗೂ ಭಾವಮೈದುನ ಯಾವುದೇ ತಪ್ಪು ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೊಮ್ಮೆ ಸ್ಪಷ್ಟಪಡಿಸಿದರು.

ಮುಡಾ ಹಗರಣ ಸಂಬಂಧ ಬಿಜೆಪಿ-ಜೆಡಿಎಸ್ ನಾಯಕರು ಮಾಡುತ್ತಿರುವ ಆರೋಪಗಳೆಲ್ಲ ಆಧಾರರಹಿತ. ರಾಜಕೀಯ ಕಾರಣಕ್ಕೆ ನನ್ನನ್ನು ತೇಜೋವಧೆ ಮಾಡಲು ಬಿಜೆಪಿ-ಜೆಡಿಎಸ್ ಪ್ರಯತ್ನಿಸುತ್ತಿದೆ. ರಾಜಕೀಯವಾಗಿ ಹತಾಶರಾಗಿರುವ ಕಾರಣಕ್ಕೆ ಈ ರೀತಿ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎರಡು ತಾಸಿನ ಸುದೀರ್ಘ ಸುದ್ದಿಗೋಷ್ಠಿ ನಡೆಸಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆರಂಭದಿಂದ ಇಂದಿನ ವ್ಯವಸ್ಥೆಯ ಬಗ್ಗೆ ವಿವರಿಸುವುದರೊಂದಿಗೆ, ತಮ್ಮ ಪತ್ನಿ ಹೆಸರಿನಲ್ಲಿ ಜಮೀನು ಸ್ವಾಧೀನಪಡೆಸಿಕೊಂಡಿರುವ ಹಾಗೂ ಅದಕ್ಕೆ ಪ್ರತಿಯಾಗಿ ಬದಲಿ ನಿವೇಶನವನ್ನು ನೀಡಿರುವ ವಿಷಯಗಳನ್ನು ಇಂಚಿಂಚೂ ವಿವರಿಸಿದರು.

ಮಸಿ ಬಳಿಯಲು ಈ ರೀತಿಯ ಆರೋಪ

ಮುಡಾ ನಿವೇಶನ ಹಂಚಿಕೆಯಲ್ಲಿ ಯಾವುದೇ ಅಕ್ರಮ ನಡೆಯದಿದ್ದರೂ ಹೆಸರಿಗೆ ಮಸಿ ಬಳಿಯಲು ಬಿಜೆಪಿ ಮತ್ತು ಜೆಡಿಎಸ್ ಹುನ್ನಾರ ನಡೆಸಿದೆ. ತಾವು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವುದನ್ನು ಸಹಿಸಿಕೊಳ್ಳಲು ವಿಪಕ್ಷಗಳಿಗೆ ಸಾಧ್ಯವಾಗುತ್ತಿಲ್ಲ. ಇದಕ್ಕಾಗಿ ಸುಳ್ಳು ಮಾಹಿತಿಯೊಂದಿಗೆ ಜನರನ್ನು ದಾರಿತಪ್ಪಿಸಿ ಅಪಪ್ರಚಾರ ಮಾಡುತ್ತಿವೆ ಎಂದು ಕಿಡಿಕಾರಿದರು.

ಭೂಮಿಯ ಮೂಲ ಒಡೆತನ ಹರಾಜು ಮೂಲಕ ಖರೀದಿ ಮಾಡಿದ್ದಾಗಿದ್ದು, ದೇವರಾಜ್ ಅವರಿಂದ ತಮ್ಮ ಭಾವಮೈದುನ ಕಾನೂನುಬದ್ಧವಾಗಿ ಖರೀದಿ ಮಾಡಿದ್ದಾರೆ. ಹೀಗಾಗಿ ಪಿಟಿಸಿಎಲ್ ಕಾಯಿದೆ ವ್ಯಾಪ್ತಿಗೆ ಭೂಮಿ ಬರುವುದಿಲ್ಲ. ನಿಂಗ ಅವರ ಕುಟುಂಬದ ಸದಸ್ಯರು ಒಪ್ಪಿಗೆಯೊಂದಿಗೆ ದೇವರಾಜ್ ಅವರಿಗೆ ಭೂಮಿಯ ಮಾಲೀಕತ್ವ ದಕ್ಕಿದೆ. ಹೀಗಾಗಿ ಈಗ ಮಂಜುನಾಥಸ್ವಾಮಿಯವರಿಂದ ಬಿಜೆಪಿಯವರು ದೂರು ಕೊಡಿಸಿ ಮನೆಮುರುಕ ಕೆಲಸ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನನ್ನ ರಾಜಕೀಯ ಜೀವನ ತೆರೆದ ಪುಸ್ತಕ

ಕಳೆದ ನಾಲ್ಕು ದಶಕದಿಂದ ಸಾರ್ವಜನಿಕ ಜೀವನದಲ್ಲಿದ್ದು, ಒಂದೇ ಒಂದು ಕಪ್ಪುಚುಕ್ಕೆಯಿಲ್ಲ. ಬಿಜೆಪಿ-ಜೆಡಿಎಸ್ ಪಕ್ಷಗಳು ದುರುದ್ದೇಶಪೂರಕವಾಗಿ ಸೇಡಿನ ರಾಜಕಾರಣದಿಂದ ಮಸಿ ಬಳಿಯುವ ಯತ್ನ ನಡೆಸುತ್ತಿವೆ. ವಿಧಾನಮಂಡಲದಲ್ಲಿ ಜೆಡಿಎಸ್-ಬಿಜೆಪಿ ಆಧಾರರಹಿತವಾಗಿ ಕಾನೂನುಬಾಹಿರ ನಿಲುವಳಿ ಸೂಚನೆ ತಂದಿದ್ದರು. ನಿಲುವಳಿ ಚರ್ಚೆಯಾಗಬೇಕಾದರೆ ನಿಯಮಗಳ ಅನುಸಾರವಿರಬೇಕು. ಆದರೆ ಬಿಜೆಪಿಯವರು ನೀಡಿದ್ದ ನಿಲುವಳಿ ಸೂಚನೆ ನಿಯಮಗಳ ವಿರುದ್ಧವಾಗಿತ್ತು. ಅದನ್ನು ಚರ್ಚೆ ಮಾಡಲು ಅವಕಾಶ ಇರಲಿಲ್ಲ. ಹಾಗಾಗಿ ನಿಯಾಮವಳಿ ವಿರುದ್ಧವಾಗಿದ್ದ ಸೂಚನೆ ಕುರಿತು ವಿಧಾನಸಭಾಧ್ಯಕ್ಷರು, ವಿಧಾನಪರಿಷತ್ ಸಭಾಪತಿ ಕಾನೂನು ರೀತಿಯ ಕ್ರಮ ಕೈಗೊಂಡಿದ್ದಾರೆ ಎಂದು ಹೇಳಿದರು.

ನಾನು ಮೊದಲ ಬಾರಿಗೆ 1983ರಲ್ಲಿ ಶಾಸಕನಾಗಿ, 1984ರಲ್ಲಿ ಸಚಿವನಾದವನು. ಉಪಮುಖ್ಯಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ 40ವರ್ಷ ರಾಜಕೀಯದಲ್ಲಿದ್ದೇನೆ. ಸಚಿವನಾಗಿಯೇ 40 ವರ್ಷವಾಗಿದೆ. ಇವತ್ತಿನವರೆಗೆ ನನ್ನ ಮೇಲೆ ಒಂದು ಕಪ್ಪುಚುಕ್ಕೆ ಇಲ್ಲ. ನನ್ನ ರಾಜಕೀಯ ಜೀವನ ಪರಿಶುದ್ಧವಾಗಿದೆ. ಬಿಜೆಪಿ ಮತ್ತು ಜೆಡಿಎಸ್‌ನಿಂದ ಸೇಡಿನ ರಾಜಕಾರಣ ನಡೆಯುತ್ತಿದೆ. ಅವರು ಜನರ ವಿಶ್ವಾಸ ಕಳೆದುಕೊಂಡಿದ್ದಾರೆ. ಕಳೆದ ವಿಧಾನಸಭೆಯಲ್ಲಿ ಸೋಲನುಭವಿಸಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಎರಡು ಪಕ್ಷಗಳು ಮೈತ್ರಿ ಮಾಡಿಕೊಂಡರೂ ಹೆಚ್ಚು ಸ್ಥಾನ ಗೆಲ್ಲಲಾಗಿಲ್ಲ. ತೀವ್ರ ಹಿನ್ನಡೆ ಅನುಭವಿಸಿದ್ದಾರೆ. ವಿಧಾನಸಭೆ ಚುನಾವಣೆಗಿಂತ ಲೋಕಸಭೆ ಚುನಾವಣೆಯಲ್ಲಿ ಶೇ.13.5ರಷ್ಟು ಕಾಂಗ್ರೆಸ್ ಹೆಚ್ಚು ಮತ ಗಳಿಸಿದೆ. ಬಿಜೆಪಿ-ಜೆಡಿಎಸ್‌ನವರು ಜನರ ವಿಶ್ವಾಸ ಕಳೆದುಕೊಂಡಿದ್ದು, ಅದನ್ನು ಮರು ಗಳಿಸಲು ವಾಮಮಾರ್ಗ ಅನುಸರಿಸುತ್ತಿದ್ದಾರೆ ಎಂದು ಅವರು ಟೀಕಿಸಿದರು.

ನನ್ನ ಕುಟುಂಬದ ಪಾತ್ರವಿಲ್ಲ: ಮುಡಾದಿಂದ ಪರ್ಯಾಯ ನಿವೇಶನ ಪಡೆಯುವ ಪ್ರಕರಣದಲ್ಲಿ ನನ್ನದಾಗಲೀ, ನನ್ನ ಪತ್ನಿ ಪಾರ್ವತಿಯದಾಗಲೀ, ಭಾವಮೈದುನ ಮಲ್ಲಿಕಾರ್ಜುನ ಸ್ವಾಮಿಯದ್ದಾಗಲೀ ಯಾವುದೇ ಪಾತ್ರವಿಲ್ಲ. ಮುಡಾ ಭೂಮಿಯನ್ನು ಅಕ್ರಮವಾಗಿ ಬಳಸಿಕೊಂಡ ಕಾರಣಕ್ಕೆ 2014 ಮತ್ತು 2021ರಲ್ಲಿ ನನ್ನ ಪತ್ನಿ ಪಾರ್ವತಿಯವರು ಎರಡು ಬಾರಿ ಪತ್ರ ಬರೆದು ಬದಲಿ ನಿವೇಶನ ನೀಡುವಂತೆ ಮನವಿ ಮಾಡಿದ್ದರು. 2014ರ ಜೂನ್ 23 ರಂದು ಮೊದಲ ಬಾರಿ ಪತ್ರ ಬರೆಯಲಾಗಿತ್ತು. ಆಗ ನಾನು ಮುಖ್ಯಮಂತ್ರಿಯಾಗಿದ್ದೆ. ನನ್ನ ಪತ್ನಿ ಅರ್ಜಿ ಸಲ್ಲಿಸಿರುವುದನ್ನು ಗಮನಕ್ಕೆ ತಂದಾಗ ನಾನು ಅಧಿಕಾರದಲ್ಲಿರುವುದರಿಂದ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ಬದಲಿ ನಿವೇಶನವನ್ನೂ ನೀಡುವುದಿಲ್ಲ. ಅಧಿಕಾರ ಅವಧಿ ಮುಗಿದ ಬಳಿಕ ಮುಡಾದವರು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲಿ ಎಂದು ಹೇಳಿದ್ದೆ. ಬಳಿಕ 2021ರಲ್ಲಿ ಮತ್ತೊಮ್ಮೆ ಅರ್ಜಿ ಸಲ್ಲಿಸಲಾಗಿತ್ತು ಎಂದು ಮುಖ್ಯಮಂತ್ರಿ ಹೇಳಿದರು.

ಎರಡನೇ ಬಾರಿ ಅರ್ಜಿ ಸಲ್ಲಿಸಿದಾಗ ತಮ ಜಮೀನನ್ನು ಉಪಯೋಗಿಸಿಕೊಂಡಿರುವ ಬಾಬ್ತು ಯಾವುದೇ ಪರಿಹಾರ ನೀಡಿಲ್ಲ. ಭೂಮಿಗೆ ಭೂಮಿ ನೀಡುವುದು ಬೇಡ. ಶೇ.50:50ರ ಅನುಪಾತದಲ್ಲಿ ನಿವೇಶನ ನೀಡುವಂತೆ ಮನವಿ ಸಲ್ಲಿಸಲಾಗಿತ್ತು. ನಾವು ಇಂತಹ ಕಡೆಯೇ ಜಾಗ ಕೊಡಿ ಎಂದು ಕೇಳಿರಲಿಲ್ಲ. ಮುಡಾದವರು ವಿಜಯನಗರದ 3 ಮತ್ತು 4 ನೇ ಹಂತದ ಬಡಾವಣೆಯಲ್ಲಿ ನಿವೇಶನ ನೀಡಿದ್ದಾರೆ. ನಮ್ಮ ಒಟ್ಟು 3 ಎಕರೆ 16 ಗುಂಟೆಯಿಂದ 1,48,000 ಚದರ ಅಡಿ ಜಾಗ ವಿಸ್ತೀರ್ಣವಿದ್ದು, ಮುಡಾ ಬದಲಿಯಾಗಿ ನೀಡಿರುವುದು 38,588 ಚದರ ಅಡಿ ಮಾತ್ರ. ಮುಡಾ ನಿರ್ಣಯದಲ್ಲಿ ಅರ್ಜಿದಾರರು ಒಪ್ಪುವ ಜಾಗದಲ್ಲೇ ನಿವೇಶನ ನೀಡಬೇಕು ಎಂದು ನಿರ್ಣಯ ಕೈಗೊಳ್ಳಲಾಗಿದೆ. ಈ ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಮುಡಾ ಸಭೆಯಲ್ಲಿ ಜೆಡಿಎಸ್ ಶಾಸಕರಾದ ಜಿ.ಟಿ.ದೇವೇಗೌಡ, ಮರಿತಿಬ್ಬೇಗೌಡ, ಬಿಜೆಪಿಯ ಎಸ್.ಎ.ರಾಮದಾಸ್, ಅದೇ ಪಕ್ಷದ ನಾಗೇಂದ್ರ ಭಾಗವಹಿಸಿದ್ದರು. ಆ ಸಮಯದಲ್ಲಿ ಮಾತನಾಡದೇ ಈಗೇಕೆ ಹೇಳುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಖಾತೆ ಹಸ್ತಾಂತರಕ್ಕೆ ಅಡ್ಡಿಯಿಲ್ಲವೆಂದು ಸಹಿ ಹಾಕಿದ ದೇವರಾಜ್: ಇನ್ನು ಲಿಂಗ ಬಿನ್ ಜೌರಾ ಅವರಿಂದ ಸಿದ್ದರಾಮಯ್ಯ ಅವರ ಬಾವಮೈದುನ ಮಲ್ಲಿಕಾರ್ಜುನಸ್ವಾಮಿ ಹೆಸರಿಗೆ ಜಮೀನು ಹಸ್ತಾಂತರಿಸುವಾಗ ಈಗ ತಗಾದೆ ತೆಗೆದಿರುವ ದೇವರಾಜ್ ಒಪ್ಪಿಗೆ ನೀಡಿರುವ ದಾಖಲೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆಗೊಳಿಸಿದರು. ಈ ವೇಳೆ ಮಾತನಾಡಿದ ಅವರು, ಲಿಂಗ ಬಿನ್ ಜೌರಾಗೆ ಮೂವರು ಮಕ್ಕಳು. ಮಲ್ಲಯ್ಯ, ಮೈಲಾರಯ್ಯ, ದೇವರಾಜ್. ಮಲ್ಲಯ್ಯ ಪೌತಿ ಆಗಿದ್ದು ವಾರಸುದಾರರಿಲ್ಲ. ಮೈಲಾರಯ್ಯ ಎರಡನೇ ಪತ್ನಿ ಪುಟ್ಟಗೌರಮ್ಮ ಎಂ.ಮಂಜುನಾಥ ಸ್ವಾಮಿ, ದೇವರಾಜ ಮೂರನೇ ಮಗ. ಇದಕ್ಕೆ ವಂಶವೃಕ್ಷಕ್ಕೆ ಎಲ್ಲ ಮೂವರು ಸಹಿ ಮಾಡಿದ್ದಾರೆ. ಅಂದರೆ ವಂಶ ವೃಕ್ಷ ಸರಿ ಇದೆ ಅಂತ. 10.04.1993ರಲ್ಲಿ ದೇವರಾಜ್ ಖಾತೆ ಮಾಡಿಕೊಡಲು ವಿರೋಧ ಇಲ್ಲ ಎಂದು ಬರೆದು ಕೊಡುತ್ತಾರೆ. ಮಲ್ಲಯ್ಯ, ಪುಟ್ಟಗೌರಮ್ಮ, ಮಂಜುನಾಥಸ್ವಾಮಿ ಸಹಿ ಮಾಡಿದ್ದಾರೆ. ಇದನ್ನು ನಾವು ಮಾಡಿಸಿದ್ದಲ್ಲ. ಇಷ್ಟೆಲ್ಲ ಇದ್ದರೂ ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ದೇವರಾಜ್ ಹೆಸರಿಗೆ ಖಾತೆ ಮಾಡಿಕೊಡಲು ಹೇಳಿಕೆ ಕೊಟ್ಟಿದ್ದಾರೆ. ಅದರ ದಾಖಲೆಯೂ ಇದೆ. ಮಲ್ಲಯ್ಯ, ಪುಟ್ಟಗೌರಮ್ಮ, ಎಂ.ಮಂಜುನಾಥ್ ಸಹಿ ಮಾಡಿರುವ ದಾಖಲೆಯಿದೆ. ಇದರ ಆಧಾರದ ಮೇಲೆ ದೇವರಾಜ್ ಹೆಸರಿಗೆ ವರ್ಗಾವಣೆಯಾಗಿದೆ. ಹೀಗಾಗಿ ಬಿಜೆಪಿ ಹೇಳುವುದರಲ್ಲಿ ಸತ್ಯಾಂಶ ಇಲ್ಲ ಎಂದು ಸ್ಪಷ್ಟಪಡಿಸಿದರು.

20 ವರ್ಷದ ಹಿಂದೆ ಬರೆದುಕೊಟ್ಟಿದ್ದರೂ ಈಗ ತಗಾದೆ ತಗೆಯುತ್ತಿದ್ದಾರೆ ಅಂದರೆ ಅದರ ಹಿಂದೆ ಬಿಜೆಪಿಯವರ ಕೈವಾಡವಿರುವುದು ಸ್ಪಷ್ಟ. ಬಿಜೆಪಿಯವರು ರಾಜಕೀಯ ಕಾರಣಕ್ಕೆ, ನನ್ನ ಹೆಸರಿಗೆ ಮಸಿ ಬಳಿಯಬೇಕು ಎನ್ನುವ ಏಕೈಕ ಕಾರಣಕ್ಕೆ ಈ ರೀತಿ ಮಾಡಿಸುತ್ತಿದ್ದಾರೆ. ನಾಚಿಕೆಯಾಗುವುದಿಲ್ಲವೇ? ಮಾನಮರ್ಯಾದೆ ಇಲ್ಲವೇ? 24 ವರ್ಷದ ಮೇಲೆ ಸುಳ್ಳು ಹೇಳಿ ಚಿತಾವಣೆ ಮಾಡಿ ಹೇಳಿಕೆ ಕೊಡಿಸಿದ್ದಾರೆ. ಅವರು ಹತಾಶರಾಗಿ ರಾಜಕೀಯವಾಗಿ ಮಸಿ ಬಳಿಯುವ ಪ್ರಯತ್ನ. ಆ ಕುಟುಂಬದಲ್ಲಿ 20 ವರ್ಷದ ಬಳಿಕ ಅನ್ಯೋನ್ಯವಾಗಿದ್ದವರನ್ನು ಎತ್ತಿಕಟ್ಟಿ ಜಿಲ್ಲಾಧಿಕಾರಿ ಬಳಿ ಹೇಳಿಕೆ ಕೊಡಿಸಿದವರನ್ನು ಏನೆಂದು ಕರೆಯ ಬೇಕು. ಬಿಜೆಪಿಯವರು ಮನೆಮು ರುಕರು ಎಂದು ಟೀಕಿಸಿದರು.

ಕಣ್ತಪ್ಪಿನಿಂದ ಅಫಿಡವಿಟ್‌ನಲ್ಲಿ ಸಲ್ಲಿಕೆಯಾಗಿಲ್ಲ: ಸಿಎಂ

ಬಳಿಕ ಕೆಲ ಪತ್ರಕರ್ತರು, ಈ ಜಮೀನಿನ ಬಗ್ಗೆ 2013ರ ಚುನಾವಣಾ ಅಫಿಡವಿಟ್‌ನಲ್ಲಿ ನಮೂದಿಸಿಲ್ಲವೇಕೆ ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ, ಸಿದ್ದರಾಮಯ್ಯ ಅವರು, ಕಣ್ತಪ್ಪಿನಿಂದಾಗಿ ಮಾಹಿತಿ ನೀಡಿರಲಿಲ್ಲ. ಆದರೆ ಬಳಿಕ ಲೋಕಾಯುಕ್ತಕ್ಕೆ ಸಲ್ಲಿಸಿರುವ ಆಸ್ತಿ ವಿವರದಲ್ಲಿ ಈ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ವಿವರಿಸಿದರು. ಈ ವೇಳೆ ಮಧ್ಯಪ್ರವೇಶಿಸಲು ಮುಂದಾದ ಕೆಲವರಿಗೆ ಗದರಿದ ಸಿಎಂ, 'ಇಟ್ಸ್ ಎ ಫ್ಯಾಕ್ಟ್' ಈ ಬಗ್ಗೆ ಸ್ಪಷ್ಟ ಉಲ್ಲೇಖ ಮಾಡಿದ್ದೇನೆ ಎಂದು ಸ್ಪಷ್ಟಪಡಿಸಿದರು.

- ಬಿಜೆಪಿ- ಜೆಡಿಎಸ್ ಪಕ್ಷಗಳು ನನ್ನ ಜೀವನದಲ್ಲೇ ಕಾಣದಷ್ಟು ಕೆಟ್ಟ ರಾಜಕಾರಣವನ್ನು ಮಾಡುತ್ತಿದ್ದು, ವೈಯಕ್ತಿಕವಾಗಿ ತೇಜೋವಧೆ ಮಾಡುವ ಹುನ್ನಾರ ನಡೆಸಿದೆ.
- ಕರ್ನಾಟಕದಲ್ಲಿ ಕುಸಿದು ಹೋಗುತ್ತಿರುವ ಜನಪ್ರಿಯತೆಯನ್ನು ಮರುಸ್ಥಾಪಿಸಿಕೊಳ್ಳಲು ಸಾವಿರ ಸಲ ಸುಳ್ಳು ಹೇಳಿದರೆ ನಿಜವಾಗುತ್ತದೆ ಎಂಬ ವಾದವನ್ನು ಅನುಸರಿಸುತ್ತಿದ್ದಾರೆ.
- ಈ ಹಿಂದೆ ದೇವರಾಜ ಅರಸು ವಿಚಾರದಲ್ಲೂ ಇದೇ ರೀತಿ ಅಪಪ್ರಚಾರ ನಡೆಸಲಾಯಿತು.
- ಧರ್ಮಸಿಂಗ್ ವಿರುದ್ಧವೂ ಇದೇ ರೀತಿಯ ಸಂಚುಗಳು ನಡೆದವು.
- ದಮನಿತ ವರ್ಗಗಳ ಜನಸಮುದಾಯದಿಂದ ಬಂದವರು ರಾಜಕಾರಣ ಮಾಡಬಾರದು ಎಂಬ ನಿಲುವು ಬಿಜೆಪಿಯವರದ್ದು.
- ಮುಡಾ ವಿಚಾರದಲ್ಲಿ ಗುಲಗಂಜಿಯಷ್ಟೂ ನ್ಯೂನತೆ ಇಲ್ಲದೇ ಇದ್ದರೂ ದೊಡ್ಡದಾಗಿ ಚರ್ಚೆ ಮಾಡುತ್ತಿದ್ದಾರೆ

ಮಾನ್ಯ ಸಭಾಧ್ಯಕ್ಷರೇ ಎಂದ ಸಿಎಂ

ಸುದೀರ್ಘ ಸುದ್ದಿಗೋಷ್ಠಿ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡುವ ವೇಳೆ, 'ಮಾನ್ಯ ಸಭಾಧ್ಯಕ್ಷರೇ' ಎಂದು ಎರಡು ಬಾರಿ ಸಂಬೋಧಿಸಿದರು. ಇದಕ್ಕೆ ಕೆಲ ಪತ್ರಕರ್ತರು, 'ನೀವು ಸದನದಲ್ಲಿ ಉತ್ತರಿಸಲೇ ಸಜ್ಜಾಗಿದ್ದೀರಾ ಅನಿಸುತ್ತದೆ' ಎಂದು ಕಾಲೆಳೆದರು. ಎರಡನೇ ಬಾರಿಯೂ ಮಾನ್ಯ ಎಂದು ಹೇಳಿದ ಬಳಿಕ, 'ಸ್ನೇಹಿತರೇ' ಎಂದು ಮಾತನ್ನು ಬದಲಾಯಿಸಿದರು. ಈ ಮೂಲಕ ಒಂದು ವೇಳೆ ಚರ್ಚೆ ನಡೆದಿದ್ದರೆ, ಸದನದಲ್ಲಿಯೇ ಉತ್ತರಿಸಲು ಸಜ್ಜಾಗಿದ್ದರು ಎನ್ನುವುದು ಸ್ಪಷ್ಟ.

ಬದಲಿ ನಿವೇಶನ ಪಡೆದ ಎಚ್‌ಡಿಕೆ: ದಾಖಲೆ ಬಿಡುಗಡೆ

ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ವಿರುದ್ಧ ಅಕ್ರಮ ಆರೋಪ ಹೊರಿಸುತ್ತಿರುವ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರೂ ಸಹ ನಿವೇಶನ ಹಂಚಿಕೆಯಲ್ಲಿನ ಪಾಲುದಾರರು ಎನ್ನುವುದು ದಾಖಲೆಗಳಿಂದ ಬಹಿರಂಗವಾಗಿದೆ. ಈ ಬಗ್ಗೆ ದಾಖಲೆ ಬಿಡುಗಡೆ ಮಾಡಿದ ಸಚಿವ ಬೈರತಿ ಸುರೇಶ್, ಮೈಸೂರಿನ ಕೈಗಾರಿಕಾ ವಲಯದಲ್ಲಿ 21 ಸಾವಿರ ಅಡಿ ವಿಸ್ತೀರ್ಣದ ಕೈಗಾರಿಕಾ ನಿವೇಶನವನ್ನು ಪಡೆದಿದ್ದಾರೆ. 17/ಬಿ1 ನಿವೇಶನದ ಸರ್ವೆ ನಂಬರ್ ದಾಖಲೆಯನ್ನು ಶುಕ್ರವಾರ ಬಿಡುಗಡೆಗೊಳಿಸಲಾಯಿತು. ಕುಮಾರಸ್ವಾಮಿ ಅವರು 1985ರಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಪಡೆದಿದ್ದ ನಿವೇಶನಕ್ಕೆ ಬದಲಿಯಾಗಿ ಬೇರೆ ಜಾಗ ನೀಡುವಂತೆ ಸಾಲು ಸಾಲು ಪತ್ರ ಬರೆದಿರುವ ಪತ್ರಗಳು ಇದೀಗ ಬಹಿರಂಗವಾಗಿದೆ.

ಯಾರೆಲ್ಲ ಭೂಮಿ ಪಡೆದಿದ್ದಾರೆ ಅನ್ನೋದು ಗೊತ್ತಿದೆ: ಬೈರತಿ

ಸುದ್ದಿಗೋಷ್ಠಿಯಲ್ಲಿ ಹಾಜರಿದ್ದ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮಾತನಾಡಿ, ಸದನದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಒಂದು ವೇಳೆ ಅವಕಾಶ ನೀಡಿದ್ದರೆ ಅಲ್ಲಿಯೇ ಬಿಜೆಪಿ-ಜೆಡಿಎಸ್‌ನವರ ಬಂಡವಾಳ ಬಿಚ್ಚಿಡುತ್ತಿದ್ದೆ. ಬಿಜೆಪಿ-ಜೆಡಿಎಸ್ ನಾಯಕರೊಂದಿಗೆ ಹಲವಾರು ಮಠಗಳಿಗೂ ನಿವೇಶನ ಹಂಚಿಕೆಯಾಗಿದೆ. ಮಠಗಳಿಗೆ ಹಂಚಿಕೆಯಾಗಿರುವ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಆದರೆ ಬಿಜೆಪಿ-ಜೆಡಿಎಸ್ ನಾಯಕರ ಪಟ್ಟಿ ಬಿಡುಗಡೆ ಮಾಡುತ್ತೇನೆ ಎಂದು ಹೆಸರುಗಳನ್ನು ಹೇಳಿದರು. ಮುಡಾದಿಂದ ಬದಲಿ ಸೈಟ್ ಪಡೆದುಕೊಂಡವರ ಪಟ್ಟಿಯಲ್ಲಿ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಹೆಸರಿರುವುದು ಇದೀಗ ಮತ್ತೊಂದು ರಾಜಕೀಯ ಸಂಚಲನಕ್ಕೆ ಕಾರಣವಾಗಿದೆ.

ಜಿ.ಟಿ.ದೇವೇಗೌಡ, ಸಿ.ಎನ್.ಮಂಜೇಗೌಡ, ಎಚ್. ವಿಶ್ವನಾಥ್. ಸಾ.ರಾ.ಮಹೇಶ್, ಎಚ್.ಡಿ.ಕುಮಾರಸ್ವಾಮಿಗೂ ನಿವೇಶನ ಹಂಚಿಕೆಯಾಗಿದೆ. ಈ ಎಲ್ಲರಿಗೂ ಬದಲಿ ನಿವೇಶನ ಹಂಚಿಕೆಯಾಗಿದೆ. ಹಂಚಿಕೆಯಾಗಿರುವುದು ಅಕ್ರಮವೋ, ಸಕ್ರಮವೋ ಎನ್ನುವುದು ತನಿಖಾ ಆಯೋಗದ ಮುಂದೆ ತಿಳಿಯುತ್ತದೆ ಎಂದರು.

ನಿವೇಶನ ಪಡೆದ ರಾಜಕಾರಣಿಗಳು

ಎಚ್.ಡಿ.ಕುಮಾರಸ್ವಾಮಿ(ಜೆಡಿಎಸ್)
ಎಲ್ಲಿ?: ಇಂಡಸ್ಟ್ರಿಯಲ್ ಸಬರ್ಬ್ ಮೂರನೇ ಹಂತ ಮೈಸೂರು.
ವಿಸ್ತೀರ್ಣ : 21 ಸಾವಿರ ಚದರ ಅಡಿ
ನಿವೇಶನ ಸಂಖ್ಯೆ : ಕೈಗಾರಿಕಾ ನಿವೇಶನ ಸಂಖ್ಯೆ 17/ಬಿ1.

ಇವರಿಗೆಲ್ಲರಿಗೂ ಬದಲಿ ಸೈಟ್

ಸಾ.ರಾ.ಮಹೇಶ್ (ಜೆಡಿಎಸ್)
ಎಲ್ಲಿ?: ಮಳಲವಾಡಿ ಹಾಗೂ ಬೋಗಾದಿ
ವಿಸ್ತೀರ್ಣ : ಮಳಲವಾಡಿ ಸರ್ವೆ ನಂಬರ್ 130/3ಯಲ್ಲಿ 0.09 ಗುಂಟೆ, ಬೋಗಾದಿ ಸರ್ವೆ ನಂಬರ್ 170,171,173 ರಲ್ಲಿ, 2-11 ಎಕರೆ ಜಮೀನು

★★★

ಜಿ.ಟಿ.ದೇವೇಗೌಡ (ಜೆಡಿಎಸ್)
ಎಲ್ಲಿ : ಈರನಗೆರೆ, ಮಾದಗಳ್ಳಿ
ವಿಸ್ತೀರ್ಣ: ಈರನಗೆರೆ 14/1ರಲ್ಲಿ 2-25 ಎಕರೆ, ಮಾದಗಳ್ಳಿ 17 ರಲ್ಲಿ 1 ಎಕರೆ

★★★

ಸಿ.ಎನ್.ಮಂಜೇಗೌಡ (ಜೆಡಿಎಸ್):
ಎಲ್ಲಿ : ಹಿನಕಲ್, ದೇವನೂರು, ಕೆಸರೆ, ಮೈಸೂರು
ವಿಸ್ತೀರ್ಣ : ಹಿನಕಲ್ ಗ್ರಾಮ ಸರ್ವೆ ನಂ 337ರಲ್ಲಿ 1 ಎಕರೆ, ದೇವನೂರು ಸರ್ವೆ ನಂಬರ್ 91ರಲ್ಲಿ 2-25 ಎಕರೆ, ಕೆಸರೆ ಸರ್ವೆ ನಂಬರ್ 450ರಲ್ಲಿ 4-15 ಎಕರೆ ಜಮೀನು, ಮೈಸೂರು ಸರ್ವೆ ನಂಬರ್ 86ರಲ್ಲಿ 7-08 ಎಕರೆ

★★★

ಎಚ್.ವಿಶ್ವನಾಥ್ (ಬಿಜೆಪಿ
ಎಲ್ಲಿ : ಬೆಲವತ್ತ
ವಿಸ್ತೀರ್ಣ : ಬೆಲವತ್ತ ಸರ್ವೆ ನಂಬರ್ 32ರಲ್ಲಿ 0.05 ಎಕರೆ

★★★

ಮಹದೇವಸ್ವಾಮಿ (ಬಿಜೆಪಿ)
ಎಲ್ಲಿ : ಹಿನಕಲ್
ವಿಸ್ತೀರ್ಣ : 255/1, 257 ರಲ್ಲಿ 0.34 ಗುಂಟೆ ಜಮೀನು.

ಒಂದು ರುಪಾಯಿ ಹರಾಜಿನಲ್ಲಿ ಖರೀದಿ

ಸುದ್ದಿಗೋಷ್ಠಿಯಲ್ಲಿ ಮೂಲ ದಾಖಲೆಯನ್ನು ಕೆದಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಜಮೀನಿನ ಮಾಲಿಕ ನಿಂಗ ಬಿನ್ ಜೌರ 2.08.1935ರಲ್ಲಿ ಮೈಸೂರು ತಾಲೂಕು ಕಚೇರಿಗೆ ಅರ್ಜಿ ಕೊಡುತ್ತಾರೆ. ಅರ್ಜಿ ಮೇಲೆ ಹರಾಜು ನಡೆಯುತ್ತದೆ. ಆ ಹರಾಜಿನ ಮೊತ್ತ ಮೂರು ರು. 26.09.1935 ಹರಾಜಿನ ನೋಟಿಸ್ ಕೊಡುತ್ತಾರೆ. 3.10.1935 ಹರಾಜಿನಲ್ಲಿ ಭಾಗವಹಿಸಿ ಒಂದು ರು.ಗೆ ಕೂಗುತ್ತಾರೆ. ಬೇರೆ ಯಾರೂ ಇರುವುದಿಲ್ಲ. ಆದ್ದರಿಂದ ನಿಂಗ ಬಿನ್ ಜೌರಾಗೆ ಒಂದು ರುಪಾಯಿಗೆ ಕ್ರಯವಾಗುತ್ತದೆ. ಬಳಿಕ 13.10.1935ರಲ್ಲಿ ಹರಾಜಿನ ಸೇಲ್ ಡೀಡ್ ಖಚಿತವಾಗುತ್ತದೆ. ಹಾಗಾಗಿ ಈ ಜಮೀನು ಹರಾಜಿನ ಮೂಲಕ ಬಂದಿರುತ್ತದೆ. ಸ್ವಯಾರ್ಜಿತ ಆಸ್ತಿ. ಯಾವುದೇ ಕಾರಣಕ್ಕೂ ಪಿಟಿಸಿಎಲ್ ಕಾಯಿದೆ ವ್ಯಾಪ್ತಿಗೆ ಬರಲ್ಲ. ಬಿಜೆಪಿ -ಜೆಡಿಎಸ್‌ನವರು ತಪ್ಪು ಮಾಹಿತಿ ನೀಡುತ್ತಿದ್ದು ಕುಟಿಲ ಹರಸಾಹಸ ಮಾಡುತ್ತಿದ್ದಾರೆ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಸಿಎಂ ಹುದ್ದೆಗೆ ಅನೇಕರಿದ್ದಾರೆ

ಮುಖ್ಯಮಂತ್ರಿ ಹುದ್ದೆಗೆ ಟವೆಲ್ ಹಾಕಿದವರಿಂದಲೇ ಈ ಷಡ್ಯಂತ್ರ ನಡೆದಿದೆ ಎನ್ನುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರು, 'ನಮ್ಮಲ್ಲಿ ಮುಖ್ಯಮಂತ್ರಿ ಆಗುವುದಕ್ಕೆ ಅನೇಕರು ಅರ್ಹ ವ್ಯಕ್ತಿಗಳಿದ್ದಾರೆ' ಎನ್ನುತ್ತ ಡಿಕೆ ಶಿವಕುಮಾರ್ ಅವರನ್ನು ನೋಡಿದರು. ಯಾರು ಎನ್ನುವ ಪ್ರಶ್ನೆಗೆ, ಕುಮಾರಸ್ವಾಮಿ ಅವರನ್ನೇ ಕೇಳಿ ಎಂದು ಹೇಳಿದರು.

ಮುಡಾ ಇತಿಹಾಸ ಬಿಚ್ಚಿಟ್ಟ ಸಿಎಂ

- **ಮೈಸೂರಿನ ಕೆಸರೆ ಗ್ರಾಮದ ಸರ್ವೆ ನಂಬರ್ 464ರಲ್ಲಿ ನನ್ನ ಪತ್ನಿ ಪಾರ್ವತಿ ಹೆಸರಿನಲ್ಲಿದ್ದ 3 ಎಕರೆ 16 ಗುಂಟೆ ಜಮೀನನ್ನು ಮುಡಾ ಒತ್ತುವರಿ ಮಾಡಿಕೊಂಡು ಬಡಾವಣೆ ನಿರ್ಮಿಸಿತ್ತು. ಅದಕ್ಕೆ ಪರಿಹಾರವಾಗಿ ಬದಲಿ ನಿವೇಶನ ಹಂಚಿಕೆ ಮಾಡಿದೆ. ಇದರಲ್ಲಿ ಅಕ್ರಮ ಏನಿದೆ?**
- **ಪರಿಶಿಷ್ಟ ಜಾತಿಯ ಜೌರ ಎಂಬುವವರು 1935ರಲ್ಲಿ ಸರಕಾರಿ ಹರಾಜಿನಲ್ಲಿ ಈ ಜಮೀನನ್ನು ಖರೀದಿಸಿದ್ದರು. ಅವರಿಗೆ ಮೂವರು ಮಕ್ಕಳಿದ್ದರು. ಜವರ ಮೃತರಾದ ಬಳಿಕ ಕುಟುಂಬದ ಇತರ ಸದಸ್ಯರ ಒಪ್ಪಿಗೆ ಮೇರೆಗೆ ದೇವರಾಜು ಎಂಬ ಮಗನಿಗೆ ಜಮೀನಿನ ಖಾತೆ ವರ್ಗಾವಣೆ ಆಗಿತ್ತು. ಅವರಿಂದ ನನ್ನ ಪತ್ನಿಯ ಅಣ್ಣ ಮಲ್ಲಿಕಾರ್ಜುನಸ್ವಾಮಿ ಖರೀದಿಸಿದ್ದರು.**
- **ಜಮೀನಿನ ಸ್ವಾಧೀನಕ್ಕೆ ಮುಡಾ 1992ರಲ್ಲಿ ಪ್ರಾಥಮಿಕ ಅಧಿಸೂಚನೆ ಮತ್ತು 1997ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿತ್ತು.**
- **ಜಮೀನು ಮಾಲೀಕರ ಮನವಿಯಂತೆ ಜಮೀನನ್ನು ಡಿನೋಟಿಫೈ ಮಾಡಿ 1997ರಲ್ಲಿ ಆದೇಶ ಹೊರಡಿಸಲಾಗಿತ್ತು.**
- **2005ರಲ್ಲಿ ಈ ಜಮೀನು ಖರೀದಿಸಿದ್ದ ಮಲ್ಲಿಕಾರ್ಜುನ ಸ್ವಾಮಿ, ಭೂಪರಿವರ್ತನೆಯನ್ನೂ ಮಾಡಿಸಿದ್ದರು. 2006ರಲ್ಲಿ ನನ್ನ ಪತ್ನಿ ಪಾರ್ವತಿ ಅವರಿಗೆ ದಾನಪತ್ರ ಮಾಡಿಕೊಟ್ಟಿದ್ದರು.**
- **ಇಂತಹದ್ದೇ ಪ್ರಕರಣದಲ್ಲಿ ಸುಂದರಮ್ಮ ಎಂಬುವವರಿಗೆ ಪೂರ್ಣ ವಿಸ್ತೀರ್ಣದ ಜಮೀನು ಪರಿಹಾರ ನೀಡಲಾಗಿದೆ. ನನ್ನ ಪತ್ನಿಗೆ ಶೇ.50ರಷ್ಟು ಪರಿಹಾರ ಮಾತ್ರ ನೀಡಲಾಗಿದೆ. ಇದರಲ್ಲಿ ತಮ್ಮ ತಪ್ಪೇನಿದೆ?**

ನ್ಯಾಯಾಂಗ ತನಿಖೆಯಲ್ಲಿ ಎಲ್ಲವೂ ತನಿಖೆ

ಮುಡಾದಲ್ಲಿ ನನ್ನ ಕುಟುಂಬಕ್ಕೆ ಮಾತ್ರವಲ್ಲದೇ ಬಿಜೆಪಿ-ಜೆಡಿಎಸ್ ನಾಯಕರೂ ನಿವೇಶನಗಳನ್ನು ಪಡೆದುಕೊಂಡಿದ್ದಾರೆ. ಇದು ಅಕ್ರಮವೋ, ಬದಲಿ ನಿವೇಶನವೋ ಸಕ್ರಮವೋ ಎನ್ನುವುದರ ಬಗ್ಗೆ ಸ್ಪಷ್ಟ ಮಾಹಿತಿ ಪಡೆಯಬೇಕು ಎನ್ನುವ ಕಾರಣಕ್ಕೆ, 14.7.2024ರಂದು ನಿವೃತ್ತ ನ್ಯಾಯಮೂರ್ತಿ ದೇಸಾಯಿ ನೇತೃತ್ವದಲ್ಲಿ ಏಕಸದಸ್ಯ ವಿಚಾರಣಾ ಆಯೋಗ ಮಾಡಿದ್ದೇವೆ. ಮುಡಾದಲ್ಲಿ ನಿವೇಶನ ಹಂಚಿಕೆ ಅಕ್ರಮದ ಬಗ್ಗೆ ತನಿಖೆ ಮಾಡುತ್ತೇವೆ ಎಂದು ಭರವಸೆ ನೀಡಿದರು. ಲೋಕಸಭೆಯ ಹೊರಗಡೆ ಬಿಜೆಪಿ ಸಂಸದರು ಈ ವಿಚಾರವಾಗಿ ಪ್ರತಿಭಟನೆ ನಡೆಸಿದ್ದಾರೆ. ಕರ್ನಾಟಕಕ್ಕೆ ಇಷ್ಟು ಅನ್ಯಾಯವಾಗಿದೆ ಒಂದು ದಿನವಾದರೂ ಪ್ರತಿಭಟನೆ ಮಾಡಿದ್ದಾರಾ? ಐದು ವರ್ಷ 25 ಜನ ಬಿಜೆಪಿ ಎಂಪಿಗಳಿದ್ದರೂ ಆಗ ಪ್ರತಿಭಟನೆ ಮಾಡಿಲ್ಲ. ಈ ವಿಚಾರ ಪ್ರಸ್ತಾಪ ಮಾಡಿಲ್ಲ. ಕರ್ನಾಟಕಕ್ಕೆ ಆಗಿರುವ ಅನ್ಯಾಯದ ಬಗ್ಗೆ ಪ್ರತಿಭಟನೆ ಮಾಡಿಲ್ಲ ಎಂದು ಸಿಎಂ ಟೀಕಿಸಿದರು.

ವಿಶ್ವವಾಣಿ

ಸಂಪಾದಕೀಯ

ನೀಟ್‌ಗೆ ವಿದಾಯ ಸ್ವಾಗತಾರ್ಹ

ನೀಟ್ ಪರೀಕ್ಷೆ ಕುರಿತ ಅಕ್ರಮಗಳ ಬಗ್ಗೆ ಸುಪ್ರೀಕೋರ್ಟ್‌ನಲ್ಲಿ ವಿಚಾರಣೆ ಮುಂದುವರಿದಿದೆ. ಈ ನಡುವೆ ರಾಜ್ಯ ಸರಕಾರವು ಕೇಂದ್ರ ಸುಪರ್ದಿಯಲ್ಲಿ ನಡೆಯುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ(ನೀಟ್)ಯಿಂದ ಹೊರ ಬಂದು ಸಿಇಟಿ ಆಧಾರದಲ್ಲಿ ರಾಜ್ಯದ ವೈದ್ಯ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲು ಮುಂದಾಗಿದೆ. ಈ ಸಂಬಂಧ ಉಭಯ ಸದನಗಳಲ್ಲೂ ನಿರ್ಣಯ ಅಂಗೀಕರಿಸಲಾಗಿದೆ. ತಮಿಳುನಾಡು ಈಗಾಗಲೇ ನೀಟ್‌ನಿಂದ ಹೊರ ಬಂದು ತನ್ನದೇ ಪರೀಕ್ಷಾ ವ್ಯವಸ್ಥೆಯಡಿ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುತ್ತಿದೆ. ಪಶ್ಚಿಮ ಬಂಗಾಳ ಸರಕಾರವೂ ಇದೇ ಮಾದರಿಯ ನಿರ್ಣಯ ಕೈಗೊಂಡಿದೆ. ಕಳೆದ ಮೂರು ದಶಕಗಳಿಂದ ವೃತ್ತಿಪರ ಕೋರ್ಸುಗಳಿಗೆ ವ್ಯಾಪಕ ಬೇಡಿಕೆಯಿದೆ. ಪ್ರತೀ ವರ್ಷ ಲಕ್ಷಗಟ್ಟಲೆ ವಿದ್ಯಾರ್ಥಿಗಳು ಈ ಪರೀಕ್ಷೆ ಬರೆದು ವೈದ್ಯರಾಗುವ ಕನಸು ಕಾಣುತ್ತಿದ್ದಾರೆ. ಪಿಯು ಹಂತದಲ್ಲಿ ವೈದ್ಯ ಮತ್ತು ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡೇ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಾರೆ. ಲಕ್ಷಾಂತರ ರು. ವ್ಯಯಿಸಿ ಕೋಚಿಂಗ್ ಪಡೆಯುತ್ತಾರೆ. ಕೆಲವರು ತಮ್ಮ ಬೇಕಾದ ಕಾಲೇಜಿನಲ್ಲಿ, ಬೇಕಾದ ಕೋರ್ಸ್‌ಗೆ ಪ್ರವೇಶ ಪಡೆಯಲು ಪಿಯು ಬಳಿಕ ಒಂದು ವರ್ಷ ಪೂರ್ತಿ ಪರೀಕ್ಷೆಗೆ ಸಿದ್ಧತೆ ನಡೆಸಿ ಎರಡನೇ ಬಾರಿ ಪರೀಕ್ಷೆ ಬರೆಯುತ್ತಾರೆ. ಆದರೆ ದೇಶದ ಮುಂದಿನ ವೈದ್ಯರನ್ನು, ಎಂಜಿನಿಯರ್‌ಗಳನ್ನು ರೂಪಿಸುವ ನೀಟ್, ಜೆಇಇನಂತಹ ಪರೀಕ್ಷೆ ಪ್ರತೀ ವರ್ಷ ಒಂದಲ್ಲ ಒಂದು ವಿವಾದಗಳಿಗೆ ಗುರಿಯಾಗುತ್ತಲೇ ಬಂದಿದೆ. ಈ ವರ್ಷದ ನೀಟ್ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ 67 ವಿದ್ಯಾರ್ಥಿಗಳಲ್ಲಿ 44 ವಿದ್ಯಾರ್ಥಿಗಳು ಗ್ರೇಸ್ ಮಾರ್ಕ್ಸ್ ಆಧಾರದ ಮೇಲೆ ಟಾಪರ್‌ಗಳಾಗಿದ್ದರು. ಒಂದೇ ಕೇಂದ್ರದಲ್ಲಿ ಪರೀಕ್ಷೆ ಬರೆದ ಆರು ವಿದ್ಯಾರ್ಥಿಗಳು ಜಂಟಿಯಾಗಿ ಟಾಪ್ ಸ್ಥಾನ ಪಡೆದಿದ್ದರು. ಇಂತಹ ಕಳಂಕಿತ ನೀಟ್ ಪರೀಕ್ಷೆ ಅತಿ ಹೆಚ್ಚು ವೈದ್ಯ ಕಾಲೇಜುಗಳಿರುವ ಕರ್ನಾಟಕದಂತಹ ದಕ್ಷಿಣದ ರಾಜ್ಯಗಳಿಗೆ ಮಾರಕ ಮಾತ್ರವಲ್ಲ, ಗ್ರಾಮೀಣ ಬಡ ಮಕ್ಕಳ ಶಿಕ್ಷಣಾವಕಾಶಗಳನ್ನು ಮೊಟಕುಗೊಳಿಸುತ್ತಿದೆ. ನಮ್ಮ ಶಾಲಾ ಶಿಕ್ಷಣ ವ್ಯವಸ್ಥೆಯನ್ನೇ ಈ ಅಕ್ರಮಗಳು ಬುಡಮೇಲು ಮಾಡುತ್ತಿವೆ. ಹೀಗಾಗಿ ಇದರಿಂದ ದೂರ ಸರಿಯುವ ರಾಜ್ಯ ಸರಕಾರದ ನಡೆ ಸ್ವಾಗತಾರ್ಹ. ಆದರೆ ಈ ನಿರ್ಣಯವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವ ಸಾಧ್ಯತೆ ಇದ್ದು ರಾಜ್ಯ ಸರಕಾರ ಸಮರ್ಥ ವಾದ ಮಂಡನೆಗೆ ಸಿದ್ಧವಾಗಬೇಕಿದೆ. ಇದರ ಜತೆಗೆ ನಮ್ಮ ಸಿಇಟಿ ಪರೀಕ್ಷಾ ವ್ಯವಸ್ಥೆಯ ಲೋಪಗಳನ್ನೂ ಸರಿಪಡಿಸಬೇಕಿದೆ.

ಸೊಂಪಾದಕೀಯ

ಡಿಗ್ರಿ ಬೇರೆ, ಕೋರ್ಸ್ ಬೇರೆ!!

ಇತ್ತೀಚಿನ ದಿನಗಳಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಂತೂ ಸಿಕ್ಕಾಪಟ್ಟೆ ಕ್ರಾಂತಿ ಆಗುತ್ತಿದೆ. ಹಳೆಯ ಕಾಲದಲ್ಲಿ ಸ್ಕೂಲು, ಕಾಲೇಜಿಗೆ ಹೋದೆ, ಬಂದೆ, ಪರೀಕ್ಷೆ ಬರೆದೆ ಪಾಸಾದೆ, ಇಷ್ಟಕ್ಕೆ ಸೀಮಿತವಾಗಿದ್ದ ವಿದ್ಯಾಭ್ಯಾಸ ಈಗ ಬೇರೆಯದ್ದೇ ಹಂತ ತಲುಪಿದೆ. ಈಗ ಶಾಲೆಗಳು ಸಾಕಾಗುತ್ತಿಲ್ಲ, ಟ್ಯೂಷನ್‌ಗಳು ಬೇಕಾಗಿವೆ. ಹಾಗೆಯೇ ಈಗ ಡಿಗ್ರಿಗಳು ಸಾಕಾಗ್ತಾ ಇಲ್ಲ. ಹೊಸ ಕೋರ್ಸ್‌ಗಳನ್ನು ಕಲಿಯಬೇಕಿದೆ. ಹಾಗಾಗಿಯೇ ಇಂದು ದೇಶದಲ್ಲಿ ಗಲ್ಲಿಗೊಂದು ಕೋಚಿಂಗ್ ಸೆಂಟರ್‌ಗಳು ಕಾಣಬರುತ್ತವೆ. ಇನ್ನು ಆನ್ ಲೈನ್‌ನಲ್ಲೂ ಕೋರ್ಸ್‌ಗಳದ್ದೇ ಕಾರುಬಾರು. ವಿದ್ಯಾರ್ಥಿಗಳು ಇಂದು ಹೆಚ್ಚು ನಂಬಿಕೊಂಡಿರೋದು ಈ ಕೋಚಿಂಗ್ ಕ್ಲಾಸ್‌ಗಳನ್ನೇ. ಶಾಲೆ ಕಾಲೇಜುಗಳೇನಿದ್ದರೂ ಕೇವಲ ಪರೀಕ್ಷೆ ಬರೆಯೋ ಸೆಂಟರ್‌ಗಳಾಗಿವೆ. ಈಗ ಎಲ್ಲರೂ ಮುಕ್ತವಾಗಿ, ಕೆಲಸ ಸಿಗಬೇಕು ಅಂದ್ರೆ ಡಿಗ್ರಿ ಮಾಡಿದ್ರೆ ಸಾಲಲ್ಲ, ಜಾಬ್ ಓರಿಯೆಂಟೆಡ್ ಕೋರ್ಸ್ ಮಾಡ ಬೇಕು ಅಂತಿದ್ದಾರೆ. ಇದರ ಅರ್ಥ ಏನು ಹಾಗಾದರೆ? ನಮ್ಮ ಶಾಲಾ ಕಾಲೇಜು ಗಳಲ್ಲಿ ಕೆಲಸ ಸಿಗೋಕೆ ಬೇಕಾದಂಥ ಶಿಕ್ಷಣ ಸಿಕ್ತಾ ಇಲ್ಲ ಅಂತ ತಾನೇ? ಇದು ಶಿಕ್ಷಣ ವ್ಯವಸ್ಥೆಯ ದೋಷ ತಾನೇ? ಸರಿ, ಜ್ಞಾನಾರ್ಜನೆಗಾಗಿ ಓದು ಬೇಕು, ಆದರೆ ಆ ಓದಿನಿಂದ ಬದುಕು ಕಟ್ಟಿಕೊಳ್ಳೋಕೂ ಸಾಧ್ಯ ಆಗಬೇಕು. ಜೀವನ ದಲ್ಲಿ ಎಂದೂ ಉಪಯೋಗಕ್ಕೆ ಬಾರದ ಪೈಥಾಗರಸ್ ಥೀರಂ, ಟ್ರಿಗ್ನಾಮೆಟ್ರಿಯಂಥ ವಿಷಯಗಳನ್ನು ಕಲಿಸೋದ್ರಿಂದ ವಿದ್ಯಾರ್ಥಿಗಳಿಗೆ ಯಾವ ಲಾಭ ಆಗುತ್ತಿದೆ ಅಂತ ಯೋಚಿಸಬೇಕಾದ ಸಮಯ ಇದು. ಕೆಲವು ಶಾಲೆ, ಕಾಲೇಜುಗಳಂತೂ ಕೇವಲ ನಾಮ್-ಕೇ-ವಾಸ್ತೇ ಆಗಿಬಿಟ್ಟಿವೆ. ನೀವು ನಂಬ್ತೀರೋ ಇಲ್ವೋ, ವಾರಕ್ಕೆ ಕೇವಲ ಎರಡು ದಿನ ಅಟೆಂಡ್ ಆದ್ರೆ ಸಾಕು, ಅಟೆಂಡೆನ್ಸ್ ಕೊಡ್ತೀವಿ, ಪರೀಕ್ಷೆ ಬರೆಯೋಕೆ ಅವಕಾಶ ಕೊಡ್ತೀವಿ ಅನ್ನೋ ಶಾಲೆಗಳೂ ಇವೆ ನಮ್ಮಲ್ಲಿ. ಅಲ್ಲಿ ಅಡ್ಮಿಟ್ ಆಗೋ ಮಕ್ಕಳು ನಿಜವಾದ ಕಲಿಕೆಗೆ ಕೋಚಿಂಗ್ ಸೆಂಟರ್‌ಗಳಿಗೆ ಹೋಗ್ತಾರೆ. ಅಲ್ಲಿಯೇ ಅವರ ವಾರವಿಡೀ ಓದು, ಬರಹ ನಡೆಯೋದು. ಈ ಶಾಲೆ ಕಾಲೇಜುಗಳೇನಿದ್ದರೂ ಕೇವಲ ಪರೀಕ್ಷೆ ಬರೆದು ಪಾಸಾಗೋಕೆ ಇರೋ ಜಾಗ ಅಷ್ಟೇ. ಒಟ್ಟಿನಲ್ಲಿ ಇಂದಿನ ವಿದ್ಯಾರ್ಥಿಗಳು, 'ಶಾಲೆ ಕಾಲೇಜಿನಾ ಮನೆ ತೊಳಿಯ, ಕೋಚಿಂಗ್ ಸೆಂಟರ್‌ಗಳೇ ಶಾಶ್ವತ ಗೆಳೆಯ' ಅಂತ 'ಗಾಳಿಪಟ 2' ಚಿತ್ರದ ಧಾಟಿಯಲ್ಲಿ ಹಾಡ್ತಾ ಇರೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಸಿವಿ ಎಂಬ ಕಾಲ್ಪನಿಕ ಸಾಹಿತ್ಯ

ಅತ್ಯುತ್ತಮ ಫಿಕ್ಷನಲ್ (ಕಾಲ್ಪನಿಕ) ಸಾಹಿತ್ಯ ಅಂದ್ರೆ ಒಬ್ಬರ ಬಯೋಡಾಟಾ ಅಥವಾ 'ಕರಿಕ್ಯುಲಂ ವಿಟೆ' ಅರ್ಥಾತ್ ಸಿವಿ ಎಂಬುದು ವಕ್ರತುಂಡೋಕ್ತಿಯಷ್ಟೇ ಅಲ್ಲ, ವಾಸ್ತವ ಕೂಡ. ಬಯೋಡಾಟಾದಂಥ ಜೋಕ್ ಇನ್ನೊಂದಿಲ್ಲ. ಒಬ್ಬ ವ್ಯಕ್ತಿಗೆ ತನ್ನನ್ನು ಅಧಿಕೃತವಾಗಿ ಬಣ್ಣಿಸಿಕೊಳ್ಳುವ ಅವಕಾಶ ಬಯೋಡಾಟಾದಲ್ಲಿ ಸಿಗುವಷ್ಟು ಮತ್ತೆಲ್ಲೂ ಸಿಗುವುದಿಲ್ಲ. ಯಾರಾದರೂ ತಮ್ಮ ಬಯೋಡಾಟಾದಲ್ಲೂ ತನ್ನನ್ನು ಹೊಗಳಿಕೊಂಡಿಲ್ಲ ಅಂದ್ರೆ, ಆತನಲ್ಲಿ ಏನೋ ದೋಷವಿದೆಯೆಂದೇ ಅರ್ಥ. ಬಯೋಡಾಟಾ ಅಂದ್ರೆ, ನಾವು ಇರುವುದಕ್ಕಿಂತ ಹೆಚ್ಚಾಗಿ ಹಿಗ್ಗಿಸಿಕೊಳ್ಳುವ, ನಾವೇ ನೆಡುವ ಜಾಹೀರಾತು ಫಲಕ. ಯಾರು ಸಹ ತಮ್ಮ ಬಯೋಡಾಟಾದಲ್ಲಿ ಬರೆದುಕೊಂಡ ಹಾಗೆ ಇರುವುದಿಲ್ಲ. ಒಂದೇ ವೇಳೆ ಹಾಗಿದ್ದರೆ ಅದು ನಿಜಕ್ಕೂ ಅಚ್ಚರಿಯೇ. ಒಬ್ಬ ವ್ಯಕ್ತಿಗೆ ತನ್ನ ಬಗ್ಗೆ ಅತಿಯಾಗಿ ಸುಳ್ಳು ಬರೆದುಕೊಳ್ಳುವ ಅವಕಾಶ ಸಿಗುವುದೂ ಬಯೋಡಾಟಾದಲ್ಲೇ. ಯಾರೂ ಸಹ ತಮ್ಮ ಬಯೋಡಾಟಾದಲ್ಲಿ ಬರೆದುಕೊಂಡಷ್ಟು ಉತ್ತಮರಾಗಿರುವುದಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಬಯೋಡಾಟಾದಲ್ಲಿ ಬರೆದುಕೊಂಡಿದ್ದು ಸರಿಯೋ, ತಪ್ಪೋ ಎಂದು ಪರೀಕ್ಷಿಸುವುದು ಹೇಗೆ? ಅದಕ್ಕಾದರೂ ಉದ್ಯೋಗ ಕೊಡಲೇಬೇಕಲ್ಲ. ಯಾರು ಬೇಕಾದರೂ ಒಳ್ಳೆಯ ಬಯೋಡಾಟಾ ಬರೆದುಕೊಳ್ಳಬಲ್ಲರು. ಈಗಂತೂ ಗೂಗಲ್ ಮಾಡಿದರೆ ಹತ್ತಾರು ಸಿದ್ಧ ಮಾದರಿಗಳು ಸಿಗುತ್ತವೆ. ನಮಗೆ ಸೂಕ್ತವಾಗುವ ಮಾದರಿಯನ್ನು ಆಯ್ದುಕೊಂಡು ಬಯೋಡಾಟಾ ಸಿದ್ಧಪಡಿಸಬಹುದು. ಹೀಗಾಗಿ ಎಲ್ಲರ ಬಯೋಡಾಟಾಗಳ ಕನಿಷ್ಠ ಕಾಲುಭಾಗವಾದರೂ ಕಾಪಿ ಪೇಸ್ಟ್! ಬಹುತೇಕರ ಬಯೋಡಾಟಾ ನೋಡಿದರೆ, ಅವರು ಉದ್ಯೋಗ ಗಿಟ್ಟಿಸಿಕೊಳ್ಳಲು ಆಸಕ್ತರಾಗಿದ್ದಾರೆ ಎನ್ನುವುದಕ್ಕಿಂತ, ಅವರೆಷ್ಟು ಹತಾಶರಾಗಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಕಾರಣ ಒಬ್ಬ ಅಭ್ಯರ್ಥಿ ತನ್ನ ಬಯೋಡಾಟಾವನ್ನು ಏಕಕಾಲಕ್ಕೆ ಅರವತ್ತು-ಎಪ್ಪತ್ತು ಸಂಸ್ಥೆಗಳಿಗೆ ಕಳಿಸಿಕೊಡುತ್ತಾನೆ. ದುರ್ದೈವವೆಂದರೆ, ಅನೇಕರು ಈ ಬಯೋಡಾಟಾ ಸಲ್ಲಿಸಿಯೇ ಆಯ್ಕೆಯಾಗುತ್ತಾರೆ. ಅದರಲ್ಲಿ ಬರೆದಿರುವುದು ಸುಳ್ಳಾಗಿದ್ದರೂ, ಅದೇ ನಿಜವೆಂದು ಭಾವಿಸಿ ಆಯ್ಕೆ ಮಾಡುತ್ತಾರೆ. ಯಾರೇ ಆಗಲಿ ಅರ್ಜಿ ಸಲ್ಲಿಸುವಾಗ ಬಯೋಡಾಟಾವನ್ನು ಸಲ್ಲಿಸಲು ಮರೆಯುವುದಿಲ್ಲ. ಅಷ್ಟಕ್ಕೂ ನೌಕರಿಗೆ ಅರ್ಜಿ ಸಲ್ಲಿಸುವುದೆಂದರೆ, ಬಯೋಡಾಟಾವನ್ನು ಸಲ್ಲಿಸುವುದೇ ಆಗಿದೆ. ಒಬ್ಬ ಅಭ್ಯರ್ಥಿ ಒಳ್ಳೆಯವನೆಂದು ಹೇಳುವಾಗ, 'ಆತನ ಬಯೋಡಾಟಾ ಇಂಪ್ರೆಸ್ಸಿವ್ ಆಗಿದೆ' ಎಂದು ಹೇಳುವುದನ್ನು ಕೇಳಿರಬಹುದು. ಸಂದರ್ಶನಕ್ಕೆ ಕರೆಯುವಾಗಲೂ ಬಯೋಡಾಟಾವೇ ಮೂಲ ಪ್ರೇರಣೆ. ಯಾರ ಸಿವಿ ಚೆನ್ನಾಗಿದೆಯೋ ಅವರಿಗೆ ಸಂದರ್ಶನಕ್ಕೆ ಕರೆ ಹೋಗುತ್ತದೆ. ಒಬ್ಬನ ಆಕರ್ಷಕ ಬಯೋಡಾಟಾ ನೋಡಿ, ಉದ್ಯೋಗಕ್ಕೆ ಆಯ್ಕೆ ಮಾಡುವುದೆಂದರೆ, ಪ್ಯಾಕೆಟ್ ನೋಡಿ ಸಾಮಾನುಗಳನ್ನು ಖರೀದಿಸಿದಂತೆ. ಯಾರೂ ತಾವು ಬಯೋಡಾಟಾದಲ್ಲಿ ಫೇಲ್ ಆಗಿದ್ದೇನೆಂದು ಹೇಳುವುದಿಲ್ಲ. ಎಲ್ಲರೂ ತಾವು ಒಳ್ಳೆಯ ಟೀಮ್ ಲೀಡರ್ ಎಂದೂ, ಎಂಥ ಸಂಕಷ್ಟ ವಾತಾವರಣದಲ್ಲೂ ನಾಯಕತ್ವ ಗುಣ ಮೆರೆಯುವುದಾಗಿಯೂ ಬಯೋಡಾಟಾದಲ್ಲಿ ಬರೆದುಕೊಂಡಿರುತ್ತಾರೆ. ಪತ್ರಕರ್ತರ ನೌಕರಿ ಅಪೇಕ್ಷಿಸಿ ಯಾರಾದರೂ, ಬಯೋಡಾಟಾ ಸಲ್ಲಿಸಿದರೆ, ನಾನು ಅದನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ಅದರ ಬದಲು, ಅವರು ಈಗಾಗಲೇ ಬರೆದ ಪ್ರಕಟಿತ ಲೇಖನಗಳ ಸಂಗ್ರಹವನ್ನು ಕೊಡುವಂತೆ ಹೇಳುತ್ತೇನೆ. ಕಾರಣ ಅದೇ ನಿಜವಾದ ಬಯೋಡಾಟಾ. ಒಳ್ಳೆಯ ಬಯೋಡಾಟಾ ಬರೆದವರು ಒಳ್ಳೆಯ ಲೇಖನ ಬರೆಯುತ್ತಾರೆ ಎಂದೇನೂ ಇಲ್ಲವಲ್ಲ.

ಧನ್ಯವಾದಗಳು ನಿರ್ಮಲಾ ಮೇಡಂ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಸಾಮಾನ್ಯವಾಗಿ ಕುಟುಂಬ ನಿರ್ವಹಣೆಯಲ್ಲಿ ಹೆಣ್ಣು ಮಕ್ಕಳ ಪಾತ್ರ ದೊಡ್ಡದಿರುತ್ತದೆ, ಅಮ್ಮಂದಿರಾಗಲಿ ಅಥವಾ ಹೆಂಡತಿಯಾಗಲಿ ಕುಟುಂಬ ನಿರ್ವಹಣೆಯಲ್ಲಿ ಗಂಡಸರನ್ನು ಮೀರಿಸುತ್ತಾರೆ. ಮನೆಯ ಆರ್ಥಿಕ ನಿರ್ವಹಣೆಯಲ್ಲಿ ಹೆಣ್ಣಿನ ಪಾತ್ರ ಹೇಳಲು ಸಾಧ್ಯವಿಲ್ಲ, ಅಮ್ಮಂದಿರು ಮನೆಯ ಆದಾಯ ಮತ್ತು ವೆಚ್ಚವನ್ನು ಸರಿಯಾಗಿ ನಿಭಾಯಿಸಿ ಅಲ್ಪ ಸ್ವಲ್ಪ ಉಳಿತಾಯವನ್ನೂ ಮಾಡಿರುತ್ತಾರೆ. ಭಾರತದ ಇತಿಹಾಸವನ್ನು ಗಮನಿಸಿದರೆ ಇತರೆ ದೇಶಗಳಿಗಿಂತಲೂ ಉಳಿತಾಯ ನಮ್ಮಲ್ಲೇ ಹೆಚ್ಚು, ಮನೆಯಲ್ಲಿ ಆರ್ಥಿಕ ಸಂಕಷ್ಟ ಒದಗಿಬಂದರೆ ಮನೆಯಲ್ಲಿರುವವರಿಗೆ ತೊಂದರೆಯಾಗದ ರೀತಿಯಲ್ಲಿ ನಿಭಾಯಿಸಿಕೊಂಡು ಹೋಗುವ ಸಾಮರ್ಥ್ಯ ಸಾಮಾನ್ಯವಾಗಿ ಹೆಂಗಸರಿಗೆ ಹೆಚ್ಚಿರುತ್ತದೆ. ಭಾರತ ದೇಶ ಒಂದು ಕುಟುಂಬವಿದ್ದಂತೆ ಸಾಮಾನ್ಯ ಕುಟುಂಬದಲ್ಲಿ ಸಮಸ್ಯೆಗಳು ಇದ್ದಂತೆ ಭಾರತದಲ್ಲೂ ಸಮಸ್ಯೆಗಳಿವೆ, ಕುಟುಂಬ ನಿರ್ವಹಿಸುವ ಮಾದರಿಯಲ್ಲಿ ದೇಶವನ್ನೂ ನಿರ್ವಹಿಸಬೇಕಾಗುತ್ತದೆ. ಕುಟುಂಬದಲ್ಲಿ ಬಂದೊದಗುವ ಆರ್ಥಿಕ ಸಮಸ್ಯೆಗಳ ಮಾದರಿಯಲ್ಲಿ ದೇಶದಲ್ಲಿಯೂ ಆರ್ಥಿಕ ಸಂಕಷ್ಟಗಳು ಎದುರಾಗುತ್ತವೆ, ಕಳೆದ ಹತ್ತು ವರ್ಷಗಳಲ್ಲಿ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ದೊಡ್ಡಮಟ್ಟದ ಬದಲಾವಣೆಯಾಗಿದೆ. ವಿತ್ತ ಸಚಿವ ಅರುಣ್ ಜೇಟ್ಲಿ ಅವರ ನಿಧನದ ನಂತರ ಭಾರತದ ಆರ್ಥಿಕತೆಯ ಜವಾಬ್ದಾರಿಯನ್ನು ಹೊತ್ತ ಹೆಣ್ಣು ನಿರ್ಮಲಾ ಸೀತಾರಾಮನ್ ಅವರು ವಿತ್ತ ಸಚಿವೆಯಾದ ನಂತರ ಭಾರತ ಕರೋನಾ ಎಂಬ ಮಹಾಮಾರಿಯನ್ನು ಎದುರಿಸಬೇಕಾಯಿತು, ಜಗತ್ತಿನ ಆರ್ಥಿಕತೆ ತಿಂಗಳುಗಟ್ಟಲೆ ಸ್ತಬ್ಧವಾಗಿತ್ತು. ಭಾರತದ ಆರ್ಥಿಕತೆಯ ಮೇಲೂ ಕರೋನ ದೊಡ್ಡ ಪ್ರಭಾವ ಬೀರಿತ್ತು, ಕರೋನಾ ಹೊಡೆತದಿಂದ ತತ್ತರಿಸಿದ ಅನೇಕ ದೇಶಗಳು ಇಂದಿಗೂ ಆರ್ಥಿಕ ಸಂಕಷ್ಟದಿಂದ ಹೊರಬಂದಿಲ್ಲ. ಜಗತ್ತಿನ ದೊಡ್ಡಣ್ಣ ಅಮೆರಿಕ ದೇಶ ತನ್ನ ಆರ್ಥಿಕ ಸಂಕಷ್ಟದಿಂದ ಹೊರಬರಲು ಸಾಧ್ಯವಾಗಿಲ್ಲ. ಇಂತಹ ಸಮಯದಲ್ಲಿ ಭಾರತದ ಆರ್ಥಿಕತೆಯನ್ನು ಮುಂದಕ್ಕೆ ತೆಗೆದುಕೊಂಡು ಹೋಗಬೇಕಾದಂತಹ ಸವಾಲು ನಿರ್ಮಲಾ ಸೀತಾರಾಮನ್ ಅವರ ಮೇಲಿತ್ತು. 2024 ರ ಬಜೆಟ್ ಮಂಡಿಸಿದ ನಂತರ ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವಿತ್ತ ಸಚಿವೆಯನ್ನು ಟೀಕಿಸುವ ಹಲವು ವಿಷಯಗಳು ಚರ್ಚೆಯಾಗುತ್ತಿವೆ. ಅದರಲ್ಲೂ ಆದಾಯ ತೆರಿಗೆಯ ಕೆಲವು ವಿಷಯಗಳನ್ನು ಮುಂದಿಟ್ಟುಕೊಂಡು ಚರ್ಚೆಗಳು ಶುರುವಾಗಿವೆ.

2014 ರಲ್ಲಿ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ತಿಂಗಳಿಗೆ 22,000 ಸಂಬಳ ಪಡೆಯುವ ವ್ಯಕ್ತಿಯೂ ಆದಾಯ ತೆರಿಗೆ ಕಟ್ಟಬೇಕಿತ್ತು, ಆದರೆ ಇಂದು ತಿಂಗಳಿಗೆ 60,000 ಸಂಬಳ ಪಡೆಯುವವರು ಒಂದು ರುಪಾಯಿ ಆದಾಯ ತೆರಿಗೆ ಕಟ್ಟಬೇಕಿಲ್ಲ. ಆದಾಯ ತೆರಿಗೆಯ ಮಿತಿಯನ್ನು ಮೂರು ಪಟ್ಟು ಹೆಚ್ಚಿಸಿರುವ ನಿರ್ಮಲಾ ಸೀತಾರಾಮನ್ ಹೇಗೆ ಮಧ್ಯಮ ವರ್ಗದ ವಿರೋಧಿಯಾಗುತ್ತಾರೆ? ಜಿಎಸ್‌ಟಿ ಜಾರಿಯಾಗುವ ಮೊದಲು ದೇಶದಲ್ಲಿ ನಾವು ದಿನನಿತ್ಯ ಬಳಸುವ ವಸ್ತುಗಳ ಮೇಲೆ Excise Duty, Sales Tax, VAT, Entry Tax, Service Tax, Entertainment Tax, Luxury Tax ಹೀಗೆ ಹಲವು ರೀತಿಯ ತೆರಿಗೆಗಳನ್ನು ಹೇರಲಾಗುತ್ತಿತ್ತು. ಅದೆಲ್ಲವನ್ನೂ ಮರೆತು ಕೇವಲ ಜಿಎಸ್‌ಟಿ ಬಂದ ನಂತರವಷ್ಟೇ ದೇಶದಲ್ಲಿ ತೆರಿಗೆ ಪದ್ಧತಿ ಜಾರಿಗೆ ಬಂದಂತೆ ವರ್ತಿಸುವುದು ಎಷ್ಟರ ಮಟ್ಟಿಗೆ ಸರಿ? ಅಂದಹಾಗೆ ಜಿಎಸ್‌ಟಿ ತೆರಿಗೆ ಏರಿಕೆ ಮತ್ತು ಇಳಿಕೆ ಕೇಂದ್ರ ಸರಕಾರದ ಅಧೀನದಲ್ಲಿ ಬರುವುದಿಲ್ಲ ಅಥವಾ ಬಜೆಟಿನಲ್ಲಿ ಬರುವುದಿಲ್ಲ, ಪ್ರತಿಯೊಂದು ರಾಜ್ಯದ ಪ್ರತಿನಿಧಿಗಳ ಸಭೆಯಲ್ಲಿ ತೀರ್ಮಾನವಾಗುವ ವಿಷಯ ಜಿಎಸ್‌ಟಿ, ರಾಜ್ಯ ಸರಕಾರದ ಪ್ರತಿನಿಧಿಗಳ ಒಮ್ಮತದ ನಂತರವಷ್ಟೇ ವಸ್ತುಗಳ ಮೇಲೆ ಜಿಎಸ್‌ಟಿ ಏರಿಕೆ ಮತ್ತು ಇಳಿಕೆ ನಿರ್ಧಾರವಾಗುತ್ತದೆ.

2004 ರಿಂದ 2014 ರ ವರೆಗೆ ಆಡಳಿತ ನಡೆಸಿದ್ದ ಕಾಂಗ್ರೆಸ್ ಪಕ್ಷ ಭಾರತದ ಬ್ಯಾಂಕಿಂಗ್ ವಲಯವನ್ನು ದಿವಾಳಿಯ ಅಂಚಿಗೆ ತೆಗೆದುಕೊಂಡು ಹೋಗಿತ್ತು. ಒಂದು ದೂರವಾಣಿ ಕರೆಯ ಮೂಲಕ ಕಾರ್ಪೊರೇಟ್ ಕುಳಗಳಿಗೆ ಸಾವಿರಾರು ಕೋಟಿ ಸಾಲ ನೀಡಲಾಗುತ್ತಿತ್ತು, ವಿಜಯ್ ಮಲ್ಯನಂತಹ ನೂರಾರು ಜನರಿಗೆ ಚಿದಂಬರಂ ಕಾಲದಲ್ಲಿ ಲಕ್ಷಾಂತರ ಕೋಟಿ ಸಾಲ ನೀಡಲಾಗಿತ್ತು. ನಿರ್ಮಲಾ ಸೀತಾರಾಮನ್ ವಿತ್ತ ಸಚಿವೆಯಾದ ನಂತರ ಬ್ಯಾಂಕಿಂಗ್ ವಲಯದಲ್ಲಿ ತಂದಂತಹ ನೀತಿಗಳ ಪರಿಣಾಮ ಬ್ಯಾಂಕುಗಳು ದೀವಾಳಿಯಾಗುವುದು ತಪ್ಪಿತು. ಬ್ಯಾಂಕುಗಳಿಗೆ ಸರಕಾರದಿಂದ ಹೂಡಿಕೆ ಮಾಡಿ, ಹಲವು ಬ್ಯಾಂಕುಗಳನ್ನು ವಿಲೀನಗೊಳಿಸಿ ಬ್ಯಾಂಕುಗಳು ದಿವಾಳಿಯಾಗುವುದನ್ನು ತಪ್ಪಿಸಿ ಮಧ್ಯಮ ವರ್ಗ ಮತ್ತು ಬಡವರ ಠೇವಣಿಯನ್ನು ಉಳಿಸಲಾಗಿತ್ತು. ದಿವಾಳಿಯಾಗಿರುವ ಬ್ಯಾಂಕಿನಲ್ಲಿರುವ ಠೇವಣಿ ಹಣವನ್ನು ರಕ್ಷಿಸಲು ಸರಕಾರದ ವತಿಯಿಂದ ವಿಮೆ ಮಾಡಿಸುವ ಯೋಜನೆಯ ಹಿಂದಿನ ಕೈ ಕೂಡ ನಿರ್ಮಲ ಸೀತಾರಾಮನ್ ಮತ್ತು ಅವರ ತಂಡ.

1947 ರಿಂದ 1991 ರ ವರೆಗೆ ಅತೀ ಹೆಚ್ಚು ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷ ಭಾರತದ ಆರ್ಥಿಕತೆಯನ್ನು ಪಾತಾಳಕ್ಕೆ ತಳ್ಳಿತ್ತು. ಪರಿಣಾಮ 1991 ರಲ್ಲಿ ರಿಸರ್ವ್ ಬ್ಯಾಂಕ್ ಬಳಿ ಇದ್ದಂತಹ ಚಿನ್ನವನ್ನು ಲಂಡನ್ನಿನ ಬ್ಯಾಂಕಿನಲ್ಲಿ ಅಡವಿಟ್ಟು ಸಾಲ ತಂದು ದೇಶ ನಡೆಸಲಾಗಿತ್ತು. 2004 ರಿಂದ 2014 ರ ನಡುವೆ ಆಡಳಿತ ನಡೆಸಿದ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ನೇತೃತ್ವದ ಕಾಂಗ್ರೆಸ್ ಸರಕಾರ ಭಾರತದ ಆರ್ಥಿಕತೆಯನ್ನು ಜಗತ್ತಿನ ಐದು ದುರ್ಬಲ ಆರ್ಥಿಕತೆಗೆ ತಳ್ಳಿತ್ತು. ಮೋದಿಯವರು ಪ್ರಧಾನಿಯಾದ ಬಳಿಕ ಇಂದು ಭಾರತ ಜಗತ್ತಿನ ಮುಂದುವರೆಯುತ್ತಿರುವ ದೇಶಗಳ ಆರ್ಥಿಕತೆಯಲ್ಲಿ ಐದನೇ ಸ್ಥಾನದಲ್ಲಿದೆ. ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಸುಧಾರಿತ ಆರ್ಥಿಕ ನೀತಿಯ ಪರಿಣಾಮ ಇಂದು ಭಾರತದ ಆರ್ಥಿಕತೆ ನಾಲ್ಕು ಟ್ರಿಲಿಯನ್ ಹತ್ತಿರಕ್ಕೆ ತಲುಪುತ್ತಿದೆ. 2027 ರ ವೇಳೆಗೆ ಜಗತ್ತಿನ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಿ ಭಾರತ ಹೊರಹೊಮ್ಮಲಿದೆ.

ಕರೋನಾ ಸಮಯದಲ್ಲಿ ಇಡೀ ದೇಶದ ಆರ್ಥಿಕತೆ ಸ್ತಬ್ಧವಾಗಿತ್ತು. ಜಗತ್ತಿನ ಅನೇಕ ದೇಶಗಳ ಕಾರ್ಖಾನೆಗಳು ಮುಚ್ಚಲ್ಪಟ್ಟವು. ಲಾಕ್ ಡೌನ್ ಪರಿಣಾಮ ಸರಕಾರಕ್ಕೆ ಆದಾಯವಿರಲಿಲ್ಲ. ಆದರೆ ಕುಟುಂಬ ನಡೆಸುವಂತೆ ಕಷ್ಟದ ಸಮಯದಲ್ಲಿ ದೇಶದ ಜನರನ್ನು ನೋಡಿಕೊಳ್ಳುವ ದೊಡ್ಡ ಜವಾಬ್ದಾರಿ ಮೋದಿ ಮತ್ತು ನಿರ್ಮಲ ಸೀತಾರಾಮನ್ ಅವರ ಮೇಲಿತ್ತು. ಇಂಗ್ಲೆಂಡಿನ ಪ್ರಧಾನಮಂತ್ರಿ ದೇಶದ ಆರ್ಥಿಕತೆಯನ್ನು ಸರಿದೂಗಿಸುವಲ್ಲಿ ವಿಫಲರಾಗಿ 2022 ರ ಅಕ್ಟೋಬರ್ ತಿಂಗಳಲ್ಲಿ ರಾಜೀನಾಮೆ ನೀಡಿದ್ದರು. 140 ಕೋಟಿ ಜನಸಂಖ್ಯೆಯ ಭಾರತೀಯರನ್ನು ನಿರ್ವಹಿಸುವ ಹೊಣೆಗಾರಿಕೆ ನಿರ್ಮಲಾ ಸೀತಾರಾಮನ್ ಮೇಲಿತ್ತು. ಧೃತಿಗೆಡದೆ ಕರೋನಾ ಸಂಕಷ್ಟದ ಕಾಲದಲ್ಲಿ ಹಲವು ಆರ್ಥಿಕ ಯೋಜನೆಗಳ ಮೂಲಕ ಕೈಗಾರಿಕೆಗಳ ಕೈ ಹಿಡಿಯುವಲ್ಲಿ ಅವರು ಯಶಸ್ವಿಯಾದರು. ಕರೋನಾ ಸಂದರ್ಭದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಬೇಕಿದ್ದಂತಹ ಹಣದ ಸಹಾಯವನ್ನು ಹಲವು ಯೋಜನೆಗಳ ಮೂಲಕ ಕೇಂದ್ರ ಸರಕಾರದಿಂದ ನೀಡಲಾಯಿತು.ಪರಿಣಾಮ ಅನೇಕ ಸಣ್ಣ ಮತ್ತು ಮಧ್ಯಮ ಕಾರ್ಖಾನೆಗಳು ಬಾಗಿಲು ಹಾಕುವುದನ್ನು ತಪ್ಪಿಸಲಾಯಿತು. ಬಹುತೇಕರಿಗೆ ತಮಗೆ ಸಂಬಳ ನೀಡುತ್ತಿರುವ ಅನೇಕ ಕಂಪನಿಗಳು ಕರೋನಾ ಸಂದರ್ಭದಲ್ಲಿ ಕೇಂದ್ರದ ಯೋಜನಗಳ ಪರಿಣಾಮದಿಂದಾಗಿ ಉಳಿದಿವೆಯೆಂಬುದೇ ತಿಳಿದಿರಲಿಕ್ಕಿಲ್ಲ. ಮತ್ತೊಂದು ವಿಷಯ, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಲೇ ಇದೆ. ವಿದೇಶಿ ಬಂಡವಾಳಶಾಹಿಗಳು, ಸಣ್ಣ ಹೂಡಿಕೆದಾರರು, ಬ್ಯಾಂಕುಗಳು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಕಳೆದ ಹತ್ತು ವರ್ಷಗಳಲ್ಲಿ ಕೋಟ್ಯಂತರ ರುಪಾಯಿ ಲಾಭ ಮಾಡಿವೆ. ಇಂದು ಮುಂಬೈ ಷೇರು ಸೂಚ್ಯಂಕ 80,000 ದ ಗಡಿ ದಾಟಿ ಮುನ್ನಡೆಯುತ್ತಿದೆ. ನಿರ್ಮಲಾ ಸೀತಾರಾಮನ್ ಅವರ ಆರ್ಥಿಕ ನೀತಿಗಳ ಮೇಲೆ ಭರವಸೆ ಇಟ್ಟಂತಹವರು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಅವರ ಆರ್ಥಿಕ ನೀತಿಗಳ ಪರಿಣಾಮ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಲಾಭ ಮಾಡಿದ ಲಕ್ಷಾಂತರ ಜನರಿದ್ದಾರೆ. ಆದರೆ 2024 ರ ಬಜೆಟಿನಲ್ಲಿ ಷೇರುಗಳ ಮಾರಾಟದಿಂದ ಬಂದಂತಹ ಲಾಭದ ಮೇಲೆ ಶೇ.5 ತೆರಿಗೆ ಏರಿಸಿದ್ದರ ಬಗ್ಗೆ ಮಾತ್ರ ಚರ್ಚೆಯಾಗುತ್ತಿದೆ. 'ಇಂಡಿ' ಒಕ್ಕೂಟದ ದೊಡ್ಡ ದೊಡ್ಡ ನಾಯಕರು ಷೇರು ಮಾರುಕಟ್ಟೆಯಿಂದ ಕೋಟ್ಯಂತರ ರುಪಾಯಿ ಲಾಭ ಗಳಿಸಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ಮೋದಿಯವರ ಅವಧಿಯಲ್ಲಿ ಷೇರು ಮಾರುಕಟ್ಟೆಯಲ್ಲಿ ಕೋಟ್ಯಂತರ ರುಪಾಯಿ ಲಾಭ ಮಾಡಿದ್ದಾರೆ. ಭಾರತದ ಆರ್ಥಿಕ ನೀತಿಗಳು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿರುವ ಪರಿಣಾಮ ಷೇರು ಮಾರುಕಟ್ಟೆಯಲ್ಲಿ ಉತ್ತಮ ಹೂಡಿಕೆಯಾಗುತ್ತಿದೆ. ಚುನಾವಣಾ ಫಲಿತಾಂಶದ ದಿನ 'ಇಂಡಿ' ಒಕ್ಕೂಟ ಅಧಿಕಾರಕ್ಕೆ ಬರಬಹುದೆಂಬ ಭಯದಿಂದ ಷೇರು ಮಾರುಕಟ್ಟೆಯಲ್ಲಿ ತಲ್ಲಣವಾಯಿತೆಂದರೆ, ಬಂಡವಾಳ ಹೂಡುವವರಿಗೆ ಕಾಂಗ್ರೆಸ್ಸಿನ ರಾಹುಲ್ ಗಾಂಧಿಯ ಮೇಲೆ ನಂಬಿಕೆ ಇಲ್ಲವೆಂಬುದು ಸ್ಪಷ್ಟವಾಯಿತಲ್ಲವೇ?

ಕರೋನ ಸಮಯದಲ್ಲಿ ಸರಕಾರಕ್ಕೆ ಆದಾಯ ಇಲ್ಲದಿದ್ದರೂ ಸಹ ಬಡವರ ಹಸಿವು ನೀಗಿಸಲು ಸುಮಾರು 80 ಕೋಟಿ ಜನರಿಗೆ ಉಚಿತ ಪಡಿತರ ನೀಡಲು ಸಾಧ್ಯವಾದದ್ದು ನಿರ್ಮಲಾ ಸೀತಾರಾಮನ್ ಅವರ ಹಣಕಾಸು ನಿರ್ವಹಣೆ. ಸತತವಾಗಿ ಪ್ರತಿ ವರ್ಷವೂ ರೈತರಿಗೆ ರಸಗೊಬ್ಬರದ ಮೇಲಿನ ಸಬ್ಸಿಡಿಯನ್ನು ಬಜೆಟಿನಲ್ಲಿ ನೀಡಲಾಗುತ್ತಿದೆ. ಒಂದು ಕಾಲದಲ್ಲಿ ಕರ್ನಾಟಕದಲ್ಲಿ ರಸಗೊಬ್ಬರದ ಕೊರತೆಯಿಂದ ಗೋಲಿಬಾರ್ ಆಗಿತ್ತು, ಆದರೆ ಇಂದು ದೇಶದಲ್ಲಿ ರಸಗೊಬ್ಬರದ ಕೊರತೆ ಇಲ್ಲದಂತಾಗಿದೆ. ವಿತ್ತ ಸಚಿವರ ಆರ್ಥಿಕ ಯೋಜನೆಗಳ ಪರಿಣಾಮ ರೈತರಿಗೆ ಸಿಗಬೇಕಿರುವ ರಸಗೊಬ್ಬರ ಮತ್ತು ಅದರ ಮೇಲಿನ ಪ್ರೋತ್ಸಾಹ ಧನ ಸರಿಯಾದ ಸಮಯಕ್ಕೆ ಸಿಗುತ್ತಿದೆ. ಬಜೆಟಿನಲ್ಲಿ ಆಂಧ್ರ ಪ್ರದೇಶ ಮತ್ತು ಬಿಹಾರಕ್ಕೆ ನೀಡಿದ ಅನುದಾನಗಳ ಬಗ್ಗೆ ಉಲ್ಲೇಖ ಮಾಡಿದ್ದಕ್ಕಾಗಿ, ಇದು ಖುರ್ಚಿ ಉಳಿಸಿಕೊಳ್ಳುವ ಬಜೆಟ್ ಎಂದು ಅಣಕಿಸುವ ಕಾಂಗ್ರೆಸ್ಸಿನ 'ಜೈರಾಮ್ ರಮೇಶ್' ಚುನಾವಣಾ ಫಲಿತಾಂಶದ ದಿನ ಆಂಧ್ರ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡುವುದಾಗಿ ಹೇಳಿದ್ದರು. ಇಂತಹವರು ಕೇಂದ್ರ ಬಜೆಟಿನ ಬಗ್ಗೆ ಮಾತನಾಡುವ ನೈತಿಕತೆಯನ್ನೇ ಉಳಿಸಿಕೊಂಡಿಲ್ಲ.

ಜಗತ್ತಿನ ಮುಂದುವರೆದ ದೇಶಗಳ ಸಾಲ ಅಲ್ಲಿನ 'ಜಿಡಿಪಿ'ಗಿಂತಲೂ ಹೆಚ್ಚಿದೆ, ಅಂದರೆ ಅಲ್ಲಿನ ಆದಾಯಕ್ಕಿಂತಲೂ ಸಾಲದ ಪ್ರಮಾಣ ಹೆಚ್ಚಿದೆ. ಅಮೆರಿಕದ ಸಾಲ ಅಲ್ಲಿನ ಜಿಡಿಪಿಯ ಶೇಕಡಾ 123 ರಷ್ಟಿದೆ, ಜಪಾನ್‌ನ ಸಾಲ ಅಲ್ಲಿನ ಜಿಡಿಪಿಯ ಶೇಕಡಾ 263 ರಷ್ಟಿದೆ ಆದರೆ ಭಾರತದ ಸಾಲ ಜಿಡಿಪಿಯ ಶೇಕಡಾ 18 ರಷ್ಟಿದೆ. ನಿರ್ಮಲಾ ಸೀತಾರಾಮನ್ ಶಿಸ್ತಿನ ಆರ್ಥಿಕ ನೀತಿಗಳ ಮೂಲಕ ದೇಶದ ಸಾಲದ ಪ್ರಮಾಣವನ್ನು ನಿರ್ವಹಣೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಪಕ್ಕದ ಪಾಕಿಸ್ತಾನ ದಿವಾಳಿ ಹಂತಕ್ಕೆ ತಲುಪಿದೆ, ಅಮೆರಿಕ ಮತ್ತು ಚೀನಾ ದೇಶದ ಬಳಿ ಭಿಕ್ಷೆ ಬೇಡುತ್ತಿದೆ. ಅತ್ತ ಶ್ರೀಲಂಕಾ ದಿವಾಳಿಯಾಗುವತ್ತ ಸಾಗಿತ್ತು, ಚೀನಾದಿಂದ ಸಾಲ ಪಡೆದು ದೇಶ ನಡೆಸುತ್ತಿದೆ. ಮಾತುಮಾತಿಗೂ ಭಾರತದ ಸಾಲ ಹೆಚ್ಚಾಗಿದೆ ಎಂಬ ಮಾತುಗಳನ್ನಾಡುವವರು ಜಗತ್ತಿನ ಇತರ ದೇಶಗಳೊಂದಿಗೆ ತಾಳೆ ಮಾಡಿ ನೋಡಬೇಕು, ಬಾಂಗ್ಲಾದೇಶದ ಜಿಡಿಪಿಯನ್ನು ಭಾರತದ ಹೋಲಿಸಿ ಮಾತನಾಡುವವರು ಮುಂದುವರೆದ ದೇಶಗಳ ಸಾಲದ ಮಿತಿಯನ್ನು ಭಾರತದ ಸಾಲಕ್ಕೆ ತಾಳೆ ಮಾಡಿ ಮಾತನಾಡಬೇಕು. ಬಜೆಟಿನಲ್ಲಿ ಆದಾಯ ತೆರಿಗೆಯಲ್ಲಿ ತಂದಂತಹ ಕೆಲವೊಂದು ಬದಲಾವಣೆಗಳನ್ನು ಮುಂದಿಟ್ಟುಕೊಂಡು ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ಅವರ ಕಳೆದ ಐದು ವರ್ಷಗಳ ಉತ್ತಮ ಆರ್ಥಿಕ ನಿರ್ವಹಣೆಯನ್ನು ಮರೆಯಬಾರದು. ಕರೋನ ಸಂಕಷ್ಟದಲ್ಲಿ ದೇಶದ ಆರ್ಥಿಕತೆಯನ್ನು ಒಂದು ಕುಟುಂಬದ ಸಂಕಷ್ಟದ ಸಮಯದಲ್ಲಿ ನಿರ್ವಹಿಸುವ ರೀತಿಯಲ್ಲಿ ಕೈಗಾರಿಕೋದ್ಯಮಿಗಳು, ಮಹಿಳೆಯರು, ಮಕ್ಕಳು, ಯುವಕರು, ರೈತರು, ಬಡವರು, ಹಿರಿಯರ ಕಷ್ಟಗಳಿಗೆ ಮೇಡಂ ಸ್ಪಂದಿಸಿದ್ದಾರೆ. ಜಾಗತಿಕ ಮಟ್ಟದಲ್ಲಿ ಭಾರತದ ಆರ್ಥಿಕತೆ ಐದನೇ ಸ್ಥಾನಕ್ಕೆ ಏರಿದ್ದರ ಹಿಂದೆ ಅವರ ಪರಿಶ್ರಮ ಬಹಳಷ್ಟಿದೆ. ಬಹುಮುಖ್ಯವಾಗಿ ವಿತ್ತ ಸಚಿವಾಲಯದಲ್ಲಿ ಭ್ರಷ್ಟಾಚಾರದ ವಿಷಯ ನಿರ್ಮಲಾ ಸೀತಾರಾಮನ್ ಅವರ ಅವಧಿಯಲ್ಲಿ ಕೇಳಿಬಂದಿಲ್ಲ, ಭಾರತದ ವಿತ್ತ ಸಚಿವಾಲಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವ ನಿರ್ಮಲಾ ಮೇಡಂ ಅವರಿಗೆ ಧನ್ಯವಾದಗಳು.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಸಡ್ಡೆ ಏಕೆ?

'ಕೇಂದ್ರ ಸರಕಾರ ಬಜೆಟ್ಟಿನಲ್ಲಿ ತಮಿಳುನಾಡನ್ನು ಕಡೆಗಣಿಸಿದೆ, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ತಿರಸ್ಕರಿಸಿದ್ದ ರಾಜ್ಯಗಳ ಮೇಲೆ ಸೇಡು ತೀರಿಸಿಕೊಳ್ಳುವ ಧೋರಣೆ ಬೇಡ' ಎಂದು ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಆಗ್ರಹಿಸಿದ್ದಾರೆ. ಇಪ್ಪತ್ತೆಂಟರಲ್ಲಿ ಹತ್ತೊಂಬತ್ತು ಕ್ಷೇತ್ರಗಳನ್ನು ಬಿಜೆಪಿಗೆ ಗೆಲ್ಲಿಸಿಕೊಟ್ಟ ಕರ್ನಾಟಕದ ಸ್ಥಿತಿ ಕೂಡಾ ಅಷ್ಟೆ. ಕೇಂದ್ರ ಸರಕಾರ ತನ್ನ ಆಡಳಿತಕ್ಕೆ ಮಿತ್ರರ ಅನಿವಾರ್ಯ ಎಂಬ ಕಾರಣಕ್ಕೆ ಆಂಧ್ರ ಪ್ರದೇಶಕ್ಕೆ ವಿಶೇಷ ಗಮನ ನೀಡಿದ್ದಾರೆ. ಇಲ್ಲದಿದ್ದರೆ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ ಎಲ್ಲ ರಾಜ್ಯಗಳೂ ಈ ವಿಚಾರದಲ್ಲಿ ಸಮಾನ ದುಃಖಿಗಳೇ. ಅದರಲ್ಲೂ ಈ ವಿಚಾರದಲ್ಲಿ ಕರ್ನಾಟಕದ ದುಃಖ ಅತೀ ಹೆಚ್ಚು. ಕೇಂದ್ರ ಸರಕಾರಕ್ಕೆ ದಕ್ಷಿಣ ಭಾರತದ ಯಥೇಚ್ಚ ತೆರಿಗೆ ಮಾತ್ರ ಬೇಕು. ಅದರ ಪಾಲು ನೀಡುವಲ್ಲಿ ಮತ್ತು ಅನುದಾನಗಳು ಬಿಡುಗಡೆ ಮಾಡುವುದರಲ್ಲಿ ಮಾತ್ರ ಮಲತಾಯಿ ಧೋರಣೆ. ರಾಜ್ಯಗಳು ಇದ್ದರೆ ಮಾತ್ರ ರಾಷ್ಟ್ರ ಎಂಬುದನ್ನು ಮರೆಯಬಾರದು. ಭಾರತ ಒಂದು ಒಕ್ಕೂಟದ ವ್ಯವಸ್ಥೆಯನ್ನು ಅಳವಡಿಕೆ ಅಳವಡಿಸಿಕೊಂಡಿದೆ ಎಂಬುದನ್ನು ಮರೆಯಬಾರದು. ಹಾಗಾಗಿ ಎಲ್ಲರನ್ನೂ ಸಹ ಸಮವಾಗಿ ಕಾಣಬೇಕು. ಭಾರತಾಂಬೆಗೆ ಎಲ್ಲ ರಾಜ್ಯಗಳೂ ಸಹ ಮಕ್ಕಳೇ ಸರಿ. ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ಇಡಬಾರದು. ಇವು ಭಾರತದ ಏಕತೆಗೆ ಭಂಗ ತರುವ ಸಂಭವ ಇದೆ. ಇಂತದ್ದಕ್ಕೆ ಕೇಂದ್ರ ಅನುವು ಮಾಡಿಕೊಡಬಾರದು. ಆಡಳಿತವೇ ಬೇರೆ, ರಾಜಕೀಯವೇ ಬೇರೆ ಎಂಬುದನ್ನು ಸರ್ವಪಕ್ಷಗಳೂ ಮನಗಾಣಬೇಕು.

-ಪತ್ತಂಗಿ ಎಸ್ ಮುರಳಿ ಬೆಂಗಳೂರು

ಸ್ವಾಗತಾರ್ಹ ಕ್ರಮ

ವಿಧಾನಸಭಾ ಅಧಿವೇಶನದಲ್ಲಿ ನೀಟ್ ಪರೀಕ್ಷಾ ವ್ಯವಸ್ಥೆಯನ್ನು ರದ್ದು ಮಾಡುವಂತೆ ನಿರ್ಣಯ ಅಂಗೀಕಾರ ಮಾಡಿರುವುದು ಸ್ವಾಗತಾರ್ಹ. ಇತ್ತೀಚಿನ ವರ್ಷಗಳಲ್ಲಿ ನೀಟ್ ಪರೀಕ್ಷಾ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಅಕ್ರಮಗಳು, ಪ್ರಶ್ನೆ ಪತ್ರಿಕೆಗಳ ಸೋರಿಕೆ, ಕೇಂದ್ರ ತನಿಖಾ ದಳದಿಂದ 12 ಜನರನ್ನು ಬಂಧಿಸಿರುವುದು, ಇವೆಲ್ಲವೂ ನೀಟ್ ಪರೀಕ್ಷಾ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಅಕ್ರಮಗಳಿಗೆ ಸಾಕ್ಷಿ. ಈ ಎಲ್ಲ ಅಕ್ರಮ ಪ್ರಕರಣಗಳು ಉತ್ತರ ಭಾರತದ ರಾಜ್ಯಗಳಲ್ಲೇ ನಡೆದಿರುವುದು ಬಯಲಾಗಿದೆ. ಈಗಾಗಲೇ ನಮ್ಮ ಪಕ್ಕದ ತಮಿಳು ನಾಡು ಸರಕಾರವೂ, ಆ ರಾಜ್ಯದಲ್ಲಿ ನೀಟ್ ಪರೀಕ್ಷೆಯನ್ನು ರದ್ದುಗೊಳಿಸುವಂತೆ ವಿಧಾನಸಭಾ ಯಲ್ಲಿ ನಿರ್ಣಯ ಕೈಗೊಂಡಿದ್ದಾರೆ. ಎಲ್ಲದಕ್ಕಿಂತಲೂ ಆತಂಕದ ಸಂಗತಿ ಎಂದರೆ, ನೀಟ್ ಪರೀಕ್ಷಾ ವ್ಯವಸ್ಥೆ ಬಂದ ನಂತರ, ಅಂದರೆ, 2016 ರಿಂದ ನಮ್ಮ ರಾಜ್ಯಕ್ಕೆ ಪ್ರತಿ ವರ್ಷವೂ, ಮೊದಲಿಗಿಂತ, 150 ರಿಂದ 200 ವೈದ್ಯಕೀಯ ಸೀಟುಗಳು ಕಡಿಮೆ ಆಗುತ್ತಾ ಬಂದಿರುವುದು. ಈ ಬಗ್ಗೆ ನಮ್ಮ ಶಿಕ್ಷಣ ತಜ್ಞರು ಗಮನಹರಿಸಿ ನೀಟ್‌ನಿಂದ ರಾಜ್ಯಕ್ಕೆ ಆಗಿರುವ ಅನ್ಯಾಯ ವಿರುದ್ಧ ಧ್ವನಿ ಎತ್ತಬೇಕು. ನೀಟ್ ಬದಲು ಸಿಇಟಿ ಯೇ ಸೂಕ್ತ ಎನಿಸುತ್ತದೆ.

-ಬೂಕನಕೆರೆ ವಿಜೇಂದ್ರ, ಮೈಸೂರು

ಉತ್ತರ ಕನ್ನಡ, ನೀ ಹೀಂಗ ತೀಡಡ!

ಅಭಿಮತ

ಪ್ರೊ. ಆರ್. ಜಿ.ಹೆಗಡೆ
vveditoped@gmail.com

ಉತ್ತರ ಕನ್ನಡ, ನೀ ಹೀಗೆ ತೀಡಡ(ಅಳಬೇಡ) ಇದು ಜಯಂತ ಕಾಯ್ಕಿಣಿಯವರ ಕವಿತೆಯೊಂದರ ಸಾಲು. ವರ್ಷಗಳ ಹಿಂದೆ ಬರೆದಿದ್ದು. ಅಂದರೆ ಉತ್ತರ ಕನ್ನಡ ಆಗಲೇ ಬಿಕ್ಕಲಾರಂಭಿಸಿತ್ತು, ಮೌನವಾಗಿ. ಆ ಬಿಕ್ಕಳಿಕೆ ಈಗ ಮಹಾರೋದನವಾಗಿ ಕಣ್ಣೀರಿನ ಕೋಡಿಯೇ ಹರಿಯುತ್ತಿದೆ. ಅಘನಾಶಿನಿ ಗಂಗಾವಳಿಗಳು ನೆರೆಹಾವಳಿಯಾಗಿ ಕೆಂಪುನೀರು ತುಂಬಿ ಹರಿಯುತ್ತಿರುವ ಹಾಗೆ.

ಜಿಲ್ಲೆಯ ಅವಸ್ಥೆ ಈಗ ಹೇಗಾಗಿ ಹೋಗಿದೆ ಎಂಬುದನ್ನು ನೋಡುವುದರ ಮೊದಲ ಮೂವತ್ತು, ನಲವತ್ತು ವರ್ಷ ಹಿಂದಿನ ಅದರ, ಹಳ್ಳಿಗಳ, ಪರಿಸ್ಥಿತಿ ನೋಡಬೇಕು. ಉದಾಹರಣೆಯಾಗಿ ನಮ್ಮೂರು ಮೂರೂರಿನ ಕಥೆ ಚಿಕ್ಕದಾಗಿ ಹೇಳಿಕೊಳ್ಳುತ್ತೇನೆ. ಬಡತನವಿತ್ತು ನಿಜ. ಆದರೆ ಶಿಕ್ಷಣ, ಯಕ್ಷಗಾನ, ಗಾಯನ, ಸಂಸ್ಕೃತಿ, ಎಲ್ಲದರಲ್ಲಿಯೂ ಮುಂದೆ ಇದ್ದವರು ಮೂರೂರಿನವರು. ರಾಷ್ಟ್ರೀಯ ಅಂತಾರಾಷ್ಟ್ರೀಯ ಮಾನ್ಯತೆಯ ಹಲವು ವ್ಯಕ್ತಿಗಳು ಹುಟ್ಟಿದ್ದು, ಬೆಳೆದಿದ್ದು ಅಲ್ಲಿ. ಯಕ್ಷಗಾನದ ಖ್ಯಾತಿಯ ದೇವರು ಹೆಗಡೆ, ಕನ್ನಡ ಪತ್ರಿಕೋದ್ಯಮದ ದೊರೆ ವಿಶ್ವೇಶ್ವರ ಭಟ್, ಬಾಂಬೆ ಹಾಸ್ಪಿಟಲ್‌ನಲ್ಲಿ ಕ್ಯಾನ್ಸರ್ ಮುಖ್ಯಸ್ಥ ಡಾ. ಜಿ.ಟಿ. ಹೆಗಡೆ, ಎಲ್.ಐ.ಸಿ.ಯ ಟಾಪ್ ಮ್ಯಾನೇಜ್‌ಮೆಂಟ್‌ನಲ್ಲಿದ್ದ ಸುರೇಶ್. ಜಿ. ಭಟ್, ಬ್ಯಾಂಕಿಂಗ್‌ನಲ್ಲಿ ಹಿರಿಯ ಹುದ್ದೆ ಹೊಂದಿದ್ದ ಆರ್.ವಿ. ಹೆಗಡೆ, ಭದ್ರನ್, ಇನ್ಫೋಸಿಸ್‌ನ ಉಪಾಧ್ಯಕ್ಷರಾಗಿದ್ದ ರಮೇಶ ಅಡ್ಕೋಳಿ, ಇಸ್ರೋನಲ್ಲಿದ್ದ ಪ್ರಮೋದಾ ಹೆಗಡೆ, ರೋಬೋಟಿಕ್ಸನ ವಿನಾಯಕ ಹೆಗಡೆ, ಲಾಸಾ ಕಂಪನಿಯ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆಗಿದ್ದ ಶಿವಾನಂದ ಹೆಗಡೆ, ಕರ್ನಲ್ ವಿ.ಎಸ್.ಹೆಗಡೆ, ಖ್ಯಾತ ವರ್ಣಚಿತ್ರಕಾರ, ಗಣಪತಿ. ಎಸ್. ಹೆಗಡೆ ಇಂಥವರು ಹುಟ್ಟಿದ ಬೆಳೆದ ಊರು ಅದು. ಅಲ್ಲಿನ ಹೆಚ್ಚು ಕಡಿಮೆ ಪ್ರತಿಯೊಂದು ಮನೆಯಿಂದ ಹಿರಿಯ ಸ್ಥಾನಗಳಲ್ಲಿ ಇದ್ದವರು ಬಂದಿದ್ದಾರೆ. ಬರುತ್ತಲೇ ಇದ್ದಾರೆ. ಆಗ ಊರ ತುಂಬ ಜನರಿದ್ದರು. ತೋಟ, ಗದ್ದೆಗಳು ಹಸುರಾಗಿದ್ದವು. ಎಲ್ಲೆಲ್ಲಿಯೂ ನೀರು. ಪ್ರತಿಯೊಬ್ಬರ ಮನೆಯಲ್ಲಿ ಒಂದು ಕೊಟ್ಟಿಗೆ, ಎಮ್ಮೆ ಆಕಳುಗಳು. ಜೀವಂತಿಕೆ ತುಂಬಿದ್ದ, ಸುಂದರ, ಭವಿಷ್ಯದಲ್ಲಿ ಭಾರೀ ಪ್ರಗತಿ ಸಾಧಿಸಬಹುದಾಗಿದ್ದ ಹಳ್ಳಿ ಅದು.

ಹಾಗೆ ಇದ್ದಿದ್ದು ನಮ್ಮೂರು ಮಾತ್ರವೇ ಅಲ್ಲ. ಜಿಲ್ಲೆಯ ಹೆಚ್ಚು ಹಳ್ಳಿಗಳು ಹಾಗೆಯೇ ಇದ್ದವು. ಜಿಲ್ಲೆಯಾದ್ಯಂತದಿಂದ ರಾಷ್ಟ್ರೀಯ ಅಂತಾರಾಷ್ಟ್ರೀಯ ಖ್ಯಾತನಾಮರು ಬಂದಿದ್ದಾರೆ. ರಾಮಕೃಷ್ಣ ಹೆಗಡೆ, ದಿನಕರ ದೇಸಾಯಿ, ಆರ್.ವಿ. ದೇಶಪಾಂಡೆ, ಕೆನರಾ ಬ್ಯಾಂಕ್ ಹಿಂದಿನ ಅಧ್ಯಕ್ಷ ಆರ್.ವಿ.ಶಾಸ್ತ್ರಿ, ಜಸ್ಟಿಸ್ ಎಸ್.ಆರ್.ನಾಯಕ್, ಕೆರೆಮನೆ ಶಿವರಾಮ ಹೆಗಡೆ, ಶಂಭು ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಗಣಪತಿ ಭಟ್ ಹಾಸಣಗಿ, ಮಾಜಿ ಕೇಂದ್ರ ಸಚಿವ ಅನಂತಕುಮಾರ ಹೆಗಡೆ, ಮಾಜಿ ಸ್ಪೀಕರ್ ಮತ್ತು ಪ್ರಸ್ತುತ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಜಯಂತ ಕಾಯ್ಕಿಣಿ ಇಲ್ಲಿಯವರು. (ನನ್ನ ಅಜ್ಞಾನದಿಂದಾಗಿ ಕೆಲ ಹೆಸರು ಬಿಟ್ಟು ಹೋಗಿರಬಹುದು. ಕ್ಷಮೆ ಇರಲಿ).

ವಿಷಯ ಹೇಳಿಕೊಂಡ ಕಾರಣವೆಂದರೆ ಉತ್ತರ ಕನ್ನಡ ಮೂಲತಃ ಅಜ್ಞಾನದ, ಹುಲ್ಲು ಹುಟ್ಟದ, ಮಳೆ ಬರದ, ನೀರೇ ಇದ್ದಿಲ್ಲದ, ಮೈ ಸುಟ್ಟು ಹೋಗುವ ಬಿಸಿಲಿನ ಜಿಲ್ಲೆ ಅಲ್ಲ. ಮಾನವ, ಪ್ರಕೃತಿ, ಸಂಪನ್ಮೂಲ ಇತ್ತು. ನೀರು ಇತ್ತು. ಸುಂದರ ಪರಿಸರವಿತ್ತು. ಹವಾಮಾನವಿತ್ತು. ಇದೆ. ಜನ ಬುದ್ಧಿವಂತರು. ಹಾಗಾಗಿ ಬೆಳವಣಿಗೆಯ ಅಪಾರ ಸಾಧ್ಯತೆ ಇತ್ತು. ಪ್ರಾಕೃತಿಕವಾಗಿ ಅನಾನುಕೂಲ ಹೊಂದಿದ್ದ ಉತ್ತರ ಕರ್ನಾಟಕದ ಕೆಲವು ಭಾಗಗಳು ಕೂಡ ಈಗ ಭಾರೀ ಅಭಿವೃದ್ಧಿ ಸಾಧಿಸಿವೆ. ಗುಲಬುರ್ಗಾಕ್ಕೆ ಕೇಂದ್ರೀಯ ವಿಶ್ವವಿದ್ಯಾಲಯ ಬಂದಿದೆ, ನೀರು ಬಂದಿದೆ. ವಿಜಾಪುರಕ್ಕೆ ಮಹಿಳಾ ವಿಶ್ವವಿದ್ಯಾಲಯ ಬಂದಿದೆ. ಹಾಗೆ ನೋಡಿದರೆ ನಮ್ಮ ಜಿಲ್ಲೆ ಸರ್ವಾಂಗೀಣವಾಗಿ ಬಹಳ ಬೆಳೆಯಬೇಕಿತ್ತು. ಕನಿಷ್ಟ ನೆರೆಹೊರೆಯ ಜಿಲ್ಲೆಗಳಾದ ದಕ್ಷಿಣ ಕನ್ನಡ, ಶಿವಮೊಗ್ಗ, ಧಾರವಾಡ ಮಟ್ಟದಲ್ಲಿ ಮೂಲಭೂತ ಸೌಲಭ್ಯ ಸೃಷ್ಟಿಯಾಗಬೇಕಿತ್ತು. ಧಾರವಾಡವನ್ನು ನೋಡಿ. ನೀರಿನ ಸಮಸ್ಯೆಯಿದ್ದ ಜಿಲ್ಲೆಗೆ ಈಗ ಆ ಸಮಸ್ಯೆ ಇಲ್ಲ. ಐಐಟಿಯನ್ನೂ ಹಿಡಿದು ಐದಾರು ವಿಶ್ವವಿದ್ಯಾಲಯಗಳು ಬಂದಿವೆ. ಟಾಟಾ ಮೋಟರ್ಸ್ ಬಂದಿದೆ. ದಕ್ಷಿಣ ಕನ್ನಡದ ಮಣಿಪಾಲ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆದಿದೆ. ಶಿವಮೊಗ್ಗಕ್ಕೆ ಏರ್ ಪೋರ್ಟ್ ಇದೆ. ಆ ಜಿಲ್ಲೆಗಳು ಗಿಜಿಗುಡುತ್ತಿವೆ. ವ್ಯಾಪಾರ, ವ್ಯವಹಾರ ಶಿಕ್ಷಣ ಬೆಳೆದಿದೆ. ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಗಳು ರಸ್ತೆಗೊಂದು ಇವೆ. ಸ್ಥಳೀಯವಾಗಿ ಉದ್ಯೋಗಾವಕಾಶಗಳು ಹುಟ್ಟಿಕೊಂಡಿವೆ. ಆ ಜಿಲ್ಲೆಗಳಿಂದಲೂ ಜನ ಉದ್ಯೋಗ ಹುಡುಕಿ ಕಾಲಕಾಲಕ್ಕೆ ವಲಸೆ ಹೋಗಿಲ್ಲವೆಂದೇನೂ ಅಲ್ಲ. ಆದರೆ ಜನ ತಮ್ಮ ಊರುಗಳಲ್ಲಿಯೂ ಉಳಿಯುತ್ತಿದ್ದಾರೆ. ಜಮೀನು ತೆಗೆದುಕೊಳ್ಳುತ್ತಿದ್ದಾರೆ. ಹಳ್ಳಿಗಳು ಮತ್ತು ಜಿಲ್ಲೆ ಅಭಿವೃದ್ಧಿಯ ಪಥದಲ್ಲಿ ಸಾಗಿವೆ.

ಆದರೆ ಅದೇ ನಮ್ಮ ಜಿಲ್ಲೆಗೆ ಇಂದು ಏನಾಗಿದೆ ನೋಡಿ! ಹಿಂದೆ ಶಿಕ್ಷಣ ಪಡೆದ ಜನ ಅವಕಾಶ ಹುಡುಕಿ ಹೊರಗೆ ಹೋದರು. ಅವರಿಗೆ ಆಗ ಬೇರೆ ದಾರಿ ಇರಲಿಲ್ಲ ಬಿಡಿ! ಹೋದವರೆಲ್ಲ ಹೋಗಿಯೇ ಬಿಟ್ಟರು. ಎಷ್ಟರ ಮಟ್ಟಿಗೆ ಎಂದರೆ ಸಾರಸ್ವತರು ಮುಂಬೈಗೆ ಹೊರಟು ಹೋದರು. (ಅನಂತ ನಾಗ್, ಶಂಕರ ನಾಗ್ ಮೂಲತಃ ಉತ್ತರ ಕನ್ನಡ ಜಿಲ್ಲೆಯವರು) ಕರ್ಕಿ ಎನ್ನುವ ಹೊನ್ನಾವರದ ಹಳ್ಳಿಯ ಜನ ಮುಂಬೈಗೆ ನಡೆದು ಬಿಟ್ಟರು. ಜಿಲ್ಲೆ ಅಳಲು ಆರಂಭಿಸಿದ್ದು ಆಗ. ಜನರನ್ನು ನಿಲ್ಲಿಸಲು ಪ್ರಯತ್ನಗಳು ಆಗಿನಿಂದಲೇ ಆರಂಭವಾಗಬೇಕಿತ್ತು. ಹಾಗೆ ಆಗಲಿಲ್ಲ, ಈಗ ಏನಾಗಿದೆ ಎಂದರೆ ಹಳ್ಳಿಗಳು ನಾಶವಾಗಿ ಹೋಗಿವೆ. ಮನೆಗಳಿಗೆ ಸಾಲು ಸಾಲಾಗಿ ಬೀಗ ಬಿದ್ದಿದೆ. ಉಳಿದವರು ನಾಳೆ ಅಥವಾ ನಾಡಿದ್ದು ಬೀಗ ಹಾಕುವ ವಿಚಾರದಲ್ಲಿದ್ದಾರೆ. ಜಮೀನು ನೋಡುವವರಿಲ್ಲ. ಘಟ್ಟದ ಕೆಳಗಿನ ತಾಲೂಕುಗಳಲ್ಲಿ ಅಂತೂ ಶೇಖಡಾ ಎಂಭತ್ತರಷ್ಟು ಜಮೀನು ಫಲಗುತ್ತಿಗೆಗೆ ಹೋಗಿದೆ. ಅಲ್ಲಿ ಈಗ ಹೆಚ್ಚಾಗಿ ಇರುವವರು ವಯಸ್ಸಾದವರು ಅಥವಾ ಅಸಹಾಯಕತೆಯಲ್ಲಿರುವವರು. ಇರುವುದು ಮಹಾಭಾರತದ ಸ್ವರ್ಗಾರೋಹಣ ಪರ್ವದಂತಹ ವಾತಾವರಣ.

ಜನ ಒಂದು ಊರಿನಲ್ಲಿ ಏಕೆ ನಿಲ್ಲುತ್ತಾರೆ? ಊರು ಏಕೆ ಬೆಳೆಯುತ್ತದೆ? ಗಮನಿಸಬೇಕು. ಆ ಸೂತ್ರಗಳು ಸರಳ. ದುಡಿಮೆ ಇದ್ದರೆ, ಗುಣಮಟ್ಟದ ಶಿಕ್ಷಣ ಲಭ್ಯವಿದ್ದರೆ, ಆರೋಗ್ಯ ಸೇವೆ ಲಭ್ಯವಿದ್ದರೆ, ಪ್ರಯಾಣದ ಅನುಕೂಲತೆಗಳಿದ್ದರೆ, ಬದುಕು ಸುಖವಾಗಿದ್ದರೆ, ಅಂದರೆ ನೀರು, ರಸ್ತೆ, ಒಳ್ಳೆಯ ಹವಾಮಾನ, ಉದ್ಯೋಗ, ಮನರಂಜನೆಯ ಅವಕಾಶಗಳು ಸೃಷ್ಟಿಯಾದರೆ ಅಲ್ಲಿ ಮಧ್ಯಮ ವರ್ಗದ ಜನ ನಿಲ್ಲಲಾರಂಭಿಸುತ್ತಾರೆ. ನಿವೃತ್ತರಾದವರು ಮನೆ ಕಟ್ಟಿ ಉಳಿಯಲಾರಂಭಿಸುತ್ತಾರೆ. ಈ ಮಧ್ಯಮ ವರ್ಗದ ಜನ ನಿಲ್ಲುವುದು ಬಹಳ ಮುಖ್ಯ. ಏಕೆಂದರೆ ಇವರನ್ನು ಹಿಂಬಾಲಿಸಿ ಬೇರೆ ಜನ ಉಳಿಯಲಾರಂಭಿಸುತ್ತಾರೆ. ಅಂಗಡಿಗಳು, ಚಿಕ್ಕ, ದೊಡ್ಡ ಉದ್ಯೋಗಗಳು ಹುಟ್ಟಿಕೊಳ್ಳಲಾರಂಭಿಸುತ್ತವೆ. ವಿಸ್ತಾರವಾಗುತ್ತ ಹೋಗುತ್ತವೆ. ಬೆಳವಣಿಗೆ ಸುತ್ತ ಮುತ್ತ ಪಸರಿಸಲಾರಂಭಿಸುತ್ತದೆ. ಸಂತೋಷದ ವಿಷಯವೆಂದರೆ ಈಗ ಅದು ತಾಲೂಕು ಕೇಂದ್ರಗಳಲ್ಲಿ ಆರಂಭವಾಗಿದೆ. ಆದರೆ ಪ್ರಕ್ರಿಯೆ ತೀರ ಸಾವಕಾಶವಾಗಿ ನಡೆದಿದೆ. ಕಾರಣ ಮೂಲಭೂತ ಸೌಕರ್ಯಗಳು ಸಾವಕಾಶವಾಗಿ ಬೆಳೆಯುತ್ತಿವೆ. ಈ ಕನಿಷ್ಟ ಮೂಲಭೂತ ಸೌಕರ್ಯ, ಅಂದರೆ ನೀರು, ರಸ್ತೆ, ವಿದ್ಯುತ್ತು, ಉನ್ನತ ಶಿಕ್ಷಣ ಸಂಸ್ಥೆಗಳು ಇತ್ಯಾದಿ ಮೊದಲಿನ ಹಂತದ ಅಭಿವೃದ್ಧಿ ಸರಕಾರದಿಂದಲೇ ಆಗಬೇಕು. ಅಭಿವೃದ್ಧಿ ಒಂದು ಹಂತ ತಲುಪಿ ಹಣ ಓಡಾಡಲು ಆರಂಭವಾದಂತೆ ಖಾಸಗಿಯವರು ಬರುತ್ತಾರೆ. ನಂತರದ ಹಂತಗಳಲ್ಲಿ ಅವರು ದುಡ್ಡು ಹಾಕುತ್ತಾರೆ. ಪ್ರದೇಶ ಬೆಳೆಯುತ್ತದೆ.

ಹೀಗೆ ಒಂದು ವರ್ತುಲ ಸೃಷ್ಟಿಸುವುದು ರಾತ್ರಿ ಬೆಳಗಾಗುವ ತನಕದ ಕೆಲಸವಲ್ಲ. ದಶಕಗಳೇ ಬೇಕಾಗುತ್ತವೆ, ಒಪ್ಪಿಕೊಳ್ಳಬೇಕು. ಎಂಭತ್ತರ ದಶಕದವರೆಗೂ ಉತ್ತರ ಕನ್ನಡ ಅಭಿವೃದ್ಧಿಯಲ್ಲಿ ತೀರ ಹಿಂದುಳಿಯಿತು. ಜಿಲ್ಲೆಗೆ ಬರಲು ಸರಿಯಾದ ರಸ್ತೆಗಳೇ ಇರಲಿಲ್ಲ. ಹಳ್ಳಿಗಳಿಗೆ ರಸ್ತೆಗಳು, ಬ್ರಿಜ್‌ಗಳು, ಬಸ್ ಸಂಪರ್ಕ, ವಿದ್ಯುತ್, ಕುಡಿಯುವ ನೀರು, ಕೃಷಿಗೆ ನೀರು, ಆಸ್ಪತ್ರೆ, ಅಂತೂ ಬಿಡಿ. ಇನ್ನೂ ಬಹಳ ಕೆಲಸವಾಗಬೇಕಿದೆ. ಟ್ರೇನ್ ಬಂದಿದ್ದು ತೊಂಭತ್ತರ ದಶಕದ ಕೊನೆಯಲ್ಲಿ. ಏರ್ ಪೋರ್ಟ್ ಅಂತು ಇನ್ನೂ ಇಲ್ಲ.

ಹಿಂದುಳಿಯುವಿಕೆಗೆ ಎರಡು ಕಾರಣಗಳಿವೆ. ಒಂದನೆಯದು ರಾಜಕೀಯ ಇಚ್ಛಾಶಕ್ತಿ. ಎರಡನೆಯದು ಜನರ ಮನಸ್ಥಿತಿ. ಉತ್ತರ ಕನ್ನಡದ ಹಲವು ಜನ ಸಂತೃಪ್ತರು ಮತ್ತು ಅಲ್ಪತೃಪ್ತರು. ಎಲ್ಲವನ್ನೂ 'ಯಾರೋ' ಮಾಡಬೇಕು ಎನ್ನುವ ಮನಸ್ಸಿನವರು. ಬಾಯಿ ಬಿಟ್ಟು ಕೇಳಿದ್ದು ಇಲ್ಲ. ಯಾವುದಕ್ಕೂ 'ಬೇಕು' ಎಂಬ ಹೋರಾಟ ಗಟ್ಟಿಯಾಗಿ ನಡೆಸಿದಂತಿಲ್ಲ. 'ಬೇಡ' ಎಂದು ಒಂದೆರಡು ಹೋರಾಟ ನಡೆಸಿದ್ದು ಇದೆ. ಸಂಘಟಿತ ಹೋರಾಟವಂತೂ ನಡೆಸಿಯೇ ಇಲ್ಲ. ಹಾಗಾಗಿ ಅವಕಾಶಗಳು ಕೈ ತಪ್ಪಿದವು. ಬಹುಶಃ ಕೈಗಾ ಮತ್ತು ಕದಂಬ ಇಲ್ಲಿಗೆ ಬರುವಾಗ ಕಾರವಾರ, ಅಂಕೋಲಾ ತಾಲೂಕುಗಳ ಸಮಗ್ರ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್, ಉದಾ: ಕರ್ನಾಟಕದ 'ಕೇಂದ್ರೀಯ ವಿಶ್ವವಿದ್ಯಾಲಯ'ವನ್ನು ಜತೆಗೆ ಕೊಡಿ ಎಂದು ಕೇಳಬೇಕಿತ್ತು. ಕೇಳಲೇ ಇಲ್ಲ. ಕೊಂಕಣ ರೈಲ್ವೆ ಬರುವಾಗ ಅದರಿಂದ ಹುಟ್ಟಿಕೊಳ್ಳುವ ಉದ್ಯೋಗಗಳಲ್ಲಿ ಪಾಲು ಕೊಡಿ ಕೇಳಲೇ ಇಲ್ಲ. ಮತ್ತೆ ಉತ್ತರ ಕರ್ನಾಟಕದಂತೆ ನಮಗೊಂದು ಸಮಗ್ರ ನೀರಾವರಿ ಯೋಜನೆ ಕೊಡಿ ಎಂದು ಕೇಳಲೇ ಇಲ್ಲ. ವಿಶ್ವವಿದ್ಯಾಲಯ, ಸರಕಾರಿ ಮೆಡಿಕಲ್ ಕಾಲೇಜ್, ಇಂಜಿನಿಯರಿಂಗ್ ಕಾಲೇಜು, ಟೆಕ್ ಪಾರ್ಕ್ ಕೊಡಿ ಕೇಳಲಿಲ್ಲ. ರಾಜಕಾರಣಿಗಳ ಬೆನ್ನು ಬೀಳಲಿಲ್ಲ. ತದಡಿಗೆ ಬರಬಹುದಾಗಿದ್ದ ಭಾರಿ ಬಂದರಿಗೆ ವಿರೋಧ ಬಂತು. ಮಾಜಾಳಿಯಲ್ಲಿ ಬರುತ್ತಿದ್ದ ಟಾಟಾ ಫೈವ್ ಸ್ಟಾರ್ ಹೋಟೆಲ್ ತಿರುಗಿ ಹೋಯಿತು. ನಾವು ಎಂತಹ ತೃಪ್ತ ಮನಸ್ಸಿನವರು ಎಂದರೆ ಕಡಿಮೆ ಬಜೆಟ್‌ನ ತಾಳಗುಪ್ಪ ಸಿರಸಿ ಹುಬ್ಬಳ್ಳಿ, ತಾಳಗುಪ್ಪ ಸಿರಸಿ ಅಳ್ನಾವರ ರೇಲ್ವೆ ಬೇಡಿಕೆ ಕೂಡ ಗಟ್ಟಿಯಾಗಿ ಇಟ್ಟಿಲ್ಲ. ಹುಬ್ಬಳ್ಳಿ ಅಂಕೋಲ ರೈಲ್ವೆ ಮಾತಿನಲ್ಲೇ ಉಳಿದಿದಿದೆ. ಇಲ್ಲೆಲ್ಲ ಪರಿಸರ ನಾಶದ ಮಾತು ಬರುತ್ತದೆ. ಪರಿಸರ ನಾಶವಾಗಕೂಡದು ನಿಜ. ಆದರೆ ಬಹುಶಃ ಒಂದು ಸೂಕ್ಷ್ಮ ಗಮನಿಸಬೇಕು. ಜವಾಬ್ದಾರಿಯುತ ಯೋಜನೆಗಳು ತಮ್ಮ ಸುತ್ತ ಮುತ್ತ ಪ್ರದೇಶದ ಪರಿಸರ ಸಂರಕ್ಷಣೆ ಮಾಡುತ್ತವೆ. ಇಂದಿನ ದಿನಗಳಲ್ಲಿ ಅದನ್ನು ಅವು ಮಾಡಲೇಬೇಕು ಕೂಡ. ಮಾಡುತ್ತವೆ. ಉದಾಹರಣೆಗೆ ರಿಲಯನ್ಸ್ ಜಾಮನಗರದ ಸುತ್ತಮುತ್ತ ಒಂದೂವರೆ ಲಕ್ಷ ಗುಣಮಟ್ಟದ ಮಾವಿನ ಗಿಡಗಳನ್ನು ನೆಟ್ಟು ಪೋಷಿಸಿತು. ಇಂದು ಜಾಮನಗರ ಮಾವಿನ ಹಣ್ಣಿನ ದೊಡ್ಡ ಮಾರುಕಟ್ಟೆ, ಲಕ್ಷಗಟ್ಟಲೆ ಉದ್ಯೋಗ ಸೃಷ್ಟಿಸಿದೆ. ಅಲ್ಲದೆ ಜನರೇ ಇಲ್ಲದಿರುವುದರಿಂದಲೇ ನಮ್ಮ ಪರಿಸರ ಹೋರಾಟಕ್ಕೂ ಶಕ್ತಿ ಇಲ್ಲ. ಮಧ್ಯಮವರ್ಗದ ಜನ ಅಂದರೆ ತಾಕತ್ತಿದ್ದವರು ಜಿಲ್ಲೆಯಲ್ಲಿ ನಿಂತರೆ, ಹೆಚ್ಚು ಹೆಚ್ಚು ನಿಂತರೆ ಹೋರಾಟ ಬಲಗೊಳ್ಳುತ್ತದೆ. (ಹಾಗೆಂದು ಪರಿಸರ ಕೆಡಿಸುವ ಉದ್ದಿಮೆಗಳು ನಮಗೆ ಬೇಡವೇ ಬೇಡ.)

ಈಗ ನಾವು ಏನು ಮಾಡಬೇಕು? ಮೊದಲನೆಯದು. ಏನು, ಯಾರು ಮಾಡಬಹುದಿತ್ತು, ಮಾಡಿಲ್ಲ ಇತ್ಯಾದಿ ಮಾತನಾಡುತ್ತ ಕುಳಿತುಕೊಳ್ಳುವುದು ಬೇಡ. ಈಗ ನಾವು ಮಾಡಬೇಕಿರುವುದು ಸರಕಾರಗಳನ್ನು ಈ ಕೆಳಗಿನ ಪ್ರಾಥಮಿಕತೆಗಳಿಗಾಗಿ ಒತ್ತಾಯಿಸುವುದು. 1) ಜಿಲ್ಲೆಗೊಂದು ಸಮಗ್ರ ನೀರಾವರಿ ಯೋಜನೆ. ಗುಡ್ಡದ ಮೇಲಿರುವ ಅಣೆಕಟ್ಟುಗಳಿಂದ ಕೆಳಗೆ ನೀರು ತರುವುದು ಕಷ್ಟವಲ್ಲ. 2) ಅಂಡರ್ ಗ್ರೌಂಡ್ ಕೇಬಲ್ ಹಾಕಿ ಹಳ್ಳಿ ಹಳ್ಳಿಗೆ ಆಲ್ ಸೀಸನ್ ವಿದ್ಯುತ್ತು. 3) ಆಲ್ ಸೀಸನ್ ರಸ್ತೆ. 4) ಜಿಲ್ಲೆಯಲ್ಲಿ ಪರಿಸರ ಸ್ನೇಹಿ ಉದ್ದಿಮೆಗಳನ್ನು ಹೂಡುವವರಿಗೆ, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸ ಬಯಸುವವರಿಗೆ ಪ್ರೋತ್ಸಾಹವಾಗಿ ಜಮೀನು, ನೀರು, ವಿದ್ಯುತ್. 5) ಕರ್ನಾಟಕಕ್ಕೆ ಬರಬೇಕಿರುವ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಅನ್ನು ಜಿಲ್ಲೆಗೆ ಕೊಡುವಂತೆ ಒತ್ತಾಯಿಸುವುದು. 6) ಅಡಿಕೆ, ಗೋಡಂಬಿ, ಮಾವು, ಮೆಣಸಿನಕಾಳು, ಏಲಕ್ಕಿ, ತೆಂಗು ಬೆಳೆಗಾರರಿಗೆ ಬೆಂಬಲ ಬೆಲೆ ಮತ್ತು ಅವುಗಳ ಪ್ರೊಸೆಸ್ಸಿಂಗ್ ಯುನಿಟ್ ಆರಂಭಿಸಲು ವಿಶೇಷ ಇನ್‌ಸೆಂಟಿವ್. 7) ಗೋಡಂಬಿ ಮತ್ತು ಕರೀಶಾಡು ಮಾವು ವ್ಯಾಪಕವಾಗಿ, ವ್ಯವಸ್ಥಿತವಾಗಿ ಬೆಳೆಯಲು ತರಬೇತಿ ಮತ್ತು ಹಣಕಾಸಿನ ಬೆಂಬಲ. 8) ಬೀಜುಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಕ್ರಮ. 8) ಹೆದ್ದಾರಿಗಳು ಮತ್ತು ಇತರ ಗುಡ್ಡ ಕತ್ತರಿಸ್ಪಟ್ಟ ಸ್ಥಳಗಳಲ್ಲಿ ಸೂಕ್ತ ತಡೆಗೋಡೆ ನಿರ್ಮಾಣ. 9) ಉತ್ತರ ಕನ್ನಡ ಡೆವಲಪ್‌ಮೆಂಟ್ ಅಥಾರಿಟಿ ಆರಂಭಿಸಿ ಮಧ್ಯಮ ವರ್ಗದವರಿಗೆ ಅಭಿವೃದ್ಧಿಯಾದ ಸೈಟ್ ಒದಗಿಸುವುದು. 10) ಟೆಕ್ ಪಾರ್ಕ್ ಅಭಿವೃದ್ಧಿಗೆ ಇನ್ ಸೆಂಟಿವ್.11) ಜವಾಬ್ದಾರಿಯುತ ಟೂರಿಸಂ ಅಭಿವೃದ್ಧಿಗೆ ಕ್ರಮ. 12) ಹುಬ್ಬಳ್ಳಿ ಅಂಕೋಲಾ, ತಾಳಗುಪ್ಪ ಹುಬ್ಬಳ್ಳಿ ರೈಲ್ವೆ ಹಾಗೂ ಒಂದು ಏರ್ ಪೋರ್ಟ್‌ಗಾಗಿ ಒತ್ತಾಯ. 13) ಜಿಲ್ಲೆಗೆ ಒಂದು ಎನ್‌ಆಯ್‌ಟಿಗಾಗಿ ಬೇಡಿಕೆ.

ಈ ಹಂತದ ಜಿಲ್ಲೆಯ ಬೆಳವಣಿಗೆಗೆ ಸರಕಾರದ ಮಧ್ಯ ಪ್ರವೇಶದ ಅಗತ್ಯವಿದೆ. ಇಂದಿನ ದಿನಗಳಲ್ಲಿ ಮೂಗು ಹಿಡಿಯದಿದ್ದರೆ ಯಾರೂ ಬಾಯಿ ತೆರೆಯುವುದಿಲ್ಲ. ಮತ್ತು ಈಗಲೂ ನಾವೆಲ್ಲ ಮೂಕ ಪ್ರೇಕ್ಷಕರಾಗಿಯೇ ಉಳಿದರೆ ಜಿಲ್ಲೆಯಿಂದ ವಲಸೆ ತಪ್ಪಿಸಲಾಗುವುದಿಲ್ಲ. ಹಳ್ಳಿಗಳಂತೂ ಖಾಲಿಯಾಗಲಿವೆ. ಮತ್ತು ಬೇಜವಾಬ್ದಾರಿ ಯೋಜನೆಗಳು ತಂದಿಡುವ ದುರಂತಗಳನ್ನು ನೋಡುತ್ತ ಕುಳಿತುಕೊಳ್ಳಬೇಕಾಗುತ್ತದೆ.

ಭಟ್ಟರ್ ಸ್ಕಾಚ್

● ವೀಣಾ ಸುಬ್ಬಣ್ಣ, ಬೆಂಗಳೂರು
ಭಟ್ರೇ, ಪ್ರತಿಪಕ್ಷದ ನಾಯಕನಾಗಿ ಆರ್.ಅಶೋಕ್ ಹೇಗೆ?
- ಅವರು ಆರಾಗಿದ್ದರೆ ಸಾಲದು, ಏಳಬೇಕು!

● ನೂತನಾ ಪಿ., ಮೈಸೂರು
ಭಟ್ರೇ, ಪ್ರತಾಪ ಸಿಂಹ ಮತ್ತು ಪ್ರದೀಪ ಈಶ್ವರ್ ಇಬ್ಬರನ್ನೂ ಹೇಗೆ ಸಂಬಾಳಿಸುತ್ತೀರಿ?
- ಅವರಿಬ್ಬರಿಗೂ ಅವರದ್ದೇ ಸಂಸಾರ ಮತ್ತು ಮನೆಗಳಿವೆ!

● ಬಸವರಾಜ ಹೊನ್ನೇಮರ, ಗದಗ
ಭಟ್ರೇ, ಮೊನ್ನೆ ಆಸ್ಪತ್ರೆಯಲ್ಲಿದ್ದಿರಿ, ಇಂದು ಕಾರ್ಯಕ್ರಮದಲ್ಲಿದ್ದೀರಿ, ಏನು ನಿಮ್ಮ ಕತೆ?
- ಇನ್ನು ನಾಡಿದ್ದು ಯಾವ ದೇಶಕ್ಕೋ?!

● ನಾಗರಾಜ ರಾಯಕರ ಶಿರಸಿ
ಭಟ್ರೇ, ನಾನು ಹೇಳಿದಂತೆ ನನ್ನ ಹೆಂಡತಿ ಕೇಳುತ್ತಿಲ್ಲವಲ್ಲ?
- ನಾಗರಾಜ ಅವರೇ, ಸತ್ಯವನ್ನು ಇಷ್ಟು ನೇರವಾಗಿ ಹೇಳಬಾರದು ಮತ್ತು ನಿಮ್ಮ ಸಮಸ್ಯೆಗೆ ಇಷ್ಟು ಬಹಿರಂಗವಾಗಿ ಪರಿಹಾರವನ್ನು ಬಯಸಬಾರದು!

● ರೂಪಾ ಚಂದ್ರ, (ಇಮೇಲ್ ಮೂಲಕ)
ಭಟ್ರೇ, ಯಾರಾದರೂ ನಿಮ್ಮ ಹೃದಯವನ್ನು ಕಳ್ಳತನ ಮಾಡುವ ಪ್ರಯತ್ನ ಮಾಡಿದ್ದರಾ?
- ಹೂಂ ಅಂದ್ರೆ, ಪೊಲೀಸ್ ಕಂಪ್ಲೇಂಟ್ ಕೊಡಬೇಕಿತ್ತು ಎನ್ನಬಹುದು!

● ಚೈತ್ರಾ, (ಇಮೇಲ್ ಮೂಲಕ)
ಭಟ್ರೇ, ನಿಮ್ಮ ಬಗ್ಗೆ ಕೆಲವರಿಗೆ ಹೊಟ್ಟೆಕಿಚ್ಚು ಇದೆಯಲ್ಲ?
- ಅದು ನನ್ನ ಸಾಧನೆ!

● ಕೆ.ಸಿ.ಗುರುಪ್ರಸಾದ, ಬೆಂಗಳೂರು
ಭಟ್ರೇ, ಯಾವಾಗಲೂ ಗಂಡನನ್ನು ಬೈಯುವ ಹೆಂಡತಿಯನ್ನು ಹೇಗೆ ಸಂಭಾಳಿಸಬೇಕು?
- ಬೈಯುವುದನ್ನು ಮುಂದುವರಿಸಲು ಅವಕಾಶ ನೀಡಬೇಕು!

● ನಾಗೇಶ ಶೆಟ್ಟಿ, ಚನ್ನರಾಯಪಟ್ಟಣ
ಭಟ್ರೇ, ಪೋಲಿ ಭಾಷೆಯನ್ನು ಅರ್ಥ ಮಾಡಿಕೊಳ್ಳುವ ನಿಘಂಟು ಇದೆಯಾ?
- ಸಂಕೇತ, ಸಂಜ್ಞೆಗಳಿಗೆ ಯಾವ ನಿಘಂಟು ಶೆಟ್ರೇ?!

● ಲೋಕೇಶ ನಾಡಿಗ, ಮಂಗಳೂರು
ಸಾರ್, ನಿಮಗೆ ಕೋಪ ಬರುವುದಿಲ್ಲವಂತೆ ಹೌದಾ?
- ಯಾವ ಬೋ..ಮಗ ಹಾಗೆ ಹೇಳಿದ್ದು!

● ನಿರಂಜನ ಆಚಾರ್ಯ, ಶಿವಮೊಗ್ಗ
ಭಟ್ರೇ, ನಮ್ಮ ಮನೆಯಲ್ಲಿ ನನ್ನದೇ ಕೊನೆ ಮಾತು, ನಿಮ್ಮ ಮನೆಯಲ್ಲಿ?
- ಹಾಗೆ ಹೇಳಿದ್ದು ಯಾರು ಎಂಬುದನ್ನು ಸ್ಪಷ್ಟಪಡಿಸಬೇಕಿತ್ತು!

● ಸುಮತಿ ಆಚಾರ್ಯ, ಯಲಹಂಕ
ಪ್ರೀತಿ, ಪ್ರೇಮ ಮಾಲ್‌ಗಳಲ್ಲಿ ಸಿಗುವಂತಿದ್ದರೆ ಏನಾಗುತ್ತಿತ್ತು ?
- ಒಂದು ತಗೊಂಡ್ರೆ, ಇನ್ನೊಂದು ಫ್ರೀ ಕೊಡ್ತೀರಾ ಅಂತ ಕೇಳ್ತಿದ್ರು

ಸ್ವಾಸ್ಥ್ಯದ ಸಿರಿಯನ್ನು ಸಂಪಾದಿಸಲು ಸರಿಯೇ ಸಿರಿಧಾನ್ಯ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಅನ್ನಂ ಬಹ್ಮೇತಿ ವ್ಯಜಾನಾತ್ ಅನ್ನಾದ್ಧ್ಯೇವ
ಖಲ್ವಿಮಾನಿ ಭೂತಾನಿ ಜಾಯಂತೇ ಐ
ಅನ್ನೇನ ಜಾತಾನಿ ಜೀವಂತಿ ಅನ್ನಂ
ಪ್ರಯಂತ್ಯಭಿಸುವಿ ಶಂತೀ॥

ಅನ್ನವೇ ಬ್ರಹ್ಮ. ಅನ್ನದಿಂದಲೇ ಸಕಲ ಜಗತ್ತಿನ ಉತ್ಪತ್ತಿ. ಅನ್ನದಿಂದಲೇ ಹುಟ್ಟಿದ ಸರ್ವರೂ ಬದುಕುತ್ತಾರೆ. ಅನ್ನದಿಂದಲೇ ಅಂತ್ಯವನ್ನೂ ಕಾಣುತ್ತಾರೆ ಅಂತ ಹೇಳುತ್ತೆ ನಮ್ಮ ಉಪನಿಷತ್ತು.

ಅದೇ ರೀತಿ ಆಯುರ್ವೇದವು ತಿಳಿಸುತ್ತದೆ - ದೇಹದ ಬಲ, ಶರೀರದ ಕಾಂತಿ, ಓಜಸ್ಸು, ಸುಖ-ದುಃಖ, ದೀರ್ಘಾಯುತ್ವ- ಈ ಎಲ್ಲವೂ ಅನ್ನವನ್ನೇ ಅವಲಂಬಿಸಿದೆ. ಮಾನಸಿಕ ತೃಪ್ತಿ, ಸಂತೋಷ, ಮೇಧಾ ಶಕ್ತಿ, ಶಾಂತಿ ಎಲ್ಲವೂ ಸಹ ನಾವು ತಿನ್ನುವ ಅನ್ನದಿಂದಲೇ. ಅದಿರಲಿ, ಎಲ್ಲ ಲೌಕಿಕ ಹಾಗೂ ಅಲೌಕಿಕ ವೈದಿಕ ಕರ್ಮಗಳಲ್ಲೂ ಅನ್ನವೇ ಮುಖ್ಯ. ಆದ್ದರಿಂದ ಅನ್ನ ಅಥವಾ ಆಹಾರ ಸೇವನೆ ಯಜ್ಞದಂತೆ ಒಂದು ಪವಿತ್ರವಾದ ಕಾರ್ಯ. ಅತ್ಯಂತ ಶ್ರದ್ಧೆಯಿಂದ ಕೇವಲ ಹಿತಾಹಾರವೆಂಬ ಸಮಿತ್ತಿನಿಂದ ಅಂತರಗ್ನಿಗೆ ಆಹುತಿ ನೀಡಬೇಕು. ಹೀಗೆ ನಮ್ಮ ಬದುಕಿಗೆ ಹಿತವಾದ ಆಹಾರವನ್ನು ಅರಿತು ಯಾರು ಸಕ್ರಮವಾಗಿ ಸೇವಿಸುತ್ತಾರೋ ಅಂತಹವರು ಯಾವುದೇ ರೋಗದಿಂದ ಬಳಲುವುದಿಲ್ಲ ಎಂದು.

ಆದ್ದರಿಂದಲೇ, ಆಯುರ್ವೇದವು ಆಹಾರವನ್ನು ಮಹಾಭೈಷಜ್ಯವೆಂದು ಕರೆದು ಅದಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಿಷಯವನ್ನು ಎಳೆ ಎಳೆಯಾಗಿ ಅತ್ಯಂತ ವಿಸ್ತಾರವಾಗಿ ಸಂಹಿತೆಗಳಲ್ಲಿ ತೆರೆದಿಟ್ಟಿದೆ. ಯಾವುದೇ ಆಹಾರವನ್ನು ಬಳಸುವ ಮುನ್ನ ಆ ಆಹಾರದ ಗುಣಧರ್ಮಗಳ ಪರಿಚಯ ಅತ್ಯವಶ್ಯಕ ವಾಗುತ್ತದೆ. ಅದರ ಜತೆಗೆ ಆಹಾರವನ್ನು ಯಾರು ಸೇವಿಸುತ್ತಾರೋ ಅವರ ಶಾರೀರಿಕ ಪ್ರಕೃತಿ ಹಾಗೂ ಗುಣಧರ್ಮಗಳ ಅರಿವು ಅಗತ್ಯ. ಈ ಎರಡು ವಿಚಾರಗಳನ್ನು ಅರಿತು ಆಹಾರವನ್ನು ಸೇವಿಸಿದಾಗ ಮಾತ್ರ ಅದು ಸ್ವಾಸ್ಥ್ಯವನ್ನು ನೀಡಬಹುದು ಎಂಬುದು ಆಯುರ್ವೇದದ ಕಿವಿಮಾತು.

ಇತ್ತೀಚೆಗೆ, ನನ್ನ ಕ್ಲಿನಿಕ್‌ನಲ್ಲಿ ಕೆಲವು ಪೇಷೆಂಟ್‌ಗಳ ಜತೆ ಚರ್ಚಿಸುತ್ತಿದ್ದಾಗ ಗೊತ್ತಾದ ವಿಷಯ ಏನೆಂದರೆ ಸದ್ಯ, ಜನರ ಮನಸ್ಸಿನಲ್ಲಿ ಇರುವ ಭಾವನೆ ಏನಪ್ಪಾ ಅಂದರೆ 'ಸಿರಿಧಾನ್ಯ' ಬಹಳ ಒಳ್ಳೆಯದು, ಅತ್ಯಂತ ಆರೋಗ್ಯಕರ ಎಂದು. ಇದರಿಂದ ಬಿಪಿ, ಶುಗರ್, ಕೊಲೆಸ್ಟ್ರಾಲ್, ಹಾರ್ಟ್ ಸಮಸ್ಯೆಗಳು ಬರುವುದಿಲ್ಲ. It is rich in fibre and proteins. Millet is the trend - a very healthy trend! ಹಾಗಾಗಿ, ಅಭ್ಯಾಸ ಇಲ್ಲದಿದ್ದವರೂ ಸಹ ಪ್ರತಿನಿತ್ಯ ಈ ಸಿರಿಧಾನ್ಯವನ್ನು ತಮ್ಮ ಆಹಾರದಲ್ಲಿ ಬಳಸುವ ಪ್ರಯತ್ನ ಶುರು ವಾಗಿದೆ. ಕೆಲವರಂತೂ ಬೆಳಗ್ಗಿನ ತಿಂಡಿಯಲ್ಲಿ, ಮಧ್ಯಾಹ್ನದ ಊಟದಲ್ಲಿ, ರಾತ್ರಿಯ ಆಹಾರದ ಜತೆ, ಹಾಲಿನ ಜತೆ, ಸ್ನಾಕ್ ಬದಲು ಈ ಸಿರಿಧಾನ್ಯ ವನ್ನು ಅಳವಡಿಸಿಕೊಂಡು ಸ್ವಲ್ಪ ಸಮಯದ ನಂತರ ನನ್ನ ಕ್ಲಿನಿಕ್‌ಗೆ ಬಂದ ಉದಾಹರಣೆಗಳು ಬಹಳ ಸಿಗುತ್ತಿವೆ. ಚರ್ಮ ಒಣಗಿವುದು, ಕೂದಲು ಉದರುವಿಕೆ, ಮೂಳೆ ನೋವು, ಮಲಬದ್ಧತೆ, ಹೊಟ್ಟೆ ಉಬ್ಬರ, ನಿದ್ರಾಹೀನತೆ, ದೌರ್ಬಲ್ಯ, ಮಾನಸಿಕ ಕಿರಿಕಿರಿ, ಮುಟ್ಟಿನ ಸಮಸ್ಯೆ ಇತ್ಯಾದಿ - ಈ ಎಲ್ಲ ಸಮಸ್ಯೆಗಳು ಸಹ ಸಿರಿಧಾನ್ಯದ ಬಳಕೆಯ ನಂತರವೇ ಪ್ರಾರಂಭವಾದದ್ದು ಎಂಬುದು ಸ್ಪಷ್ಟ. ಹಾಗಾದರೆ ಏನಿದು ಸಿರಿಧಾನ್ಯ? ಇದು ಆರೋಗ್ಯಕ್ಕೆ ಒಳ್ಳೆಯದೋ? ಕೆಟ್ಟದ್ದೋ? ಯಾರು ಇದನ್ನು ಬಳಸಬಹುದು? ಯಾರು ಬಳಸಿದರೆ ತೊಂದರೆ? ಎಷ್ಟು ಬಳಸಬೇಕು? ಹೇಗೆ ಬಳಸಬೇಕು? - ಈ ಎಲ್ಲ ವಿಷಯಗಳನ್ನು ನಾವು ಆಯುರ್ವೇದದ ಶಾಸ್ತ್ರದ ಪ್ರಕಾರ ತಿಳಿದುಕೊಳ್ಳೋಣ.

ಅತ್ಯಂತ ಕಡಿಮೆ ನೀರಿನಲ್ಲಿ ಮತ್ತು ಒಣಗಿದ ಪ್ರದೇಶದಲ್ಲಿಯೂ ಬೆಳೆಯ ಬಹುದಾದ್ದರಿಂದ, ಆಡು ಭಾಷೆಯಲ್ಲಿ 'ಸಿರಿಧಾನ್ಯ' ಎಂದು ಈ ಮಿಲ್ಲೆಟ್ಸ್ ಅನ್ನು ಕರೆದರೆ, ಆಯುರ್ವೇದವು ಇದನ್ನು ಸ್ವಲ್ಪ ನೆಗೆಟಿವ್ ಆಗಿಯೇ ಹೆಸರಿಸಿದೆ! ಸಂಹಿತೆಗಳಲ್ಲಿ ಸಿರಿಧಾನ್ಯವನ್ನು 'ಕುಧಾನ್ಯ ಅಥವಾ ಕ್ಷುದ್ರಧಾನ್ಯ' ಎಂದು ಕರೆದಿದೆ. ಅಂದರೆ ಈ ಮಿಲ್ಲೆಟ್ಸ್‌ಗಳು ಧಾನ್ಯಗಳಲ್ಲಿಯೇ ಅತ್ಯಂತ ಹೀನವಾದದ್ದು ಅಥವಾ ನಿಕೃಷ್ಟವಾದದ್ದು ಎಂದರ್ಥ. ಆಯುರ್ವೇದ ಹೇಳುತ್ತೆ, ಬೇರೆ ಧಾನ್ಯಗಳಿಗೆ ಹೋಲಿಸಿದರೆ ಈ ಕುಧಾನ್ಯಗಳ ಗುಣಧರ್ಮಗಳು ಅತ್ಯಂತ ಕೆಳಗಿನ ಮಟ್ಟದ್ದು ಎಂದು.

ಈ ಕುಧಾನ್ಯಗಳ ಸಾಮಾನ್ಯವಾದಂತಹ ಗುಣ ಗಳು ಹೀಗಿವೆ- ಇದು ದೇಹದಲ್ಲಿ ವಾತ ಎಂಬ ದೋಷವನ್ನು ಹೆಚ್ಚಿಸಿ, ಕಫ-ಪಿತ್ತಗಳೆಂಬ ದೋಷ ಗಳನ್ನು ಕಡಿಮೆ ಮಾಡಿ, ಧಾತುಗಳಲ್ಲಿರುವ ಜಿಡ್ಡಿನ

ಅಂಶವನ್ನು ಕೆರೆದು ಹಾಕುವ ಸ್ವಭಾವ ಈ ಸಿರಿಧಾನ್ಯ ಗಳಿಗಿದೆ. ಇವುಗಳು ದೇಹದಲ್ಲಿನ ಮಲಭಾಗವನ್ನು ಹೆಚ್ಚಿಸಿ, ಅದನ್ನು ಹೊರಗೂ ಹಾಕದೆ ದೇಹದಲ್ಲೇ ಉಳಿಯುವಂತೆ ಮಾಡುವುದರಿಂದ ಇದನ್ನು ಕುಧಾನ್ಯ ಅಥವಾ ಕೆಟ್ಟಧಾನ್ಯ ಎಂದು ಕರೆಯ ಬಹುದು. ಸ್ನೇಹಿತರೆ ನಮ್ಮ ದೇಹದ ದಿನನಿತ್ಯದ ಕಾರ್ಯಕ್ಷಮತೆಗೆ, ಉತ್ತಮವಾದಂತಹ ಪೋಷಣೆಗೆ ಮತ್ತು ಬೆಳವಣಿಗೆಗೆ, ಪ್ರತಿ ಅವಯವದ ಸ್ಥಿರತೆಗೆ , ದೇಹದ ದೃಢತೆಗೆ ಮಧುರ ರಸ (ಪ್ರಾಕೃತವಾದ ಸಿಹಿ ರುಚಿ) ಹಾಗೂ ಸ್ನಿಗ್ಧತೆ (ಜಿಡ್ಡಿನಂಶದ) ಅವಶ್ಯಕತೆ ಇದೆ. ಹಾಗಾಗಿಯೇ ಆಯುರ್ವೇದವು ಹೇಳುತ್ತದೆ- ನಾವು ನಿತ್ಯ ಬಳಸುವ ಆಹಾರ ಪದಾರ್ಥಗಳಲ್ಲಿ ಪ್ರಾಕೃತಿಕವಾದ ಮಧುರವಾದ ರುಚಿ ಹಾಗೂ ಜಿಡ್ಡಿನಂಶ ಇರಲೇಬೇಕು ಎಂದು. ಆದರೆ ಈ ಸಿರಿಧಾನ್ಯಗಳಲ್ಲಿ ಜಿಡ್ಡಿನಂಶವೂ ಇಲ್ಲ ಹಾಗೂ ಈ ಪ್ರಾಕೃತಿಕವಾದ ಮಧುರ ರಸವೂ ಇಲ್ಲ. ತದ್ವಿರುದ್ಧವಾಗಿ, ಇದು ಕಷಾಯ ರುಚಿ (ಒಗರು) ಮತ್ತು ರೂಕ್ಷ (ಒಣಗಿಸುವ ಸ್ವಭಾವ ಉಳ್ಳದ್ದು). ಹಾಗಾಗಿ ಈ ಮಿಲ್ಲೆಟ್ಸ್‌ಗಳು ಪ್ರತಿನಿತ್ಯ ನಮ್ಮ ಶರೀರದ ಪೋಷಣೆಗೆ ಸೂಕ್ತವಾದಂತಹ ಆಹಾರ ದ್ರವ್ಯ ಖಂಡಿತ ಅಲ್ಲ. ಈ ಕಾರಣದಿಂದಲೇ ಆಯು ರ್ವೇದವು ಈ ಸಿರಿಧಾನ್ಯವನ್ನು ನಿತ್ಯೋಪಯೋಗಕ್ಕೆ ಅಥವಾ ಪ್ರತಿನಿತ್ಯ ಬಳಸುವುದಕ್ಕೆ ನಿಷೇಧಿಸಿದೆ.

ಇತಿಹಾಸದಲ್ಲಿ ಸಿಗುವಂತೆ ಈ ಸಿರಿಧಾನ್ಯಗಳನ್ನು ಕುದುರೆ, ಮೇಕೆ, ದನ, ಕುರಿ, ಎತ್ತು, ಆನೆ, ಇತ್ಯಾದಿ ಪ್ರಾಣಿಗಳಿಗೆ ಇದರ ಹುಲ್ಲು ಮತ್ತು ಕಾಳುಗಳನ್ನು ಮೇವಾಗಿ ಬಳಸುತ್ತಿದ್ದರು ಎಂದು ತಿಳಿದು ಬರುತ್ತದೆ. ಹಾಗಾಗಿಯೇ ಹೆಚ್ಚಾಗಿ ನಮ್ಮ ಪೂರ್ವ ಜರು ಅಥವಾ ಹಿರಿಯರು ಇದನ್ನು ಆಹಾರವಾಗಿ ಬಳಸುವ ಉದಾಹರಣೆಗಳನ್ನು ನಾವು ಕೇಳಿರಲಿಕ್ಕಿಲ್ಲ. ನನ್ನ ಅಜ್ಜಿಯನ್ನು ವಿಚಾರಿಸಿದಾಗಲೂ ಸಹ ಅವರ ಸಮಯದಲ್ಲಿ ಈ ಸಿರಿಧಾನ್ಯದ ಬಳಕೆ ಅಷ್ಟೇನು ಪ್ರಚಲಿತದಲ್ಲಿರಲಿಲ್ಲ. ನಮ್ಮ ಮನೆಯ ಹಿರಿಯರು ಇದನ್ನು ಬಳಸುತ್ತಿರಲಿಲ್ಲ ಎಂಬ ಮುಖ್ಯವಾದ ಅಂಶವನ್ನೇ ನಾವು ಮರೆತು, ಎಲ್ಲರೂ ಬಳಸುತ್ತಿದ್ದಾರಲ್ಲ ನಾವು ಬಳಸೋಣ ಎಂಬ ಮೂಢವಾದ ಆಚರಣೆಯನ್ನು ಪ್ರಾರಂಭಿಸಿ ರುವುದು ಎಂತಹ ದುಃಖಕರವಾದ ಸಂಗತಿ!

ಆಯುರ್ವೇದದ ತತ್ವ ನಮಗೆ ತಿಳಿಸುತ್ತದೆ, ಯಾವುದೇ ವಸ್ತುವನ್ನು ಬಳಸುವ ಮುನ್ನ 5 ಪ್ರಶ್ನೆಗಳನ್ನು ಕೇಳಿಕೊಂಡು ಅವುಗಳಿಗೆ ಉತ್ತರ ಪಡೆದುಕೊಂಡ ನಂತರವೇ ಅದನ್ನು ಬಳಸುವುದು ಉತ್ತಮ ಎಂದು. ಯಾವುದು? ಯಾರಿಗೆ? ಏಕೆ? ಎಷ್ಟು? ಹೇಗೆ? ಎಂಬ ವಿವೇಚನೆಯನ್ನು ಇಟ್ಟುಕೊಂಡಾಗ ಮಾತ್ರ ನಾವು ಬಳಸುವ ಆಹಾರವು ನಮಗೆ ಹಿತವಾಗುತ್ತದೆ, ಇಲ್ಲವಾದಲ್ಲಿ ಅಮೃತವೂ ಸಹ ವಿಷವಾಗುತ್ತದೆ.

ಮಿಲ್ಲೆಟ್ಸ್ ಯಾರಿಗೆ, ಯಾವಾಗ ಒಳ್ಳೆಯದು? ಆಯುರ್ವೇದದ ಪ್ರಕಾರ ಮಿಲ್ಲೆಟ್ಸ್ ಜೀರ್ಣಕ್ಕೆ ಜಡ. ಅಂದರೆ ಇದನ್ನು ಜೀರ್ಣಿಸಿಕೊಳ್ಳಲು ಹೆಚ್ಚು ಸಮಯ ಬೇಕು. ನಮ್ಮ ಜಠರಾಗ್ನಿ ಇದನ್ನು ಪಚನ ಮಾಡಲು ಹೆಚ್ಚು ಪರಿಶ್ರಮ ಪಡುವ ಅಗತ್ಯವಿದೆ. ಆದ್ದರಿಂದ, ಅತ್ಯಂತ ಶಾರೀರಿಕ ಶ್ರಮ ಪಡುವವರು, ವ್ಯಾಯಾಮ ಹೆಚ್ಚಾಗಿ ಮಾಡುವ ವರು, ದೈಹಿಕ ಶ್ರಮದ ಕೆಲಸ ಮಾಡುವವರು, ರೈತರು, ಕೂಲಿ ಕೆಲಸ ಮಾಡುವವರು, ಭಾರ ಹೊರುವವರು ಮತ್ತು ದಿನದಲ್ಲಿ ಕೇವಲ ಎರಡು ಬಾರಿ ಆಹಾರ ಸೇವಿಸುವವರಿಗೆ ಮಿಲ್ಲೆಟ್ಸ್ ಹಿತವಾಗಬಹುದು. ಮಿಲ್ಲೆಟ್ಸ್ ಅತ್ಯಂತ ರೂಕ್ಷವಾದ್ದರಿಂದ ಅಂದರೆ ಒಣಗಿಸುವ ಸ್ವಭಾವ ಇರುವುದರಿಂದ, ಜಿಡ್ಡನ್ನು ಹೀರುವುದರಿಂದ ಇದು ಕೊಬ್ಬಿನಂಶ ಹೆಚ್ಚಿರುವವರಲ್ಲಿ, ಸ್ಥೌಲ್ಯದಿಂದ ಉಂಟಾದ ರೋಗಗಳಲ್ಲಿ ಒಳ್ಳೆಯದು. ಸಿರಿಧಾನ್ಯಗಳು ದೇಹದ ನೀರಿನ ಅಂಶವನ್ನು ಒಣಗುವಂತೆ ಮಾಡುವುದರಿಂದ ದೇಹದಲ್ಲಿ ನೀರಿನಂಶ ಹೆಚ್ಚಾಗಿರುವವರಲ್ಲಿ, ಕಫ ದೋಷದಿಂದ ಬಂದಂತಹ ಪ್ರಮೇಹವಿದ್ದವರಿಗೆ ಇದು ಒಳ್ಳೆಯದು. ಸಿರಿಧಾನ್ಯಗಳನ್ನು ನಾವು ಸಾಮಾನ್ಯವಾಗಿ ಕಫಜ ಪ್ರಮೇಹ, ಒಬೆಸಿಟಿ - ಇಂತಹ ತೊಂದರೆಗಳಲ್ಲಿ ಹಿತಮಿತವಾಗಿ ಬಳಸುವ ಸೂಚನೆಯನ್ನು ರೋಗಿಗಳಿಗೆ ನೀಡುತ್ತೇವೆ.

ಇದು ಯಾರಿಗೆ ಯಾವಾಗ ಅಹಿತ?

- ಹೆಚ್ಚಾಗಿ ಶಾರೀರಿಕ ಶ್ರಮ ಅಥವಾ ವ್ಯಾಯಾಮ ಇಲ್ಲದವರಿಗೆ (who are more into desk work / sedentary living)
- ಕೃಶವಿದ್ದವರು, ತೆಳ್ಳಗಿರುವವರು, ಹೆಚ್ಚಿನ ಕೊಬ್ಬಿನಂಶ ಇಲ್ಲದವರು
- ವೃದ್ಧರಿಗೆ ಮತ್ತು ಬೆಳೆಯುವ ಎಳೆಯ ಮಕ್ಕಳಿಗೆ (ಇವರಿಗೆ ಧಾತುಗಳನ್ನು ಪೋಷಿಸುವ ಆಹಾರಗಳು ಅವಶ್ಯಕವೇ ಹೊರತು ಧಾತುಗಳನ್ನು ಕೆರೆದು ತೆಗೆದು ಹಾಕುವ ದ್ರವ್ಯಗಳದ್ದಲ್ಲ!)
- ವಾತದ ತೊಂದರೆ ಹೆಚ್ಚಿರುವವರು- ಮೂಳೆ ಸವೆತ, ನೋವು ಇದ್ದವರಲ್ಲಿ (ನೆನೆಪಿರಲಿ ಮಿಲ್ಲೆಟ್ಸ್ ವಾತವನ್ನು ಮತ್ತಷ್ಟು ಹೆಚ್ಚಿಸುತ್ತದೆ)
- ಜೀರ್ಣಶಕ್ತಿ ಕಡಿಮೆ ಇರುವವರಿಗೆ, ಹಸಿವೆ ಇಲ್ಲದಾಗ ಬಳಸಿದಾಗ
- ಮಲಬದ್ಧತೆ, ಹೊಟ್ಟೆ ಉಬ್ಬರದ ತೊಂದರೆ ಇರುವವರಿಗೆ
- ಚರ್ಮದ ಒಣಗುವಿಗೆ, ಕೂದಲು ಉದುರುವಿಕೆ ಇರುವವರಿಗೆ
- ಅತ್ಯಂತ ಬಿಸಿಲು ಕಾಲದಲ್ಲಿ
- ನಿದ್ರಾ ಹೀನತೆ ಇದ್ದಲ್ಲಿ
- ಒಳ್ಳೆಯದೆಂದು ಪ್ರತಿ ನಿತ್ಯ ಬಳಸಿದಾಗ
- ಶರೀರಕ್ಕೆ ಅಭ್ಯಾಸವಿಲ್ಲದಾಗ ಅಥವಾ ಒಗ್ಗದೇ ಇದ್ದರೂ ಒಳ್ಳೆಯದೆಂದು ಅತಿಯಾಗಿ ಬಳಸಿದಾಗ, ಮಿಲ್ಲೆಟ್ಸ್‌ಗಳಿಂದ ತೊಂದರೆ ತಪ್ಪಿದ್ದಲ್ಲ.

ನಾನು ಆಗಲೇ ಹೇಳಿದಂತೆ ಒಣಗಿಸುವ, ಕೆರೆದು ಹಾಕುವ ಸ್ವಭಾವ ಈ ಮಿಲ್ಲೆಟ್ಸ್‌ಗಳಿಗೆ ಇರುವುದ ರಿಂದ ಈ ಮೇಲೆ ಹೇಳಿದವರಿಗೆ ಸೂಕ್ತವಲ್ಲ.

ಹಾಗಾದರೆ ಈ ಮಿಲ್ಲೆಟ್ಸ್‌ಗಳನ್ನು ಹೇಗೆ ಬಳಸಬೇಕು?

ಮೊಟ್ಟಮೊದಲಿಗೆ ಆಯುರ್ವೇದ ವೈದ್ಯರ ಸಲಹೆಯನ್ನ ಪಡೆದೇ ಇದನ್ನು ಬಳಸುವುದು ಉತ್ತಮ. ನಿಮ್ಮ ದೇಹದ ಸ್ಥಿತಿಗೆ, ಪ್ರಕೃತಿಗೆ ಈ ಸಿರಿಧಾನ್ಯಗಳು ಒಳ್ಳೆಯದೋ ಇಲ್ಲವೋ ಎಂಬ ವಿಷಯವನ್ನು ನೀವು ವೈದ್ಯರ ಜತೆ ಚರ್ಚಿಸಿ, ಸಂಪೂರ್ಣವಾಗಿ ತಿಳಿದುಕೊಂಡ ನಂತರವೇ ಸಿರಿಧಾನ್ಯಗಳ ಪ್ರಯೋಗ ಸೂಕ್ತ. ಇನ್ನು, ವೈದ್ಯರ ಸಲಹೆ ಇಲ್ಲದೆ ಆರೋಗ್ಯವಂತರು ಇದನ್ನು ಬಳಸುವುದಾದರೆ ಹೆಚ್ಚಾಗಿ ತಿಂಗಳಿಗೊಮ್ಮೆ ಅಥವಾ ಎರಡು ಬಾರಿ ಇದನ್ನು ಬಳಸಬಹುದು. ಹಸಿವೆ ಹೆಚ್ಚಿದಾಗ ಅಂದರೆ ಸಾಮಾನ್ಯವಾಗಿ ಮಧ್ಯಾಹ್ನದ ಊಟದಲ್ಲಿ ಇದರ ಪ್ರಯೋಗ ಒಳ್ಳೆಯದು. ರಾತ್ರಿ ಊಟಕ್ಕೆ ಖಂಡಿತ ಬೇಡ. ಮಿಲ್ಲೆಟ್ಸ್‌ಗಳಿಂದ ಖಾದ್ಯಗಳನ್ನು ತಯಾರಿಸುವಾಗ ಅದನ್ನು ತಪ್ಪದೇ ಸಾಕಷ್ಟು ತುಪ್ಪ ಅಥವಾ ಎಣ್ಣೆಯೊಂದಿಗೆ ಸಂಸ್ಕರಿಸಿಯೇ ತಿನ್ನುವುದು ಸೂಕ್ತ. ಜಿಡ್ಡಿನ ಪದಾರ್ಥವಿಲ್ಲದೆ ತಿಂದಾಗ ಹೊಟ್ಟೆ ಉಬ್ಬರ, ಮಲಬದ್ಧತೆ ಇತ್ಯಾದಿ ಸಮಸ್ಯೆಗಳು ಕಾಣಬಹುದು. ಸದಾ ಬೇಯಿಸಿದ ಆಹಾರದ ಸ್ವರೂಪದಲ್ಲಿಯೇ ಇದನ್ನು ಸೇವಿಸು ವುದು ಒಳ್ಳೆಯದು. ಹಾಗೆ, ಇದನ್ನು ಸಂಪೂರ್ಣ ವಾಗಿ ಹೊಟ್ಟೆ ತುಂಬುವಷ್ಟು ತಿನ್ನದೆ, ಇನ್ನೂ ಕೆಲವು ತುತ್ತುಗಳು ಸೇರುತ್ತದೆ ಎನ್ನುವಾಗಲೇ ನಿಲ್ಲಿಸುವುದ ರಿಂದ ಈ ಸಿರಿಧಾನ್ಯಗಳು ಸರಿಯಾಗಿ ಜೀರ್ಣ ವಾಗಲು ಅನುಕೂಲವಾಗುತ್ತದೆ. ಇನ್ನು ವ್ಯಾಯಾಮ ಮಾಡುವಾಗ ಅಥವಾ ಶ್ರಮದ ಕೆಲಸವಿದ್ದಾಗ ಇದನ್ನು ಬಳಸುವುದು ಇನ್ನೂ ಒಳ್ಳೆಯದು. ಏನೇ ಇದ್ದರೂ ಬಿಸಿಲುಗಾಲದಲ್ಲಿ ಇದರ ಸೇವನೆ ಬೇಡ.

ಒಂದಂತೂ ಸ್ಪಷ್ಟ- ನಾವು ಹುಟ್ಟಿದಾಗಿನಿಂದ ತಿಂದುಕೊಂಡು ಬೆಳೆದಿರುವ ಆಹಾರಗಳನ್ನು, ನಮ್ಮ ಶರೀರಕ್ಕೆ ಒಗ್ಗಿರುವ ದ್ರವ್ಯಗಳನ್ನು ಒಮ್ಮಿಂದೊಮ್ಮೆಲೆ ಬಿಟ್ಟು, ದೇಹಕ್ಕೆ ಪರಿಚಯವೇ ಇರದ, ಒಗ್ಗದೇ ಇರುವ ಆಹಾರಗಳನ್ನು ವಿವೇಚನೆ ಇಲ್ಲದೆ ಬಳಸಿದಾಗ ಅದು ಖಂಡಿತ ದೇಹದಲ್ಲಿ ವಿಷವಾಗಿ ಪರಿಣಮಿಸಿ ಇಲ್ಲದಿರುವ ಖಾಯಿಲೆಗಳನ್ನು ಉತ್ಪತ್ತಿ ಮಾಡುತ್ತದೆ. ದೇಶ-ಕಾಲಗಳ ಪರಿಧಿಯನ್ನು ಮರೆತು ಮತ್ಯಾವುದೋ ದೇಶದ ಲ್ಯಾಬ್ ಗಳಲ್ಲಿ ಮಾಡಿದ ರಿಸರ್ಚ್ ಫ್ಯಾಕ್ಟ್‌ಗಳನ್ನು ನಾವು ಆಧಾರ ವಾಗಿಟ್ಟುಕೊಂಡು ಅದರಿಂದ ನಮಗೂ ಒಳ್ಳೆಯದಾ ಗುತ್ತದೆ ಎಂಬ ಭಾವನೆಯಲ್ಲಿ ಆಹಾರ ಪದ್ಧತಿಗಳನ್ನು ಬಳಸುತ್ತಾ, ಬದಲಿಸುತ್ತಾ ಹೋದರೆ ಯಾವ ಆಯುರ್ವೇದವು ನಮ್ಮನ್ನು ರಕ್ಷಿಸಲು ಸಾಧ್ಯವಿಲ್ಲ!

ನೆನೆಪಿರಲಿ:

ನ ಚ ಆಹಾರ ಸಮಂ ಕಿಂಚಿತ್ ಭೈಷಜ್ಯಂ ಉಪಲಭ್ಯತೆ।
ಶಕ್ಯತೆ ಅಪಿ ಅನ್ನಮಾತ್ರೇಣ ನರಃ ಕರ್ತುಮ್ ನಿರಾಮಯಃ॥

ಆಹಾರಕ್ಕೆ ಸಮನಾದ ಔಷಧವು ಮತ್ತೊಂದಿಲ್ಲ. ಕೇವಲ ನಮ್ಮ ಆಹಾರದಿಂದಲೇ ನಾವು ಸಂಪೂರ್ಣ ವಾಗಿ ನಿರಾಮಯರಾಗಬಹುದು ಎಂಬುದು ನಮ್ಮ ಆಯುರ್ವೇದ ಆಚಾರ್ಯರ ಭರವಸೆ! ಆದ್ದ ರಿಂದ, ಆಹಾರದ ಬಗ್ಗೆ ಸಂಪೂರ್ಣವಾಗಿ ತಿಳಿದು ನಂತರ ಬಳಸಿ ಎಂಬುದು ಆಯುರ್ವೇದ ವೈದ್ಯರ ಇಚ್ಛೆ!

ಪ್ರಸ್ತುತ

ರಂಗನಾಥ ಎನ್ ವಾಲ್ಮೀಕಿ

ನಿರೂಪಣೆ ಕಲೆಗೆ ಮೆರುಗು ತಂದ ಅಪರ್ಣಾ ವಸ್ತಾರೆ

ಯಾವುದೇ ಒಂದು ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ನಿರೂಪಕರ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಸಂಘಟಕರು ಬಹಳ ದಿನ ಶ್ರಮಿಸಿ ಕಾರ್ಯಕ್ರಮ ಸಿದ್ಧತೆ ಮಾಡಿರುತ್ತಾರೆ. ಆಹ್ವಾನ ಪತ್ರಿಕೆ, ಗಣ್ಯರ ಸ್ವಾಗತ , ವೇದಿಕೆ ನಿರ್ಮಾಣ ಎಲ್ಲ ಕಾರ್ಯಗಳು ಯಶಸ್ವಿಯಾದರೂ ಕಾರ್ಯಕ್ರಮ ಯಶಸ್ವಿ ಎನಿಸಿ ಬೇಕಾದರೆ ಗಣ್ಯರ ಮಾತುಗಳಂತೆ ಕಾರ್ಯಕ್ರಮ ನಿರೂಪಕರ ಪಾತ್ರವೂ ಮುಖ್ಯ. ನಿರೂಪಣೆ ಹೇಗಿರಬೇಕು ಎಂದು ವಿಸ್ತಾರವಾಗಿ ಹೇಳುವ ಬದಲು ಅಪರ್ಣಾ ವಸ್ತಾರೆ ಅವರ ತರಹ ನಿರೂಪಣೆ ಇರಬೇಕು ಎಂದು ಒಂದೇ ಮಾತಲ್ಲಿ ಹೇಳಬಹುದು.

ಅಪರ್ಣಾ ಕನ್ನಡ ನಾಡಿನ ಹೆಮ್ಮೆಯ ಅಪರೂಪದ ನಿರೂಪಕಿ. ಸ್ಪಷ್ಟ ಭಾಷೆ, ಮೃದುವಾದ ಇಂಪಾದ ಧ್ವನಿ, ಸಂದರ್ಭಕ್ಕೆ ತಕ್ಕಂತೆ ಪದಗಳ ಬಳಕೆ, ಧ್ವನಿಯ ಏರಿಳಿತ, ಹಾವ ಭಾವ ಸಭೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಚಾಕಚಕ್ಯತೆ ಎಲ್ಲವೂ ವಿಶೇಷ ವಿಭಿನ್ನ. ರಾಜ್ಯ ರಾಷ್ಟ್ರ ಮಟ್ಟದ ಅನೇಕ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ನಿರೂಪಿಸಿದ ಕೀರ್ತಿ ಅವರದು. ಬೆಂಗಳೂರಿನಲ್ಲಿ ನಿರಂತರವಾಗಿ ದೀಪಾವಳಿ ಹಬ್ಬದ ನಿಮಿತ್ತ ನಡೆದ ಕಾರ್ಯಕ್ರಮವನ್ನು ಸತತವಾಗಿ ಎಂಟು ಗಂಟೆ ನಿರೂಪಿಸಿದ ದಾಖಲೆ ಅವರದು. ಎಂತದೇ ಕಾರ್ಯಕ್ರಮ ಇರಲಿ. ಲಕ್ಷ ಲಕ್ಷ ಸಭಿಕರು ಸೇರಿರಲಿ ಅಲ್ಲಿ ಅಪರ್ಣಾ ನಿರೂಪಕಿಯಾಗಿದ್ದರೆ ಆ ಕಾರ್ಯಕ್ರಮ ಯಶಸ್ವಿಯಾದಂತೆ ಅಷ್ಟೊಂದು ನಿರೂಪಣೆ ಕಲೆ ಅವರಿಗೆ ಒಲಿದಿತ್ತು. ಇಲ್ಲವೇ ಅವರೇ ಒಲಿಸಿಕೊಂಡಿದ್ದರು. ನಿರೂಪಕರಿಗೆ ಕಾರ್ಯಕ್ರಮದ ಉದ್ದೇಶದ ಅರಿವು ಸಮಯದ ಪ್ರಜ್ಞೆ ಎರಡೂ ಅಗತ್ಯ. ಮುಖ್ಯವಾಗಿ ಅಲ್ಲಿ ಭಾಗವಹಿಸುವ ಗಣ್ಯರ ಹೆಸರುಗಳು ತಿಳಿದಿರಬೇಕು. ಸಂದರ್ಭಕ್ಕೆ ತಕ್ಕಂತೆ ಅನೇಕ ಬದಲಾವಣೆಗಳನ್ನು ನಿರೂಪಕರು ತತಕ್ಷಣ ಮಾಡಬೇಕಾಗುತ್ತದೆ. ಅವುಗಳನ್ನು ನಿಭಾಯಿಸುವ ಜಾಣ್ಮೆ ಅಗತ್ಯ. ಅಲ್ಲದೇ ನಿರೂಪಣೆ ಊಟದ ಜೊತೆ ಉಪ್ಪಿಕಾಯಿಯಂತೆ ಇರಬೇಕು. ಗಣ್ಯರ ಮಾತುಗಳನ್ನೇ ಮತ್ತೆ ಮತ್ತೇ ಹೇಳಿ ಸಮಯ ವ್ಯಯ ಮಾಡದೇ ಅಭಾಸವುಂಟಾಗದಂತೆ ಎಚ್ಚರ ವಹಿಸಬೇಕು. ನಿರೂಪಣೆಯು ಒಂದು ಕಲೆ. ಅಪರ್ಣಾ ಕನ್ನಡದ ಹೆಮ್ಮೆಯ ನಿರೂಪಕಿ ಎಂಬುದರಲ್ಲಿ ಮಾತಿಲ್ಲ. ಅಪರ್ಣಾ ಹಾಗೂ ಶಂಕರ ಪ್ರಕಾಶ ಜೋಡಿಯ ನಿರೂಪಣೆ ಕೇಳುವುದೇ ಕರ್ಣಾನಂದ.

ಅಪರ್ಣಾ ಬಹುಮುಖ ಪ್ರತಿಭಾವಂತೆ. ನಟಿಯಾಗಿ, ಗಾಯಕಿಯಾಗಿ ಗುರುತಿಸಿಕೊಂಡ ಅವರು ನಿರೂಪಕಿಯಾಗಿ ತಮ್ಮದೇ ಛಾಪು ಮೂಡಿಸಿದವರು. ಅವರ ಕನ್ನಡ ಮಾತುಗಳನ್ನು ಕೇಳುತ್ತಿದ್ದರೆ ಮತ್ತೆ ಮತ್ತೆ ಕೇಳಬೇಕು ಎನಿಸುತ್ತದೆ. ಅಸ್ಖಲಿತವಾದ ಮಾತಿನ ವಾಗ್ಝರಿ ಅವರದು. ಸಂದರ್ಭಕ್ಕೆ ತಕ್ಕಂತೆ ಅವರು ಬಳಸುವ ಹಿತನುಡಿಗಳು, ಗಣ್ಯರ ಹೇಳಿಕೆಗಳು ಕವಿವಾಣಿಗಳು ಒಂದಕ್ಕಿಂತ ಒಂದು ವಿಶೇಷ ವಿಭಿನ್ನ. ಅವರು ಅಂತವುಗಳನ್ನು ಯಾವತ್ತೂ ಬರೆದದ್ದು ನೋಡಿ ಓದುವರಲ್ಲ. ಅವುಗಳನ್ನು ನೋಡದೇ ಹೇಳುವುದರಲ್ಲಿ ನಿಸ್ಸೀಮರು. ಅವರ ನಿರೂಪಣಾ ಶೈಲಿ ಎಲ್ಲರೂ ನಿಬ್ಬೆರಗಾಗುವಂತೆ ಮಾಡುವುದು. ಅವರ ಜ್ಞಾನ ಸಂಪತ್ತು ಅಪಾರವಾದುದು. ನಿರೂಪಣೆ ಮಾಡಬೇಕು ಅದರಲ್ಲಿ ಯಶಸ್ವಿಯಾಗಬೇಕು ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ನಿರೂಪಿಸಬೇಕು ಎಂಬಿತ್ಯಾದಿ ಕನಸು ಹೊತ್ತವರಿಗೆ ಅಪರ್ಣಾ ರೋಲ್ ಮಾಡೆಲ್ ಎಂದರೆ ತಪ್ಪಾಗದು. ಅವರು ಸಾವಿರಾರು ಕಾರ್ಯಕ್ರಮ ನಿರೂಪಿಸಿದ್ದಾರೆ. ಎಲ್ಲವೂ ವಿಶೇಷ. ಅವರಿಂದ ನಿರೂಪಣೆ ಮಾಡಿಸಬೇಕು ಎಂಬ ಅಪೇಕ್ಷೆ ಹಲವರದು. ಆದರೆ ಅವರು ತುಂಬಾ ಕಾರ್ಯದ ಒತ್ತಡದಲ್ಲಿ ಇದ್ದಿದ್ದರಿಂದ ಕೆಲವು ಕಾರ್ಯಕ್ರಮ ನಿರಾಕರಿಸಿದ್ದು ಉಂಟು. ಇಂತಹ ನಿರೂಪಕಿ ಮಜಾ ಟಾಕೀಸ್‌ನಲ್ಲಿ ಹಾಸ್ಯ ನಟಿಯಾಗಿ ಕಾರ್ಯಕ್ರಮ ನೀಡಿದ್ದು ಇಲ್ಲಿ ಸ್ಮರಣೀಸಬಹುದು. ಅಲ್ಲದೇ ಅನೇಕ ರೇಡಿಯೋ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಉಪನ್ಯಾಸ ನೀಡಿದ್ದಾರೆ. ಅನೇಕ ಜಾಹೀರಾತು ನೀಡಿದ್ದಾರೆ. ಬೆಂಗಳೂರು ಮೆಟ್ರೋ ದಲ್ಲಿ ಪಯಣಿಸುವವರು ನಿತ್ಯ ಅಪರ್ಣಾ ಅವರ ಧ್ವನಿ ಕೇಳುತ್ತಾರೆ. ಮುಂದಿನ ನಿಲ್ದಾಣ ಬಯ್ಯಪ್ಪನಹಳ್ಳಿ, ನಿಧಾನವಾಗಿ ಇಳಿಯಿರಿ ಎಂಬ ಕಳಕಳಿಯ ಜಾಗೃತಿ ಆಸಕ್ತಿ ಧ್ವನಿ ಈಗಲೂ ಕೇಳುತ್ತಾರೆ. ಇಂತಹ ಅಪರೂಪದ ನಿರೂಪಕಿ ಇತ್ತೀಚೆಗಷ್ಟೇ ಕ್ಯಾನ್ಸರ್ ಕಾಯಿಲೆಗೆ ತುತ್ತಾಗಿ ನಮ್ಮನ್ನು ಬಿಟ್ಟುಹೋಗಿದ್ದಾರೆ ಎಂಬ ಸುದ್ದಿಯನ್ನು ಅರಗಿಸಿಕೊಳ್ಳಲಾಗುತ್ತಿಲ್ಲ. ಐವತ್ತರ ಆಸುಪಾಸಿನ ಚಿಕ್ಕ ವಯಸ್ಸು ಸದಾ ನಗುನಗುತಾ ಬಾಳಿದ ನಟನೆ ಮೂಲಕ ಇತರರನ್ನು ನಗಿಸಿದ. ನಿರೂಪಣೆ ಮೂಲಕ ಕನ್ನಡ ಪ್ರೇಮ ಹೆಚ್ಚಿಸಿದ ಕನ್ನಡ ನುಡಿದ ಅಭಿಮಾನ ಇಮ್ಮಡಿಸಿದ ನಾಡಿನ ಅಪರೂಪದ ನಿರೂಪಕಿ ಅಪರ್ಣಾ. ಅವರು ಇಂದು ನಮ್ಮೊಂದಿಗೆ ಇಲ್ಲ, ಅವರ ಕಾಯಕ, ಸಾಧನೆ, ಅವರ ಮಾತು, ಧ್ವನಿ ಎಲ್ಲವೂ ಕನ್ನಡಿಗರ ಜತೆ ಬೆರೆತಿದೆ. ನಿರೂಪಣೆ ಕಲೆಗೆ ಮೆರುಗು ತಂದ ಅಪರ್ಣಾ ಮತ್ತೇ ಹುಟ್ಟಿ ಬರಲಿ.

ಕಲಾಂ ಸರ್: ನಿಮ್ಮ ಸ್ಮರಣೆಯೊಂದೇ ಸಾಲದೆ?

ತನ್ನಿಮಿತ್ತ

ಜಯಪ್ರಕಾಶ್ ಪುತ್ತೂರು
vveditoped@gmail.com

2015ರ ಜುಲೈ 27ರಂದು ಶಿಲ್ಲಾಂಗ್‌ನಲ್ಲಿ ವಿದ್ಯಾರ್ಥಿ ಸಮುದಾಯವನ್ನು ಉದ್ದೇಶಿಸಿ ಮಾತಾನಾಡುತ್ತಾ ನಮ್ಮ ದೇಶ ಕಂಡ ಸರಳ, ಆದರ್ಶ ಹಾಗೂ ರಾಷ್ಟ್ರ ಪ್ರೇಮಕ್ಕೆ ಪ್ರತೀಕವಾಗಿದ್ದ ಜನ ಸಾಮಾನ್ಯರ ನೆಚ್ಚಿನ ರಾಷ್ಟ್ರಪತಿ ಆಗಿದ್ದ ಭಾರತರತ್ನ ಡಾ. ಎಪಿಜೆ ಅಬ್ದುಲ್ ಕಲಾಂ ನಿಧನರಾಗಿ ಇಂದಿಗೆ 6 ವರ್ಷಗಳು ಸಂದುಹೋಗಿದೆ. ಡಾ. ರಾಜೇಂದ್ರ ಪ್ರಸಾದ್, ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಅವರ ಬಳಿಕ ಮತ್ತೊಮ್ಮೆ ಓರ್ವ ಸಂತನನ್ನು ರಾಷ್ಟ್ರಪತಿ ಭವನದಲ್ಲಿ ಮಹಾಜನತೆ ಕಂಡದ್ದು ಸರ್ವ ವಿಧಿತವಾದ ವಿಚಾರ. ಮೂಲತಃ ರಾಮೇಶ್ವರದ ತೀರಾ ಸಾಮಾನ್ಯ ಬಾಲಕನಾಗಿ ಬೆಳೆದು ಪೈಲಟ್ ಆಗಬೇಕೆಂಬ ಕನಸುಕಂಡು ಗುರಿ ಸಾಧನೆಯ ಛಲದ ಅಗ್ನಿಯನ್ನು ಹೃದಯದಲ್ಲಿ ಬೆಳೆಗಿಸಿ ವೈಮಾನಿಕ ಇಂಜಿನಿಯರಿಂಗ್ ಶಿಕ್ಷಣ ಮುಗಿಸಿ, ತದನಂತರ ಕಾರಣಾಂತರಗಳಿಂದ ಬಾಹ್ಯಾಂತರಿಕ್ಷ ಹಾಗೂ ರಕ್ಷಣಾ ಸಂಶೋಧನೆಯಲ್ಲಿ ತೊಡಗಿಸುತ್ತಾ ಗಣನೀಯವಾದ ಕೊಡುಗೆಯನ್ನು ನೀಡಿ ಕೊನೆಗೆ ಅಲಂಕರಿಸಿದ ರಾಷ್ಟ್ರಪತಿ ಹುದ್ದೆಯನ್ನು ಎಲ್ಲ ಭಾರತೀಯರು ಗೌರವಿಸುವಂಥಹ ಮಟ್ಟವನ್ನು ತಂದುಕೊಟ್ಟ ಡಾ.ಕಲಾಂ ಅಪ್ಪಟ ದೇಶಪ್ರೇಮ ಹಾಗೂ ಸರಳತೆಗೆ ಎಂಬ ವಿಚಾರಗಳಿಗೆ ಆದರ್ಶ ಪ್ರಾಯವಾಗಿ ಮೂಡಿಬಂದರು. ಸಾಮಾಜಿಕ ರಾಜಕೀಯ ಹಾಗೂ ನಾಗರಿಕ ಆಡಳಿತ ವ್ಯವಸ್ಥೆ ಮುಂತಾದ ಕ್ಷೇತ್ರಗಳಲ್ಲಿ ಭಾರತ ಸ್ವಾವಲಂಬನೆಯನ್ನು ಪಡೆದರೂ ವೈಜ್ಞಾನಿಕ ಹಾಗೂ ತಾಂತ್ರಿಕ ಬೆಳವಣಿಗೆಯನ್ನು ಸ್ವದೇಶೀಯವಾಗಿ ಸಾಧಿಸಲು ಅಗತ್ಯ ಇದೆ ಎಂಬುದಾಗಿ ಸಾರಿ ಈ ನಿಟ್ಟಿನಲ್ಲಿ ಮೂಲಭೂತ ವ್ಯವಸ್ಥೆಗಳನ್ನು ಬೆಳೆಸುವಲ್ಲಿ ದೊಡ್ಡ ಪಾತ್ರವನ್ನು ವಹಿಸಿದ್ದರು. ಜತೆಯಲ್ಲಿ ಸ್ವಂತ ಪರಿಶ್ರಮ ಹಾಗೂ ಪ್ರತಿಭೆಗಳಲ್ಲಿ ಎಲ್ಲಾ ಭಾರತೀಯರಿಗೆ ಅಚಲ ವಿಶ್ವಾಸ ಹಾಗೂ ನಂಬಿಕೆ ಮೂಡಿಸುತ್ತಾ ಮುಂದೊಂದು ದಿನ ಭಾರತ ದೇಶ ಖಂಡಿತಾವಾಗಿಯೂ ಅಭಿವೃದ್ಧಿ ಪಡೆದ ಶಕ್ತಿಶಾಲಿರಾಷ್ಟ್ರವಾಗಿ ಮಾರ್ಪಾಡಾಗುತ್ತದೆ ಎಂಬ ಘೋಷಣೆಯನ್ನು ಮಾಡಿದರು. ನಾವು ಭಾರತೀಯರು ಈ ಜಗತ್ತಿನಲ್ಲಿ ಯಾರಿಗೂ ಕಡಿಮೆ ಇಲ್ಲ ಎಂಬ ಆತ್ಮವಿಶ್ವಾಸ ಎಲ್ಲರ ಹೃದಯದಲ್ಲಿ ಬೆಳೆಗಿಸುವಲ್ಲಿ ಡಾ.ಕಲಾಂ ಸಫಲರಾದರು. ತನ್ನ ಜೀವನದಲ್ಲಿ ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸುತ್ತಾ ತೀರಾ ಸರಳತೆ, ನಿರಾಡಂಬರ ಜೀವನವನ್ನು ವ್ರತದಂತೆ ಪಾಲಿಸುತ್ತಾ ಅದಮ್ಯ ಮಾನವೀಯತೆಯನ್ನು ಆಚರಿಸಿ ಓರ್ವ ಸಂತನಂತೆ ಬಾಳಿ ಎಲ್ಲರ ಹೃದಯ ಸಾಮ್ರಾಟರಾಗಿ ಉಳಿದಿದ್ದಾರೆ.

ಇಸ್ರೋ ಹಾಗೂ ಡಿಆರ್‌ಡಿಒ ಮುಂತಾದ ವೈಜ್ಞಾನಿಕ ಸಂಶೋಧನಾ ಕ್ಷೇತ್ರಗಳಲ್ಲಿ ದುಡಿಯುವ ವೇಳೆ ನಾಯಕತ್ವ, ಸಾಂಘಿಕ ಪರಿಶ್ರಮ ಹಾಗೂ ತಂಡಕ್ಕೆ ಅಪರಿಮಿತವಾದ ಪ್ರೋತ್ಸಾಹ ಮುಂತಾದ ಜ್ಞಾನವನ್ನು ಪಡೆದು ಅದ್ವಿತೀಯವಾದ ಸಾಧನೆ ಮಾಡಿದ ಕಲಾಂ ಸರ್ ತನ್ನ ಸರಳತೆ, ಸ್ನೇಹ ಹಾಗೂ ಸಕಾರಾತ್ಮ ನಿಲುವುಗಳಿಂದ ದೇಶದ ರಕ್ಷಣಾ ಕ್ಷೇತ್ರದ ಸ್ವಾವಲಂಬನೆಯ ಪರಿಶ್ರಮಗಳಿಗೆ ಹೊಸ ಆಯಾಮವನ್ನು ತಂದುಕೊಟ್ಟರು. ನಿಜ ಜೀವನದಲ್ಲಿ ಓರ್ವ ಬ್ಯಾಚುಲರ್ ಆಗಿ ಬಾಳಿದ ಅವರು ಎಂದಿಗೂ ಸಹೋದ್ಯೋಗಿಗಳ ಕುಟುಂಬ ಜೀವನದಲ್ಲಿ ನೆಮ್ಮದಿ ಹಾಗೂ ಶಾಂತಿ ವಿಚಾರಗಳಿಗೆ ಬಹು ಪ್ರಾಮುಖ್ಯತೆ ಕೊಟ್ಟಿದ್ದಾರೆ ಎಂಬುದು ಹಲವಾರು ವಿಜ್ಞಾನ ಸಹೋದ್ಯೋಗಿಗಳ ಒಮ್ಮತದ ಅಭಿಪ್ರಾಯ. ತನ್ನ ನೆಚ್ಚಿನ ಒಡನಾಡಿಗಳಲ್ಲಿ ಪ್ರೀತಿ ಹಾಗೂ ಸ್ನೇಹ ಪರತೆಗಳನ್ನು ರಾಷ್ಟ್ರಪತಿ ಆಗಿರುವಾಗಲೂ ತೋರಿಸುತ್ತಾ ಬಂದು ಎಲ್ಲರಿಗೂ ತಾನು ಲಭ್ಯ ಎಂಬ ಸರಳತೆ ಮತ್ತು ಮಾನವೀಯ ಗುಣಗಳನ್ನು ತೋರಿಸಿಕೊಟ್ಟಿದ್ದಾರೆ. ಅವರ ಹೈದರಾಬಾದ್ ದಿನಗಳಲ್ಲಿ ವಿಜ್ಞಾನಿ ಸಹೋದ್ಯೋಗಿಗಳಿಗೆ ಎರಡು ವಾಕ್ಯಗಳನ್ನು ಉದ್ಧರಿಸುತ್ತಾ ಇದ್ದದ್ದನ್ನು ಈಗಲೂ ಆ ಹಿರಿಯರು ನೆನಪಿಸಿಕೊಳ್ಳುತ್ತಾರೆ. ಫನ್ನಿಗಯ್ಸ್ ಹಾಗೂ ಫೆಂಟಾಸ್ಟಿಕ್ ಫೆಲೊ ಕಲಾಂ ಅವರ ಫೆಲೊ ಎಂಬ ಎರಡು ಅದ್ಭುತ ವಾಕ್ಯಗಳು ಅವಿಸ್ಮರಣೀಯವಾಗಿ ಅವರ ಒಡನಾಡಿಗಳ ಬದುಕಿನಲ್ಲಿ ಉಳಿದು ಹೋಗಿದೆ. ಪ್ರಥಮ ಉಡಗ್ರಹ ಉಡ್ಡಯನದ ಬಳಿಕ ನಡೆದ ಅಭಿನಂದನಾ ಸಮಾರಂಭದಲ್ಲಿ ಅವರೆಲ್ಲ ವೇದಿಕೆಯ ಹಿಂಬದಿಯಲ್ಲಿ ದೊಡ್ಡದಾಗಿ ಬರೆಸಿದ FUNNY GUYS! They have done it! we will repeat again ಎಂಬ ಬ್ಯಾನರ್ ಬಗ್ಗೆ ಇದೀಗ ಬೆಂಗಳೂರಿನಲ್ಲಿ ವಿಶ್ರಾಂತ ಜೀವನ ನಡೆಸುತ್ತಿರುವ ರಕ್ಷಣ ಸಂಶೋಧನಾ ಪ್ರಯೋಗಾಲಯ ನಿರ್ದೇಶಕರಾಗಿದ್ದ ಲೆಫ್ಟಿನೆಂಟ್ ಜನರಲ್ ನಿವೃತ್ತ ಸುಂದರಮ್ ನೆನಪಿಸಿಕೊಳ್ಳುತ್ತಾರೆ. ಯಾರದಾದರೂ ಕಾರ್ಯನಿರ್ವಹಣೆ ಹಾಗೂ ಶ್ರದ್ಧೆ ಕಡಿಮೆ ಕಂಡುಬಂದಲ್ಲಿ ಕಲಾಂ ಹೇಳುತ್ತಿದ್ದದು ಫೆಂಟಾಸ್ಟಿಕ್ ಫೆಲೊ. ಕೆಲವೊಮ್ಮೆ ಕೇಳಿಸಿಕೊಂಡವರು ಈ ಮಾತುಗಳನ್ನು ಪ್ರಶಂಸೆ ಎಂದು ತಿಳಿದು ಕೊನೆಗೆ ಬೇಸ್ತು ಬಿದ್ದದ್ದು ಇದೆ.

ಡಾ. ಕಲಾಂ ಅವರು ಹೈದರಾಬಾದ್ ಕ್ಷಿಪಣಿ ಕೇಂದ್ರದ ಮುಖ್ಯಸ್ಥರಾಗಿದ್ದಾಗ, ಡಿ.ಆರ್.ಡಿ.ಓ ಸಂಸ್ಥೆಯ ಮಹಾನಿರ್ದೇಶಕರಾಗಿದ್ದ ಬಾಸ್ ಡಾ. ಅರುಣಾಚಲಂ ಕಲಾಂ ಅವರ ಸಂಗೀತ ಪ್ರಿಯತೆ ಮತ್ತು ದಕ್ಷಿಣ ಭಾರತದ ಅಡುಗೆಯ ಸ್ವಾದಿಷ್ಟತನಗಳ ಬಗ್ಗೆ ಮೆಚ್ಚುಗೆ ತೋರುತ್ತಾಬಂದಿದ್ದ ದಿನಗಳನ್ನು ಪುಸ್ತಕ ಒಂದರಲ್ಲಿ ನೆನೆಪಿಸಿಕೊಳ್ಳುತ್ತಾರೆ. ಡಾ. ಅರುಣಾಚಲಂ 10 ವರ್ಷಗಳ ಕಾಲ ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದ ಈ ಹಿರಿಯ ವಿಜ್ಞಾನಿ ಇದೀಗ ಬೆಂಗಳೂರಿನಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ತಾವು ಸೇವೆ ಸಲ್ಲಿಸುತ್ತಿದ್ದ ಸಂಸ್ಥೆಗಳಲ್ಲಿ ನಾಯಕನಾಗಿ ಕಾರ್ಯನಿರ್ವಹಿಸುವ ವೇಳೆ ಹಲವು ಮಹಾಯೋಜನೆಗಳನ್ನು ಸರಕಾರದ ಕೆಂಪುಪಟ್ಟಿಯ ಕಕ್ಷೆಯಲ್ಲಿ ಯಶಸ್ವಿನತ್ತ ಕೊಂಡೊಯ್ಯುವ ವೇಳೆ ಸ್ವತಃ ಅಪಾರ ಅನುಭವ ಪಡೆದು ಸಂಸ್ಥೆಗಳ ನಿರ್ವಹಣೆಯ ವೇಳೆ ಮಾನವೀಯ ಗುಣಧರ್ಮಗಳು ಯಾವತ್ತೂ ಹಿರಿದು ಎಂಬುದನ್ನು ತಿಳಿದುಕೊಂಡರು. ಸೋಲುಗಳನ್ನು ಸ್ವೀಕರಿಸಿ ತಂಡದ ಸದಸ್ಯರುಗಳ ಕಾರ್ಯಶಕ್ತಿಯನ್ನು ಪರಿಗಣಿಸಿ ಕಾರ್ಯನಿರ್ವಹಣಾ ಜವಾಬ್ದಾರಿಗಳನ್ನು ಮುಕ್ತವಾಗಿ ನೀಡಿ ಹುರಿದುಂಬಿಸುತ್ತಾ, ಪ್ರತಿಯೊಂದು ಕಾರ್ಯಕರ್ತರನ್ನು ಪ್ರಾಮುಖ್ಯತೆಭಾವದಿಂದ ಕಂಡು ಮುಂದೆ ಅವರ ಸ್ವಯತ್ನಗಳೆಲ್ಲ ಯಶಸ್ಸು ಕಂಡಾಗ, ಇಡೀ ತಂಡಕ್ಕೇ ಅಭಿನಂದನೆ ಹಾಗೂ ಕೀರ್ತಿಯ ಸಾಧನೆಯನ್ನು ನೀಡಿದ ಡಾ.ಕಲಾಂ ದೇಶದ ವಿಜ್ಞಾನಿಗಳನ್ನು ಬೆಳೆಸಿದರು. ಅವರ ಸರಳತೆ, ಆತ್ಮೀಯತೆಯ ಹಾಗೂ ಸ್ನೇಹಪರತೆಯ ವ್ಯವಹಾರಗಳಿಂದ ಎಲ್ಲರೂ ಬಯಸುವ ಬಾಸ್ ಆಗಿಬಿಟ್ಟರು. ಇನ್ನು ಸಂಕಷ್ಟ/ಸಮಸ್ಯೆಗಳ ವಿಚಾರ ಬಂದರೆ ಅವರು ತನ್ನ ತಂಡದ ಸದಸ್ಯರ ವೈಯುಕ್ತಿ ಬೇಗುದಿಗಳಿಗೆ ಕಿವಿಯಾಗಿಸಿ ಸದಾ ನೆರವಿನ ಹಸ್ತವನ್ನು ನೀಡುತ್ತಿದ್ದದ್ದನ್ನು ಹಲವಾರು ವಿಜ್ಞಾನಿಗಳು ಇಂದಿಗೂ ಸ್ಮರಿಸುತ್ತಾರೆ. ಅಷ್ಟೊಂದು ದೊಡ್ಡ ಸ್ಥಾನದಲ್ಲಿದ್ದರೂ 2 ಕೋಣೆಯ ಡಿಆರ್‌ಡಿಒ ಹಾಸ್ಟೆಲ್‌ನಲ್ಲಿ ಸರಳ ಜೀವನ, ತೀರಾ ಅವಶ್ಯಕ ಸೌಲಭ್ಯಗಳನ್ನು ಮಾತ್ರ ಬಳಸಿ ಆದರ್ಶಪ್ರಾಯರಾದ ಇಂತಹ ವ್ಯಕ್ತಿಗಳು ಬಹಳ ಕಡಿಮೆ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ.

ಮೂಲಭೂತ ಸೌಲಭ್ಯಗಳನ್ನು ಜತೆ ಜತೆಯಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಾಗ ಬೆಳೆಸುತ್ತಾ ಮುಂದೆ ಈ ವೈಜ್ಞಾನಿಕ ಸಲಕರಣೆ/ಅಸ್ತ್ರಗಳು ನಮ್ಮ ಸಶಸ್ತ್ರ ಪಡೆಯ ಪರೀಕ್ಷೆಗಳೊಂದಿಗೆ ಸಮನ್ವಯತೆಯಿಂದ ಸಾಗಿ ನಮ್ಮದೆ ಸಾರ್ವಜನಿಕ ಉದ್ದಿಮೆ ಕೇಂದ್ರಗಳಲ್ಲಿ ಬಹು ಸಂಖ್ಯೆಯಲ್ಲಿ ಉತ್ಪಾದಿಸಿ ದೇಶಕ್ಕೆ ಹಲವು ಕೋಟಿ ಡಾಲರ್‌ಗಳನ್ನು ಉಳಿಸಿ ಸ್ವದೇಶಿ ಪರಿಕಲ್ಪನೆಗಳನ್ನು ಸಾಕಾರಗೊಳಸಿದ ಖ್ಯಾತಿ ಇವರದು.

ತನ್ನ ವೈಜ್ಞಾನಿಕ ಹಾಗೂ ತಂತ್ರಜ್ಞಾನದ ಈ ಮಹಾಯಾತ್ರೆಯಲ್ಲಿ ದೇಶದ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಅಲ್ಲಿನ ವಿದ್ಯಾರ್ಥಿಗಳನ್ನು ತೊಡಗಿಸುತ್ತಾ ಅಪಾರ ಸಂಖ್ಯೆಯ ಯುವಜನರನ್ನು ದೇಶಕ್ಕಾಗಿ ಕಾರ್ಯ ಮಾಡುವ ಪ್ರವೃತ್ತಿಗೆ ಆಕರ್ಷಿಸುವ ದೊಡ್ಡ ಸಾಧನೆ ಮಾಡಿದರು.

ಮುಂದೊಂದು ದಿನ ಡಾ.ಕಲಾಂ ರಾಷ್ಟ್ರಪತಿಯಾಗಿ ಕಳೆದ ಅವರ 5 ವರ್ಷದ ಅವಧಿ ಕೂಡಾ ಅವರ ಸರಳತೆಗೆ ಹಾಗೂ ಮಾನವೀಯ ಗುಣ ಮೌಲ್ಯಗಳಿಗೆ ಉಲ್ಲೇಖಾರ್ಹವಾಗಿದೆ ಎಂಬುದು ಸತ್ಯ. 350 ಕೋಣೆಯ ಭವ್ಯ ಬಂಗಲೆಯಲ್ಲಿ ಕೇವಲ 2 ಕೋಣೆಗಳಲ್ಲಿ ತೀರಾ ಸರಳವಾಗಿ ಮನುಷ್ಯನಾಗಿ ಬಾಳಿದ ಈ ಸಂತ ಬ್ರಿಟಿಷ್ ಪರಂಪರೆಯ ಚೌಕಟ್ಟಿನಿಂದ ಹೊರಬಂದು, ದೊಡ್ಡ ಬದಲಾವಣೆಯ ಪ್ರಾರಂಭಕ್ಕೆ ನಾಂದಿ ಹಾಡಿದರು. ಮೊದಲ ದಿನವೇ ತನ್ನ ಪಾದರಕ್ಷೆಗಳನ್ನು ಸ್ವಚ್ಛಗೊಳಿಸುವ ನಿರ್ವಹಣೆ ಮಾಡುವ ವ್ಯಕ್ತಿಗೆ ಈ ಕೆಲಸವನ್ನು ಬಿಟ್ಟು ಬೇರೆ ಕಾರ್ಯ ಮಾಡುವಂತೆ ನವಿರಾಗಿ ಹೇಳಿ ತನ್ನ ಸರಳತೆಯನ್ನು ಮೆರೆದರು. ಮೊಘಲ್ ಗಾರ್ಡ್‌ನ್ ಹಾಗೂ ಭವನದ ಕೆಲವೊಂದು ಪ್ರದೇಶಗಳನ್ನು ವಾರದ ನಿರ್ದಿಷ್ಟ ದಿನಗಳಿಗೆ ಜನತಾ ಪ್ರಭುಗಳಿಗೆ ತೆರೆದಿಟ್ಟರು. ಪಂಚಾಯತ್ ಸದಸ್ಯರು, ಅಂಚೆಯ ಅಣ್ಣ, ಪ್ರಾಥಮಿಕ ಶಾಲೆಯ ಶಿಕ್ಷಕರು ಹೀಗೆ ಜನ ಮಾನ್ಯರುಗಳನ್ನು ಆಮಂತ್ರಿಸಿ ಆದರಿಸಿ ಸತ್ಕಾರ ನೀಡಿದ ಈ ಮಹಾನುಭವ ದೇಶದ ಕಲಾವಿದರು, ಪ್ರತಿಭಾವಂತರು, ಆಟಗಾರರು ಹೀಗೆ ಎಲ್ಲರನ್ನೂ ಭೇಟಿಯಾದರು. ಯುವ ಜನರು ಹಾಗೂ ಮಕ್ಕಳ ಸಮುದಾಯವನ್ನು ಬಹುದಾಗಿ ಆಕರ್ಷಿಸುತ್ತಾ ಅಪಾರ ಜನಪ್ರಿಯತೆ ಪಡೆದರೂ ತಾವು ಸೇವೆಸಲ್ಲಿಸಿದ ವೈಜ್ಞಾನಿಕ ಮತ್ತು ತಾಂತ್ರಿಕ ಕೇಂದ್ರಗಳ ಸಾಧನೆಗಳನ್ನು ಕಾಲಕಾಲಕ್ಕೆ ಸಂಪರ್ಕಿಸುತ್ತ ತಮ್ಮ ಆಸಕ್ತಿಯನ್ನು ಉಳಿಸಿದರು. ರಾಷ್ಟ್ರಪತಿ ಭವನದ ನವೀಕರಣ ಮಾಡಿ ವಿದೇಶಿ ಗಣ್ಯರುಗಳಿಗೆ ಅಲ್ಲಿಯೆ ವಾಸ್ತವ ಮಾಡುವ ವ್ಯವಸ್ತೆಗಳ ನಿರ್ಮಾಣ, ಸರ್ವಧರ್ಮಗಳ ಶಾಂತಿಯ ತೋಟ ಒಂದೇ ಎರಡೇ ಎಂದು ಹೀಗೆ ಸಾಗುತ್ತದೆ. ಅವರು ಮಾಡಿದ ಬದಲಾವಣೆಗಳ ಪಟ್ಟಿ. ದೇಶವಿದೇಶಗಳ ಸಂದರ್ಶನ ಮಾಡಿದಾಗ ಸಾದಿಸಿದ ನಡೆಸಿದ ಭಾಂಧವ್ಯಾ ವರ್ಧನೆಯಿಂದಾಗಿ ಜಗತ್ತಿನಲ್ಲಿ ಭಾರತದ ಬಗ್ಗೆ ಹೊಸ ಭರವಸೆಯ ಅಭಿಪ್ರಾಯದ ಅಧ್ಯಾಯ ಪ್ರಾರಂಭವಾಗಿ ಎನ್‌ಆರ್‌ಐ (ವಿದೇಶದಲ್ಲಿ ನೆಲೆಸಿರುವ ಸ್ವದೇಶಿ ನಾಗರಿಕರು)ಗಳಿಗಂತೂ ಸಂತಸಕ್ಕೆ ಎಣೆಯೇ ಇಲ್ಲ.

ಕಲಾಂಸರ್ ಡಿಆರ್‌ಡಿಒದಲ್ಲಿ ಉನ್ನತ ಸ್ಥಾನ ಹೊಂದಿದಾಗಲೂ ಕಳೆದ ಜೀವನ ಧರ್ಮ ಬಹು ಅಪ್ಯಾಯಮಾನಗಿದೆ. ಭಾರತರತ್ನ ಪ್ರಶಸ್ತಿ ಪಡೆದಾಗ ಯಾವುದೇ ಅಭಿನಂದನೆ/ಸಮಾರಂಭ/ಸತ್ಕಾರಗಳನ್ನು ನಡೆಸದಿರಿ ಎಂದು ಎಚ್ಚರಿಸಿ ತಮ್ಮನ್ನು ವೃಥಾ ಕಾಣಲು ರೈಲ್ವೆ ಹಾಗೂ ವಿಮಾನ ನಿಲ್ದಾಣಗಳಿಗೆ ಬರದಿರಿ ಎಂಬ ಕಟ್ಟಪ್ಪಣೆ ಮಾಡಿದ್ದು ನಿಜವಾಗಿಯೂ ಅವರ ಸರಳತೆಗೆ ಕನ್ನಡಿ ಹಿಡಿಯುತ್ತದೆ. ಹಾಗೂ ಇದೇ ನಿಲುವನ್ನು ರಾಷ್ಟ್ರಪತಿಯಾಗಿದ್ದಾಗಲೂ ಪರಿಪಾಲಿಸಿದರು. ಅವರು ಕಳುಹಿಸಿದ ವೈಯಕ್ತಿಕ ನೆಲೆಯ ಪತ್ರಗಳಲ್ಲಿ ತೀರಾ ಸರಳತೆಯು ಕಾಣುತ್ತಿತ್ತು. ಅವರ ಲೆಟರ್ ಹೆಡ್‌ಗಳಲ್ಲಿ ಎಲ್ಲಿಯೂ ರಾಷ್ಟ್ರಪತಿಯಾಗಿರುವ ಸಂಕೇತ ಕಂಡುಬಾರದೆ ತೀರಾ ಸಾಮಾನ್ಯ ಅಂಚೆ ಕವರ್‌ಗಳಲ್ಲಿ ಅಧಿಕಾರದ ಸುಳಿವು ನೀಡದಂಥ ಸರಳತೆ ಎಲ್ಲರ ಗಮನ ಸೆಳೆಯುತ್ತಿತ್ತು. ಅವರ ವಿಷನ್ ಇಂಡಿಯಾ 2020 ಹಾಗೂ ಅಪಾರ ವಿಶ್ವಾಸನೀಯ PURA (ಪುರ) ಎಂಬ ವಿಚಾರಧಾರೆಗಳು ಬಹು ಜನರ ಪ್ರಶಂಸೆ ಪಡೆದದ್ದು ಏನೂ ಸಣ್ಣ ಸಾಧನೆ ಅಲ್ಲವೇ ಅಲ್ಲ. ಪುರ (PURA) ಅಂದರೆ ನಗರದ ಸೌಲಭ್ಯಗಳ ಲಭ್ಯತೆಯನ್ನು ಗ್ರಾಮಿಣ ಪ್ರದೇಶಗಳಲ್ಲೂ ನಡೆಸಲು ಇರುವ ಅವರ ಚಿಂತನೆಯ ಅನುಷ್ಠಾನಕ್ಕಾಗಿ ತಮ್ಮ ವೈಯಕ್ತಿಕ ಪಾಲಿನ ಧನವನ್ನು ತೊಡಗಿಸಿ ರಾಜ್ಯ ಸರಕಾರಗಳಿಗೆ ಮಾದರಿ ಹೆಜ್ಜೆಗಳನ್ನು ಹಾಕಿ ಕೊಟ್ಟರು.

ಅವರು ಕಂಡುಕೊಂಡ ಇಂಥಹಾ ದೇಶಪ್ರೇಮ ಹಾಗೂ ರಾಷ್ಟ್ರೀಯ ಚಿಂತನೆಯ ಯೋಜನೆಗಳು ಮುಂದುವರೆಸಲು ಕೈಜೋಡಿಸಲು ಯಾವುದೇ ರಾಜಕೀಯ ನಾಯಕರುಗಳು ಮುಂದೆ ಬರಲಿಲ್ಲ ಎಂಬುದು ವಿಷಾದನಿಯ ವಿಚಾರವೇ ಸರಿ ತಮ್ಮ ವಿಮಾನಯಾನದ ಧೀರ್ಘಾವಧಿಗಳಲ್ಲಿ ಕೂಡ ದೇಶದ ಕಾರ್ಯಗಳ ಬಗ್ಗೆ ಗಮನನೀಡುತ್ತಿದ್ದದು ಅವರ ಸಮಯ ಹಾಗೂ ಕರ್ತವ್ಯಪ್ರಜ್ಞೆಗಳಿಗೆ ಸಾಕ್ಷಿಯಾಗಿದೆ. ಇಸ್ರೋ ಹಾಗೂ ಡಿಆರ್‌ಡಿಒ ಸಂಸ್ಥೆಗಳಲ್ಲಿ ಗಣನಿಯವಾದ ಸೇವೆ ಸಲ್ಲಿಸಿದ ವೇಳೆ ಹಲವಾರು ಸ್ವದೇಶಿಯ ಪ್ರಯತ್ನಗಳು ಫಲಪ್ರದವಾಗಿ ಮೇಕ್ ಇನ್ ಇಂಡಿಯಾ ಆಂದೋಲನಕ್ಕೆ ನಾಂದಿ ಹಾಡಿದವು. ಅವರ ಅವಧಿಯ ಬಳಿಕವೂ ಈ ಪರಿಕಲ್ಪನೆಗಳು ಒಂದೊಂದಾಗಿ ನಿಜರೂಪ ತಾಳಿ ದೇಶಕ್ಕೆ ಹಲವಾರು ಕೋಟಿ ರುಪಾಯಿಗಳಷ್ಟು ವಿದೇಶಿ ವಿನಿಮಯವನ್ನು ಉಳಿಸಿದ್ದಲ್ಲದೆ ಜತೆಯಲ್ಲಿಯೇ ಈ ದೆಸೆಯಲ್ಲಿ ಮುಂದೆ ಹೋಗಲು ಸಾಕಷ್ಟು ಮೂಲಭೂತ ಸೌಲಭ್ಯಗಳ ಸ್ಥಾಪನೆಗಳಿಗೂ ಅವಕಾಶ ನೀಡಿದವು. ತಮ್ಮ ಸಾರ್ವಜನಿಕ ಬೇಟಿ ಹಾಗೂ ಪ್ರವಾಸಗಳ ವೇಳೆ ಯಾವತ್ತೂ ಮಕ್ಕಳಿಗೆ, ಯುವಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಿ ಅದಮ್ಯ ಪ್ರೀತಿ ವಿಶ್ವಾಸ ತೋರಿಸುತ್ತಾ ಉತ್ತೇಜನ ವನ್ನು ನೀಡುತ್ತಿದ್ದದ್ದು ಪ್ರಶಂಸನೀಯ ಕಾರ್ಯವಾಗಿದೆ. ಓರ್ವ ವೈಜ್ಞಾನಿಕ ಜಗತ್ತಿನ ಸಾಧಕ, ಯಾವುದೇ ರಾಜಕೀಯ ಪಕ್ಷಗಳಿಗೆ ವಾಲಿಕೊಳ್ಳದೆ ಕೊನೆಯವರೆಗೆ ಅಪ್ಪಟ ದೇಶ ಪ್ರೇಮ ಹಾಗೂ ಅಖಂಡವಾದ ಜಾತ್ಯಾತೀತ ಮೌಲ್ಯ ಮತ್ತು ವಿಶ್ವ ಶಾಂತಿ ಮುಂತಾದ ಸರ್ವ ಶ್ರೇಷ್ಠ ಮಾನವ ಗುಣಗಳನ್ನು ಪ್ರತಿಪಾದಿಸುತ್ತ ಬಾಳಿ ಕೋಟಿಗಟ್ಟಲೆ ಜನರ ಪ್ರೀತಿ ಹಾಗೂ ಸಂಪಾದನೆ ಮಾಡಿದ ಡಾ. ಕಲಾಂ ಅವರು ಓರ್ವ ಯುಗಪುರಷರಾಗಿ ಎಲ್ಲರ ಮನಸ್ಸಿನಲ್ಲಿ ಅಮರರಗಿದ್ದಾರೆ.

(ಲೇಖಕರು: ಅಖಿಲ ಭಾರತ ಸಾರ್ವಜನಿಕ ಸಂಪರ್ಕ ಮಂಡಳಿಯ ಪ್ರಾಂತೀಯ ಅಧ್ಯಕ್ಷರು)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 81

ಸಮಾಚಾರ ಸಣ್ಣದಲ್ಲ

ವೇಗದ ಚಾಲನೆ: ರೈಲು ಚಾಲಕರ ಅಮಾನತು

ಆಗ್ರಾ: ಬೆಂಗಳೂರಿನ ಯಶವಂತಪುರ ಜಂಕ್ಷನ್‌ನಿಂದ ದೆಹಲಿಯ ಹಜರತ್ ನಿಜಾಮುದ್ದೀನ್ ನಿಲ್ದಾಣಕ್ಕೆ ಸಂಚಾರ ಮಾಡುವ ಕರ್ನಾಟಕ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ರೈಲಿನ ಇಬ್ಬರು ಲೋಕೋ ಪೈಲಟ್‌ಗಳನ್ನು ಹಾಗೂ ಒಬ್ಬ ಸಹಾಯಕ ಲೋಕೋ ಪೈಲಟ್‌ರನ್ನು ಅಮಾನತು ಮಾಡಲಾಗಿದೆ. ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ರೈಲು (12649) ಮಥುರಾ ಭಾಗದಲ್ಲಿ ಸಂಚರಿಸುವ ವೇಳೆ ವೇಗದ ಮಿತಿಯನ್ನು (ಗಂಟೆಗೆ 20 ಕಿ.ಮೀ.) ಮೀರಿ, ಪ್ರಯಾಣಿಕರ ಜೀವವನ್ನು ಅಪಾಯಕ್ಕೆ ಒಡ್ಡಿದ ಕಾರಣಕ್ಕೆ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ರೈಲಿನ ಮೂವರು ಚಾಲಕ ಸಿಬ್ಬಂದಿಯನ್ನು ಅಮಾನತುಗೊಳಿಸಿ ಆಗ್ರಾ ರೈಲ್ವೆ ವಿಭಾಗ ಶುಕ್ರವಾರ ಆದೇಶ ಹೊರಡಿಸಿದೆ. ಹಳಿಗಳ ದುರವಸ್ಥೆ, ದುರಸ್ತಿ, ಶಿಥಿಲ ಸೇತುವೆ ಮೊದಲಾದ ಕಾರಣಗಳಿಂದ ವೇಗಕ್ಕೆ ಮಿತಿ ವಿಧಿಸಲಾಗಿರುತ್ತದೆ. ವೇಗ ಮಿತಿ ಮೀರಿದ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಹೃದಯಾಘಾತ: ಮಕ್ಕಳ ರಕ್ಷಿಸಿದ ಬಸ್ ಚಾಲಕ

ಕರೂರ್: ಬಸ್ ಚಾಲನೆ ವೇಳೆಯೇ ಹೃದಯಾಘಾತವಾದರೂ ಶಾಲಾ ಮಕ್ಕಳ ಜೀವ ಉಳಿಸಿ ಕೊನೆಗೆ ಬಸ್ಸಿನಲ್ಲೇ ಚಾಲಕ ಮೃತಪಟ್ಟ ಆಘಾತಕಾರಿ ಘಟನೆ ತಮಿಳುನಾಡಿನಲ್ಲಿ ವೆಲ್ಲಕೋಯಿಲ್-ಕರೂರ್ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ತಿರುಪುರ್ ಜಿಲ್ಲೆಯ ಗಂಗೇಯಂ ನಿವಾಸಿ ಮಲಯಪ್ಪನ್ ಮೃತ ಚಾಲಕ. ಮಲಯಪ್ಪನ್ ವೆಲ್ಲಕೋಯಿಲ್‌ನ ಖಾಸಗಿ ಶಾಲೆ ಬಸ್ ಚಾಲಕ. ಗುರುವಾರ ಸಂಜೆ ಮಕ್ಕಳನ್ನು ಮನೆಗೆ ಬಿಡಲು ಹೊರಟಿದ್ದಾಗ ತೀವ್ರ ಎದೆನೋವು ಕಾಣಿಸಿದೆ. ಕೂಡಲೇ ಎಚ್ಚೆತ್ತ ಮಲಯಪ್ಪನ್ ಬಸ್ಸನ್ನು ರಸ್ತೆ ಬದಿ ನಿಲ್ಲಿಸಿದ್ದಾರೆ. ಬಳಿಕ ಸೀಟ್ ನಲ್ಲಿ ಕುಳಿತಲ್ಲೇ ಸಾವಿಗೀಡಾಗಿದ್ದಾರೆ. ಬಳಿಕ ಸ್ಥಳೀಯರು ಬಸ್ ಚಾಲಕನನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ದರು ಪ್ರಯೋಜನವಾಗಿಲ್ಲ. ವೈದ್ಯರು ಮಲಯಪ್ಪನ್ ಮೃತಪಟ್ಟಿರುವುದಾಗಿ ಹೇಳಿದ್ದಾರೆ.

ಕಾರ್ಗಿಲ್ ವಿಜಯ ದಿವಸಕ್ಕೆ 25 ವರ್ಷ | ಗುಡುಗಿದ ಪ್ರಧಾನಿ ಮೋದಿ

ಪಾಕ್ ಪಾಠ ಕಲಿತಿಲ್ಲ: ಪಿಎಂ

ಕಾರ್ಗಿಲ್: ಇತಿಹಾಸದಿಂದ ಪಾಕಿಸ್ತಾನ ಯಾವುದೇ ಪಾಠ ಕಲಿತಿಲ್ಲ. ಭಾರತ ವಿರುದ್ಧದ ಹಲವು ಯುದ್ಧಗಳಲ್ಲಿ ಸೋಲುಂಡಿದ್ದರೂ ಬುದ್ಧಿ ಕಲಿಯದ ಪಾಕಿಸ್ತಾನ ಈಗಲೂ ಭಯೋತ್ಪಾದನೆಗೆ ಉತ್ತೇಜನ ನೀಡುತ್ತಿದೆ. ಆ ದೇಶ ಇದುವರೆಗೆ ತಾನು ಮಾಡಿದ ತಪ್ಪುಗಳನ್ನು ಮನವರಿಕೆ ಮಾಡಿಕೊಂಡಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಗುಡುಗಿದ್ದಾರೆ.

ಕಾರ್ಗಿಲ್ ವಿಜಯ ದಿವಸಕ್ಕೆ 25 ವರ್ಷ ಸಂದ ಹಿನ್ನೆಲೆ ಪ್ರಧಾನಿ ಮೋದಿ ಡ್ರಾಸ್‌ನಲ್ಲಿರುವ ಕಾರ್ಗಿಲ್ ಯುದ್ಧ ಸ್ಮಾರಕಕ್ಕೆ ಶುಕ್ರವಾರ ಭೇಟಿ ಕೊಟ್ಟು ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸಿದ್ದಾರೆ. ಇದೇ ವೇಳೆ ಮಾತನಾಡಿದ ಅವರು, ಭಯೋತ್ಪಾದನಾ ಚಟುವಟಿಕೆಗಳ ಮೂಲಕ ಭಾರತವನ್ನು ಗೆಲ್ಲುವ ಪಾಕಿಸ್ತಾನದ ಉದ್ದೇಶ ಎಂದಿಗೂ ಈಡೇರುವುದಿಲ್ಲ ಎಂದು ದೃಢವಾಗಿ ಹೇಳಿದರು.

ನೆರೆಯ ಶತ್ರು ದೇಶ ಇನ್ನೂ ಭಯೋತ್ಪಾದಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದನ್ನು ಮುಂದುವರಿಸಿದೆ. ಪಾಕಿಸ್ತಾನ ಯಾವಾಗೆಲ್ಲಾ ದುಸ್ಸಾಹಸ ನಡೆಸಿತ್ತೋ ಆವಾಗೆಲ್ಲ ಸೋಲನ್ನೇ ಅನುಭವಿಸಿದೆ. ಆದರೂ ಕೂಡಾ ಪಾಕ್ ಪಾಠ ಕಲಿತಿಲ್ಲ ಎಂದು ಕಟುವಾಗಿ ನುಡಿದರು.

ದೇಶಕ್ಕಾಗಿ ಹುತಾತ್ಮರಾದ ಸೈನಿಕರ ತ್ಯಾಗ ಅಮರ. ಅಷ್ಟೇ ಅಲ್ಲ 'ಕಾರ್ಗಿಲ್ ವಿಜಯ್ ದಿವಸ್' ಅನ್ನು ಸದಾ ಸ್ಮರಿಸುವುದಾಗಿ ಪ್ರಧಾನಿ ಮೋದಿ ಹೇಳಿದರು.

ಸುರಂಗ ಮಾರ್ಗ ಕಾಮಗಾರಿ: ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮೊದಲು ಲಡಾಖ್‌ನ ಡ್ರಾಸ್ ನಲ್ಲಿ ಹಿಮಾಚಲ್ ಪ್ರದೇಶ ಮತ್ತು ಕೇಂದ್ರಾಡಳಿತ ಪ್ರದೇಶ ಲಡಾಖ್ ನಡುವಿನ ಸಂಪರ್ಕಕ್ಕಾಗಿ 4.1 ಕಿ.ಮೀಟರ್ ಉದ್ದದ 'ಶಿಂಕುನ್ ಲಾ' ಸುರಂಗ ಮಾರ್ಗ ಕಾಮಗಾರಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು.

25 ವರ್ಷಗಳ ಹಿಂದೆ...

3 ತಿಂಗಳ ಕಾಲ ಯುದ್ಧ ನಡೆದ ನಂತರ ಭಾರತೀಯ ಸೇನೆ ಪಾಕ್ ವಿರುದ್ಧದ ಆಪರೇಶನ್ ವಿಜಯ್ ನಲ್ಲಿ ಗೆಲುವು ಸಾಧಿಸಿರುವುದಾಗಿ ಲಡಾಖ್ ನ ಅತೀ ಎತ್ತರದ ಪ್ರದೇಶ ಕಾರ್ಗಿಲ್‌ನಲ್ಲಿ 1999ರ ಜುಲೈ 26ರಂದು ಘೋಷಿಸಿತ್ತು. ಪ್ರತಿ ವರ್ಷ ಜುಲೈ 26ರಂದು ಕಾರ್ಗಿಲ್ ವಿಜಯ್ ದಿವಸ್ ಆಚರಿಸಲಾಗುತ್ತಿದೆ. ಆ ದಿನಕ್ಕೆ ಈಗ 25 ವರ್ಷ.

ಅಗ್ನಿಪಥ್ ಬಗ್ಗೆ ಅಪಪ್ರಚಾರ: ಪ್ರಧಾನಿ ಕಿಡಿ

ಇದೇ ಸಂದರ್ಭ ಅಗ್ನಿಪಥ್ ಯೋಜನೆ ಪ್ರಸ್ತಾಪಿಸಿದ ಪ್ರಧಾನಿ ಮೋದಿ, ಸೇನೆಯ ಸುಧಾರಣೆಗಾಗಿ ಕೇಂದ್ರ ಸರಕಾರ ಕೈಗೊಳ್ಳುವ ಕಾರ್ಯಗಳಲ್ಲೂ ಕೆಲವರು ವೈಯಕ್ತಿಕ ಲಾಭಕ್ಕಾಗಿ ಸುಳ್ಳಿನ ರಾಜಕಾರಣ ಮಾಡುತ್ತಿದ್ದಾರೆ ಎಂದು ಪ್ರತಿಪಕ್ಷಗಳ ವಿರುದ್ಧ ಕಿಡಿ ಕಾರಿದರು. ದೇಶದ ಸೈನ್ಯವನ್ನು ಸದಾ ಯುದ್ಧಕ್ಕೆ ಸಜ್ಜುಗೊಳಿಸುವುದು ಅಗ್ನಿಪಥ್ ಯೋಜನೆ ಗುರಿಯಾಗಿದೆ. ದುರದೃಷ್ಟವಶಾತ್, ಕೆಲವರು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಇಂತಹ ಸೂಕ್ಷ್ಮ ವಿಷಯವನ್ನು ರಾಜಕೀಯದ ವಿಷಯವನ್ನಾಗಿಸಲು ಯತ್ನಿಸುತ್ತಿರುವವರೇ, ತಮ್ಮ ಆಡಳಿತ ಕಾಲದಲ್ಲಿ ಭಾರತೀಯ ಸೇನೆಯಲ್ಲಿ ಸಾವಿರಾರು ಕೋಟಿ ರು.ಗಳ ಹಗರಣಗಳನ್ನು ಮಾಡಿ ಸೇನೆ ಯನ್ನು ದುರ್ಬಲಗೊಳಿಸಿದ್ದನ್ನು ಮರೆ ತಿದ್ದಾರೆ ಎಂದು ಮೋದಿ, ಕಾಂಗ್ರೆಸ್ ಹೆಸರು ಹೇಳದೆ ಕಿಡಿಕಾರಿದರು.

ಒಡಿಶಾದಲ್ಲಿ ಅತಿ ಹೆಚ್ಚು, ಕರ್ನಾಟಕದಲ್ಲಿ 160 ಮಂದಿ ಸಾವು

ಆನೆ-ಮಾನವ ಸಂಘರ್ಷ 5 ವರ್ಷದಲ್ಲಿ 2,853 ಬಲಿ



ದೆಹಲಿ: ಕಳೆದ 5 ವರ್ಷದಲ್ಲಿ ಆನೆ- ಮಾನವ ಸಂಘರ್ಷದಲ್ಲಿ ಒಟ್ಟೂ 2,853 ಮಂದಿ ಸಾವನ್ನಪ್ಪಿದ್ದಾರೆ. ಈ ಬಗ್ಗೆ ಕೇಂದ್ರ ಪರಿಸರ ಖಾತೆ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ರಾಜ್ಯಸಭೆಯಲ್ಲಿ ಮಾಹಿತಿ ನೀಡಿದ್ದಾರೆ. 2023ರಲ್ಲಿ ದೇಶದಲ್ಲಿ ಅತಿ ಹೆಚ್ಚು ಮಂದಿ ಆನೆ ದಾಳಿಗೆ ಸಾವನ್ನಪ್ಪಿದ್ದಾರೆ.

2019ರಿಂದ 2023ರ ವರೆಗೆ ಒಟ್ಟೂ 5 ವರ್ಷಗಳ ಮಾಹಿತಿ ನೀಡಿದ ಅವರು ಒಡಿಶಾದಲ್ಲಿ ಅತಿ ಹೆಚ್ಚು ಮಂದಿ ಆನೆ- ಮಾನವ ಸಂಘರ್ಷಕ್ಕೆ ಬಲಿಯಾಗಿದ್ದಾರೆ ಎಂದು ತಿಳಿಸಿದ್ದಾರೆ. ಒಡಿಶಾದಲ್ಲಿ ಒಟ್ಟೂ 624, ಜಾರ್ಖಂಡ್ 474, ಪಶ್ಚಿಮ ಬಂಗಾಳ 436, ಅಸ್ಸಾಂ 383, ಛತ್ತೀಸ್‌ಗಢ 303, ತಮಿಳುನಾಡು 256, ಕರ್ನಾಟಕ 160, ಕೇರಳ 124 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ವನ್ಯಜೀವಿ ಆವಾಸಸ್ಥಾನಗಳ ಜವಾಬ್ದಾರಿ ರಾಜ್ಯ ಸರಕಾರ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಆಡಳಿತ ಜವಾಬ್ದಾರಿ ಯಾಗಿದ್ದು ಕೇಂದ್ರ ಸರಕಾರ ಹುಲಿ ಯೋಜನೆ, ಅನೆಗಳ ಯೋಜನೆಗಳ ಮೂಲಕ ಹಣಕಾಸು ಹಾಗೂ ತಾಂತ್ರಿಕ ನೆರವನ್ನು ನೀಡಿ ವನ್ಯಜೀವಿ ಹಾಗೂ ಅವುಗಳ ಆವಾಸಸ್ಥಾನ ರಕ್ಷಣೆ, ಕಾರಿಡಾರ್ ಸಂರಕ್ಷಣೆಗೆ ನೆರವಾಗುತ್ತದೆ ಎಂದು ಸಚಿವ ಕೀರ್ತಿವರ್ಧನ್ ಹೇಳಿದರು. 2021ರಲ್ಲಿ ಸಚಿವಾಲಯ ಮಾನವ -ವನ್ಯಜೀವಿ ಸಂಘರ್ಷ, ಸಂಘರ್ಷ ಪ್ರದೇಶ ಪತ್ತೆ ಹಚ್ಚಲು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಮಾರ್ಗಸೂಚಿಯನ್ನೂ ಬಿಡುಗಡೆ ಮಾಡಿದೆ.

ಮಳಿಗೆಗೆ ಮಾಲೀಕರ ಹೆಸರು: ಸುಪ್ರೀಂಗೆ ಯುಪಿ ಮಾಹಿತಿ

ದೆಹಲಿ: ಕನ್ವರಿಯಾ ಯಾತ್ರಾ ಮಾರ್ಗದಲ್ಲಿನ ಮಳಿಗೆಗಳ ಮೇಲೆ ಮಾಲೀಕರ ಹೆಸರು ಕಡ್ಡಾಯ ವಿಚಾರವಾಗಿ ಉತ್ತರ ಪ್ರದೇಶದ ಸರಕಾರ ಸುಪ್ರೀಂ ಕೋರ್ಟ್‌ಗೆ ವಿವರಣೆ ನೀಡಿದೆ.

ಕನ್ವರಿಯಾ ಯಾತ್ರಿಕರು ಸಾಕಷ್ಟು ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುತ್ತಾರೆ. ಅವರ ಧಾರ್ಮಿಕ ಭಾವನೆಯನ್ನು ರಕ್ಷಿಸುವ ಸಲುವಾಗಿ ಹಾಗೂ ಯಾತ್ರಿಕರು ತಮಗೆ ಬೇಕಾದ ಆಹಾರವನ್ನು ಆಯ್ಕೆ ಮಾಡಿಕೊಳ್ಳಲು ನೆರವಾಗುವ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದೆ. ಕನ್ವರಿಯಾ ಯಾತ್ರಿಕರು ತಪ್ಪಿಯೂ ಸೂಕ್ತವಲ್ಲದ ಆಹಾರ ಸೇವಿಸದಂತೆ ಎಚ್ಚರಿಕೆ ವಹಿಸಲು ಮಳಿಗೆಗಳ ಮೇಲೆ ಮಾಲಿಕರ ಹೆಸರು ಉಲ್ಲೇಖಿಸಲು ಸೂಚನೆ ನೀಡಲಾಗಿದೆ . ಲಕ್ಷಾಂತರ ಜನರು ಪಾದಯಾತ್ರೆ ಹೋಗುವ ವೇಳೆ ಆಹಾರ ವಿಚಾರದಲ್ಲಿ ಸಮಸ್ಯೆಯಾದರೆ ದೊಡ್ಡ ಗಲಭೆ ನಡೆಯುವ ಸಾಧ್ಯತೆ ಇರುತ್ತದೆ. ಹೀಗಾಗಿ ಯಾತ್ರಿಕರ ಹಿತಾಸಕ್ತಿ ಕಾಯ್ದುಕೊಳ್ಳಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಫಿಡವಿಟ್‌ನಲ್ಲಿ ತಿಳಿಸಲಾಗಿದೆ. ಕೆಲವು ವಾರಗಳಿಂದ ಕನ್ವರ್ ಯಾತ್ರಾ ಮಾರ್ಗದಲ್ಲಿ ಸಿಗುವ ಆಹಾರದಲ್ಲಿ ಈರುಳ್ಳಿ ಹಾಗೂ ಬೆಳ್ಳುಳ್ಳಿ ಬಳಕೆಯ ಬಗ್ಗೆ ಅಸಮಾಧಾನ ಎದ್ದಿದೆ, ಯಾತ್ರಿಕರು ಆಹಾರದ ಗುಣಮಟ್ಟದ ಬಗ್ಗೆ ದೂರಿದ್ದಾರೆ ಎಂದು ತಿಳಿದು ಬಂದಿದೆ. ಜುಲೈ 22ರಂದು ಉತ್ತರಪ್ರದೇಶ ಹಾಗೂ ಉತ್ತರಾಖಂಡ ಪೊಲೀಸರ ಈ ಸೂಚನೆಗೆ ಸುಪ್ರೀಂ ತಡೆ ನೀಡಿತ್ತು. ಸರಕಾರಗಳ ನಿರ್ಧಾರ 'ತಾರತಮ್ಯ' ಹೊಂದಿದೆಂದು ಸುಪ್ರೀಂ ಅಭಿಪ್ರಾಯಪಟ್ಟಿತ್ತು.

2 ರಾಜ್ಯಪಾಲರಿಗೆ ಸುಪ್ರೀಂ ನೋಟಿಸ್

ದೆಹಲಿ: ಮಸೂದೆಗೆ ಸಹಿ ಹಾಕಲು ತಡಮಾಡುತ್ತಿರುವ ಕೇರಳ ಹಾಗೂ ಪಶ್ಚಿಮ ಬಂಗಾಳ ರಾಜ್ಯಪಾಲರಿಗೆ ಸುಪ್ರೀಂ ಕೋರ್ಟ್ ನೋಟಿಸ್ ನೀಡಿದೆ. ಬಂಗಾಳ ಹಾಗೂ ಕೇರಳ ರಾಜ್ಯ ಸರಕಾರಗಳು ಸಲ್ಲಿಸಿದ ಅರ್ಜಿಯ ಸಮಗ್ರ ಪರಿಶೀಲನೆಗೆ ಸುಪ್ರೀಂ ಒಪ್ಪಿಗೆ ಸೂಚಿಸಿದೆ.

ಶುಕ್ರವಾರ ನ್ಯಾ. ಡಿ ವೈ ಚಂದ್ರಚೂಡ , ನ್ಯಾ ಜೆ ಬಿ ಪರ್ದಿವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ಪೀಠ ಉಭಯ ರಾಜ್ಯಗಳ ರಾಜ್ಯಪಾಲರಿಗೆ ಮತ್ತು ಮುಖ್ಯ ಕಾರ್ಯದರ್ಶಿಗಳಿಗೆ ನೋಟಿಸ್ ನೀಡಿದೆ. ಮೂರು ವಾರಗಳಲ್ಲಿ ಉತ್ತರ ನೀಡುವಂತೆ ಹಾಗೂ ರಾಜ್ಯಗಳು ಜಂಟಿ ಹೇಳಿಕೆ ದಾಖಲಿಸುವಂತೆ ಸೂಚಿಸಲಾಗಿದೆ.

ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಹಾಗೂ ಪಶ್ಚಿಮ ಬಂಗಾಳ ರಾಜ್ಯಪಾಲ ಸಿ ವಿ ಆನಂದ ಬೋಸ್ ವಿರುದ್ಧ ಮಸೂದೆಗೆ ಸಮ್ಮತಿ ಸೂಚಿಸಲು ತಡ ಮಾಡುತ್ತಿರುವ ಆರೋಪ ಮಾಡಲಾಗಿದೆ. ರಾಜ್ಯ ವಿಧಾನಸಭೆಯಲ್ಲಿ ಅಂಗಿಕಾರ ಪಡೆದ ಮಸೂದೆಗಳಿಗೆ ಸಹಿ ಹಾಕಲು ವಿಳಂಬ ಮಾಡುತ್ತಿರುವುದನ್ನು ಪ್ರಶ್ನಿಸಿ ಉಭಯ ರಾಜ್ಯಗಳು ಸುಪ್ರೀಂನಲ್ಲಿ ಅರ್ಜಿ ಸಲ್ಲಿಸಿದ್ದರು. ಕೇರಳ ಪರ ಹಿರಿಯ ವಕೀಲ ಕೆ ಕೆ ವೇಣುಗೋಪಾಲ ಹಾಗೂ ಪಶ್ಚಿಮ ಬಂಗಾಳ ಪರ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಮತ್ತು ಜೈದೀಪ್ ಗುಪ್ತಾ ವಾದ ಮಂಡಿಸಿದ್ದಾರೆ.

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ, ಕೊಡಗು ಜಿಲ್ಲೆ.
(ಕರ್ನಾಟಕ ಸರ್ಕಾರದ ನೊಂದಾಯಿತ ಸ್ವಾಯತ್ತ ಸಂಸ್ಥೆ)
ದೂರವಾಣಿ : 08272220606 ವೆಬ್‌ಸೈಟ್ : www.kimskodagu.kar.nic.in
ಇಮೇಲ್ :directormckodagu@gmail.com
ಸಂಖ್ಯೆ :ME/2024-25/IND: ದಿನಾಂಕ: 23.07.2024

ಪುಸ್ತಕ ಪ್ರದರ್ಶನದ ಪ್ರಕಟಣೆ

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ ಇಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವೈದ್ಯಕೀಯ ಅರವೈದ್ಯಕೀಯ ನರ್ಸಿಂಗ್ ಹಾಗೂ ಅಲೈಡ್ ಹೆಲ್ತ್ ಸೈನ್ಸ್ ವಿದ್ಯಾರ್ಥಿಗಳಿಗೆ ವಿತರಿಸಲು ಹಾಗೂ ಗ್ರಂಥಾಲಯಕ್ಕೆ ಅವಶ್ಯವಿರುವ ವೈದ್ಯಕೀಯ ಪುಸ್ತಕಗಳನ್ನು ಮೂಲ ಪ್ರಕಾಶಕರು/ಅಧಿಕೃತ ಸರಬರಾಜುದಾರರಿಂದ ಸರಬರಾಜು ಪಡೆಯಲು ದಿನಾಂಕ 06.08.2024 ರಿಂದ 08.08.2024 ರವರೆಗೆ (ಸಮಯ: 9:00 ಎಎಂ - 4:30 ಪಿಎಂ) ಪುಸ್ತಕ ಪ್ರದರ್ಶನವನ್ನು ಈ ಸಂಸ್ಥೆಯ ಅವರಣದಲ್ಲಿ ಏರ್ಪಡಿಸಲಾಗಿದ್ದು, ಆಸಕ್ತ ಮೂಲ ಪ್ರಕಾಶಕರು/ಅದಿಕೃತ ಸರಬರಾಜುದಾರರುಗಳಿಗೆ ಸದರಿ ಪುಸ್ತಕ ಪ್ರದರ್ಶನದಲ್ಲಿ ಭಾಗವಹಿಸಲು ಕೋರಿದೆ. ಭಾಗವಹಿಸುವ ಮೂಲ ಪ್ರಕಾಶಕರು/ಅದಿಕೃತ ಸರಬರಾಜುದಾರರುಗಳು ದಿನಾಂಕ 02.08.2024 ರ ಸಂಜೆ 4:00 ಗಂಟೆಯೊಳಗೆ ನಿಗಧಿತ ಫಾರಂನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿ ಈ ಕಛೇರಿಗೆ ಸಲ್ಲಿಸಲು ಕೋರಿದೆ ಹಾಗೂ ಇ-ಮೇಲ್ ಮೂಲಕ ವಸ್ತು ಪ್ರದರ್ಶನದಲ್ಲಿ ಭಾಗವಹಿಸುವ ಬಗ್ಗೆ ಖಾತರಿಪಡಿಸಲು ಸೂಚಿಸಿದೆ.

ಇ-ಮೇಲ್: directormckodagu@gmail.com,
librarykoims@gmail.com
Website: https://kimskodagu.karnataka.gov.in

ಸಹಿ/-
ನಿರ್ದೇಶಕರು ಮತ್ತು ಡೀನ್,
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ.

ರಾಮ ಜನ್ಮಭೂಮಿ ವಿಶೇಷ ಕೈಗಡಿಯಾರಕ್ಕೆ 34 ಲಕ್ಷ ರು.!

ದೆಹಲಿ: ಸ್ವಿಸ್ ವಾಚ್ ತಯಾರಕ ಕಂಪನಿಯೊಂದು ರಾಮ ಜನ್ಮಭೂಮಿ ಕೈಗಡಿಯಾರವನ್ನು ಎರಡು ಆವೃತ್ತಿಗಳಲ್ಲಿ ತಯಾರಿಸಿದೆ. ವಾಚ್ 34 ಲಕ್ಷ ರು.ಗೆ ಮಾರಾಟವಾಗಿದೆ ಎಂಬ ಸುದ್ದಿ ಜಾಲತಾಣದಲ್ಲಿ ಹರಿದಾಡುತ್ತಿದೆ. ಈ ವಾಚ್‌ನಲ್ಲಿ ಮುಳ್ಳು 9 ಗಂಟೆಗೆ ಬಂದಾಗ ರಾಮ ಮಂದಿರ ತೋರಿಸಿದರೆ, 6 ಗಂಟೆಗೆ ಜೈ ಶ್ರೀ ರಾಮ್ ಎನ್ನುತ್ತದೆ. ಕೇಸರಿ ಬಣ್ಣದ ಬೆಲ್ಟ್ ಇರುವ ವಾಚ್‌ನಲ್ಲಿ ಭಗವಾನ್ ರಾಮ ಮತ್ತು ಹನುಮಂತನ ಚಿತ್ರ ಸಹ ಕಾಣಿಸುತ್ತದೆ.

ಕಾನ್ಶಿರಾಮ್‌ಗೆ ಭಾರತ ರತ್ನ ನೀಡಿ

ಲಖನೌ: ಬಹುಜನ ಸಮಾಜ ಪಕ್ಷದ ಸಂಸ್ಥಾಪಕ ಕಾನ್ಶಿರಾಮ್ ಅವರಿಗೆ ತಕ್ಷಣ ಭಾರತ ರತ್ನ ನೀಡಬೇಕು, ಇಲ್ಲವೇ ದಲಿತರ ದಾರಿ ತಪ್ಪಿಸುವುದನ್ನು ಬಿಜೆಪಿ ನಿಲ್ಲಿಸಬೇಕು. ಬಿಜೆಪಿ ದಲಿತ ಸಂಸದರು ತಮ್ಮದೇ ಪಕ್ಷದ ಸರಕಾರ ಇರುವುದರಿಂದ ಈ ಕೆಲಸವನ್ನು ತಕ್ಷಣ ಮಾಡಬೇಕು ಎಂದು ಬಿಎಸ್‌ಪಿ ನಾಯಕಿ ಮಾಯಾವತಿ ಆಗ್ರಹಿಸಿದರು.

ರೈಲ್ವೆ ಸೇವೆ ಸಂಪೂರ್ಣ ಅಸ್ತವ್ಯಸ್ತ | ಒಲಿಂಪಿಕ್ಸ್ ಸಂದರ್ಭದಲ್ಲಿ ದುಷ್ಕೃತ್ಯ

ಫ್ರೆಂಚ್ ಹೈಸ್ಪೀಡ್ ರೈಲ್ವೆ ನೆಟ್‌ವರ್ಕ್ ಮೇಲೆ ದಾಳಿ

ಪ್ಯಾರಿಸ್: ಒಲಿಂಪಿಕ್ ಕ್ರೀಡಾಕೂಟಕ್ಕೆ ಚಾಲನೆ ಸಿಗುವ ಕೆಲವೇ ಗಂಟೆಗಳ ಮೊದಲು ಫ್ರೆಂಚ್ ಹೈ ಸ್ಪೀಡ್ ರೈಲ್ವೆಗಳ ಮೇಲೆ ದುಷ್ಕರ್ಮಿಗಳು ದಾಳಿ ನಡೆಸಿದ್ದು, ಹಲವು ರೈಲ್ವೆ ಸೇವೆಗಳನ್ನು ಬಂದ್ ಮಾಡಲಾಗಿದೆ ಎಂದು ಫ್ರಾನ್ಸ್ ರಾಜ್ಯ ರೈಲ್ವೆ ಸಂಸ್ಥೆ (ಎಸ್‌ಎನ್‌ಸಿಎಫ್) ಮಾಹಿತಿ ನೀಡಿದೆ. ಗುರುವಾರ ಮಧ್ಯರಾತ್ರಿ ರೈಲ್ವೆಗಳ ಮೇಲೆ ದಾಳಿ ನಡೆಸಿದ್ದಲ್ಲದೇ ಕೆಲವೆಡೆ ಬೆಂಕಿ ಕೂಡ ಹಚ್ಚಲಾಗಿದೆ ಎಂದು ತಿಳಿದು ಬಂದಿದೆ. ದು ಉಗ್ರರ ಕೃತ್ಯವೇ ಎಂಬ ಅನುಮಾನ ಕೂಡ ಮುಡಿದೆ.

ಅಟ್ಲಾಂಟಿಕ್, ಉತ್ತರ ಹಾಗೂ ಪೂರ್ವ ಹೈಸ್ಪೀಡ್ ರೈಲ್ವೆ ಮಾರ್ಗದಲ್ಲಿ ಭಾರಿ ಸಮಸ್ಯೆ ಉಂಟಾಗಿದ್ದು ರೈಲ್ವೆ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ. ಪ್ಯಾರಿಸ್ ಹಾಗೂ ಲಿಲ್ಲೆ ನಡುವಿನ ರೈಲ್ವೆ ಸಂಚಾರ ಸಂಪೂರ್ಣ ಅಸ್ತವ್ಯಸ್ಥವಾಗಿದೆ. ಹಲವೆಡೆ ರೈಲ್ವೆಗಳ ಓಡಾಟವನ್ನು ರದ್ದುಪಡಿಸಲಾಗಿದ್ದು ಸುಮಾರು 8 ಲಕ್ಷ ಜನರು ವಾರಾಂತ್ಯದಲ್ಲಿ ರೈಲ್ವೆ ಸೇವೆಯಲ್ಲಿ ಸಮಸ್ಯೆ ಎದುರಿಸಲಿದ್ದಾರೆ. ರೈಲ್ವೆಗಳ ಓಡಾಟ ದಿಢೀರ್ ಬಂದ್ ಆದ ಹಿನ್ನೆಲೆ ಸಾವಿರಾರು ಜನರು ರೈಲ್ವೆ ನಿಲ್ದಾಣಗಳಲ್ಲಿ ಪರದಾಡುವಂತಾಯಿತ. ಮುಮದಿನ ಆದೇಶದ ವರೆಗೆ ಯಾರೂ ಕೂಡ ರೈಲ್ವೆ ಪ್ರಯಾಣ ಪ್ಲ್ಯಾನ್ ಮಾಡದಂತೆ ಅಧಿಕಾರಿಗಳು ಸೂಚಿಸಿದ್ದಾರೆ.

ರೈಲ್ವೆಗಳ ಮೇಲಿನ ದಾಳಿ 'ವ್ಯವಸ್ಥಿತ ಸಂಚು, ಪೂರ್ವನಿಯೋಜಿತ ಕೃತ್ಯ' ಎಂದು ಹೇಳಲಾಗಿದ್ದು, ಒಲಿಂಪಿಕ್ಸ್ ಗೆ ಅಡ್ಡಿಪಡಿಸುವ ನಿಟ್ಟಿನಲ್ಲಿ ಈ ಕೃತ್ಯ ನಡೆದಿದೆ ಎಂದು ಅಲ್ಲಿನ ಗೃಹ ಇಲಾಖೆ ತಿಳಿಸಿದೆ. ಘಟನೆ ಹಿನ್ನೆಲೆ ಒಲಿಂಪಿಕ್ಸ್ ಕಮಿಟಿ ಉದ್ಘಾಟನಾ ಸಮಾರಂಭಕ್ಕೂ ಮೊದಲು ನಡೆಯುವ ಮಾಧ್ಯಮಗೋಷ್ಠಿಯನ್ನು ರದ್ದುಪಡಿಸಿದೆ ಎಂದು ವರದಿಯಾಗಿದೆ. ಈ ವಾರಾಂತ್ಯದಲ್ಲಿ ಬೇಸಿಗೆ ರಜೆ ಹೋಗು ವವರಿಗೆ, ಒಲಿಂಪಿಕ್ಸ್ ಉದ್ಘಾಟನೆ ವೀಕ್ಷಣೆಗೆ ಹೋಗುವವರಿಗೆ ಈ ರೈಲ್ವೆ ಸೇವೆಯಲ್ಲಿನ ವ್ಯತ್ಯಯ ಭಾರಿ ಸಮಸ್ಯೆ ಉಂಟು ಮಾಡಿದೆ. ಸದ್ಯ ಈ ಕೃತ್ಯ ಯಾರಿಂದ ನಡೆದಿದೆ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ.

ಬಿಗಿ ಭದ್ರತೆ

ಒಲಿಂಪಿಕ್ ಕ್ರೀಡಾಕೂಟದ ಮೇಲೆ ಪ್ಯಾಲಿಸ್ತೀನ್ ಉಗ್ರರ ದಾಳಿ ಭೀತಿ ಹಿನ್ನೆಲೆ ಪ್ಯಾರಿಸ್‌ನಲ್ಲಿ ಹಿಂದೆಂದೂ ಕೇಳರಿಯದಷ್ಟು ಭದ್ರತೆ ಒದಗಿಸಲಾಗಿದೆ. 45 ಸಾವಿರ ಪೊಲೀಸ್ ಸಿಬ್ಬಂದಿ, 10 ಸಾವಿರ ಸೇನಾ ಸಿಬ್ಬಂದಿ, 2 ಸಾವಿರ ಖಾಸಗಿ ಭದ್ರತಾ ಏಜೆಂಟ್‌ಗಳನ್ನು ನಿಯೋಜಿಸಲಾಗಿದೆ. ಡ್ರೋನ್‌ಗಳ ಕಣ್ಗಾವಲಿನ ಜತೆ ಆಯಕಟ್ಟಿನ ಜಾಗಗಳಲ್ಲಿ ಸ್ನೈಪರ್ ಗಳನ್ನೂ ನಿಯೋಜಿಸಲಾಗಿದೆ.

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ,
ದೂರವಾಣಿ : 08354-235042, ಇ-ಮೇಲ್ : bgkeezpe@yahoo.com
ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿ.ಜಿ.ಕೆ./ಪಿಬಿ-3/ಟೆಂಡರ್/2024-25/1062
ದಿನಾಂಕ : 26-07-2024

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಏಕ-ಲಕೋಟೆ) ಕೆ.ಡಬ್ಲ್ಯೂ-1 & 2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ **ಬಾಗಲಕೋಟೆ ಜಿಲ್ಲೆಯಲ್ಲಿನ** ಈ ಕೆಳಕಂಡ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ - 1 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 - 2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ **ಏಕ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.**

2023-24 ನೇ ಸಾಲಿನ ದ್ರವತ್ಯಾಜ್ಯ ನಿರ್ವಹಣೆ ಯೋಜನೆಯಡಿ ಎಲ್.ಡಬ್ಲ್ಯೂ.ಎಮ್. ಹಾಗೂ ಎಸ್.ಬಿ.ಎಮ್. ಅನುದಾನ ಆಯ್ಕೆಯಾದ ಮಂಜೂರಾದ ಅನುದಾನ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆ ಜಮಖಂಡಿ, ಇಲಕಲ್ ಹಾಗೂ ಬೀಳಗಿ ತಾಲೂಕಿನ ಅಡಿಯಲ್ಲಿ ಇತರೆ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : 7009, 7222, 7203, 6984, 7171, 6988, 7201, 7008, 6537, 6195, 6200, 6539, 6285, 7349, 7146, 6067, ಮತ್ತು ಪರಿಶಿಷ್ಟ ಜಾತಿ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : 7170 ಇದ್ದು, ಟೆಂಡರ್ ಕಾಮಗಾರಿ ವಿವರ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರಗಿಟ್ಟ ಮೊತ್ತ ರೂ. 6.00 ರಿಂದ 25.00 ಲಕ್ಷಗಳ ಮಿತಿಗೊಳಪಟ್ಟು ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ-ಪೋರ್ಟಲ್‌ನಲ್ಲಿ ಇದ್ದಂತೆ.

1) ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್-ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 12-08-2024 ರ ಸಾಯಂಕಾಲ 5.30 ಗಂಟೆವರೆಗೆ, 2) ಇ-ಪ್ರೊಕ್ಯೂರ್ ಮೆಂಟ್‌ನಲ್ಲಿ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 14-08-2024 ರಂದು ಮುಂಜಾನೆ 11.00 ಗಂಟೆಯ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ **ವೆಬ್‌ಸೈಟ್ : https://kppp.karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ,
ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/139/ಮಣಿಪಾಲ್/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾಧಿಕಾರಿಗಳ ಕಾರ್ಯಾಲಯ
ಕೊಠಡಿ ಸಂಖ್ಯೆ-001, ಕಾರವಾರ, ಉತ್ತರ ಕನ್ನಡ, ಫೋನ್: 08382-226588, 226589
ಇ-ಮೇಲ್: dobcmuttarakannada@gmail.com & dobcw-karwar@kar.gov.in
ಸಂಖ್ಯೆ: ಬಿಸಿಡಬ್ಲ್ಯೂ/ನಿಲಯ/ಸೇ.ಆ.ಪೂ.ತ/ಸಿಆರ್-5/2024-25 ದಿನಾಂಕ: 25-07-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಭಾರತೀಯ ಸೇನೆ ಹಾಗೂ ಇತರೆ ಯೂನಿಫಾರ್ಮ ಸೇವೆಗಳಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ಸೇನಾ ಆಯ್ಕೆ ಪೂರ್ವ ಸಿದ್ಧತೆಗಾಗಿ ಪ್ರಾರಂಭಿಸಲಾದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವೀರ ಬಹಾದ್ದೂರ್ ಹೆಂಜಾ ನಾಯ್ಕ ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆ ಕಾರವಾರದ ಅಭ್ಯರ್ಥಿಗಳಿಗೆ ಸಮವಸ್ತ್ರ ಪೂರೈಕೆಗಾಗಿ ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಮರುಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಪ್ರಾರಂಭ ದಿ: 25-07-2024 ಹಾಗೂ ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02-08-2024 ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ https://eproc.karnataka.gov.in ಸಂಪರ್ಕಿಸಬಹುದು.

ಸಹಿ/- ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉತ್ತರ ಕನ್ನಡ
DIPR/ADK/KSMCA/186/ 24-25 Dt. 26.07.2024

ಕರ್ನಾಟಕ ಸರಕಾರ
ವೈದ್ಯಕೀಯ ಅಧೀಕ್ಷಕರ ಕಛೇರಿ,
ಸರಕಾರಿ ಲೇಡಿಗೋಶನ್ ಆಸ್ಪತ್ರೆ, ಮಂಗಳೂರು-575 001, ದ.ಕ.ಜಿಲ್ಲೆ
ದೂರವಾಣಿ: ಕಚೇರಿ- 2445611, 2445610, ಹೊರರೋಗಿ ವಿಭಾಗ : 2423138
ಇ-ಮೇಲ್- ladygoshen@gmail.com
ಸಂಖ್ಯೆ: ಎನ್.ಎಚ್.ಎಮ್./39(ಕನ್ಸೂಮೆಬಲ್ಸ್/ಡಿಸ್ಪೋಸೇಬಲ್ಸ್/ಕೆಮಿಕಲ್ಸ್)/2024-25
ದಿನಾಂಕ: 24-07-2024

ಟೆಂಡರ್ ಪ್ರಕಟಣೆ

ವಿಷಯ: ಸರಕಾರಿ ಲೇಡಿಗೋಶನ್ ಆಸ್ಪತ್ರೆ, ಮಂಗಳೂರು ಇಲ್ಲಿಯ ರೋಗಿಗಳ ಉಪಯೋಗಕ್ಕಾಗಿ ಕನ್ಸೂಮೆಬಲ್ಸ್/ಡಿಸ್ಪೋಸೇಬಲ್ಸ್/ಕೆಮಿಕಲ್ಸ್‌ಗಳ ಪೂರೈಕೆಗಾಗಿ ಟೆಂಡರ್ ಅಧಿಸೂಚನೆ.
ಸರಕಾರಿ ಲೇಡಿಗೋಶನ್ ಆಸ್ಪತ್ರೆ, ಮಂಗಳೂರು, ಇಲ್ಲಿನ ಉಪಯೋಗಕ್ಕಾಗಿ 2024-25ನೇ ಸಾಲಿನಲ್ಲಿ ಒಂದು ವರ್ಷದ ಅವಧಿಗೆ ಬೇಕಾಗುವ ಕನ್ಸೂಮೆಬಲ್ಸ್ / ಡಿಸ್ಪೋಸೇಬಲ್ಸ್ / ಕೆಮಿಕಲ್ಸ್‌ಗಳ ಪೂರೈಕೆಗಾಗಿ ಕೆ.ಟಿ.ಪಿ.ಪಿ. 1999-2000 ನಿಯಮದಂತೆ ದ್ವಿ-ಬಿಡ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು KPP Portal ಮೂಲಕ ಆಹ್ವಾನಿಸಲಾಗಿದೆ. ಆಸಕ್ತ ನೋಂದಾಯಿತ ಸಂಸ್ಥೆಯವರು ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್: **www.kppp.karnataka.gov.in** ನಲ್ಲಿ ವೀಕ್ಷಿಸಬಹುದು.
(1) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ **ದಿನಾಂಕ: 25-07-2024.**
(2) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **09-08-2024 ಸಂಜೆ 4.30.** (3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 12-08-2024 ಬೆಳಿಗ್ಗೆ 11.00 ಗಂಟೆಗೆ.** (ಅಥವಾ ಅಂತಿಮ ದಿನಾಂಕದಂದು ಸರ್ಕಾರಿ ರಜೆ ಘೋಷಣೆಯಾದರೆ ಮರುದಿನ ಸರ್ಕಾರಿ ಕೆಲಸದ ದಿನದಂದು ಬಿಡ್‌ಗಳನ್ನು ತೆರೆಯಲಾಗುವುದು)

ಸಹಿ/- ವೈದ್ಯಕೀಯ ಅಧೀಕ್ಷಕರು
ಸರಕಾರಿ ಲೇಡಿಗೋಶನ್ ಆಸ್ಪತ್ರೆ, ಮಂಗಳೂರು
DIPR/ADM/KSMCA/326/24-25 dt. 26.07.2024

ನೀತಿ ಆಯೋಗ ರದ್ದು ಮಾಡಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಶನಿವಾರ ದೆಹಲಿಯಲ್ಲಿ ನಡೆಯಲಿರುವ ನೀತಿ ಆಯೋಗದ ಆಡಳಿತ ಮಂಡಳಿ ಸಭೆಗೆ ಹಾಜರಾಗಲು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ದೆಹಲಿ ತಲುಪಿದ್ದಾರೆ. ಆದರೆ ಸಭೆಗೂ ಮುನ್ನವೇ ನೀತಿ ಆಯೋಗ ವಿರುದ್ಧವೇ ದನಿ ಎತ್ತಿದ್ದಾರೆ.

ಸಿಎಂ ಮಮತಾ ಬ್ಯಾನರ್ಜಿ, ನೀತಿ ಆಯೋಗವನ್ನೇ ರದ್ದುಗೊಳಿಸುವಂತೆ ದೊಡ್ಡ ಆಗ್ರಹ ಮುಂದಿಟ್ಟಿದ್ದಾರೆ.

ಯೋಜನಾ ಆಯೋಗ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಕಲ್ಪನೆ. ಹಾಗಾಗಿ ನೀತಿ ಆಯೋಗವನ್ನು ರದ್ದುಗೊಳಿಸಿ, ಯೋಜನಾ ಆಯೋಗವನ್ನು ಮರಳಿ ಆರಂಭ ಮಾಡಬೇಕು ಎಂದು ಮಮತಾ ಬ್ಯಾನರ್ಜಿ ಆಗ್ರಹಿಸಿದರು.

ಬಳಿಕ ರಾಜಕೀಯ ವಿಚಾರ ಮಾತನಾಡಿದ ಮಮತಾ, ಕೇಂದ್ರ ಸರಕಾರ ಆಂತರಿಕ ಕಚ್ಚಾಟದಲ್ಲಿ ಬೀಳುತ್ತದೆ ಎಂದರು.

ಇತ್ತೀಚಿನ ಚುನಾವಣೆಯಲ್ಲಿ ಭಾರತ ಮೈತ್ರಿಕೂಟಕ್ಕೆ ಶೇ.51 ಹಾಗೂ ಎನ್‌ಡಿಎಗೆ ಶೇ.46ರಷ್ಟು ಮತಗಳು ಲಭಿಸಿವೆ. ಬಂಗಾಳದಲ್ಲಿ ಬಿಜೆಪಿ ಸೂರ್ಯ ಮುಳುಗುತ್ತಿದೆ. ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕ್ರೆ ಮೈತ್ರಿ ಗೆಲ್ಲಲಿದೆ. ಹರಿಯಾಣದಲ್ಲಿ ಬಿಜೆಪಿ ಸೋಲಲಿದೆ ಮತ್ತು ಜಾರ್ಖಂಡ್‌ನಲ್ಲಿ ಹೇಮಂತ್ ಸೋರೆನ್ ಮತ್ತೆ ಗೆಲ್ಲಲಿದ್ದಾರೆ ಎಂದು ಭವಿಷ್ಯ ನುಡಿದರು. ಎನ್‌ಡಿಎ ಭಾಗವಾಗು ವಿರಾ? ಎಂಬ ಸುದ್ದಿಗಾರರ ಪ್ರಶ್ನೆಗೆ, ಸಿದ್ಧಾಂತದೊಂದಿಗೆ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದರು.

ರಾಜ್ಯಸಭೆಯಲ್ಲಿ ವಾಲ್ಮೀಕಿ ಹಗರಣ ಪ್ರಸ್ತಾಪ: ಚರ್ಚೆ

ದೆಹಲಿ: ರಾಜ್ಯಸಭೆಯಲ್ಲಿ ಶುಕ್ರವಾರದ ಕಲಾಪದಲ್ಲಿ ಬಿಜೆಪಿ ಸದಸ್ಯ ಈರಣ್ಣ ಕಡಾಡಿ, ವಾಲ್ಮೀಕಿ ನಿಗಮ ಹಗರಣ ಪ್ರಸ್ತಾಪ ಮಾಡಿದರು. ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣ ದುರುಪಯೋಗ ಆಗಿದೆ. 187 ಕೋಟಿ ರು. ತೆಲಂಗಾಣ ಚುನಾವಣೆಯಲ್ಲಿ ಪ್ರಚಾರಕ್ಕೆ ಬಳಕೆ ಮಾಡಲಾಗಿದೆ. ಇದನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಆಗ್ರಹಿಸಿದರು.

ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೆ ನಿತ್ಯ ಒಂದಲ್ಲಾ ಒಂದು ಅಕ್ರಮ ಹೊರ ಬರುತ್ತಿದೆ. ಗ್ಯಾರಂಟಿ ಯೋಜನೆಗಳಿಗೆ ಬೇರೆ ಇಲಾಖೆಗಳ ಹಣ ಬಳಕೆಯಾಗಿದೆ. ವಾಲ್ಮೀಕಿ ನಿಗಮ ಮಂಡಳಿ ಹಣವನ್ನು ದುರ್ಬಳಕೆ ಮಾಡಿಕೊಂಡಿದೆ. ಶೋಷಿತ ಜನಾಂಗದ ಹಣವನ್ನು ಚುನಾವಣೆ ಬಳಕೆಗೆ ಬಳಸಿದೆ. ದಲಿತರ ಹಣ ಲೂಟಿ ಆಗುತ್ತಿರುವಾಗ ರಾಹುಲ್ ಗಾಂಧಿ ಏನು ಮಾಡುತ್ತಿದ್ದರು ಎಂದು ಪ್ರಶ್ನಿಸಿದರು.

ಟಿ.ಎಂ.ಎ.ಇ.ಸಂಸ್ಥೆ (ರಿ) ಹರಪನಹಳ್ಳಿ-583131, ವಿಜಯನಗರ (ಜಿ)
ಖಾಲಿ ಹುದ್ದೆಗಳಿಗೆ ನೇಮಕಾತಿ ಪ್ರಕಟಣೆ - ದ್ವಿತೀಯ ಪ್ರಕಟಣೆ
ಬೇಕಾಗಿದ್ದಾರೆ

ಉಲ್ಲೇಖ : 1) ಮಾನ್ಯ ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ:ಸಿ8(3) ಖಾ.ಹು.ಭ/2022-23/ಇ-906140 ದಿನಾಂಕ 10-11-2022.
2) ಮಾನ್ಯ ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಜ್ಞಾಪನ ಸಂಖ್ಯೆ:ಸಿ8(4)(8) ಶಾ:ಶಿಅ:ನೇ.ಅನು/ಇ-1359122/04/2023-24 ದಿನಾಂಕ 09-07-2024.
ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಈ ಕೆಳಕಂಡ ಬೋಧಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಶಾಲೆಯ ಹೆಸರು	ಅನುಮತಿಸಿದ ವಿಷಯ	ಖಾಲಿ ಹುದ್ದೆ	ವಿದ್ಯಾರ್ಹತೆ	ಮೀಸಲಾತಿ ಸೂಚ್ಯಾಂಕ	ಮೀಸಲಾತಿ ಗುಂಪು
01	ಟಿ.ಎಂ.ಎ.ಇ.ಎಸ್. ಪ್ರೌಢಶಾಲೆ ನೀಲಗುಂದ	ಕನ್ನಡ	01	ಬಿ.ಎ., ಬಿ.ಇಡಿ. (ಕನ್ನಡ ಭಾಷೆಯನ್ನು ಐಚ್ಛಿಕ ವಿಷಯವನ್ನಾಗಿ ಅಭ್ಯಾಸ ಮಾಡಿರತಕ್ಕದ್ದು)	35	2ಬಿ ಮಹಿಳೆ

ವಯಸ್ಸು ಮತ್ತು ವೇತನ ಸರ್ಕಾರಿ ನಿಯಮಾವಳಿಯಂತೆ. ಅರ್ಹ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಮಾನ್ಯ ಕಾರ್ಯದರ್ಶಿಗಳು, ಟಿ.ಎಂ.ಎ.ಇ. ಸಂಸ್ಥೆ, ಹರಪನಹಳ್ಳಿ-583131, ವಿಜಯನಗರ ಜಿಲ್ಲೆ ಇವರ ಹೆಸರಿನಲ್ಲಿ ಪೋಸ್ಟಲ್ ಆರ್ಡರ ರೂ. 1000/- ಲಗತ್ತಿಸಿ ಪತ್ರಿಕಾ ಪ್ರಕಟಣೆ ದಿನಾಂಕದಿಂದ 21 ದಿನಗಳೊಳಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ, ವಿಜಯನಗರ ಜಿಲ್ಲೆ ಇವರಿಗೆ ಸಲ್ಲಿಸತಕ್ಕದ್ದು. ಪ್ರಕಟಣೆಯು ಇಲಾಖೆಯ ನಿಯಮಾವಳಿಗೆ ಒಳಪಟ್ಟಿರುತ್ತದೆ.

ಸಹಿ/-
ಕಾರ್ಯದರ್ಶಿಗಳು, ಟಿ.ಎಂ.ಎ.ಇ.ಸಂಸ್ಥೆ, ಹರಪನಹಳ್ಳಿ

ಗಡಿಗೆ ಹೆಚ್ಚು ಸೈನ್ಯ ನಿಯೋಜಿಸಿದ ಪಾಕ್

ದೆಹಲಿ: ಭಯೋತ್ಪಾದನೆ ನಿಗ್ರಹಿಸುವ ಬದಲು ಉಗ್ರರಿಗೆ ಆಶ್ರಯ ನೀಡಿ ಸಾಕುತ್ತಿರುವ ಪಾಕ್‌ಗೆ ಪ್ರಧಾನಿ ಮೋದಿ ಕಾರ್ಗಿಲ್ ವಿಜಯ ದಿವಸದಂದೇ ಎಚ್ಚರಿಕೆ ನೀಡಿದರು. ಅದರ ಬೆನ್ನಲ್ಲೇ ಪಾಕ್ ಸೇನೆ ತರಾತುರಿಯಲ್ಲಿ ದೇಶದ ಗಡಿಯಲ್ಲಿ ಹೆಚ್ಚುವರಿ ಸೈನಿಕರನ್ನು ನಿಯೋಜಿಸಿದೆ. ಪಾಕಿಸ್ತಾನ ಗಡಿಯಲ್ಲಿ 2 ಹೆಚ್ಚುವರಿ ಬ್ರಿಗೇಡ್, 3 ಪಿಒಕೆ ಬ್ರಿಗೇಡ್ ಹಾಗೂ 2 ಹೆಚ್ಚುವರಿ ಪಿಒಕೆ ಬ್ರಿಗೇಡ್‌ಗಳನ್ನು ಹೆಚ್ಚುವರಿಯಾಗಿ ನಿಯೋಜಿಸಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಸಮಾಚಾರ ಸಣ್ಣದಲ್ಲ

ನೀರುಪಾಲಾಗಿದ್ದ ಮಂಜುನಾಥ ಶವ ಪತ್ತೆ

ಮುದ್ದೇಬಿಹಾಳ: ತಾಲೂಕಿ ಗಡಿಭಾಗದ ಚಕ್ ಪೋಸ್ಟ್ ಹತ್ತಿರ ಬಸವಸಾಗರ ಜಲಾಶಯದ ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ನೀರು ಕುಡಿಯುವಾಗ ಜಾರಿ ಬಿದ್ದಿದ್ದ ಕುರಿಮರಿ ರಕ್ಷಿಸಲು ಹೋಗಿ ಸೋಮವಾರ ಸಂಜೆ ನೀರು ಪಾಲಾಗಿದ್ದ ಮುದ್ದೇಬಿಹಾಳ ತಾಲೂಕು ನಾಗಬೇನಾಳ ಗ್ರಾಮದ ಕುರಿಗಾಯಿ ಮಂಜುನಾಥ ಮಾದರ (28)ನ ಶವ ಘಟನೆ ನಡೆದ ಮುದ್ದೇಬಿಹಾಳ ಪೊಲೀಸ್ ಠಾಣೆ ವ್ಯಾಪ್ತಿಯ ನಾರಾಯಣಪುರ ಚಕ್‌ಪೋಸ್ಟ್‌ನಿಂದ 20-25 ಕಿಮಿ ದೂರದಲ್ಲಿರುವ ಯಾದಗಿರಿ ಜಿಲ್ಲೆ ನಾರಾಯಣಪುರ ಪೊಲೀಸ್ ಠಾಣೆ ವ್ಯಾಪ್ತಿಯ ಹೊರಟ್ಟಿ ಗ್ರಾಮದ ಹತ್ತಿರವಿರುವ ಕಾಲುವೆಯಲ್ಲಿ ಬುಧವಾರ ದೊರಕಿದೆ. ಈ ಕುರಿತು ನಾರಾಯಣಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕು ಗಡಿ ಭಾಗದಲ್ಲಿರುವ ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಘಟನೆ ನಡೆದಿತ್ತು. ಶವದ ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ವಾರಸುದಾರರಿಗೆ ಹಸ್ತಾಂತರಿಸಿ ಅಲ್ಲಿನ ಪೊಲೀಸರು ಕಾನೂನು ಪ್ರಕ್ರಿಯೆ ಕೈಕೊಂಡಿದ್ದಾರೆ.

ಸಿಎಂ ಮಾಧ್ಯಮ ಸಲಹೆಗಾರ ಪ್ರವಾಸ

ವಿಜಯಪುರ: ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರು ಕೆ.ವಿ.ಪ್ರಭಾಕರ್(ಸಂಪುಟ ದರ್ಜೆ) ಜು.28 ರಂದು ಸಂಜೆ 4 ಗಂಟೆಗೆ ವಿಜಯಪುರಕ್ಕೆ ಆಗಮಿಸಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಸಹಯೋಗದಲ್ಲಿ ನಗರದ ಪೊಲೀಸ್ ಸಮುದಾಯ ಭವನದಲ್ಲಿ ಹಮ್ಮಿಕೊಂಡ ಪತ್ರಿಕಾ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಸಂಜೆ 6 ಗಂಟೆಗೆ ಕಲ್ಬುರ್ಗಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ತಿಳಿಸಿದೆ.

ಉಸ್ತುವಾರಿ ಕಾರ್ಯದರ್ಶಿ ಜಿಲ್ಲಾ ಪ್ರವಾಸ

ವಿಜಯಪುರ: ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ ಸರಕಾರದ ಕಾರ್ಯದರ್ಶಿಗಳಾದ ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಉಜ್ವಲ್‌ಕುಮಾರ್ ಘೋಷ ಅವರು ಜು.28 ಹಾಗೂ 29ರಂದು ಜಿಲ್ಲಾ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಜು.28ರಂದು ವಿಜಯಪುರಕ್ಕೆ ಆಗಮಿಸಿ ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಇಲಾಖೆಗಳ ವಸತಿ ನಿಲಯ, ರೈತ ಸಂಪರ್ಕ ಕೇಂದ್ರ, ಪಿ.ಎಚ್.ಸಿ., ಸಿ.ಹೆಚ್.ಸಿ, ಆಸ್ಪತ್ರೆಗಳ ಕ್ಷೇತ್ರ ವೀಕ್ಷಣೆ ಹಾಗೂ ಪರಿಶೀಲನೆ ನಡೆಸಿ ನಂತರ ಮುಂಗಾರು ಋತುವಿನ ವಿಪತ್ತು ನಿರ್ವಹಣೆಯ ಯೋಜನೆಯ ಪರಿಶೀಲನೆ ಹಾಗೂ ಇತರೆ ವಿಷಯಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಜು.29ರಂದು ಬೆಳಿಗ್ಗೆ 10-30ರಿಂದ 1-30ರವರೆಗೆ ಸಭೆ ನಡೆಸಿ, 1-30ರಿಂದ ಕ್ಷೇತ್ರ ವೀಕ್ಷಣೆ ನಡೆಸಿ, ವಿಜಯಪುರದಿಂದ ಕಲ್ಬುರ್ಗಿ ಮೂಲಕ ಬೆಂಗಳೂರಿಗೆ ಮರು ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ವಿಜಯಪುರ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಯಡಿಯಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ-ಕಾಲೇಜ್ ಹಾಗೂ ಮೌಲಾನಾ ಆಝಾದ್ ಮಾದರಿ ಶಾಲೆಗಳಲ್ಲಿ ಖಾಲಿ ಇರುವ ಅತಿಥಿ ಉಪನ್ಯಾಸಕ-ಶಿಕ್ಷಕರ ಹುದ್ದೆಗಳಿಗೆ ಆಸಕ್ತ ಅರ್ಹ ರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ದಿನಾಂಕ: 31-07-2024 ಕೊನೆಯ ದಿನಾಂಕವಾ ಗಿದ್ದು, ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಆಯಾ ಶಾಲೆಗಳ ಪ್ರಾಂಶುಪಾಲರನ್ನು ಸಂಪರ್ಕಿಸಬಹು ದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರಿಗೆ ತರಬೇತಿ ಕಾರ್ಯಕ್ರಮ 30ಕ್ಕೆ

ವಿಜಯಪುರ: ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ಜುಲೈ 30 ರಂದು ತಾಳಿಕೋಟೆ ಹಾಗೂ ವಿಜಯಪುರ ತಾಲೂಕಿನ ರೈತರಿಗೆ ವಿವಿಧ ಬೆಳೆಗಳಲ್ಲಿ ಸೂಕ್ಷ್ಮ ನೀರಾವರಿ ಘಟಕದ ಉಪಯೋಗಗಳು ಅಳವಡಿಕೆ ಹಾಗೂ ನಿರ್ವಹಣೆ' ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಸಕ್ತ ರೈತರು ಭಾಗವಹಿಸಿ ತರಬೇತಿಯ ಸಂಪೂರ್ಣ ಮಾಹಿತಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ (ಮೋ: 8277930619) ಸಂಪರ್ಕಿಸಿ

{ಡಿ.ಕೆ.ಶಿವಕುಮಾರ್ } ಡಿಸಿಎಂ

ಬಿಜೆಪಿಯವರು ಪಾದಯಾತ್ರೆ ಮಾಡುವ ಮೂಲಕ ಅವರ ಅಕ್ರಮಗಳನ್ನು ಬಯಲು ಮಾಡಲು ನಮಗೆ ಸದಾವಕಾಶವನ್ನು ಒದಗಿಸಿಕೊಟ್ಟಿದ್ದಾರೆ. ಅವರು ಪಾದಯಾತ್ರೆ ಮಾಡುವಾಗ ಒಂದೊಂದು ದಿನವೂ ಅವರ ಅಕ್ರಮಗಳನ್ನು ನಾವು ಬಯಲು ಮಾಡುತ್ತೇವೆ. ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಪ್ರಸ್ತಾಪಿಸಿರುವ ಹಗರಣಗಳನ್ನು ನಿತ್ಯ ಒಂದರಂತೆ ಬಯಲು ಮಾಡುತ್ತೇವೆ.

ಹುತಾತ್ಮ ಯೋಧರ ಸ್ಮರಣೆ ನಮ್ಮೆಲ್ಲರ ಆದ್ಯ ಕರ್ತವ್ಯ: ಗ್ರೂಪ್ ಕ್ಯಾಪ್ಟನ್ ಪ್ರತಿಭಾ ಬಿಷ್ಟ

ಸೈನಿಕ ಶಾಲೆಯಲ್ಲಿ ಕಾರ್ಗಿಲ್ ವಿಜಯದಿವಸ್ ಆಚರಣೆ

ವಿಜಯಪುರ: ಕಾರ್ಗಿಲ್ ವಿಜಯ ದಿವಸದ 25ನೇ ವಾರ್ಷಿಕೋತ್ಸವವನ್ನು ನಗರದ ಸೈನಿಕ ಶಾಲೆ ಆವರಣದಲ್ಲಿ ಶುಕ್ರವಾರ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಚಾರ್ಯೆ ಗ್ರೂಪ್ ಕ್ಯಾಪ್ಟನ್ ಪ್ರತಿಭಾ ಬಿಷ್ಟ ಅವರು ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ವೀರ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಿ, ಸ್ಮರಣಾರ್ಥ ಸ್ಥಳದಲ್ಲಿ ಪುಷ್ಪಗುಚ್ಛವನ್ನು ಹಾಕುವ ಮೂಲಕ ಹುತಾತ್ಮರಿಗೆ ಪುಷ್ಪನಮನ ಸಲ್ಲಿಸಿದರು.

ಈ ವೇಳೆ ಅವರು ಮಾತನಾಡಿ, ನಮ್ಮ ದೇಶಭಕ್ತಿಯನ್ನು ಪ್ರದರ್ಶಿಸುವ ಮತ್ತು ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ಯೋಧರನ್ನು ಸ್ಮರಿಸುವ ದಿನವಾಗಿದೆ. 1999 ರ ಕಾರ್ಗಿಲ್ ಯುದ್ಧದ ಸಮಯದಲ್ಲಿ ದೇಶಕ್ಕಾಗಿ ಜೀವ ತ್ಯಾಗ ಮಾಡಿದ ಭಾರತೀಯ ಸೈನಿಕರ ಶೌರ್ಯಕ್ಕೆ ಗೌರವ ಸಲ್ಲಿಸಲು ಪ್ರತಿ ವರ್ಷ ಜುಲೈ 26ರಂದು ಕಾರ್ಗಿಲ್ ವಿಜಯ ದಿವಸ್ ನ್ನು ಆಚರಿಸಲಾಗುತ್ತದೆ. ಈ ಘಟನೆಯು ಭಾರತ ಮತ್ತು ಪಾಕಿಸ್ತಾನದ ನಡುವೆ ಪ್ರಾರಂಭವಾದ ಕಾರ್ಗಿಲ್ ಯುದ್ಧದ ಮುಕ್ತಾಯವನ್ನು ಸೂಚಿಸುತ್ತದೆ. 1999 ರಲ್ಲಿ ಜುಲೈ 26ರಂದು, ಗಡಿ ನಿಯಂತ್ರಣ ರೇಖೆಯನ್ನು ದಾಟಿ ಭಾರತದ ಭೂ ಪ್ರದೇಶಕ್ಕೆ ನುಗ್ಗಿದ ಪಾಕಿಸ್ತಾನಿ ನುಸುಳುಕೋರರ ವಿರುದ್ಧ ಭಾರತೀಯ ಸೈನಿಕರು ಹೋರಾಡಿ ಗೆಲುವನ್ನು ಸಾಧಿಸಿದರು. ಅಂದಿನಿಂದ ಈ ಮಹತ್ವದ ದಿನವನ್ನು ಕಾರ್ಗಿಲ್ ವಿಜಯ್ ದಿವಸ್ ಎಂದು ಕರೆಯಲಾ ಗುತ್ತದೆ ಎಂದು ವಿವರಿಸಿದರು. ಹುತಾತ್ಮ ಯೋಧರಿಗೆ ಗೌರವ ಸೂಚಕವಾಗಿ ಎರಡು ನಿಮಿಷ ಮೌನ ಆಚರಿಸಿದರು. ಉಪಸ್ಥಿತರಿದ್ದ ಯೋಧರು ಹಾಗೂ ಮಾಜಿ ಸೈನಿಕರು ಶ್ರದ್ಧಾಂಜಲಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಅಪಾರ ಸಂಖ್ಯೆಯ ಯೋಧರು, ಮಾಜಿ ಸೈನಿಕರು ಮತ್ತು ಅವರ ಕುಟುಂಬದವರು, ಉಪ-ಪ್ರಾಚಾರ್ಯೆ ಕಮಾಂಡರ್ ಮೀನಾ ಕುಮಾರಿ, ಹಿರಿಯ ಮಾಸ್ಟರ್ ಪಿ.ಎಂ.ಶೆಟ್ಟಿ, ಶೈಕ್ಷಣಿಕ ಮತ್ತು ಆಡಳಿತ ಸಿಬ್ಬಂದಿ ವರ್ಗದವರು ಮತ್ತು ಕೆಡೆಟ್‌ಗಳು ಉಪಸ್ಥಿತರಿದ್ದರು.

ಶಾಲೆಯ ಪ್ರಾಚಾರ್ಯೆ ಗ್ರೂಪ್ ಕ್ಯಾಪ್ಟನ್ ಪ್ರತಿಭಾ ಬಿಷ್ಟ ಅವರು ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ವೀರ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಬಿ. ಎಂ. ಪಾಟೀಲ ಪಬ್ಲಿಕ್ ಶಾಲೆ

ವಿಜಯಪುರ : ಕಾರ್ಗಿಲ್ ಯುದ್ಧದದಲ್ಲಿ ದೇಶಕ್ಕಾಗಿ ಹುತಾತ್ಮರಾದ ಯೋಧರನ್ನು ನೆನೆಯುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಶ್ರೀ ಬಿ. ಎಂ. ಪಾಟೀಲ ಪಬ್ಲಿಕ್ ಶಾಲೆಯ ಹಿರಿಯ ಕಾರ್ಯ ಸಂಯೋಜಕಿ ದೀಪಾ ಜಂಬೂರೆ ಹೇಳಿದ್ದಾರೆ. ಶುಕ್ರವಾರ ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಬಿ. ಎಂ. ಪಾಟೀಲ ಪಬ್ಲಿಕ್ ಶಾಲೆಯಲ್ಲಿ ನಡೆದ ಕಾರ್ಗಿಲ್ ವಿಜಯ ದಿವಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ 9ನೇ ತರಗತಿಯ ಎಲ್ಲ ವಿದ್ಯಾರ್ಥಿಗಳು ಯೋಧರ ಉಡುಗೆಯಲ್ಲಿ ಬಂದು ಕಾರ್ಗಿಲ್ ಅಣಕು ಕಾರ್ಯಾಚರಣೆಯ ನೃತ್ಯವನ್ನು ಪ್ರದರ್ಶಿಸಿದರು. ಸೌಮ್ಯಾ ಕಡೆಮನಿ ಸ್ವಾಗತಿಸಿದರು. ಅಶೋಕ ನವಲೆ ಕಾರ್ಯಕ್ರಮವನ್ನು ನಿರೂಪಿಸಿದರು ನೃತ್ಯ ಸಂಯೋಜಕ ಪ್ರವೀಣ ಬಡಿಗೇರ ವಂದಿಸಿದರು. ಈ ಸಂದರ್ಭದಲ್ಲಿ ದೀಪಾ ಜಂಬೂರೆ, ಸೌಮ್ಯಾ ಕಡೆಮನಿ, ಅಶೋಕ ನವಲೆ, ಪ್ರವೀಣ ಬಡಿಗೇರ ಮುಂತಾದವರು ಉಪಸ್ಥಿತರಿದ್ದರು.

ಜ್ಞಾನಾಧಾರಿತ ಸಮಾಜ ಸ್ಥಾಪನೆ ಧ್ಯೇಯವಾಗಲಿ

ವಿದ್ಯಾಲಯ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಗತಿವಿಧಿ, ಪ್ರಾಂತ ಮಟ್ಟದ ಶಿಕ್ಷಕ ಸ್ವಾಧ್ಯಾಯ ಸಮಾರಂಭವನ್ನು ಉಮಾದೇವಿ ಸೊನ್ನದ ಉದ್ಘಾಟಿಸಿದರು.

ವಿಜಯಪುರ: ಭಾರತದಲ್ಲಿ ಶಾಲಾ ಶಿಕ್ಷಣ ವ್ಯವಸ್ಥೆಯು ವಿಶಾಲವಾಗಿದೆ. ಸಾಂಪ್ರದಾಯಿಕ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ನೈತಿಕತೆಯನ್ನು ತುಂಬುವುದರ ಮೇಲೆ ಕೇಂದ್ರೀಕರಿಸಿ, ಮಕ್ಕಳ ಜ್ಞಾನವನ್ನು ವಿಸ್ತರಿಸಿ, ವ್ಯಕ್ತಿತ್ವದ ಬೆಳವಣಿಗೆಗೆ ಸಹಕರಿಸಬೇಕು ಎಂದು ಡೈಟ್ ಕಾಲೇಜಿನ ಪ್ರಾಚಾರ್ಯ ಉಮಾದೇವಿ ಸೊನ್ನದ ಹೇಳಿದರು.

ಅವರು ಇಟ್ಟಂಗಿಹಾಳ ರಸ್ತೆಯಲ್ಲಿರುವ ಎಕ್ಸಲೆಂಟ್ ಶಾಲೆಯಲ್ಲಿ ಶುಕ್ರವಾರದಂದು ಭಾರತೀಯ ಶಿಕ್ಷಣ ಮಂಡಲ ಕರ್ನಾಟಕ ಉತ್ತರ ಪ್ರಾಂತ ಹಾಗೂ ಎಕ್ಸಲೆಂಟ್ ಸಮೂಹ ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ ಜರುಗಿದ ವಿದ್ಯಾಲಯ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಗತಿವಿಧಿ, ಪ್ರಾಂತ ಮಟ್ಟದ ಶಿಕ್ಷಕ ಸ್ವಾಧ್ಯಾಯ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಉತ್ತಮ ಗುಣಮಟ್ಟದ, ಸಾರ್ವತ್ರಿಕ, ಸಮಗ್ರ ಶಿಕ್ಷಣದ ಮೂಲಕ ಸಮಾನ ಜ್ಞಾನಾಧಾರಿತ ಸಮಾಜ ಸ್ಥಾಪಿಸುವಲ್ಲಿ ಎಲ್ಲರೂ ಶ್ರಮಿಸಬೇಕಾಗಿದೆ ಎಂದು ಹೇಳಿದರು.

ಭಾರತೀಯ ಶಿಕ್ಷಣ ಮಂಡಲದ ಅಖಿಲ ಭಾರತೀಯ ಸಹ ಕಾರ್ಯದರ್ಶಿ ಡಾ.ಮೀನಾ ಚಂದಾವರ್ಕರ್ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೀಯ ಪುನರುತ್ಥಾನದ ಉದ್ದೇಶದಿಂದ ಈ ಸಂಸ್ಥೆಯು ಸಮಗ್ರ ಭಾರತೀಯ ದೃಷ್ಟಿಕೋನದ ಆಧಾರದ ಮೇಲೆ ರಾಷ್ಟ್ರೀಯ ಶಿಕ್ಷಣ ನೀತಿ, ಪಠ್ಯಕ್ರಮ, ವ್ಯವಸ್ಥೆ ಮತ್ತು ವಿಧಾನಗಳನ್ನು ವಿಕಸಿಸುವ ಗುರಿಯನ್ನು ಹೊಂದಿದೆ ಎಂದು ಹೇಳಿದರು. ಭಾರತೀಯ ಶಿಕ್ಷಣ ಮಂಡಲದ ಪ್ರಾಂತ ಸಂರಕ್ಷಕರಾದ ಡಾ.ಸತೀಶ ಜಿಗಜಿನ್ನಿ ಮಾತನಾಡಿ, ಭಾರತೀಯ ಸಂಸ್ಕೃತಿಯು ವಿದ್ಯಾರ್ಥಿಗಳ ವ್ಯಕ್ತಿತ್ವದಲ್ಲಿ ಪ್ರತಿಬಿಂಬಿತವಾಗಬೇಕು. ಶಿಕ್ಷಣ ಕ್ಷೇತ್ರದ ಪಾಲುದಾರರಾದ ಶಿಕ್ಷಕರು, ಶಿಕ್ಷಣ ಸಂಸ್ಥೆಗಳು ಮತ್ತು ಪೋಷಕರು ಈ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಎಕ್ಸಲೆಂಟ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸವರಾಜ ಕೌಲಗಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಣವು ಜಗತ್ತನ್ನು ಬದಲಾಯಿಸಬಲ್ಲ ಅತ್ಯಂತ ಶಕ್ತಿಶಾಲಿ ಅಸ್ತ್ರವಾಗಿದೆ. ಶಿಕ್ಷಣ ವ್ಯವಸ್ಥೆಯ ರೂಪುರೇಷೆಗಳು ರಚನಾತ್ಮಕ ಬದಲಾವಣೆ ಕಂಡುಕೊಳ್ಳುವ ಜತೆಗೆ ಶಿಕ್ಷಣದಲ್ಲಿ ಮಾತೃಭಾಷೆ, ಸಂಸ್ಕೃತಿ, ಜ್ಞಾನ, ಕೌಶಲ ಹಾಗೂ ಉದ್ಯೋಗಾವಕಾಶಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ ಎಂದು ಹೇಳಿದರು. ನಾಗಪುರದ ಭಾರತೀಯ ಶಿಕ್ಷಣ ಮಂಡಲದ ಅಖಿಲ ಭಾರತೀಯ ಸಂಘಟನಾ ಮಂತ್ರಿ ಬಿ ಆರ್ ಶಂಕರಾನಂದ, ಜಿಲ್ಲಾಧ್ಯಕ್ಷ ಬಿ ಎಸ್ ಬಾಪಗೊಂಡ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಿದ್ದು ಮದರಖಂಡಿ ಸಂಘಟನಾ ಮಂತ್ರ ಹೇಳಿದರು. ಸಹ ಕಾರ್ಯದರ್ಶಿ ಸಂತೋಷ ಬಂಡೆ ನಿರ್ವಹಿಸಿದರು. ಡಾ ಎಸ್ ಟಿ ಬೋಳರೆಡ್ಡಿ ವಂದಿಸಿದರು. ಜಿಲ್ಲಾ ಕಾರ್ಯದರ್ಶಿ ಮಲ್ಲಿಕಾರ್ಜುನ ಗುಡ್ಡದ, ಪ್ರೊ. ರಾಜಕುಮಾರ ಮಾಲಿಪಾಟೀಲ, ಶೀಲಾ ಬಿರಾದಾರ, ರಾಜಶ್ರೀ ಜುಗತಿ, ಪ್ರೊ ಅಶೋಕ ಸುರಪುರ, ಪ್ರೊ ಎ ಬಿ ಲಕ್ಕಣ್ಣವರ, ಡಾ ಎಚ್ ವೆಂಕಟೇಶ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಜಿಲ್ಲೆಯ 200 ಕ್ಕೂ ಅಧಿಕ ಶಿಕ್ಷಕರು ಭಾಗವಹಿಸಿದ್ದರು.

ನವೀಕೃತ ಸ್ಮಾರಕ ಲೋಕಾರ್ಪಣೆ

ಸೈನಿಕ ಮೈದಾನದಲ್ಲಿ 25ನೇ ಕಾರ್ಗಿಲ್ ವಿಜಯೋತ್ಸವ ಆಚರಣೆ

ಮುದ್ದೇಬಿಹಾಳ: ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ವೀರಸೈನಿಕರಿಗೆ ಸ್ಮಾರಕ ನಿರ್ಮಿಸಿ ದೇಶಪ್ರೇಮ ತೋರಿಸಿ ಕೊಟ್ಟಿರುವುದು ಈ ಭಾಗದ ಜನರ ಹೃದಯಸ್ಪರ್ಷಿ ಮಾನವೀಯತೆಗೆ ಕನ್ನಡಿ ಹಿಡಿದಂತಾಗಿ ದೇಶಕ್ಕೆ ಮಾದರಿ ಕಾರ್ಯವಾಗಿದೆ. 25 ವರ್ಷಗಳ ನಂತರವೂ ಕಾರ್ಗಿಲ್ ಹೋರಾಟದ ನೆನಪುಗಳು, ನೋವುಗಳು ಮರೆಯಾಗಿಲ್ಲ. ಅಂತೆಯೇ ಸೈನಿಕರ ಕೆಚ್ಚು ಹೆಚ್ಚಾಗಿದೆಯೇ ಹೊರತು ಕಡಿಮೆ ಆಗಿಲ್ಲ ಎಂದು ಮುದ್ದೇಬಿಹಾಳ ತಾಲೂಕು ಬಳವಾಟ ಗ್ರಾಮದವರಾಗಿದ್ದು ಸಧ್ಯ ತಮಿಳುನಾಡಿನ ವೆಲ್ಲಿಂಗಟನ್‌ನಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿರುವ ಶಿವಾನಂದ ಬಿರಾದಾರ ಹೇಳಿದರು.

ತಹಸೀಲ್ದಾರ್ ಕಚೇರಿ ಆವರಣದಲ್ಲಿರುವ ಸೈನಿಕ ಮೈದಾನದಲ್ಲಿ ಶುಕ್ರವಾರ ಕಾರ್ಗಿಲ್ ವೀರಯೋಧರ ಸ್ಮಾರಕ ನಿರ್ಮಾಣ ಸಮಿತಿ ನೇತೃತ್ವದಲ್ಲಿ ಏರ್ಪಡಿಸಿದ್ದ 25ನೇ ಕಾರ್ಗಿಲ್ ವಿಜಯೋತ್ಸವ, ನವೀಕೃತ ಹುತಾತ್ಮ ಯೋಧರ ಸ್ಮಾರಕ ಲೋಕಾರ್ಪಣೆ, ಹುತಾತ್ಮ ಯೋಧರ ಕುಟುಂಬದವರಿಗೆ, ಸ್ಮಾರಕ ನವೀಕರಣಕ್ಕೆ ಸೇವೆ ಸಲ್ಲಿಸಿದವರಿಗೆ ಸನ್ಮಾನ ಸಮಾರಂಭದಲ್ಲಿ ಜ್ಯೋತಿ ಬೆಳಗಿಸಿ ಅವರು ಮಾತನಾಡಿದರು.

ಕಾರ್ಗಿಲ್ ಯುದ್ಧ ನಮಗೆ ಹಲವು ಪಾಠಗಳನ್ನು ಕಲಿಸಿತ್ತು. 527 ಸೈನಿಕರು ಶಹೀದರಾಗಿದ್ದಾರೆ. 1363 ಸೈನಿಕರು ಗಾಯಾಳುಗಳಾಗಿ ಅಂಗಾಂಗ ಕಳೆದುಕೊಂಡಿದ್ದಾರೆ. ಶಹೀದ್ ಆದವರ ತಂದೆ, ತಾಯಿಯರ ನೋವು ಎಂದು ಅಳಿಸಲಾಗದಂಥದ್ದು. ಸೇನೆಯಲ್ಲಿ ಸೇವೆ ಸಲ್ಲಿಸುವ ಅವಕಾಶ ಎಲ್ಲರಿಗೂ ಸಿಗುವಂಥದ್ದಲ್ಲ. ದೇಶ ಸುರಕ್ಷಿತವಾಗಿ ಇರಬೇಕಾದರೆ ಯುವಜನತೆ ಸೈನ್ಯ ಸೇರಲು ಹೆಚ್ಚಿನ ಆಸಕ್ತಿ ತೋರಿಸಬೇಕು. ತಂದೆ, ತಾಯಂದಿರು ತಮ್ಮ ಮಕ್ಕಳನ್ನು ಸೇನೆಗೆ ಸೇರಿಸಲು ಪ್ರೋತ್ಸಾಹಿಸಬೇಕು ಎಂದರು. ಮುಖ್ಯ ಅತಿಥಿಗಳಾಗಿದ್ದ ನಿವೃತ್ತ ಕರ್ನಲ್ ಸತೀಶ ದೇಶಪಾಂಡೆ, ತಾಲೂಕಿನ ಢವಳಗಿಯವರಾಗಿದ್ದು ಮಹಾರಾಷ್ಟ್ರ ಸರ್ಕಾರದ ಗೃಹ ಇಲಾಖೆಯ ವಿಶೇಷ ಕಮಾಂಡೆಂಟ್‌ನಲ್ಲಿ ಹಿರಿಯ ಅಧಿಕಾರಿಣಿಯಾಗಿರುವ ರಾಜೇಶ್ವರಿ ಕೋರಿ ಅವರು ಮಾತನಾಡಿ ದರು.

ಸಮಿತಿ ಅಧ್ಯಕ್ಷ ಚಂದ್ರಶೇಖರ ಕಲಾಲ ಅಧ್ಯಕ್ಷತೆ ವಹಿಸಿದ್ದರು. ತಹಸೀಲ್ದಾರ್ ಕಚೇರಿಯ ಶಿರಸ್ತೆದಾರ ಎಂ.ಎ.ಬಾಗೇವಾಡಿ, ಸಮಿತಿ ಪದಾಧಿಕಾರಿಗಳಾದ ಮಹಾಂತೇಶ ಬೂದಿಹಾಳಮಠ, ಶ್ರೀಕಾಂತ ಹಿರೇಮಠ, ಪುನೀತ್ ಹಿಪ್ಪರಗಿ, ಸಂಜು ಬಾಗೇವಾಡಿ, ಸಂತೋಷ ಬಾದರಬಂಡಿ, ಸದಸ್ಯರಾದ ಉದಯ ರಾಯಚೂರ, ರವೀಂದ್ರ ಬಿರಾದಾರ ಇದ್ದರು.

ಬಡವರ ಹಸಿವು ನೀಗಿಸುವ ಇಂದಿರಾ ಕ್ಯಾಂಟಿನ್

ಕೊಲ್ಹಾರ: ಬಡವರ ಹಸಿವು ನೀಗಿಸುವುದರ ಜತೆಗೆ ಹಸಿವು ಮುಕ್ತ ರಾಜ್ಯ ನಿರ್ಮಾಣದ ನಿಟ್ಟಿನಲ್ಲಿ ಸರಕಾರದ ಮಹತ್ವಾಕಾಂಕ್ಷೆಯ ಇಂದಿರಾ ಕ್ಯಾಂಟೀನ್ ಪಟ್ಟಣದಲ್ಲಿ ಶೀಘ್ರದಲ್ಲಿ ಪ್ರಾರಂಭವಾಗಲಿದೆ. ಪಟ್ಟಣದ ಮಹಾತ್ಮ ಗಾಂಧೀ ವೃತ್ತದ ಸಮೀಪದಲ್ಲಿರುವ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಪಕ್ಕದಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದ್ದು ಕೆಲಸ ಪ್ರಗತಿಯಲ್ಲಿದ್ದು ಶೀಘ್ರದಲ್ಲಿಯೇ ಕ್ಯಾಂಟಿನ್ ಉದ್ಘಾಟನೆಗೊಂಡು ಬಡವರ ಹಸಿವು ನೀಗಿಸಲಿದೆ.

> **ತಾಲೂಕ ಕೇಂದ್ರವಾಗಿರುವ ಕೊಲ್ಹಾರ ಪಟ್ಟಣದಲ್ಲಿ ಇಂದಿರಾ ಕ್ಯಾಂಟಿನ್ ಬಹು ಅವಶ್ಯಕವಾಗಿತ್ತು. ತಮ್ಮ ದೈನಂದಿನ ಕೆಲಸಗಳಿಗೆ ಆಗಮಿಸುವ ಜನರ ಹಸಿವು ಇಂದಿರಾ ಕ್ಯಾಂಟಿನ್ ನೀಗಿಸಲಿದೆ.**
> **-ಮಹಾಂತೇಶ ಗಿಡ್ಡಪ್ಪಗೋಳ,** ಪ.ಪಂ ಸದಸ್ಯರು ಕೊಲ್ಹಾರ.

ಬೆಂಗಳೂರಿನ ಎಂ.ಎಸ್ ಎಕ್ಸಲ್ ಪ್ರಿಕ್ಯಾಸ್ಟ್ ಸಲ್ಯೂಷನ್ ಲಿಮಿಟೆಡ್ ಕಂಪನಿ ಕಟ್ಟಡ ಕಾಮಗಾರಿಯ ಗುತ್ತಿಗೆ ಟೆಂಡರ್ ಪಡೆದಿದ್ದು, ಬಹುತೇಕ ಕಾಮಗಾರಿ ಪೂರ್ಣಗೊಂಡಿದೆ ಅತಿ ಶೀಘ್ರದಲ್ಲಿ ಸಚಿವ ಶಿವಾನಂದ ಪಾಟೀಲ್ ಕ್ಯಾಂಟಿನ್ ಉದ್ಘಾಟನೆ ನೇರವೇರಿಸಲಿದ್ದಾರೆ ಎಂಬ ಮಾಹಿತಿ ಇದೆ.

ಸಚಿವ ಶಿವಾನಂದ ಪಾಟೀಲರ ಪರಿಶ್ರಮದಿಂದ ಇಂದಿರಾ ಕ್ಯಾಂಟಿನ್ ಮಂಜೂರಾಗಿ ಸದ್ಯ ಲೋಕಾರ್ಪಣೆಗೆ ಸಜ್ಜಾಗಿ ನಿಂತಿದೆ.

ಹಸಿವು ನೀಗಿಸಲಿದೆ ಇಂದಿರಾ ಕ್ಯಾಂಟೀನ್: ಕೊಲ್ಹಾರ ಪಟ್ಟಣಕ್ಕೆ ಪ್ರತಿದಿನ ಸಾವಿರಾರು ಜನರು ವಿವಿಧ ಕೆಲಸಗಳಿಗೆ ಪಟ್ಟಣಕ್ಕೆ ಆಗಮಿಸುತ್ತಾರೆ. ಪಟ್ಟಣದಲ್ಲಿ ತಾಲೂಕ ಪಂಚಾಯತ ಕಾರ್ಯಾಲಯ, ತಾಲೂಕ ದಂಡಾಧಿಕಾರಿಗಳ ಕಾರ್ಯಾಲಯ, ನಾಡ ಕಾರ್ಯಾಲಯ, ಪಟ್ಟಣ ಪಂಚಾಯತ ಕಾರ್ಯಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸಹಿತ ವಿವಿಧ ಸರಕಾರಿ ಕಛೇರಿಗಳು ಕಾರ್ಯನಿರ್ವಾಸಿಸುತ್ತಿದ್ದು ಪ್ರತಿದಿನ ನೂರಾರು ಜನರು ತಮ್ಮ ಕಾರ್ಯಗಳಿಗಾಗಿ ಪಟ್ಟಣಕ್ಕೆ ಆಗಮಿಸುತ್ತಾರೆ ಇಂದಿರಾ ಕ್ಯಾಂಟಿನ್ ಈ ಜನರ ಹೊಟ್ಟೆ ತುಂಬಿಸಲಿದೆ.

> **ಇಂದಿರಾ ಕ್ಯಾಂಟೀನ್ ನಿರ್ವಹಣೆಗೆ ಸರಕಾರ ಕಂಪನಿಯೊಂದಕ್ಕೆ ಟೆಂಡರ್ ನೀಡಿದೆ. ಸರ್ಕಾರದ ನಿರ್ದೇಶನದಂತೆ ಪಟ್ಟಣ ಪಂಚಾಯತ ವತಿಯಿಂದ ನೀರು ಸೇರಿದಂತೆ ವಿವಿಧ ಸೌಲಭ್ಯ ಒದಗಿಸಲಾಗುವುದು.**
> **-ಉಮೇಶ ಚಲವಾದಿ,** ಪ.ಪಂ ಮುಖ್ಯಾಧಿಕಾರಿಗಳು ಕೊಲ್ಹಾರ

ಸತತ ಅಧ್ಯಯನ, ಸಮಸ್ಯೆ ಪರಿಹಾರ

ದೇವರಹಿಪ್ಪರಗಿ ಸಮೀಪದ ಬಮ್ಮನಜೋಗಿ ಎಲ್‌ಟಿ-1 ರಲ್ಲಿ ಶಿಕ್ಷಕರ ಸಮಾಲೋಚನಾ ಸಭೆಯನ್ನು ಕ್ಷೇತ್ರ ಸಮನ್ವಯಾಧಿಕಾರಿ ಐಎಸ್ ಟಕ್ಕೆ ಉದ್ಘಾಟಿಸಿದರು.

ದೇವರಹಿಪ್ಪರಗಿ: ಶಿಕ್ಷಕರು ನಿರಂತರ ಅಧ್ಯಯನಶೀಲರಾಗಿದ್ದುಕೊಂಡು ಕಲಿಕೆಯಲ್ಲಿ ತೊಡಗಿಕೊಳ್ಳಬೇಕು. ಬೋಧನಾ ಸಮಯದಲ್ಲಿನ ಸಮಸ್ಯೆಗಳಿಗೆ ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಮಾಸಿಕ ಸಭೆಗಳು ಸಹಕಾರಿಯಾಗುತ್ತವೆ ಎಂದು ಸಿಂದಗಿಯ ಕ್ಷೇತ್ರ ಸಮನ್ವಯಾಧಿಕಾರಿ ಐಎಸ್‌ಟಕ್ಕೆ ಹೇಳಿದರು.

ಶುಕ್ರವಾರ ಸಮೀಪದ ಬಮ್ಮನಜೋಗಿ ಎಲ್‌ಟಿ-1 ಶಾಲೆಯಲ್ಲಿ ಹಮ್ಮಿಕೊಂಡ ಕೋರವಾರ ಜಾಲವಾದ ಹಾಗೂ ಮಣೂರ ವಲಯದ ಶಿಕ್ಷಕರ ಸಮಾಲೋಚನೆ ಸಭೆಯಲ್ಲಿ ಪಾಲ್ಗೊಂಡು ಮಾರ್ಗದರ್ಶನ ಮಾಡಿದ ಅವರು, ತರಗತಿಯಲ್ಲಿ ಮಕ್ಕಳಿಗೆ ಬೋಧನೆ ಮಾಡುವಾಗ ಸಮಸ್ಯಾತ್ಮಕ ಅಂಶಗಳನ್ನು ಗುರುತಿಸಿ ಎಲ್ಲ ಶಿಕ್ಷಕರು ಚರ್ಚೆ ಮಾಡಿ ಸಂಪನ್ಮೂಲ ವ್ಯಕ್ತಿಗಳಿಂದ ಪರಿಹಾರ ಕಂಡುಕೊಳ್ಳಬೇಕು ಎಂದು ತಿಳಿಸಿದರು.

ಜಾಲವಾದ ವಲಯದ ಸಂಪನ್ಮೂಲ ವ್ಯಕ್ತಿ ಕಾಶೀಂ ವಾಲಿಕಾರ ಮಾತನಾಡಿ, ಶಿಕ್ಷಕರಿಗೆ ಸಮಾಲೋಚನಾ ಸಭೆಯಲ್ಲಿ ತಮ್ಮ ಜ್ಞಾನ ಹೆಚ್ಚಿಸಿಕೊಳ್ಳಲು ಇದೊಂದು ಉತ್ತಮ ವೇದಿಕೆಯಾಗಿದೆ. ಪ್ರತಿಯೊಬ್ಬರು ಉತ್ಸಾಹದಿಂದ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಲೆಯ ಮುಖ್ಯ ಗುರು ಬಿ ಡಿ ಪಾಟೀಲ, ಹೊಸದಾಗಿ ನೇಮಕಾತಿ ಆದ ಶಿಕ್ಷಕರು ಸತತ ಅದ್ಯಯನಶೀಲರಾಗಬೇಕು. ಮಕ್ಕಳ ಮನೋಮಟ್ಟಕ್ಕಿಳಿದು ಬೋಧಿಸಬೇಕು. ತಂತ್ರಜ್ಞಾನದ ಯುಗದಲ್ಲಿ ಪ್ರಾವಿಣ್ಯತೆ ಪಡೆದು ಬಳಸಿಕೊಳ್ಳಬೇಕೆಂದರು. ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ನಾಗೇಶ ನಾಗೂರ, ಕೋರವಾರ ಸಿಆರ್‌ಪಿ ಬಾಬು ನಡುವಿನಕೇರಿ, ಮಣೂರ ಸಿಆರ್‌ಪಿ ವಾಲಿಕಾರ, ಬಿ ಜಿ ಬಡಿಗೇರ, ಕೆ ಎಚ್ ಮಾಕೊಂಡ, ಅಂಗಡಿ, ಪವಾರ, ಹೊಸೂರ, ಬೋರಾವತ್, ನಾಗಲಿಂಗ, ಗುರು ಬಿರಾದಾರ, ಬೀರನಗಡ್ಡಿ, ಎನ್.ಎಸ್ ಹರವಾಳ ಸೇರಿದಂತೆ ವಿಷಯವಾರು ಸಂಪನ್ಮೂಲ ವ್ಯಕ್ತಿಗಳು, ಹಾಗೂ ಶಿಕ್ಷಕರು, ಗುರುಮಾತೆಯರು ಇದ್ದರು.

ಮಮದಾಪುರ ಕೆರೆಯ ಕಾಮಗಾರಿಗೆ ಅಡಿಗಲ್ಲು

ವಿಜಯಪುರ: ಹಿಂದುಸ್ತಾನ ಕೋಕಾ ಕೋಲಾ ಬೆವೆರಜಿಸ್ ಕಂಪನಿ ವತಿಯಿಂದ ಸಿಎಸ್‌ಆರ್ ಅನುದಾನದಲ್ಲಿ ಐತಿಹಾಸಿಕ ಮಮದಾಪುರ ಕೆರೆಯ ಪುನರುಜ್ಜೀವನ ಕಾಮಗಾರಿಗೆ ದಿ.28 ರವಿವಾರ ಬೆ.10.30ಗಂ. ಮಮದಾಪುರ ಕೆರೆ ಆವರಣದಲ್ಲಿ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಭೂಮಿ ಪೂಜೆ ಸಲ್ಲಿಸಲಿದ್ದಾರೆ. ಈ ಯೋಜನೆಯಲ್ಲಿ ಬಾಂದಾರ ನಿರ್ಮಾಣ ಹಾಗೂ 800 ಮೀಟರ್ ಟ್ಯಾಂಕ್ ಬಾಂದಾರಗಳನ್ನು ಅಭಿವೃದ್ಧಿ ಪಡಿಸಲಾಗುವುದು. ಫೆನ್ಸಿಂಗ್ ಮತ್ತು ಹ್ಯಾಂಡ್ರೈಲ್‌ಗಳನ್ನು ಸ್ಥಾಪಿಸುವುದು, ಫುಟ್‌ಪಾತ್‌ಗಳನ್ನು ರಚಿಸುವುದು ಮತ್ತು ಮಕ್ಕಳ ಆಟದ ಪ್ರದೇಶವನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ. ಅಲ್ಲದೇ, ಸಿದ್ದೇಶ್ವರ ಸ್ವಾಮೀಜಿ ಅವರ ಸ್ಮರಣಾರ್ಥ ಅರಣ್ಯೀಕರಣದ ಉಪಕ್ರಮವು ಕೆರೆಯ ಸುತ್ತಲಿನ 1,654 ಎಕರೆಗಳನ್ನು ಒಳಗೊಂಡಿದೆ. ಯೋಜನೆ ಪೂರ್ಣಗೊಂಡರೆ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣವಾಗಿ ಪರಿವರ್ತನೆಯಾಗಲಿದೆ. ಇದೇ ಸಂದರ್ಭದಲ್ಲಿ ಬಬಲೇಶ್ವರ ವಿಧಾನಸಭಾ ಕ್ಷೇತ್ರದ 25 ಸರಕಾರಿ ಪ್ರೌಢ ಶಾಲೆಗಳಿಗೆ ಏಕಸ್ ಕಂಪನಿ ವತಿಯಿಂದ ಸಿಎಸ್‌ಆರ್ ಅನುದಾನದಿಂದ ನೀಡಿದ ಸ್ಮಾರ್ಟ್ ಕ್ಲಾಸ್ ಬೋರ್ಡ್‌ಗಳನ್ನು ನೀಡಿದ್ದು, ಬೆ.11ಗಂ. ಮಮದಾಪುರ ಕೆಪಿಎಸ್ ಪ್ರೌಢಶಾಲೆಯಲ್ಲಿ ಉದ್ಘಾಟಿಸಲಾಗುವುದು. ಈ ಸಂದರ್ಭದಲ್ಲಿ ಮಮದಾಪುರ ವಿರಕ್ತಮಠದ ಪರಮ ಪೂಜ್ಯ ಅಭಿನವ ಮುರುಘೇಂದ್ರ ಮಹಾಸ್ವಾಮಿಜಿ ಸಾನಿಧ್ಯ ವಹಿಸಲಿದ್ದಾರೆ.

ಭಾವೈಕ್ಯತೆಯ ಕಾಶಿ ಬಳೂತಿ ಗ್ರಾಮ

ಕೊಲ್ಹಾರ: ಜಾನಪದ ಕಲೆಯು, ಜಾತಿ - ಮತಗಳ ಬೇಧ ತೊರೆದು ಸಮನ್ವಯ ಸಾಧಿಸುವ ಮೇರು ಸಂಸ್ಕೃತಿಯಾಗಿದೆ. ಎಲ್ಲ ಜನರನ್ನು ಬಾಂಧವ್ಯದ ಬೆಸುಗೆಯಲ್ಲಿ ಬದುಕುವಂತೆ ಕಲಿಸುವ ಶಕ್ತಿ ಜಾನಪದ ಸಂಪ್ರದಾಯಕ್ಕಿದೆ ಎಂದು ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಡಾ ಎಸ್ ಜಾನಪದ ಬಾಲಾಜಿ ಅಭಿಪ್ರಾಯಪಟ್ಟರು.

ಕೊಲ್ಹಾರ ತಾಲೂಕಿನ ಬಳೂತಿ ಗ್ರಾಮದಲ್ಲಿ ಬೀಬೀ ಫಾತೀಮಾಳ ಹತ್ತು ದಿನಗಳ ಜಾರತ ಉತ್ಸವದ ನಿಮಿತ್ಯ, ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ವಿಜಯಪುರ ಮತ್ತು ತಾಲೂಕು ಘಟಕ ಕೊಲ್ಹಾರ ವತಿಯಿಂದ ಬಳೂತಿಯ ಭಾವಿ ಬಸವೇಶ್ವರ ಹೆಜ್ಜೆ ಮೇಳ ಸಂಘದ ಸಹಯೋಗದಲ್ಲಿ ಏರ್ಪಡಿಸಿದ ಜಿಲ್ಲಾ ಮಟ್ಟದ ರಿವಾಯತ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ, ಹಿಂದೂ - ಮುಸ್ಲಿಂ ಏಕತೆಯಿಂದ ದೇಶದಲ್ಲಿ ಶಾಂತಿ ನೆಲೆಸುತ್ತದೆ. ರಿವಾಯತ ಕಲೆಯ ಮೂಲಕ ಶಾಂತಿ - ಸಹಬಾಳ್ವೆಗೆ ಕಾರಣವಾದ ಬಳೂತಿ ಗ್ರಾಮ ಭಾವೈಕ್ಯತೆಯ ಕಾಶಿಯಾಗಿದೆ ಎಂದರು.



ಜಿಲ್ಲಾ ಮಟ್ಟದ ರಿವಾಯತ ಸಂಭ್ರಮ ಕಾರ್ಯಕ್ರಮ ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಡಾ ಎಸ್ ಜಾನಪದ ಬಾಲಾಜಿ ಉದ್ಘಾಟಿಸಿದರು.

ಸಾನಿಧ್ಯ ವಹಿಸಿ ಮಾತನಾಡಿದ, ನಾಗರದಿನ್ನಿ ಸದ್ಗುರು ಸದಾನಂದ ಮಠದ ತಪೋನಿಧಿ ಪೂಜ್ಯ ಮಲ್ಲಿಕಾರ್ಜುನ ಸ್ವಾಮಿಗಳು, ಧರ್ಮ ಯಾವುದಾದರೇನು ಕರ್ಮ ಮಾತ್ರ ಸತ್ಯದ ಹಾಡಿಯಲ್ಲಿರಬೇಕು. ಭಗವಂತನ ದೃಷ್ಠಿಯಲ್ಲಿ ಸಮಾನರಾದ ನಾವು ಬದುಕಿನಲ್ಲಿಯೂ ಸಮಾನತೆಯಿಂದ ಸದ್ಗತಿ ಕಾಣಬೇಕು ಎಂದರು.

ಹಿರಿಯ ಜಾನಪದ ಕಲಾವಿದ ಶಂಕರಯ್ಯ ಚಿಕ್ಕಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಗ್ರಾಮದ ಹಿರಿಯರಾದ ಫೀರನಾಥ ಗಿರಿ ಭಾವಾ, ದುಂಡಪ್ಪ ಬನಾಗೊಂಡ, ಕ ಜಾ ಪ ಕೊಲ್ಹಾರ ತಾಲೂಕಾಧ್ಯಕ್ಷ ಮಲ್ಲಪ್ಪ ಗಣಿ, ಜಿಲ್ಲಾ ಸದಸ್ಯ ಮೌಲಸಾಹೇಬ್ ಜಾಹಾಗಿರದಾರ್, ಭೀಮಶಿ ಬೀಳಗಿ ಉಪಸ್ಥಿತರಿದ್ದರು.

ಎರಡು ದಿನಗಳ ಕಾಲ ನಡೆಯುವ ಈ ಕಲಾಪ್ರದರ್ಶನದಲ್ಲಿ ರಿವಾಯತಹಾಡು, ಹೆಜ್ಜೆಕುಣಿತ , ಮುಳ್ಳುಹೆಜ್ಜೆ ಕುಣಿತ ಕಲಾವಿದರು ಪ್ರದರ್ಶನ ನೀಡುವರು.

ಸದ್ದಾಂ ಹುಸೇನಗೆ ವಾರ್ಷಿಕ ಪ್ರಶಸ್ತಿ

ಇಂಡಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ವತಿಯಿಂದ ನಿಡಲಾಗುವ 2024 ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಗುಮ್ಮಟ ನಗರಿ ದಿನ ಪತ್ರಿಕೆಯ ಇಂಡಿ ತಾಲೂಕಾ ವರದಿಗಾರರಾದ ಸದ್ದಾಂ ಹುಸೇನ ಜಮಾದಾರ ಆಯ್ಕೆಯಾ ಗಿದ್ದಾರೆ ಎಂದು ಇಂಡಿ ತಾಲೂಕ ಕಾನಿಪ ಅಧ್ಯಕ್ಷ ಅಬುಶಾಮ ಹವಾಲದಾರ ಹಾಗೂ ಪ್ರಧಾನ ಕಾರ್ಯಾದರ್ಶಿಯಾದ ಲಾಲಸಿಂಗ ರಾಠೋಡ ತಿಳಿಸಿದ್ದಾರೆ. ಮಾಧ್ಯಮ ಕ್ಷೇತ್ರದಲ್ಲಿ 15 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಸದ್ದಾಂ ಹುಸೇನ ಜಮಾದಾರ ಗುಮ್ಮಟ ನಗರಿ ಕನ್ನಡ ದಿನ ಪತ್ರಿಕೆ ಇಂಡಿ ತಾಲೂಕಾ ವರದಿಗಾ ರರಾಗಿ ವೃತ್ತಿ ಜೀವನ ಆರಂಭಿಸಿದರು. ಕನ್ನಡ ಹಾಗೂ ಉರ್ದು ಪತ್ರಿಕೆಯಲ್ಲಿ ಕಾರ್ಯ ನಿರವಹಿಸಿ ಹಾಗೂ ಅನೇಕ ಸಮಾಜಿಕ ಸೇವೆಯಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಜುಲೈ 28 ರಂದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಯೋಗದಲ್ಲಿ ಪೊಲೀಸ್ ಸಮುದಾಯ ಭವನದಲ್ಲಿ ನಡೆಯಲಿರುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಹಾಗೂ ಸಚಿವ ಡಾ. ಎಂ.ಬಿ.ಪಾಟೀಲ, ಸಕ್ಕರೆ ಮತ್ತು ಎಪಿಎಂಸಿ ಸಚಿವ ಶಿವಾನಂದ ಪಾಟೀಲ, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಸಂಸದ ರಮೇಶ ಜಿಗಜಣಿಗಿ ಗಣ್ಯರು ಭಾಗಿಯಾಗಲಿದ್ದಾರೆ.

ಸಮಾಚಾರ ಸಣ್ಣದಲ್ಲ

ಕೃಷಿ ಭಾಗ್ಯ ಯೋಜನೆಗೆ ರೈತರಿಂದ ಅರ್ಜಿ

ಬಾದಾಮಿ: ಕೃಷಿ ಕ್ಷೇತ್ರದಲ್ಲಿ ಹಾಗೂ ರೈತರಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಕೃಷಿ ಭಾಗ್ಯ ಯೋಜನೆಯನ್ನು 2024-25 ನೇ ಸಾಲಿನಲ್ಲಿಯೂ ಕೃಷಿ ಇಲಾಖೆಯ ಮುಖಾಂತರ ಅನುಷ್ಠಾನಗೊಳಿಸಲು ಮುಂದುವರಿಸಲಾಗಿದೆ. ಈ ಯೋಜನೆಯಡಿ ಕೃಷಿ ಹೊಂಡ ನಿರ್ಮಾಣ, ಕ್ಷೇತ್ರ ಬದು ನಿರ್ಮಾಣ, ಪಾಲಿಥಿನ ಹೊದಿಕೆ, ನೀರು ಎತ್ತಲು ಡಿಸೈಲ್ ಇಂಜಿನ್ ಮತ್ತು ಕೃಷಿ ಹೊಂಡದ ಸುತ್ತಲು ತಂತಿ ಬೇಲಿ ನಿರ್ಮಾಣವನ್ನು ಪ್ಯಾಕೇಜ್ ಮಾದರಿಯಲ್ಲಿ ನೀಡಲಾಗುತ್ತದೆ. ಹೊಬಳಿ ಮಟ್ಟದ ರೈತ ಸಂಪರ್ಕ ಕೇಂದ್ರಗಳಲ್ಲಿ ಜು.31 ರೊಳಗೆ ಅರ್ಜಿಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರಗಳಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಅಶೋಕ ತಿರಕನ್ನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜು.30ರಂದು ವಿವಿಧ ಹುದ್ದೆಗೆ ನೇರ ಸಂದರ್ಶನ

ಬಾಗಲಕೋಟೆ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಿಂದ ಜು.30 ರಂದು ಬೆಳಗ್ಗೆ 10:30 ರಿಂದ ಸಂಜೆ 4ರ ವರೆಗೆ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ. ಉದ್ಯೋಗ ಮೇಳದಲ್ಲಿ ಹಲವಾರು ಖಾಸಗಿ ಕಂಪನಿಗಳು ಭಾಗವಹಿಸಿ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಈ ಸಂದರ್ಶನದಲ್ಲಿ 19 ರಿಂದ 30 ವಯೋಮಿತಿಯಲ್ಲಿರುವ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಪದವೀಧರರು ಭಾಗವಹಿಸಬಹುದಾಗಿದೆ. ಭಾಗವಹಿಸುವ ಅಭ್ಯರ್ಥಿಗಳು ತಮ್ಮ ಬಯೋಡಾಟಾ ಮತ್ತು ಮೂಲ ಅಂಕ ಪಟ್ಟಿಗಳ ಝರಾಕ್ಸ ಪ್ರತಿ ತರಬೇಕು. ಹೆಚ್ಚಿನ ಮಾಹಿತಿಗಾಗಿ ದೂ ಸಂ: 08354-235337ಗೆ ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗರಿಕ ಬಂದೂಕು ತರಬೇತಿಗೆ ಅರ್ಜಿ

ಬಾಗಲಕೋಟೆ: ಜಿಲ್ಲೆಯ ಇಚ್ಛೆಯುಳ್ಳ ನಾಗರಿಕರಿಗೆ ಅನುಕೂಲವಾಗಲೆಂದು ನಾಗರಿಕ ಬಂದೂಕು ತರಬೇತಿ ಶಿಬಿರವನ್ನು ಆಗಸ್ಟ್ ತಿಂಗಳಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆಯಿಂದ ಉದ್ದೇಶಿಸಲಾಗಿದ್ದು, ಇಚ್ಛೆಯುಳ್ಳ ನಾಗರಿಕರು ಆ.18 ರಿಂದ ನವನಗರದ ಸೆಕ್ಟರ್ ಸಂ: 43, ಡಿಎಆರ್ ಪೊಲೀಸ್ ಹೆಡ್ ಕ್ವಾಟರ್ಸ್, ಡಿಎಸ್‌ಪಿ ಕಚೇರಿಯಿಂದ ಪಡೆದುಕೊಂಡು ಅರ್ಜಿಯಲ್ಲಿ ಸೂಚಿಸಿದ ಎಲ್ಲ ದಾಖಲೆಗಳೊಂದಿಗೆ ಆಗಸ್ಟ್ 20 ರೊಳಗಾಗಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂ ಸಂ: 08354-200037ಗೆ ಸಂಪರ್ಕಿಸಬಹುದಾಗಿದೆ.

ಆ.11ಕ್ಕೆ ತಾಲೂಕು ಜಾನಪದ ಸಮ್ಮೇಳನ

ಕೆರೂರ: ಆ.11 ರಂದು ಬಾದಾಮಿ ತಾಲೂಕು ಮಟ್ಟದ ಜಾನಪದ ಸಮ್ಮೇಳನ ವಾಣಿಜ್ಯ ನಗರಿ ಕೆರೂರ ಪಟ್ಟಣದಲ್ಲಿ ನಡೆಯಲಿದೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಹೇಳಿದರು. ಇಲ್ಲಿಯ ಪರೀವಿಕ್ಷಣಾ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ,ಜಾನಪದ ಹಾಡು ಹಾಡುವ ಮೂಲಕ ಜನರ ಮನಸು ಗೆದ್ದಿರುವ ಸಮೀಪದ ಇನಾಂ ಹುಲ್ಲಿಕೇರಿ ಗ್ರಾಮದ ನಿಂಗಪ್ಪ ಮಲ್ಲಾಡದ ಇವರನ್ನು ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದ್ದು ಬದಾಮಿ ತಾಲೂಕಿನ 2 ನೇ ಜಾನಪದ ಸಮ್ಮೇಳನವನ್ನು ಪಟ್ಟಣದ ಹೊಸಪೇಟಿ ಬಡಾವಣೆಯ ಬನಶಂಕರಿ ದೇವಿ ಕಲ್ಯಾಣ ಮಂಟಪದ ಸಭಾಭವನದಲ್ಲಿ ಜಾನಪದ ಜಾತ್ರೆಯನ್ನು ನಡೆಯಲಿದೆ. ಕಲೆ, ಸಾಹಿತ್ಯ, ಜಾನಪದ ಸೇರಿದಂತೆ ವಿವಿಧ ಬಗೆಯ ಕಲೆಗಳಲ್ಲಿ ಚಾಪು ಮೂಡಸಿರುವ ಕಲಾವಿದರನ್ನು ಸನ್ಮಾನಿಸಲಾಗುವುದು,ಸಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು.

ಪಿಎಸ್‌ಐ ಬೀಳಗಿ ಅಧಿಕಾರ ಸ್ವೀಕಾರ

ಕೆರೂರ: ಸ್ಥಳಿಯ ಪೊಲೀಸ ಠಾಣೆಗೆ ನೂತನ ಪಿಎಸಐ ಆರ್ ವಾಯ್ ಬೀಳಗಿ ಭಾನುವಾರ ಅಧಿಕಾರ ವಹಿಸಿಕೊಂಡರು. ಪಿಎಸ್‌ಐ ಕುಮಾರ ಹಿತ್ತಲಮನಿ

ವರ್ಗಾವಣೆ ಹಿನ್ನೆಲೆ ನೂತನ ಪಿಎಸ್‌ಐ ಆರ್.ವಾಯ್ .ಬೀಳಗಿ ಅಧಿಕಾರ ಸ್ವೀಕರಿಸಿದರು. ಪಿಎಸ್‌ಐ ಆರ್. ವಾಯ್.ಬೀಳಗಿ ಈ ಹಿಂದೆ ಬಸವನಬಾಗೇವಾಡಿ ಪೊಲೀಸ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಪಟ್ಟಣದಲ್ಲಿ ಶಾಂತಿ ಹಾಗೂ ಸುವ್ಯವಸ್ಥೆ ಕಾಪಾಡುವ ನೀಟ್ಟಿನಲ್ಲಿ ಎಲ್ಲರ ಸಹಕಾರದೊಂದಿಗೆ ಕೆಲಸ ಮಾಡಲಾಗುವುದು ಜನರು ನಿರ್ಭೀತರಾಗಿ ಠಾಣೆಗೆ ಬಂದು ತಮ್ಮ ಸಮಸ್ಯೆ ಹೇಳಿಕೊಳಬಹುದು ಎಂದು ನೂತನ ಪಿಎಸ್‌ಐ ಆರ್.ವಾಯ್.ಬೀಳಗಿ ಸುದ್ದಿಗಾರರಿಗೆ ತಿಳಿಸಿದರು.

{ಡಾ. ಜಿ. ಪರಮೇಶ್ವರ್} ಗೃಹ ಸಚಿವ

ರಾಮನ ಹೆಸರು ನಾವು ತೆಗೆಯುತ್ತಿಲ್ಲ. ರಾಮ ಅಲ್ಲೇ ಇರುತ್ತಾನೆ. ರಾಮನಗರವೂ ಅಲ್ಲೇ ಇರಲಿದೆ. ಕುಮಾರಸ್ವಾಮಿಯವರು ಹೇಳಿಕೆ ಕೊಟ್ಟಿದ್ದಾರೆ. ಏನು ಮಾಡುವುದಕ್ಕೆ ಆಗುವುದಿಲ್ಲ. ಇದನ್ನೆಲ್ಲ ಸರಕಾರ ಎದುರಿಸಬೇಕು, ಎದುರಿಸುತ್ತೇವೆ.

ಉಕ್ಕಿ ಹರಿಯುತ್ತಿವೆ ಕೃಷ್ಣೆ, ಮಲಪ್ರಭೆ, ಘಟಪ್ರಭೆ ನದಿಗಳು | ವಿವಿಧೆಡೆ ಕಾಳಜಿ ಕೇಂದ್ರ ಪ್ರಾರಂಭ

ನದಿ ಪಾತ್ರದ ಗ್ರಾಮಗಳಿಗೆ ಪ್ರವಾಹ ಭೀತಿ

ಬಾಗಲಕೋಟೆ: ಬೆಳಗಾವಿ ಹಾಗೂ ಮಹಾರಾಷ್ಟ್ರ ಭಾಗದಲ್ಲಿ ಹೆಚ್ಚಿನ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಕೃಷ್ಣೆ, ಘಟಪ್ರಭೆ ಹಾಗೂ ಮಲಪ್ರಭೆ ನದಿಗೆ ಅಪಾರ ಪ್ರಮಾಣದ ನೀರು ಹರಿಬಿಡಲಾಗುತ್ತಿರುವ ಹಿನ್ನೆಲೆಯಲ್ಲಿ ನದಿ ಪಾತ್ರದ ಗ್ರಾಮಗಳಿಗೆ ಪ್ರವಾಹ ಭೀತಿ ಎದುರಾಗಿದೆ.

ಈಗಾಗಲೇ ಕೃಷ್ಣೆ ಹಾಗೂ ಘಟಪ್ರಭೆ ನದಿಗಳಿಗೆ ಲಕ್ಷಾಂತರ ಕ್ಯುಸೆಕ್ ನೀರು ಹರಿದು ಬರುತ್ತಿರುವ ಹಿನ್ನೆಲೆಯಲ್ಲಿ ಅನೇಕ ಸೇತುವೆಗಳ ಮೇಲೆ ನೀರು ಬಂದಿದೆ. ನದಿ ಪಾತ್ರದ ಜನರನ್ನು ಬೇರೆಡೆ ಸ್ಥಳಾಂತರಿಸುವ ಕಾರ್ಯವನ್ನು ಜಿಲ್ಲಾಡಳಿತ ಮಾಡುತ್ತಿದೆ.

ಕೃಷ್ಣೆ ಹಾಗೂ ಘಟಪ್ರಭೆಗಳ ನದಿ ಪಾತ್ರದ ಜಮೀನುಗಳಲ್ಲಿ ಬಿತ್ತಲಾಗಿರುವ ಹೆಸರು, ಉದ್ದು, ಸೋಯಾಬಿನ್ ಹಾಗೂ ಕಬ್ಬಿನಲ್ಲಿ ನೀರು ಹೊಕ್ಕಿದ್ದು, ರೈತರು ಚಿಂತೆಗಿಡಾಗಿದ್ದಾರೆ.

32 ಜನರಿಗೆ ಕಾಳಜಿ ಕೇಂದ್ರದಲ್ಲಿ ಆಶ್ರಯ:
ಘಟಪ್ರಭೆ ತೀರದ ಮುಧೋಳ ತಾಲೂಕಿನ ಮಿರ್ಜಿ ಗ್ರಾಮದ 8 ಕುಟುಂಬಗಳ 32 ಜನರನ್ನು ಕಾಳಜಿ ಕೇಂದ್ರಕ್ಕೆ ಕಳುಹಿಸಲಾಗಿದೆ. ಜತೆಗೆ ಜಮಖಂಡಿ ತಾಲೂಕಿನ ಮುತ್ತೂರು ಗ್ರಾಮದ 17 ಕುಟುಂಬಗಳ 105 ಜನರನ್ನು ಬೇರೆಡೆ ಸ್ಥಳಾಂತರಿಸಲಾಗಿದ್ದು, 94 ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

5 ಸೇತುವೆಗಳ ಮೇಲೆ ನೀರು:
ಘಟಪ್ರಭೆ ನದಿಗೆ ಹಿಡಕಲ್ ಜಲಾಶಯದಿಂದ ಅಪಾರ ಪ್ರಮಾಣದ ನೀರು ಹರಿಬಿಟ್ಟ ಹಿನ್ನೆಲೆಯಲ್ಲಿ ರಬಕವಿ-ಬನಹಟ್ಟಿ ತಾಲೂಕಿನ ಢವಳೇಶ್ವರ ಸೇತುವೆ, ಮುಧೋಳ ತಾಲೂಕಿನ ಮಿರ್ಜಿ, ಜಾಲಿಬೇರ, ಜಂಬಗಿ ಕೆ.ಡಿ ಹಾಗೂ ತಿಮ್ಮಾಪೂರ ಗ್ರಾಮಗಳ ಸೇತುವೆಗಳ ಮೇಲೆ ನೀರು ಬಂದಿರುವುದರಿಂದ ಸಂಚಾರ ಸ್ಥಗಿತಗೊಂಡಿದೆ. ಈ ಗ್ರಾಮಗಳಿಗೆ ಮುಧೋಳ ನಗರದಿಂದ ತೆರಳಬಹುದಾಗಿದೆ. ಜತೆಗೆ ಮುಧೋಳ ತಾಲೂಕಿನ ಮಾಚಕನೂರಿನ ಹೊಳೆ ಬಸವೇಶ್ವರ ದೇವಸ್ಥಾನ ಕೂಡ ಜಲಾವೃತವಾಗಿದ್ದು, ದೇವಸ್ಥಾನದಲ್ಲಿ 2 ರಿಂದ 3 ಅಡಿಗಳಷ್ಟು ನೀರು ನಿಂತಿದೆ. ಮುಧೋಳದಿಂದ ಯಾದವಾಡಕ್ಕೆ ತೆರಳುವ ಸೇತುವೆ ತುಂಬಲು ಐದಾರು ಅಡಿಗಳಷ್ಟೇ ಬಾಕಿ ಉಳಿದಿದೆ.

ಘಟಪ್ರಭೆಗೆ 47,140 ಕ್ಯುಸೆಕ್ ನೀರು ಬಿಡುಗಡೆ:
ಘಟಪ್ರಭೆ ನದಿಗೆ ಅಡ್ಡಲಾಗಿರುವ ಕಟ್ಟಿರುವ ಹಿಡಕಲ್ ಜಲಾಶಯಕ್ಕೆ ಧೂಪದಾಳ ಬ್ಯಾರೇಜ್, ಮಾರ್ಕಂಡಯ್ಯಾ ಬ್ಯಾರೇಜ್ ಹಾಗೂ ಬಳ್ಳಾರಿ ನಾಲಾದಿಂದ ಒಟ್ಟು 57,459 ಕ್ಯುಸೆಕ್ ನೀರು ಹರಿಬಿಡಲಾಗುತ್ತಿದೆ. ಹಿಡಕಲ್ ಜಲಾಶಯದ ಮೂಲಕ ಘಟಪ್ರಭಾ ನದಿಗೆ 47,140 ಕ ್ಯುಸೆಕ್ ನೀರು ಹರಿಬಿಡುತ್ತಿದ್ದು, ಜಿಎಲ್‌ಬಿಸಿಗೆ 2,000 ಕ್ಯುಸೆಕ್ ನೀರು ಹರಿಬಿಡಲಾಗುತ್ತಿದೆ.

ಆಲಮಟ್ಟಿ ಜಲಾಶಯದಿಂದ 2.75 ಲಕ್ಷ ಕ್ಯುಸೆಕ್ ನೀರು ಹೊರಕ್ಕೆ:
ಮಹಾರಾಷ್ಟ್ರದ ಕೃಷ್ಣಾ ನದಿ ಪಾತ್ರದಲ್ಲಿ ನಿರಂತರ ಮಳೆ ಸುರಿಯುತ್ತಿರುವುದರಿಂದ ಅಪಾರ ಪ್ರಮಾಣದ ನೀರು ಮಹಾರಾಷ್ಟ್ರದ ಕೋಯ್ನಾ ಜಲಾಶಯಕ್ಕೆ ಹರಿದು ಬರುತ್ತಿದೆ. ಇದರಿಂದ ಕೋಯ್ನಾಕ್ಕೆ ಹರಿದು ಬರುತ್ತಿರುವ ಸಂಪೂರ್ಣ ನೀರನ್ನು ಕೃಷ್ಣೆಗೆ ಬಿಡುತ್ತಿರುವ ಪರಿಣಾಮ ದಿನದಿಂದ ದಿನಕ್ಕೆ ಕೃಷ್ಣೆಯ ನೀರಿನ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಪ್ರತಿ ದಿನ ಆಲಮಟ್ಟಿ ಜಲಾಶಯಕ್ಕೆ 2.04 ಲಕ್ಷ ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಆಲಮಟ್ಟಿ ಜಲಾಶಯದಿಂದ 2.66 ಲಕ್ಷ ಕ್ಯುಸೆಕ್ ನೀರನ್ನು ಹೊರಕ್ಕೆ ಹರಿದು ಬಿಡಲಾಗುತ್ತಿದೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿರುವ ನವಿಲುತೀರ್ಥ ಜಲಾಶಯಕ್ಕೆ 21,606 ಕ್ಯುಸೆಕ್ ಪ್ರಮಾಣದ ನೀರು ಹರಿದು ಬರುತ್ತಿದೆ. ಆದರೆ, ಜಲಾಶಯ ಭರ್ತಿಗೆ ಇನ್ನು ಹಲವು ದಿನಗಳು ಬೇಕಿದ್ದು, ಸದ್ಯ ನವಿಲುತೀರ್ಥ ಜಲಾಶಯದಿಂದ ಮಲಪ್ರಭೆಗೆ 194 ಕ್ಯುಸೆಕ್ ನೀರು ಬರಿದು ಬಿಡಲಾಗುತ್ತಿದೆ.

ಆಲಮಟ್ಟಿ ಜಲಾಶಯಕ್ಕೆ ಡಿಸಿ ಜಾನಕಿ ಕೆ.ಎಂ ಹಾಗೂ ಜಿಪಂ ಸಿಇಒ ಶಶಿಧರ ಕುರೇರ್ ಭೇಟಿ ನೀಡಿ, ವೀಕ್ಷಿಸಿದರು.

ಮುಧೋಳ ತಾಲೂಕಿನ ಮಾಚಕನೂರು ಗ್ರಾಮದ ಹೊಳೆಬಸವೇಶ್ವರ ದೇವಾಲಯಕ್ಕೆ ನೀರಿನಲ್ಲಿರುವುದು.

ಆಲಮಟ್ಟಿ ಜಲಾಶಯಕ್ಕೆ ಡಿಸಿ, ಸಿಇಒ ಭೇಟಿ

ಆಲಮಟ್ಟಿ ಜಲಾಶಯದ ಒಳಹರಿವಿನ ಪ್ರಮಾಣ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹಾಗೂ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಭೇಟಿ ನೀಡಿ ಜಂಟಿಯಾಗಿ ವೀಕ್ಷಣೆ ಮಾಡಿದರು. ಶುಕ್ರವಾರ ಬೆಳಿಗ್ಗೆ 8ಕ್ಕೆ ಜಲಾಶಯದ ಸಾಮರ್ಥ್ಯ 83.486 ಟಿ.ಎಂಸಿ ಇದ್ದು, ಲೈವ್ ಸಾಮರ್ಥ್ಯ 65.866 ಟಿಎಂಸಿ ಇದೆ. ಒಳ ಹರಿವಿನ ಪ್ರಮಾಣ ಹೆಚ್ಚಾಗುತ್ತಲಿದೆ. ಜಲಾಶಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಬರುತ್ತಿದ್ದು, ಕೆರೆ ತುಂಬಿಸುವ ಕಾರ್ಯವಾಗಬೇಕಿದೆ ಎಂದು ಕೆಬಿಜೆಎನ್‌ಎಲ್ ಮುಖ್ಯ ಅಧೀಕ್ಷಕ ಎಚ್.ಎಸ್.ಶ್ರೀನಿವಾಸ ತಿಳಿಸಿದರು.

ಬ್ಯಾಂಕಿನ ಅಧ್ಯಕ್ಷ ಅಜಯಕುಮಾರ ಮಾಹಿತಿ | ವಿವಿಧ ಸೌಲಭ್ಯ ಜಾರಿಗೊಳಿಸುವಲ್ಲಿ ಬ್ಯಾಂಕ್ ಚಿಂತನೆ

ಡಿಸಿಸಿ ಬ್ಯಾಂಕಿಗೆ 12 ಕೋಟಿ ಲಾಭ

ಬಾಗಲಕೋಟೆ: ಇಲ್ಲಿನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಡಿಸಿಸಿ) ಕಳೆದ ಮಾರ್ಚ್ ಅಂತ್ಯಕ್ಕೆ 12.17 ಕೋಟಿ ರು. ನಿವ್ವಳ ಲಾಭಗಳಿಸಿದೆ ಎಂದು ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯಕುಮಾರ ಸರನಾಯಕ ತಿಳಿಸಿದರು.

ಇಲ್ಲಿನ ಬ್ಯಾಂಕಿನಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾರ್ಚ್ ಅಂತ್ಯಕ್ಕೆ ಬ್ಯಾಂಕ್ 204.35 ಕೋಟಿ ರು. ಶೇರು ಬಂಡವಾಳ, 354.18 ಕೋಟಿ ರು.ಗಳ ನಿಧಿಗಳು, 558.53 ಕೋಟಿ ರು. ಸ್ವಂತ ಬಂಡವಾಳ ಹೊಂದಿದ್ದು, 5,171 ಕೋಟಿ ರು. ದುಡಿಯುವ ಬಂಡವಾಳ ಹೊಂದಿದೆ. 3,590 ಕೋಟಿ ರು. ಠೇವಣಿ ಹೊಂದಿದ್ದು, 2024-25ನೇ ಸಾಲಿಗೆ 3,950 ಕೋಟಿ ರು.ಗಳ ಠೇವಣಿ ಸಂಗ್ರಹಣೆಯ ಗುರಿ ಹೊಂದಲಾಗಿದೆ ಎಂದರು.

ಬ್ಯಾಂಕ್ 2023-24ನೇ ಸಾಲಿನಲ್ಲಿ 2,70,860 ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 1,351 ಕೋಟಿ ರು.ಗಳ ಬೆಳೆಸಾಲ ಮತ್ತು 1,121 ಜನ ರೈತರಿಗೆ ಶೇ.3ರ ಬಡ್ಡಿ ದರದಲ್ಲಿ 68.66 ಕೋಟಿ ರು.ಗಳ ಸಾಲ ವಿತರಿಸಲಾಗಿದೆ. ಪೈಪಲೈನ್, ಪಂಪ್‌ಸೆಟ್, ಹೈನುಗಾರಿಕೆ, ಕುರಿ, ಕೋಳಿ ಸಾಕಾಣಿಕೆ, ಭೂ ಅಭಿವೃದ್ಧಿ, ತೋಟಗಾರಿಕೆ ಬೆಳೆ, ರೇಷ್ಮೆ ಮತ್ತು ಟ್ರಾ ್ಯಕ್ಟರ್ ಖರೀದಿ ಉದ್ದೇಶಗಳಿಗೆ ಮಾಧ್ಯಮಿಕ ಕೃಷಿ ಸಾಲ ನೀಡಲಾಗಿದೆ ಎಂದು ತಿಳಿಸಿದರು.

ತನಿಖೆ ಚುರುಕುಗೊಳಿಸಲು ಗೃಹಸಚಿವರಿಗೆ ಒತ್ತಾಯ:
ಬ್ಯಾಂಕಿನ ಜವಾನ ಪ್ರವೀಣ ಪತ್ರೆ ಕೋಟ್ಯಾಂತರ ರುಪಾಯಿ ವಂಚಿಸಿರುವ ಪ್ರಕರಣದ ತನಿಖೆಯನ್ನು ಸಿಐಡಿ ಕೈಗೊಂಡಿದ್ದು, ತನಿಖಾಧಿಕಾರಿ ಪದೇ, ಪದೆ ಬದಲಾಗುತ್ತಿರುವುದರಿಂದ ತನಿಖೆ ವೇಗವಾಗಿ ನಡೆಯುತ್ತಿಲ್ಲ. ಹೀಗಾಗಿ ಸಮರ್ಥ ಅಧಿಕಾರಿಯನ್ನು ನಿಯೋಜಿಸಿ ಶೀಘ್ರದಲ್ಲಿ ತನಿಖೆಯನ್ನು ಪೂರ್ಣಗೊಳಿಸುವಂತೆ ಗೃಹಸಚಿವ ಡಾ.ಜಿ.ಪರಮೇಶ್ವರ ಅವರನ್ನು ಭೇಟಿ ಮಾಡಿ ಮನವಿ ಮಾಡಲಾಗಿದ್ದು, 2 ಕೋಟಿ ರು.ಗಳಷ್ಟು ಹಣವನ್ನು ವಸೂಲಿ ಮಾಡಲಾಗಿದೆ ಎಂದು ತಿಳಿಸಿದರು.

ಮುಧೋಳ ತಾಲೂಕಿನ ರನ್ನ ಸಕ್ಕರೆ ಕಾರ್ಖಾನೆಯಿಂದ 79 ಕೋಟಿ ರು. ಅಸಲು, ಬಡ್ಡಿ ಸೇರಿ 110 ಕೋಟಿ ರು. ವಸೂಲಿ ಆಗಬೇಕಿದೆ. ಕಾರ್ಖಾನೆಗೆ ಇಷ್ಟು ಮೊತ್ತದ ಸಾಲ ನೀಡಿದ ಮೇಲೆಯೂ ಸರಕಾರ ನಮ್ಮೊಂದಿಗೆ ಯಾವುದೇ ರೀತಿಯಲ್ಲಿ ಚರ್ಚೆ ನಡೆಸಿಲ್ಲ. ಮಾಜಿ ಸಚಿವ ಬಿ.ಬಿ.ಚಿಮ್ಮನಕಟ್ಟಿ ಪ್ರಕಣದಲ್ಲಿ 4 ಕೋಟಿ ರು. ಮಾತ್ರವೇ ವಸೂಲಿ ಆಗಿದ್ದೂ, ಇನ್ನುಳಿದ ಮೊತ್ತ ವಸೂಲಿಗೆ ಬೋಜಾ ಕೂಡಿಸುವ ಪ್ರಕ್ರಿಯೆ ನಡೆದಿದೆ ಎಂದರು.

ಬ್ಯಾಂಕಿನ ಉಪಾಧ್ಯಕ್ಷ ಮುರಗೇಶ ಕಡ್ಲಿಮಟ್ಟಿ, ನಿರ್ದೇಶಕರಾದ ಪ್ರಕಾಶ ತಪಶೆಟ್ಟಿ ಹಾಗೂ ಅಗಸಿಮುಂದಿನ ಇತರರಿದ್ದರು.

ಬಾಗಲಕೋಟೆಯ ಡಿಸಿಸಿ ಬ್ಯಾಂಕಿನಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಬ್ಯಾಂಕ್‌ನ ಅಧ್ಯಕ್ಷ ಅಜಯಕುಮಾರ ಸರನಾಯಕ ಮಾತನಾಡಿದರು.

> ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಘೋಷಿಸಿದ್ದ 1 ಲಕ್ಷ ರು.ಗಳವರೆಗಿನ ಸಾಲಮನ್ನಾ ಘೋಷಣೆಗೆ ಸಂಬಂಧಿಸಿದಂತೆ 2,468 ರೈತರ 13.90 ಕೋಟಿ ರು.ಗಳ ಸಾಲಮನ್ನಾ ಬಾಕಿಯಿದೆ.
> -ಅಜಯಕುಮಾರ ಸರನಾಯಕ, ಡಿಸಿಸಿ ಬ್ಯಾಂಕ್ ಅಧ್ಯಕ್ಷ

ವಿದ್ಯಾರ್ಥಿಗಳ ಅಪೌಷ್ಟಿಕತೆ ನಿವಾರಣೆ

ಪ್ರಧಾನಮಂತ್ರಿ ಪೋಷಣಾ ಶಕ್ತಿ ಯೋಜನೆಯಡಿ ಕರ್ನಾಟಕ ಯೋಜನೆ ಸಾಮಾಜಿಕ ಪರಿಶೋಧನೆ ಕಾರ್ಯಕ್ರಮ ನಡೆಯಿತು.

ಗುಳೇದಗುಡ್ಡ: ಮಕ್ಕಳಲ್ಲಿ ಅಪೌಷ್ಠಿಕತೆ ನಿವಾರಿಸುವ ನಿಟ್ಟಿನಲ್ಲಿ ಪ್ರಧಾನಮಂತ್ರಿ ಪೋಷಣಾ ಶಕ್ತಿ ಯೋಜನೆಯಡಿ ಅಂಗನವಾಡಿ, ಸರಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಪೌಷ್ಟಿಕ ಆಹಾರ ವಿತರಿಸಲಾಗುತ್ತಿದ್ದು, ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಅವರ ದೈಹಿಕ, ಮಾನಸಿಕ ಬೆಳವಣಿಗೆಗೆ ಈ ಯೋಜನೆಯಿಂದ ಉತ್ತೇಜನ ನೀಡಲಾಗುತ್ತಿದೆ ಎಂದು ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕ ರಾಮಚಂದ್ರ ಮೈತ್ರಿ ಹೇಳಿದರು.

ಇತ್ತೀಚೆಗೆ ಪಟ್ಟಣದ ಸರಸ್ವತಿ ವಿದ್ಯಾಸಂಸ್ಥೆಯ ಸಭಾಭವನದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ತಾಲೂಕು ಪಂಚಾಯತಿ ಹಾಗೂ ಎಂ.ಎಚ್. ಆಡಿನ ಪ್ರೌಢಶಾಲೆಯ ವತಿಯಿಂದ ಹಮ್ಮಿಕೊಂಡಿದ್ದ, ಕರ್ನಾಟಕ ಯೋಜನೆ ಸಾಮಾಜಿಕ ಪರಿಶೋಧನೆ ಸಮಾರಂಭದಲ್ಲಿ ಮಾತನಾಡಿದರು.

ಮುತ್ತಣ್ಣ ಓಲೇಕಾರ ಕಾರ್ಯಕ್ರಮ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಸರಸ್ವತಿ ವಿದ್ಯಾಸಂಸ್ಥೆಯ ಖಜಾಂಚಿ ಪಿ.ಎನ್.ಪವಾರ, ಸಂಸ್ಥೆ ಕಾರ್ಯದರ್ಶಿ ಮಲ್ಲಿಕಾರ್ಜುನ ತಾಂಡೂರ, ಸದಸ್ಯ ಸಂಗಣ್ಣ ಹುನಗುಂದ, ಪರಶುರಾಮ ಬಂತಲ, ಅಕ್ಷತಾ ಪಾಟೀಲ, ಎ.ಎನ್. ಸೂಳಿಕೇರಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

ಉದ್ಯಮಶೀಲರಾಗಲೂ ಕರೆ

ಬಿವಿವಿ ಸಂಘದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಬಿ.ಬಿ.ಎ ವಿಭಾಗದಿಂದ ಹಮ್ಮಿಕೊಂಡಿದ್ದ ಒಂದು ದಿನದ ರಾಜ್ಯ ಮಟ್ಟದ ಮೆಗಾ ಮ್ಯಾನೇಜ್ಮೆಂಟ್ ಫೆಸ್ಟ್‌ನ್ನು ಗಣ್ಯರು ಉದ್ಘಾಟಿಸಿದರು.

ಬಾಗಲಕೋಟೆ: ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತಾ ಮನೋಭಾವ ಮುಖ್ಯವಾಗಿದ್ದು, ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯ ಸದುಪಯೋಗ ಪಡಿಸಿಕೊಳ್ಳಿ ಎಂದು ಬೆಳಗಾವಿಯ ದಿಗ್ವಿಜಯ್ ಲಾಜಿಸ್ಟಿಕ್ಸ್ ಪ್ರೈ.ಲಿ.ನ ವಾಣಿಜ್ಯೋದ್ಯಮಿ ನಿರ್ದೇಶಕ ದಿಗ್ವಿಜಯ್ ಸಿದ್ನಾಳ ಹೇಳಿದರು.

ಇಲ್ಲಿನ ಬಿವಿವಿ ಸಂಘದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಬಿ.ಬಿ.ಎ ವಿಭಾಗದಿಂದ ಹಮ್ಮಿಕೊಂಡಿದ್ದ ಒಂದು ದಿನದ ರಾಜ್ಯ ಮಟ್ಟದ ಮೆಗಾ ಮ್ಯಾನೇಜ್ಮೆಂಟ್ ಫೆಸ್ಟ್‌ನಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ 18 ರಿಂದ 22 ವಯಸ್ಸು ಭವಿಷ್ಯದ ಭದ್ರ ಬುನಾದಿ ಹಾಕಲು ಇರುವ ಅತ್ಯುತ್ತಮ ಅವಧಿ. ಸ್ಟಾರ್ಟ್ ಅಪ್ ಇಂಡಿಯಾದಲ್ಲಿ ಸಾಲ ಸೌಲಭ್ಯಪಡೆದು ನಿಮ್ಮದೆಯಾದ ಸ್ವಂತ ಉದ್ಯೋಗ ಮಾಡಬಹುದು.

ಸಂಘದ ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಆಧುನಿಕತೆಯ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಸೃಜನಶೀಲತೆಯನ್ನು ಬೆಳೆಸಿಕೊಳ್ಳಬೇಕು. ಜತೆಗೆ ತಂದೆ ತಾಯಿ, ಗುರು ಮತ್ತು ಸಮಾಜ ನೀಡಿದ ಮಾರ್ಗದರ್ಶನ ಜೀವನ ಸಿದ್ಧಾಂತಗಳನ್ನು ಮರೆಯದೆ ಈ ಮಣ್ಣಿನ ಋಣ ತಿರಿಸುವ ಕೆಲಸವಾಗಲಿ ಎಂದರು.

ಸಂಘದ ಕಾಲೇಜುಗಳ ಪದನಿಮಿತ್ತ ಕಾರ್ಯದರ್ಶಿ ಡಾ. ಎಸ್.ಎಂ.ಗಾಂವಕರ ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯರಾದ ಜಗನ್ನಾಥ ಚವ್ಹಾಣ, ಐಕ್ಯೂಎಸಿ ಸಂಯೋಜಕಿ ಗೀರಿಜಾ ನಾವದಗಿ, ಬಿಬಿಎ ವಿಭಾಗದ ಸಂಯೋಜಕ ಡಾ. ಎಂ. ನಂಜುಂಡಸ್ವಾಮಿ ಇತರರಿದ್ದರು.

> ಇತ್ತೀಚಿನ ದಿನಗಳಲ್ಲಿ ಭಾರತದ ಯುವಜನತೆ ಸ್ವಂತ ಉದ್ಯಮದತ್ತ ಒಲವು ತೋರುತ್ತಿದ್ದಾರೆ. ಸ್ಕಿಲ್ ಇಂಡಿಯಾ ಅಭಿಯಾನ ದೇಶದ ಎಲ್ಲ ಯುವಕರಿಗೆ ಕೌಶಲದ ತರಬೇತಿ ನೀಡುವ ಮೂಲಕ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗುತ್ತಿದೆ ಎಂದರು.
> -ದಿಗ್ವಿಜಯ್ ಸಿದ್ನಾಳ, ಬೆಳಗಾವಿಯ ದಿಗ್ವಿಜಯ್ ಲಾಜಿಸ್ಟಿಕ್ಸ್ ಪ್ರೈ.ಲಿ.ನ ವಾಣಿಜ್ಯೋದ್ಯಮಿ ನಿರ್ದೇಶಕ

ಬಣಜಿಗ ಸಮಾಜದ ಪ್ರತಿಭಾ ಪುರಸ್ಕಾರ ನಾಳೆ

ಬಾಗಲಕೋಟೆ: ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘ ಬಾಗಲಕೋಟೆ ತಾಲೂಕು ಘಟಕದಿಂದ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ ಜು.28 ರಂದು ನವನಗರದ ಕಲಾಭವನದಲ್ಲಿ ಬೆಳಗ್ಗೆ 10ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಅಧ್ಯಕ್ಷ ಬಸವರಾಜ ಶೀಲವಂತ ಹೇಳಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಸಾನಿಧ್ಯವನ್ನು ಚರಂತಿಮಠದ ಪ್ರಭುಸ್ವಾಮೀಜಿ ವಹಿಸಲಿದ್ದು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ನಿವೃತ್ತ ಕಾರ್ಯಾಧ್ಯಕ್ಷ ಎ.ಎಸ್.ಕಿರಣ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಮಾಜಿ ಅಡ್ವಕೇಟ್ ಜನರಲ್ ಪ್ರಭುಲಿಂಗ ನಾವದಗಿ, ಸಂಸದ ಜಗದೀಶ ಶೆಟ್ಟರ್, ಪಿ.ಸಿ.ಗದ್ದಿಗೌಡರ ಹಾಗೂ ಸಾಗರ ಖಂಡ್ರೆ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಬಸವೇಶ್ವರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಬಿವಿವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಬಣಜಿಗ ಸಮಾಜದ ಜಿಲ್ಲಾಧ್ಯಕ್ಷ ಶರಣಪ್ಪ ಗುಳೇದ, ಕಾರ್ಯದರ್ಶಿ ಮುತ್ತು ಜೋಳದ, ಗೌರವಾಧ್ಯಕ್ಷ ಮಲ್ಲಪ್ಪಣ್ಣಾ ಆರಬ್ಬಿ, ಕಾರ್ಯದರ್ಶಿ ವಿಶ್ವನಾಥ ವೈಜಾಪೂರ, ಮಹಿಳಾ ಘಟಕದ ಅಧ್ಯಕ್ಷೆ ಮೇಘಾ ಜಿಗಜಿನ್ನಿ, ಯುವ ಘಟಕದ ಅಧ್ಯಕ್ಷ ವಿನಯ ನಾವಲಗಿ ಆಗಮಿಸುವರು ಎಂದರು.

ಸ್ವಾಗತ ಸಮಿತಿ ಅಧ್ಯಕ್ಷ ರವಿ ಕುಟಮಗಿ ಮಾತನಾಡಿ, ಕಾರ್ಯಕ್ರಮದಲ್ಲಿ ಮೈಸೂರಿನ ಗ್ರಾವಿಟಿ ಸೈನ್ಸ್ ಫೌಂಡೇಷನ್ ಇವರಿಂದ ಸೈನ್ಸ್ ಎಕ್ಸಿಬಿಷನ್ ಕೂಡ ಆಯೋಜಿಸಲಾಗಿದೆ. ಎಕ್ಸಿಬಿಷನ್‌ನಲ್ಲಿ ನಿಜವಾದ ಮೆದುಳ ಮತ್ತು ಹೃದಯ ಹಾಗೂ ಇನ್ನಿತರ ಮನುಷ್ಯರ ಅಂಗಗಳನ್ನು ನೋಡಲು ಹಾಗೂ ಸ್ಪರ್ಶಿಸಲು ಅವಕಾಶವಿದೆ.

ಮಹಿಳಾ ಘಟಕದಿಂದ ಮಕ್ಕಳಿಗಾಗಿ ವಚನ ಗಾಯನ ಸ್ಪರ್ಧೆ, ಹೆಣ್ಣು ಮಕ್ಕಳಿಗೆ ಸಾಮೂಹಿಕ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಜು.27 ರಂದು ಸಂಜೆ 5ಕ್ಕೆ ವಿದ್ಯಾಗಿರಿಯ ಸಾಯಿ ಮಂದಿರದಲ್ಲಿ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸಬೇಕು ಎಂದರು.

ಮುಖಂಡರಾದ ಮಲ್ಲಪ್ಪಣ್ಣಾ ಆರಬ್ಬಿ, ಮುತ್ತು ಜೋಳದ, ವಿಶ್ವನಾಥ ವೈಜಾಪೂರ, ಮುರುಗೇಶ ಶಿವನಗುತ್ತಿ ಇತರರಿದ್ದರು.

ಹೊಸ ಸಿಮೆಂಟ್ ವಿದ್ಯುತ್ ಕಂಬಗಳ ಅಳವಡಿಕೆ

ಬಸವರಾಜ್ ಉಳ್ಳಾಗಡ್ಡಿ, ಬಾದಾಮಿ

ಕಬ್ಬಿಣ ವಿದ್ಯುತ್ತ ಕಂಬದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ, ಸಾರ್ವಜನಿಕರು ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಓಡಾಡುವಂತಾಗಿದ್ದು ಕೆಇಬಿ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯತನವೇ ಕಾರಣ ಎಂಬ ಸುದ್ದಿಯನ್ನು ಜು.22 ರಂದು ಸೋಮವಾರ ವಿಶ್ವವಾಣಿ ದಿನಪತ್ರಿಕೆಯಲ್ಲಿ ''ಬಲಿಗಾಗಿ ಕಾಯುತ್ತಿರುವ ವಿದ್ಯುತ್ತ ಕಂಬಗಳು'' ಎಂಬ ಶೀರ್ಷಿಕೆಯಡಿ ಬಾದಾಮಿ ತಾಲೂಕ ವರದಿಗಾರ ಬಸವರಾಜ್ ಉಳ್ಳಾಗಡ್ಡಿ ಅವರ ವರದಿಯು ಪ್ರಕಟವಾಗಿತ್ತು, ಇಂದು ಜು.26 ರಂದು ಕೆಇಬಿ ಅವರು ಹೊಸ ಸಿಮೆಂಟ್ ಕಂಬವನ್ನು ಅಳವಡಿಸುತ್ತಿದ್ದಾರೆ.

ಸ್ಪಂದಿಸಿದ ಶಾಸಕ ಚಿಮ್ಮನಕಟ್ಟಿ:
ವಿಶ್ವವಾಣಿ ವರದಿಗೆ ಸ್ಪಂದಿಸಿದ ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಎಇಇ ಬಾಗಲಕೋಟ ಅವರೊಂದಿಗೆ ಚರ್ಚಿಸಿ ಶೀಘ್ರವಾಗಿ ಕಬ್ಬಿಣ ಕಂಬ ತೆಗೆದು ಸಿಮೆಂಟ್ ಕಂಬ ಅಳವಡಿಸುವಂತೆ ಹೇಳಿದ್ದೇವೆ, ಈಗಾಗಲೇ ಯೋಜನಾ ವರದಿಯನ್ನು ಸಿದ್ದಪಡಿಸಿದ್ದು ಕೆಲ ತಾಂತ್ರಿಕ ಸಮಸ್ಯೆಯಿಂದ ಸ್ಥಗಿತವಾಗಿತ್ತು, ಇನ್ನೆರಡು ದಿನಗಳಲ್ಲಿ ಕಬ್ಬಿಣದ ಕಂಬ ತೆಗೆದು ಸಿಮೆಂಟ್ ಕಂಬ ಅಳವಡಿಸಲಾಗುವುದು ಎಂದು ವರದಿಗಾರರಿಗೆ ಮಾಹಿತಿ ನೀಡಿದ್ದರು, ಅದರಂತೆ ಇಂದು ಕೆಇಬಿಯವರು ಕಬ್ಬಿಣದ ಕಂಬ ತೆಗೆದು ಸಿಮೆಂಟ್ ಕಂಬ ಅಳವಡಿಸುತ್ತಿದ್ದಾರೆ.

ವರದಿಗೆ ಕಾರ್ಯ ಸಾರ್ವಜನಿಕರ ಹರ್ಷ:
ವರದಿಯ ಬೆನ್ನಲ್ಲೆ ಸ್ಪಂದಿಸಿದ ಶಾಸಕರು ಹಾಗೂ ಕೆಇಬಿ ಇಲಾಖೆಯವರು ಕಬ್ಬಿಣದ ಕಂಬ ತೆಗೆದು ಸಿಮೆಂಟ್ ಕಂಬ ಅಳವಡಿಸುತ್ತಿರುವುದರಿಂದ ಸಾರ್ವಜನಿಕರು ನೆಮ್ಮದಿಯ ಉಸಿರು ಬಿಡುವಂತಾಗಿದ್ದು ವಿಶ್ವವಾಣಿ ಪತ್ರಿಕೆ ವರದಿಗೆ ಹರ್ಷ ವ್ಯಕ್ತಪಡಿಸಿ, ಬಾದಾಮಿ ಅಭಿವೃದ್ದಿಗೆ ಹೀಗೆ ನಿಮ್ಮ ವರದಿಯು ನಿರಂತರವಾಗಿರಲಿ ಎಂದು ಬಾಳು ಕಾಗಿ, ಮಲ್ಲಪ್ಪ ಗಾಣಿಗೇರ, ಗಣೇಶ ವಾಲಿಕಾರ, ಪ್ರಮೋದ ತಳವಾರ, ಗಚ್ಚಪ್ಪ ಕಣವಿ, ಬಸವರಾಜ ಗಾಣಿಗೇರ ಸೇರಿದಂತೆ ವ್ಯಾಪಾರಸ್ಥರು, ಬಡಾವಣೆಯ ಜನರು ಶ್ಲಾಘನೆ ವ್ಯಕ್ತಡಿಸಿದರು.

ವಿಶ್ವವಾಣಿ
ಬಲಿಗಾಗಿ ಕಾಯುತ್ತಿರುವ ವಿದ್ಯುತ್ ಕಂಬಗಳು

ಹಿಪ್ಪರಗಿ: 2 ಲಕ್ಷ ಕ್ಯುಸೆಕ್ ದಾಟಿದ ನೀರಿನ ಹರಿವು

ರಬಕವಿ-ಬನಹಟ್ಟಿ: ಹಿಪ್ಪರಗಿ ಜಲಾಶಯದಲ್ಲಿ ಶುಕ್ರವಾರದಂದು ಕೃಷ್ಣೆಯ ಒಳ ಹರಿವು ಹೆಚ್ಚಳಗೊಂಡಿದ್ದು, ಪ್ರವಾಹದ ಆತಂಕ ದಟ್ಟವಾಗಿದೆ. ನದಿ ತಟದ ಜನತೆಗೆ ಗಂಜೀ ಕೇಂದ್ರ ಇಲ್ಲವೇ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಉಪವಿಭಾಗಾಧಿಕಾರಿ ಶ್ವೇತಾ ಬೀಡಕರ ತಿಳಿಸಿದ್ದಾರೆ. ರಬಕವಿಯ ಕೃಷ್ಣಾ ತಟದ ರೈತರನ್ನುದ್ದೇಶಿಸಿ ಮಾತನಾಡಿದ ಅವರು, ರಬಕವಿಯ ಶಿವದಾಸಿಮಯ್ಯ ಸಮುದಾಯ ಭವನದಲ್ಲಿ ಪ್ರವಾಹ ಪೀಡಿತರಿಗಾಗಿ ಆಶ್ರಯ ಕಲ್ಪಿಸಿದ್ದು, ನದಿ ತೀರದ ರೈತರು ತಮ್ಮ ಜಾನುವಾರುಗಳನ್ನು ಬನಹಟ್ಟಿಯ ಗುಂಡಯ್ಯನ ಮಠದ ಬಳಿಯ ಗೋಶಾಲೆಗೆ ಬಿಟ್ಟು ಸುರಕ್ಷಿತರಾಗಲು ತಿಳಿಸಿದ್ದಾರೆ. ಕೃಷ್ಣೆಯ ಒಳ ಹರಿವಿನ ನೀರಿನ ಮಟ್ಟದಲ್ಲಿ ಇಂದು ಕೂಡ ಹೆಚ್ಚಳವಾಗಿದ್ದು, 2 ಲಕ್ಷ ಕ್ಯೂಸೆಕ್ ಒಳ ಹರಿವಿದ್ದರೆ ಅಷ್ಟೇ ಪ್ರಮಾಣದ ನೀರನ್ನು ಹೊರಕ್ಕೆ ಬಿಡಲಾಗುತ್ತಿದೆ. ಒಳಹರಿವಿನ ತೀವ್ರತೆ ಗಮನಿಸಿ ಪ್ರವಾಹ ತಡೆಯುವತ್ತ ಆಲಮಟ್ಟಿ ಜಲಾಶಯದಿಂದ ಹೊರಬಿಡುವ ನೀರಿನ ಪ್ರಮಾಣವನ್ನು 2.75 ಲಕ್ಷಕ್ಕೂ ಅಧಿಕ ಕ್ಯುಸೆಕ್‌ಗೆ ಹೆಚ್ಚಿಸಲಾಗಿದೆ.

ಕೃಷ್ಣಾ ನದಿ ಪ್ರವಾಹ ಪರಿಸ್ಥಿತಿ ಮೇಲೆ ನಿಗಾ

ರಬಕವಿ-ಬನಹಟ್ಟಿ: ತಾಲೂಕಿನ ಅಸ್ಕಿ ಮತ್ತು ತೇರದಾಳ ತಾಲ್ಲೂಕಿನ ತಮದಡ್ಡಿ ಗ್ರಾಮಕ್ಕೆ ಸದ್ಯಕಂತೂ ಯಾವುದೇ ಪ್ರವಾಹದ ಸಮಸ್ಯೆ ಇಲ್ಲ. ಪರಿಸ್ಥಿತಿಯ ಮೇಲೆ ಪೂರ್ತಿಯಾಗಿ ನಿಗಾ ಇಡಲಾಗಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಮತ್ತು ಗ್ರಾಮಸ್ಥರ ಜತೆಗೆ ನಿರಂತರವಾಗಿ ಸಂಪರ್ಕದಲ್ಲಿದ್ದೇನೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು. ಶುಕ್ರವಾರ ತೇರದಾಳ ತಾಲೂಕಿನ ತಮದಡ್ಡಿ ಗ್ರಾಮದ ಕೃಷ್ಣಾ ನದಿ ತೀರಕ್ಕೆ ಭೇಟಿ ನೀಡಿ ಮಾತನಾಡಿದ ಅವರು ಇನ್ನೂ ಮೂರು ನಾಲ್ಕು ದಿನಗಳ ಕಾಲ ಮಳೆ ಮುಂದುವರೆದರೆ ಮಾತ್ರ ಸಮಸ್ಯೆಯಾಗಲಿದೆ. ಆಲಮಟ್ಟಿಯಿಂದ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹೊರಕ್ಕೆ ಬಿಡಲಾಗುತ್ತಿದ್ದು, ತುರ್ತಾಗಿ ಯಾವುದೆ ಸಮಸ್ಯೆ ಇಲ್ಲ. ಅಸ್ಕಿ ಗ್ರಾಮದಿಂದ ನದಿ ಇನ್ನೂ ದೂರ ಇದೆ. ತಮದಡ್ಡಿ ಗ್ರಾಮದ ಹತ್ತಿರವೂ ನದಿಯು ಒಡಲೊಳಗೆ ಮಾತ್ರ ಹರಿಯುತ್ತಿದೆ. ಇದೇ ರೀತಿಯಾಗಿ ಮಳೆ ಮುಂದುವರೆದರೆ ಮಾತ್ರ ತಮದಡ್ಡಿ ಗ್ರಾಮದ ಹತ್ತಿರ ಕೃಷ್ಣಾ ನದಿ ಒಡಲು ದಾಟುತ್ತದೆ. ಇದಕ್ಕೆ ಎರಡು ಮೂರು ದಿನಗಳ ಕಾಲ ಬೇಕು. ತಮದಡ್ಡಿ ಗ್ರಾಮಕ್ಕೆ ಇನ್ನೂ ನಾಲ್ಕು ಅಡಿಗಳಷ್ಟು ನೀರು ಬಂದಾಗ ಮಾತ್ರ ಸಮಸ್ಯೆಯಾಗಲಿದೆ. ಇದೇ 27 ರಂದು ಮಧ್ಯಾಹ್ನ 4 ಕ್ಕೆ ರಬಕವಿ-ಬನಹಟ್ಟಿ ತಹಸೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯನ್ನು ಕರೆಯಲಾಗಿದೆ. ಸಭೆಯಲ್ಲಿ ಪ್ರವಾಹ ಪೀಡಿತ ಪ್ರದೇಶಗಳ ಮತ್ತು ಮುಂದೆ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ಚರ್ಚೆ ಮಾಡಲಾಗುವುದು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ವಿವಿಧ ಇಲಾಖೆಯಲ್ಲಿ ಅಕ್ರಮದ ವಾಸನೆ?

ಬಾಗಲಕೋಟೆ: ಇಲ್ಲಿನ ಐಡಿಬಿಐ ಬ್ಯಾಂಕ್‌ನಲ್ಲಿಟ್ಟಿದ್ದ ಪಿಆರ್‌ಇಡಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಹಣದಲ್ಲೂ ಅಕ್ರಮ ನಡೆದಿದ್ದು, ಈ ಬಗ್ಗೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆಯ 86.40 ಲಕ್ಷ ರು. ಹಾಗೂ ಅಲ್ಪಸಂಖ್ಯಾತರ ಇಲಾಖೆಯಲ್ಲಿ 84 ಲಕ್ಷ ರು. ಹಣವನ್ನು ಅಕ್ರಮವಾಗಿ ವರ್ಗಾಯಿಸಲಾಗಿದೆ. ಈ ಬಗ್ಗೆ ಎರಡು ಇಲಾಖೆಯ ಅಧಿಕಾರಿಗಳು ದೂರು ನೀಡಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲೂ ಅಕ್ರಮ? ಈಗಾಗಲೇ ಮೂರು ಇಲಾಖೆಗಳಲ್ಲಿ ಅಕ್ರಮ ನಡೆದಿರುವ ಮೂರು ಇಲಾಖೆಯ ಅಧಿಕಾರಿಗಳು ದೂರು ದಾಖಲಿಸಿದ್ದಾರೆ. ನಿರೀಕ್ಷಣಾ ಜಾಮೀನು ಅರ್ಜಿ ವಜಾ: ಪ್ರವಾಸೋದ್ಯಮ ಇಲಾಖೆಯ ಐಡಿಬಿಐ ಬ್ಯಾಂಕ್ ಖಾತೆಯಲ್ಲಿನ ಹಣ ದುರುಪಯೋಗ ಹಿನ್ನೆಲೆ ಬ್ಯಾಂಕ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೇಲೆ ದಾಖಲಾದ ಪ್ರಕರಣದಲ್ಲಿ ಬ್ಯಾಂಕಿನ ಶಾಖಾ ವ್ಯವಸ್ಥಾಪಕ, ಸಿಬ್ಬಂದಿಯವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿ ವಜಾ ಮಾಡಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆದೇಶಿಸಿದೆ. ಪ್ರಕರಣದ ಆರೋಪಿಗಳಾದ ಶಾಖಾ ವ್ಯವಸ್ಥಾಪಕ ಗೋಪಾಲ ಕೃಷ್ಣ ಮತ್ತು ಸಿಬ್ಬಂದಿ ವಿದ್ಯಾಧರ ಹಿರೇಮಠ , ನಿಶಾ ಎ, ಸರಸ್ವತಿ ಇವರು ತನಿಖೆ ಕಾಲದಲ್ಲಿ ತನಿಖಾಧಿಕಾರಿಗಳು ತಮ್ಮನ್ನು ಬಂಧಿಸುವ ಸಾಧ್ಯತೆ ಇದೆ ಎಂಬ ಭಯಕ್ಕೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು.

ಮಕ್ಕಳಿಗೆ ಸನ್ಮಾನ ಸಮಾರಂಭ ಇಂದು

ಬೀಳಗಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬೀಳಗಿ ಘಟಕ ಹಾಗೂ ಎಸ್.ಆರ್.ಪಾಟೀಲ ಮೇಡಿಕಲ್ ಕಾಲೇಜ ಸಂಯುಕ್ತಾಶ್ರಯದಲ್ಲಿ ಪ್ರತಿಕಾ ದಿನಾಚಾರಣೆ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿ ಸಾಧನೆ ಮಾಡಿದ ಮಾಧ್ಯಮದವರ ಹಾಗೂ ಪತ್ರಿಕಾ ವಿತರಕರ ಮಕ್ಕಳಿಗೆ ಸನ್ಮಾನ ಸಮಾರಂಭದ ಕಾರ್ಯಕ್ರಮವು ಜು.27 ರ ಮಧ್ಯಾಹ್ನ 3.15 ಗಂಟೆಗೆ ಎಸ್.ಆರ್.ಪಾಟೀಲ ಪ್ರತಿಷ್ಠಾನದ ಮೇಡಿಕಲ್ ಕಾಲೇಜಿನಲ್ಲಿ ನಡೆಯಲಿದೆ. ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಸ್ವಾಮಿಜಿ ಸಾನಿಧ್ಯ ವಹಿಸುವರು. ಶಾಸಕ ಜೆ.ಟಿ.ಪಾಟೀಲ ಹಾಗೂ ಮಾಜಿ ಸಚಿವರಾದ ಎಸ್.ಆರ್.ಪಾಟೀಲ ಕಾರ್ಯಕ್ರಮದ ಜ್ಯೋತಿ ಬೆಳಗಿಸುವರು. ವಿಧಾನ ಪರಿಷತ್ ಸದಸ್ಯ ಹನಮಂತ .ನಿರಾಣಿ ಲೇಖನಿ ಹಾಗೂ ಕೈಪಿಡಿ ವಿತರಿಸುವರು. ಅನಗವಾಡಿ ಬನಶಂಕರಿದೇವಿ ವಿದ್ಯಾ ಸಂಸ್ಥೆಯ ಕಾಯಾಧ್ಯಕ್ಷ ಬಸವರಾಜ ಖೋತ ಪ್ರತಿಭಾ ಪುರಸ್ಕಾರ ನೇರವೆರಿಸುವರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ಸುಭಾಸ ರಾಠೋಡ ಅಧ್ಯಕ್ಷತೆ ವಹಿಸುವರು. ಗೌರವಾಧ್ಯಕ್ಷ ಕಿರಣ ಬಾಳಗೋಳ.ಪತ್ರಕರ್ತ ಶ್ರೀಶೈಲ ಬಿರಾದಾರ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಬಾಡಗಂಡಿಯ ಎಸ್. ಆರ್.ಪಾಟೀಲ ಶಿಕ್ಷಣ ಪ್ರತಿಷ್ಠಾನದ ಕಾರ್ಯದರ್ಶಿ ಎಂ.ಎನ್.ಪಾಟೀಲ, ಕ.ಕಾ.ನಿ.ಪ ಸಂಘದ ರಾಜ್ಯ ಕಾರ್ಯಕಾರಣಿ ಸಮಿತಿ ಸದಸ್ಯ ಮಹೇಶ ಅಂಗಡಿ ಹಾಗೂ ಜಿಲ್ಲಾಧ್ಯಕ್ಷ ಆನಂದ ಕಾ.ನಿ.ಪ.ಸಂಘದ ಪ್ರಧಾನ ಕಾರ್ಯದರ್ಶಿ ಹಣಮಂತ ಬುರ್ಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸವದತ್ತಿ ದೇವಸ್ಥಾನದಲ್ಲಿ 1.96 ಕೋಟಿ ಸಂಗ್ರಹ

ಬೆಳಗಾವಿ: ಕರ್ನಾಟಕ ,ಮಹಾರಾಷ್ಟ್ರ ಹಾಗೂ ಗೋವಾ ಸೇರಿದಂತೆ ವಿವಿಧ ಕಡೆ ಭಕ್ತರನ್ನು ಹೊಂದಿರುವ ಸವದತ್ತಿ ರೇಣುಕಾ ಯಲ್ಲಮ್ಮನ ದೇವಸ್ಥಾನದಲ್ಲಿ ಕೇವಲ 50 ದಿನದಲ್ಲಿ 1.96ಕೋಟಿ ಭಕಾಣಿಕೆ ಸಂಗ್ರಹವಾಗಿದೆ. ಯಲ್ಲಮ್ಮನ ದೇವಸ್ಥಾನದಲ್ಲಿ ಹುಂಡಿ ಎಣಿಕೆ ಮುಕ್ತಾಯವಾಗಿದ್ದು, ಏ. 1ರಿಂದ ಮೇ 20ರ ಅವಧಿಯಲ್ಲಿ ಭಕ್ತರು ಹಾಕಿದ್ದ ಭಕ್ತರ ಕಾಣಿಕೆ ಎಣಿಕೆ ಬುಧವಾರ ರಾತ್ರಿ ಮುಕ್ತಾಯವಾಗಿದೆ. 50ದಿನಲ್ಲಿ ಒಟ್ಟು 1.96 ಕೋಟಿ ರೂ. ಕಾಣಿಕೆ ಸಂಗ್ರಹವಾಗಿದೆ. ಅದರಲ್ಲಿ 1.71 ಕೋಟಿ ನಗದು, 20.44 ಲಕ್ಷ ಮೌಲ್ಯದ ಚಿನ್ನಾಭರಣ, 4.44 ಲಕ್ಷ ಮೌಲ್ಯದ ಬೆಳ್ಳಿ ಆಭರಣ ಸಂಗ್ರಹವಾಗಿದೆ ಎಂದು ದೇವಸ್ಥಾನ ಕಾರ್ಯನಿರ್ವಾಹಕ ಅಧಿಕಾರಿ ಎಸ್ ಪಿಬಿ ಮಹೇಶ ಮಾಹಿತಿ ನೀಡಿದ್ದಾರೆ.

ಮುಡಾ ಪ್ರಕರಣ ಪತ್ರ ಚಳವಳಿ

ಮೈಸೂರು: ಮುಡಾದಲ್ಲಿನ ಭ್ರಷ್ಟಾಚಾರ ಕುರಿತು ಸಾರ್ವಜನಿಕ ಚರ್ಚೆಗೆ ಬರುವಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಆಹ್ವಾನಿಸಿ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಪತ್ರ ಚಳವಳಿ ನಡೆಸಲಾಯಿತು. ನಗರದ ಮಹಾನಗರ ಪಾಲಿಕೆ ಮುಂಭಾಗದ ಅಂಚೆಪೆಟ್ಟಿಗೆಗೆ ಕಾರ್ಡ್ ಹಾಕಿ ಚರ್ಚೆಗೆ ಆಹ್ವಾನಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ, ಜೆಡಿಎಸ್ ರಾಜಕೀಯ ಹುನ್ನಾರ ಮಾಡುತ್ತಿವೆ. ಹೇಗಾದರೂ ಮಾಡಿ ಸಿಎಂ ವರ್ಚಸ್ಸಿಗೆ ಧಕ್ಕೆ ತಂದು ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸುವ ಹುನ್ನಾರ ಮಾಡುತ್ತಿವೆ. ಇದಕ್ಕಾಗಿ ಕೇಂದ್ರ ಬಿಜೆಪಿ ನಾಯಕರು ವಿಜಯೇಂದ್ರ ಅವರಿಗೆ ಸುಪಾರಿ ಕೊಟ್ಟಿದ್ದಾರೆ. ಆ ಸುಪಾರಿಯಂತೆ ವಿಜಯೇಂದ್ರ ಮತ್ತು ಜೆಡಿಎಸ್ ನಾಯಕರು ಪಿತೂರಿ ನಡೆಸುತ್ತಿದ್ದಾರೆ ಎಂದು ದೂರಿದರು. ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ, ನಗರಾಧ್ಯಕ್ಷ ಆರ್.ಮೂರ್ತಿ, ಸಾಹಿತಿ ಪ್ರೊ.ಕೆ.ಎಸ್ .ಭಗವಾನ್, ರಂಗಾಯಣ ಮಾಜಿ ನಿರ್ದೇಶಕ ಜನಾರ್ದನ್ (ಜನ್ನಿ), ಪ್ರಗತಿಪರ ಚಿಂತಕ ಪ್ರೊ. ಮಹೇಶ್ ಚಂದ್ರಗುರು ಭಾಗವಹಿಸಿದ್ದರು.

ಪೋಕ್ಸೋ ಬಿಎಸ್‌ವೈಗೆ ಸದ್ಯಕ್ಕಿಲ್ಲ ಬಂಧನ ಭೀತಿ

ಬೆಂಗಳೂರು: ಅಪ್ರಾಪ್ತ ವಯಸ್ಕಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ

ದಾಖಲಾಗಿರುವ ಪೋಕ್ಸೋ ಪ್ರಕರಣದಲ್ಲಿ ಅವರನ್ನು ಬಂಧಿಸಬಾರದು ಹಾಗೂ ವಿಚಾರಣೆಗೆ ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡಬೇಕು ಎನ್ನುವ ತನ್ನ ಈ ಹಿಂದಿನ ಮಧ್ಯಂತರ ಆದೇಶವನ್ನು ಕರ್ನಾಟಕ ಹೈಕೋರ್ಟ್ ವಿಸ್ತರಿಸಿದೆ. ಪ್ರಕರಣದ ರದ್ದು ಕೋರಿ ಬಿ.ಎಸ್. ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ಪೀಠದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಶುಕ್ರವಾರ ನಡೆಸಿದರು. ಜನಪ್ರತಿನಿಧಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ಹೈಕೋರ್ಟ್‌ನ ವಿಚಾರಣಾ ಪೀಠದ ರೋಸ್ಟರ್ ಇದೇ 29ರಿಂದ ಬದಲಾಗುತ್ತಿರುವ ಹಿನ್ನೆಲೆಯಲ್ಲಿ ಪೀಠವು ಪ್ರಕರಣವನ್ನು ಮುಂದೂಡಿ ಆದೇಶಿಸಿತು.

ಇ-ಸ್ವತ್ತು ತಂತ್ರಾಂಶ ಸ್ಥಗಿತ

ಬೆಂಗಳೂರು: ಹೊಸ ಅವತರಣಿಕೆ ಪರಿಚಯಿಸುತ್ತಿರುವುದರಿಂದ ಜು. 27ರಿಂದ 29ರವರೆಗೆ ಇ-ಸ್ವತ್ತು ತಂತ್ರಾಂಶ ಸ್ಥಗಿತಗೊಳ್ಳಲಿದೆ. ಸಾರ್ವಜನಿಕರ ಅನಾನುಕೂಲ ಕಡಿಮೆ ಮಾಡಲು ಕಾರ್ಯಾರಂಭಿಸಿದ ನಂತರ ಇ-ಸ್ವತ್ತು ತಂತ್ರಾಂಶದ ಕಾರ್ಯಾವಧಿಯನ್ನು ಆಗಸ್ಟ್ 2ರವರೆಗೆ ಪ್ರತಿ ನಿತ್ಯ ಸಂಜೆ 8 ಗಂಟೆಯವರೆಗೂ ಸೇವೆ ಸಲ್ಲಿಸಲು ಕಾಲಾವಧಿ ವಿಸ್ತರಿಸಲಾಗುವುದು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇ-ಸ್ವತ್ತು ತಂತ್ರಾಂಶದ ಹೊಸ ಅವತರಣಿಕೆ ಅಭಿವೃದ್ಧಿ ಪಡಿಸಿದ್ದು, ಹೊಸ ಅವತರಣಿಕೆ ಸಾರ್ವಜನಿಕರ ಸೇವೆಗೆ ಬಿಡುಗಡೆ ಮಾಡಲಾಗುತಿದೆ. ಬಳಕೆದಾರರಿಗೆ ಅನುಕೂಲವಾಗುವಂತೆ ಸಮಗ್ರ ಆವೃತ್ತಿಯೊಂದಿಗೆ ಸಜ್ಜುಗೊಳಿಸಲಾಗಿರುವ ಈ ತಂತ್ರಾಂಶದ ಮೂಲಕ ಸಾರ್ವಜನಿಕರ ಆಸ್ತಿಯನ್ನು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಬಗ್ಗೆ ಅಳತೆ ಮಾಡಿಸುವ ಪ್ರಕ್ರಿಯೆಯನ್ನು ಗ್ರಾಮ ಪಂಚಾಯತಿಯ ಹಂತದಲ್ಲಿ ದಿಶಾಂಕ್ ಆಪ್ ಮೂಲಕ ನಿರ್ವಹಿಸಲು ಕ್ರಮವಹಿಸಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮನವಿ ಮಾಡಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ ಡಾ. ಜಿ. ಪರಮೇಶ್ವರ್ } ಗೃಹ ಸಚಿವ

ರಾಮನ ಹೆಸರು ನಾವು ತೆಗೆಯುತ್ತಿಲ್ಲ. ರಾಮ ಅಲ್ಲೇ ಇರುತ್ತಾನೆ. ರಾಮನಗರವೂ ಅಲ್ಲೇ ಇರಲಿದೆ. ಕುಮಾರಸ್ವಾಮಿಯವರು ಹೇಳಿಕೆ ಕೊಟ್ಟಿದ್ದಾರೆ. ಏನು ಮಾಡುವುದಕ್ಕೆ ಆಗುವುದಿಲ್ಲ. ಇದನ್ನೆಲ್ಲ ಸರಕಾರ ಎದುರಿಸಬೇಕು, ಎದುರಿಸುತ್ತೇವೆ.

ನಿರಂತರ ಪ್ರವಾಹ , ಶಾಶ್ವತ ಪುನರ್ವಸತಿ ಮರೀಚಿಕೆ; ರಸ್ತೆಬದಿಯಲ್ಲೇ ಬದುಕು ಸಾಗಿಸಬೇಕಾದ ಅನಿವಾರ್ಯತೆ

ಕೃಷ್ಣಾ ಪಾತ್ರದ ಜನರ ಬದುಕು ಮೂರಾಬಟ್ಟೆ

ವಿನಾಯಕ ಮಠಪತಿ, ಬೆಳಗಾವಿ

ನಮಗೆ ಬದುಕು ಸಾಕಾಗಿದೆ. ಪ್ರತಿವರ್ಷ ಸಂಸಾರ ಕಟ್ಟಿಕೊಂಡು ಊರು ಬಿಟ್ಟು ಹೋಗಬೇಕು. ರಸ್ತೆಬದಿ ಯಲ್ಲಿ ಸಮಯ ಕಳೆದು ವಾಪಸ್ ಮನೆಗೆ ಬರ ಬೇಕು. ಶಾಶ್ವತ ಪುನರ್ವಸತಿಗಾಗಿ ಕೇಳಿ ಸಾಕಾಗಿದೆ. ಕೆಲವೊಮ್ಮೆ ಈ ಬದುಕು ಯಾತಕ್ಕೆ ಎಂಬ ಜಿಗುಪ್ಸೆ ಮೂಡಿಸಿದೆ... ಭಾಗಶಃ ಕೃಷ್ಣಾ ನದಿ ಪ್ರವಾಹಕ್ಕೆ ಒಳಗಾಗುವ ಜನರ ಮಾತು ಇದೇ ಆಗಿದೆ.

ಹೌದು, ಮಹಾರಾಷ್ಟ್ರದಲ್ಲಿ ಮಳೆಯಾದರೂ ಬದುಕು ಹಾಳಾಗುವುದು ರಾಜ್ಯದ ಕೃಷ್ಣಾ ನದಿ ಪಾತ್ರದ ಜನರದ್ದು. ಕೆಲ ದಿನಗಳಿಂದ ಧಾರಾಕಾರ ವಾಗಿ ಸುರಿಯುತ್ತಿರುವ ಮಳೆಯಿಂದ ಕೃಷ್ಣಾ ನದಿಪಾತ್ರದಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗಿದ್ದು ಜನ-ಜಾನುವಾರುಗಳೊನ್ನು ಕಟ್ಟಿಕೊಂಡು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರವಾಗುತ್ತಿದ್ದಾರೆ. ಈ ನಡುವೆ, ಇದ್ದ ಮನೆಗಳನ್ನು ಬಿಟ್ಟು ರಸ್ತೆಬದಿಯಲ್ಲಿ ಬದುಕು ಸಾಗಿಸಬೇಕಾದ ಅನಿವಾರ್ಯ ಪರಿಸ್ಥಿತಿ ಬಡಪಾಯಿ ಗ್ರಾಮಸ್ಥರಿಗೆ ಎದುರಾಗಿದೆ. ಮಹಾರಾಷ್ಟ್ರದ ಘಟ್ಟ ಪ್ರದೇಶ ಸೇರಿದಂತೆ ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ಬಿಟ್ಟು, ಬಿಡದೆ ಮಳೆ ಸುರಿಯುತ್ತಿದ್ದು ಪ್ರಮುಖ ನದಿಗಳು ಅಪಾಯದಮಟ್ಟ ಮೀರಿ ಹರಿಯುತ್ತಿವೆ. ಕೃಷ್ಣಾ, ಮಲಪ್ರಭಾ, ಘಟಪ್ರಭಾ, ವೇದಗಂಗಾ, ಧೂದ ಗಂಗಾ ನದಿ ಪಾತ್ರದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು ಜನರು ವಿಧಿಯಿಲ್ಲದೆ, ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರವಾಗುತ್ತಿದ್ದಾರೆ. ಇನ್ನು, ಕೃಷ್ಣಾ ನದಿ ಪಾತ್ರದ ಪರಿಸ್ಥಿತಿ ಭಿನ್ನವಾಗಿದ್ದು ಸಂತ್ರಸ್ತ ಕುಟುಂಬಗಳು ದಿಕ್ಕುತೋಚದ ಪರಿಸ್ಥಿತಿಯಲ್ಲಿ ಸಿಲುಕಿವೆ.

ಶಾಶ್ವತ ಪರಿಹಾರ ಮರಿಚಿಕೆ: ಕೃಷ್ಣಾ ನದಿಯ ಪ್ರವಾಹ ಪೀಡಿತ ಪ್ರದೇಶದಲ್ಲಿ ವಾಸಿಸುವ ನಿರಾಶ್ರಿತರಿಗೆ ಶಾಶ್ವತ ಪುನರ್ವಸತಿ ಕಲ್ಪಿಸುವ ಭರವಸೆ ನೀಡಿದ್ದ ಹಿಂದಿನ ಸರ್ಕಾರಗಳು ಈವರೆಗೂ ಗಂಭೀರ ಕ್ರಮ ಕೈಗೊಂಡಿಲ್ಲ. ಇದರಿಂದ ನದಿಪಾ ತ್ರದ ಜನ ಪ್ರತಿವರ್ಷವೂ ಪ್ರವಾಹದಿಂದ ತಪ್ಪಿಸಿಕೊಳ್ಳಲು ಊರೂರು ಅಲೆದಾಡುವ ದುಸ್ಥಿತಿಯಿದೆ. ಪ್ರತಿ ಚುನಾವಣೆ ಸಂದರ್ಭದಲ್ಲಿ ಪುನರ್ವಸತಿ ಕುರಿತು ಮಾತನಾಡುವ ರಾಜಕೀಯ ಮುಖಂ ಡರು ಮರಳಿ ಆ ವಿಷಯದ ಕುರಿತು ಮಾತನಾಡುವುದಿಲ್ಲ. ಹೀಗಾಗಿ ಪ್ರವಾಹದ ಸಂದರ್ಭದಲ್ಲಿ ಶಪಿಸುತ್ತಾ ಬದುಕು ಸಾಗಿಸುತ್ತಿದ್ದಾರೆ.

ಕೃಷ್ಣಾ ನದಿ ಪ್ರವಾಹದ ಹಿನ್ನಲೆಯಲ್ಲಿ ಸುರಕ್ಷಿತ ಸ್ಥಳಕ್ಕೆ ಗಂಟು, ಮೂಟೆ ಕಟ್ಟಿಕೊಂಡು ಹೊರಟ ಹುಲಗಬಾಳಿ ಗ್ರಾಮದ ನಿರಾಶ್ರಿತರು

ಪ್ರವಾಹ: ಪಾರ್ಶ್ವವಾಯು ಪೀಡಿತನ ಪರದಾಟ

ಒಂದೆಡೆ ಕೃಷ್ಣಾ ನದಿ ಮಟ್ಟ ಏರಿಕೆಯಾಗುತ್ತಿದ್ದು ಇತ್ತ ಪ್ರವಾಹ ಸಂತ್ರಸ್ತರು ಮನೆ ಬಿಟ್ಟು ಎತ್ತ ಸಾಗಬೇಕು ಎಂಬ ಅನಿವಾರ್ಯ ಪರಿಸ್ಥಿತಿಯಲ್ಲಿದ್ದಾರೆ. ಅಥಣಿ ತಾಲೂಕಿನ ಹುಲಗಬಾಳಿ ಗ್ರಾಮದ ನಿವಾಸಿ ಶಂಕರ್ ಮಾಂಗ್ ಪಾರ್ಶ್ವವಾಯುಗೆ ತುತ್ತಾಗಿ ದೇಹ ಸ್ವಾಧೀನ ಕಳೆದುಕೊಂಡ ಇವರು ಸುರಕ್ಷಿತ ಸ್ಥಳಕ್ಕೆ ತೆರಳಲು ಪರದಾಡಿದ್ದಾರೆ. ನಡೆಯಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ಪತ್ನಿ ಹಾಗೂ ಮಗನ ಸಹಾಯ ಪಡೆದು ಕೊಂಡೇ ಪ್ರವಾಹದಿಂದ ತಪ್ಪಿಸಿಕೊಳ್ಳಬೇಕಾಗಿದೆ. ಸ್ಥಳೀಯ ಅಧಿಕಾರಿಗಳು ನಮ್ಮನ್ನು ಮನೆಯಿಂದ ಹೊರಗೆ ಕಳುಹಿಸುವ ಕೆಲಸ ಮಾಡುತ್ತಾರೆ ಹೊರತು ಸ್ಥಳಾಂತರ ಆಗುವುದಕ್ಕೆ ಸಹಕಾರ ನೀಡಲ್ಲ ಎಂಬ ಆರೋಪ ಇವರದು.

> ದಶಕಗಳಿಂದ ನಮಗೆ ಪುನರ್ ವಸತಿ ಕಲ್ಪಿಸುವ ಭರವಸೆ ನೀಡುವ ಸರ್ಕಾರ ಈವರೆಗೂ ಪರಿಹಾರ ನೀಡಿಲ್ಲ. ಪ್ರತಿವರ್ಷ ಪ್ರವಾಹ ಪರಿಸ್ಥಿತಿ ಎದುರಾದಾಗ ಮಾತ್ರ ಪರಿಹಾರ ಭರವಸೆ ನೀಡಿ ಹೋದರೆ ವಾಪಸ್ ಪ್ರವಾಹ ಸಂದರ್ಭದಲ್ಲಿ ಹಾಜರಾಗುತ್ತಾರೆ. ಇದರಿಂದ ಬದುಕುವುದೇ ಕಷ್ಟವಾಗಿದೆ.
>
> ರಮಿಜಾ ಪಕಾಲಿ, ಸಂತ್ರಸ್ತ ಮಹಿಳೆ

ಪ್ರವಾಹ ಭೀತಿಯಿಂದ ಸುರಕ್ಷಿತ ಸ್ಥಳಕ್ಕೆ ತೆರಳಲು ಪರದಾಡಿದ ಪಾರ್ಶ್ವವಾಯುಗೆ ತುತ್ತಾದ ವ್ಯಕ್ತಿ

ಗಂಟು, ಮೂಟೆ ಕಟ್ಟುವುದೇ ಜೀವನ

ಮಳೆಗಾಲ ಪ್ರಾರಂಭವಾದರೆ ನದಿ ಪಾತ್ರದ ಜನರಿಗೆ ಪ್ರವಾಹದ ಭಯವೇ ಹೆಚ್ಚಾಗುತ್ತದೆ. ಉಕ್ಕಿ ಹರಿಯುವ ನದಿಗಳಿಂದ ಇಡೀ ಗ್ರಾಮಗಳೇ ನಡುಗಡ್ಡೆ ಆಗುವ ಪರಿಸ್ಥಿತಿ ನಿರ್ಮಾಣವಾಗುವು ದರಿಂದ ಗ್ರಾಮಸ್ಥರು ಕಂಗಾಲಾಗುವುದು ಸರ್ವೇಸಾಮಾನ್ಯ. ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಹುಲಗಬಾಳಿ ಗ್ರಾಮದ ರೈತರು ಸದ್ಯ ಪ್ರವಾಹದಿಂದ ತಪ್ಪಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ. ಜಾನುವಾರು ಹಾಗೂ ದಿನಬಳಕೆ ವಸ್ತುಗಳನ್ನು ಕಟ್ಟಿಕೊಂಡು ಊರೂರು ಅಲೆಯುವ ದಯನೀಯ ಪರಿಸ್ಥಿತಿ ನಿರ್ಮಾಣವಾಗಿದೆ.

2019 ರ ಪ್ರವಾಹ ಮರುಕಳಿಸಿದರೆ ಸಂಕಷ್ಟ

ಉತ್ತರ ಕರ್ನಾಟಕ ಭಾಗದಲ್ಲಿ ಆಗಾಗ್ಗೆ ಕೃಷ್ಣಾ ನದಿ ಪ್ರವಾಹ ಜನರನ್ನು ಸಂಕಷ್ಟಕ್ಕೆ ಸಿಲುಕಿಸುವುದು ಸಾಮಾನ್ಯ ಎಂಬಂತಾಗಿದೆ. ಕಳೆದ 2019 ರಲ್ಲಿ ಉಂಟಾದ ಭೀಕರ ಪ್ರವಾಹಕ್ಕೆ ಸಾವಿರಾರು ಜನರ ಬದುಕು ಬೀದಿಗೆ ಬಿದ್ದಿತ್ತು. ಈ ಪ್ರವಾಹದಲ್ಲಿ ಮನೆ ಕಳೆದುಕೊಂಡವರ ಪೈಕಿ ಅನೇಕರಿಗೆ ಇನ್ನೂ ಪರಿಹಾರ ಲಭಿಸಿಲ್ಲ. ಇನ್ನು ರಣಬಿಸಿಲಿನಿಂದ ಕಷ್ಟಪಟ್ಟು ಬೆಳೆಗಳನ್ನು ಉಳಿಸಿಕೊಂಡಿದ್ದ ರೈತರಿಗೆ ಮತ್ತೊಮ್ಮೆ ಪ್ರವಾಹ ಎದುರಾಗಿದ್ದು ಗಾಯದ ಮೇಲೆ ಬರೆ ಎಳೆದಂತಾಗಿದೆ.

ರಾಜ್ಯದ ಜಲಾಶಯಗಳ ಮಟ್ಟ

	ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
1.	ಕೆಆರ್‌ಎಸ್	124.80	124.35	66945
2.	ಕಬಿನಿ	2284	2282.27	19,729
3.	ಹಾರಂಗಿ	2859	2855.88	9288
4.	ಹೇಮಾವತಿ	2922	2920.05	52999
5.	ತುಂಗಭದ್ರಾ	1633	16313.99	87766
6.	ಆಲಮಟ್ಟಿ	1704.81	1695.91	204098
7.	ನಾರಾಯಣಪುರ	1615	1610.05	261397

ಗೋಕಾಕ ಪಶ್ಚಿಮ ಘಟ್ಟ ಅರಣ್ಯ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆ ಗೋಕಾಕ ಜಲಪಾತ ಮೈದುಂಬಿ ಹರಿಯುತ್ತಿರುವ ರುದ್ರರಮಣೀಯ ದೃಶ್ಯ.

ಮದಗದ ಕೆರೆ ಭರ್ತಿ

ಚಿಕ್ಕಮಗಳೂರು : ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಭಾರಿ ಮಳೆ ಆಗುತ್ತಿದ್ದು ಇತಿಹಾಸ ಪ್ರಸಿದ್ಧ ಕಡೂರು ತಾಲೂಕಿನ ಮದಗದ ಕೆರೆ ಕೋಡಿ ಬಿದ್ದಿದೆ. ನೋಡಲು ಸಮುದ್ರದಂತೆ ಕಾಣುವ ಬೃಹತ್ ಮದಗದ ಕೆರೆ 336 ಹೆಕ್ಟೇರ್, (2036 ಎಕರೆ) ವಿಸ್ತೀರ್ಣ ಹೊಂದಿದೆ. ಸುತ್ತಲೂ ಮುಗಿಲೆತ್ತರದ ಬೆಟ್ಟಗುಡ್ಡಗಳ ಮಧ್ಯದಲ್ಲಿ ಇರುವ ಕೆರೆಯ ನೀರು ಕೋಡಿ ಬಿದ್ದು ಮಾರಿಕಣಿವೆ ಡ್ಯಾಂ ಸೇರುತ್ತದೆ.ಕೆರೆ ತಪ್ಪಲಿನ 34 ಹಳ್ಳಿಯ ಜನ-ಜಾನುವಾರುಗಳಿಗೆ ಈ ನೀರೇ ಜೀವಜಲಸಂತೆ ಮೈದಾನ ಜಲಾವೃತ; ಭದ್ರಾ ನೀರಿನಿಂದ ಬಾಳೆಹೊನ್ನೂರಿನ ಸಂತೆ ಮೈದಾನದ ಕಟ್ಟಡಗಳು ಜಲಾವೃತಗೊಂಡಿದೆ ಬಾಳೆಹೊನ್ನೂರು ಬಳಿ ನದಿಪಾತ್ರದ ಅಡಿಕೆ, ಕಾಫಿ ತೋಟಗಳು ಸಂಪೂರ್ಣ ಜಲಾವೃತವಾಗಿವೆ ಎರಡು ವರ್ಷಗಳ ಬಳಿಕ ಮತ್ತೆ ನೆರೆ ಪರಿಸ್ಥಿತಿ ಉಂಟಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಸಂತೆ ಮೈದಾನಕ್ಕೆ ಸಾರ್ವಜನಿಕರ ಪ್ರವೇಶ ನಿಷೇಧಿಸಲಾಗಿದೆ.

ಮಹಾರಾಷ್ಟ್ರ, ಬೆಳಗಾವಿ ಪ್ರದೇಶದಲ್ಲಿ ವ್ಯಾಪಕ ಮಳೆ । ಸಂಪರ್ಕ ಕಡಿತ

ಕೃಷ್ಣಾ ಸೇರಿ 3 ನದಿಗಳ ಮಟ್ಟ ಹೆಚ್ಚಳ

ಬಾಗಲಕೋಟೆ: ಬೆಳಗಾವಿ ಹಾಗೂ ಮಹಾರಾಷ್ಟ್ರದ ಭಾಗದಲ್ಲಿ ಮಳೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಘಟಪ್ರಭಾ , ಮಲಪ್ರಭಾ ಹಾಗೂ ಕೃಷ್ಣಾ ನದಿಗಳ ನೀರಿನ ಪ್ರಮಾಣದಲ್ಲಿ ಭಾರಿ ಹೆಚ್ಚಳವಾಗಿದೆ.

ಮಹಾರಾಷ್ಟ್ರದ ಭಾಗದಲ್ಲಿ ಅಪಾರ ಪ್ರಮಾ ಣದಲ್ಲಿ ಮಳೆಯಿಂದ ಆಲಮಟ್ಟಿ ಜಲಾಶಯಕ್ಕೆ ಒಟ್ಟು 2,04,098 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ ಒಟ್ಟು 2,66,586 ಕ್ಯುಸೆಕ್ ಬಿಡುಗಡೆ ಮಾಡಲಾಗು ತ್ತಿದೆ. ಹಿಡಕಲ್ ಜಲಾಶಯದಿಂದ ಘಟಪ್ರಭಾ ನದಿಗೆ 57,459 ಕ್ಯುಸೆಕ್ ನೀರು ಹರಿಬಿಡಲಾ ಗಿದ್ದರಿಂದ ಮುಧೋಳ ತಾಲೂಕಿನ 8 ಹಾಗೂ ರಬಕವಿ-ಬನಹಟ್ಟಿ ತಾಲೂಕಿನ 3 ಗ್ರಾಮಗಳಿಗೆ ಸೇರುವ ಸೇತುವೆಗಳ ಮೇಲೆ ನೀರು ಬಂದು, ವಾಹನಗಳ ಸಂಚಾರ ಸ್ಥಗಿತಗೊಂಡಿದೆ.

ಇನ್ನು, ನದಿ ತೀರದ ಜನರನ್ನು ಸ್ಥಳಾಂತರಿಸಲಾಗುತ್ತಿದ್ದು, ಜಮಖಂಡಿ ತಾಲೂಕಿನ ಮುತ್ತೂರು ಗ್ರಾಮದ 105 ಜನರು ಹಾಗೂ 86 ಜಾನುವಾರುಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ್ದು, ಮುಧೋಳ ತಾಲೂಕಿನ ಮಿರ್ಜಿ ಗ್ರಾಮದ 32 ಜನರನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.



ಆಲಮಟ್ಟಿಯ ಲಾಲಬಹದ್ದೂರ ಶಾಸ್ತ್ರಿ ಜಲಾಶಯದ ಎಲ್ಲ ಗೇಟ್‌ಗಳ ಮೂಲಕ ನೀರನ್ನು ಹೊರಬಿಡಲಾಗುತ್ತಿದೆ.

ಮಲಪ್ರಭಾ : ಪ್ರವಾಹದ ಭೀತಿಯಿಲ್ಲ

ಮಲಪ್ರಭಾ ನದಿಗೆ ಅಷ್ಟೊಂದು ಪ್ರಮಾಣದಲ್ಲಿ ನವೀಲುತೀರ್ಥ ಜಲಾಶಯದಿಂದ ನೀರು ಹರಿಸದ ಕಾರಣ ನದಿ ದಡದ ಗ್ರಾಮಗಳ ರೈತರಿಗೆ ಪ್ರವಾಹದ ಭೀತಿ ಉಂಟಾಗಿಲ್ಲ. ಮೂರು ನದಿಗಳಲ್ಲಿ ಹರಿಯುತ್ತಿರುವ ನೀರಿನ ಮಟ್ಟ ವೀಕ್ಷಿಸಿ ಜಿಲ್ಲಾಡಳಿತ ಪ್ರವಾಹದಿಂದ ಹಾನಿಗೊಳಗಾಗಬಹುದಾಗ 203 ಗ್ರಾಮಗಳನ್ನು ಗುರುತಿಸಿದೆ. ಇದರಲ್ಲಿ 31 ಗ್ರಾಮಗಳು ಪೂರ್ಣ ಪ್ರಮಾಣದಲ್ಲಿ ಮುಳುಗಡೆಯಾಗುವ ಸಂಭವವಿದ್ದು, 172 ಗ್ರಾಮಗಳು ಭಾಗಶಃ ಮುಳುಗಡೆಯಾಗುವ ಭೀತಿ ಎದುರಿಸುತ್ತಿವೆ. ಜಿಲ್ಲಾದ್ಯಂತ ಒಟ್ಟು 216 ಕಾಳಜಿ ಕೇಂದ್ರ ತೆರೆಯಲು ಜಿಲ್ಲಾಡಳಿತ ಸಿದ್ಧತೆ ಕೈಗೊಂಡಿದೆ.

ಟಿಬಿ ಡ್ಯಾಂನಿಂದ ನೀರು:ಸೇತುವೆ ಮುಳುಗಡೆ

ಗಂಗಾವತಿ: ಮಲೆನಾಡು ಪ್ರದೇಶದಲ್ಲಿ ನಿರಂತರ ಮಳೆ ಹಿನ್ನೆಲೆಯಲ್ಲಿ ತುಂಗಭದ್ರ ಜಲಾಶಯಕ್ಕೆ ಭಾರಿ ಒಳಹರಿವು ಹೆಚ್ಚುತ್ತಿದೆ. ಹೀಗಾಗಿ ಡ್ಯಾಂನಿಂದ ನದಿಗೆ 1.10 ಲಕ್ಷ ಕ್ಯುಸೆಕ್ ನೀರು ಬಿಡುಗಡೆ ಮಾಡಲಾಗಿದೆ. ಕೊಪ್ಪಳ- ಬಳ್ಳಾರಿ ಜಿಲ್ಲೆಗೆ ಸಂಪರ್ಕ ಕಲ್ಪಿಸುವ ಕಂಪ್ಲಿ ಸೇವೆತು ಸಂಪೂರ್ಣ ಮುಳುಗಡೆಯಾಗಿ, ಸಂಪರ್ಕ ಕಡಿತಗೊಂಡಿದೆ. ನದಿದಡದಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾಗಿದ್ದು, ಗಂಗಾವತಿ ಮತ್ತು ಕಾರಟಗಿ ತಾಲೂಕಿನ ಹಲವೆಡೆ ತೀರದ ಸ್ಮಾರಕಗಳು ಮುಳುಗಡೆ ಆಗಿವೆ.

ಗಂಗಾವತಿ ತಾಲೂಕು ಹಿರೇಜಂತಕಲ್ ಸಮೀಪದ ಕಂಪ್ಲಿ ಸೇತುವೆ ಮುಳುಗಡೆಯಾದ ಹಿನ್ನೆಲೆ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆ ರಸ್ತೆ ಸಂಪರ್ಕ ಕಡಿತವಾಗಿದೆ. ಕಳೆದ ಜು. 23ರ ಮಧ್ಯಾಹ್ನದಿಂದಲೇ ಕಂಪ್ಲಿ ಸೇತುವೆ ಮೇಲೆ ವಾಹನ ಸಂಚಾರ ನಿಷೇಧಿಸಲಾಗಿತ್ತು. ಸಂಜೆ ವೇಳೆಗೆ ನದಿಯ ಹೊರಹರಿವು 1.10 ಲಕ್ಷ ಕ್ಯೂಸೆಕ್ ಗೆ ಆಗುತ್ತಿದ್ದಂತೆ, ಸೇತುವೆ ಸಂಪೂರ್ಣ ಮುಳುಗಡೆಯಾಗಿದೆ. ಇದರಿಂದ ಬಳ್ಳಾರಿ ಜಿಲ್ಲೆಯ ಕಂಪ್ಲಿ, ಕೊಪ್ಪಳ ಜಿಲ್ಲೆಯ ಗಂಗಾವತಿ ನಗರಕ್ಕೆ ಸಂಚರಿಸುವ ವಾಹನ ಸವಾರರು, ಸಾರ್ವಜನಿಕರು ಕಡೆಬಾಗಿಲು ಸೇತುವೆ ಮೂಲಕ ಸುತ್ತಿ ಬಳಸಿ ಬರುವ ಸ್ಥಿತಿ ನಿರ್ಮಾಣವಾಗಿದೆ. ಬಳ್ಳಾರಿಯಿಂದ ಸಿರುಗುಪ್ಪ, ಸಿಂಧನೂರು ತಾಲೂಕು ಮಾರ್ಗ ಇಲ್ಲವೇ ಬಳ್ಳಾರಿಯಿಂದ ಹೊಸಪೇಟೆ ತಾಲೂಕಿನ ಮೂಲಕ ಕಡೇಬಾಗಿಲು ಸೇತುವೆ ಮೂಲಕ ಗಂಗಾವತಿಗೆ ಜನ ಸುತ್ತು ಬಳಸಿ ಬರಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ತುಂಗಭದ್ರ ಡ್ಯಾಂನಿಂದ ನದಿಗೆ 1.10 ಲಕ್ಷ ಕ್ಯುಸೆಕ್ ನೀರು ನದಿಗೆ ಬಿಡುಗಡೆ ಮಾಡಿದ ಹಿನ್ನೆಲೆಯಲ್ಲಿ ಕಂಪ್ಲಿ ಸೇತುವೆ ಮುಳುಗಡೆಯಾಗಿದೆ.

ರೆಡ್ ಅಲರ್ಟ್ ಘೋಷಣೆ

ತುಂಗಭದ್ರಾ ಜಲಾಶಯದಿಂದ ನದಿಗೆ ನೀರು ಹರಿಸುತ್ತಿರುವ ಹಿನ್ನೆಲೆಯಲ್ಲಿ ದಿನದ 24 ಗಂಟೆಯೂ ಎಚ್ಚರಿಕೆಯಿಂದ ಇರುವಂತೆ ನದಿಪಾತ್ರದ ಜನರಿಗೆ ಅಧಿಕಾರಿಗಳು ರೆಡ್ ಅಲರ್ಟ್ ಘೋಷಿಸಿದ್ದಾರೆ. ತುಂಗಾ ಮತ್ತು ವರದಾ ನದಿಯ ಪ್ರವಾಹದ ನೀರು ತುಂಗಭದ್ರಾ ಜಲಾಶಯಕ್ಕೆ ಬರುತ್ತಿರುವ ಹಿನ್ನೆಲೆ ಹೆಚ್ಚುವರಿ ನೀರು ನದಿಗೆ ಹರಿಸಲಾಗುತ್ತಿದೆ. ಸದ್ಯ 1.10 ಲಕ್ಷ ಕ್ಯುಸೆಕ್ ಹರಿಸಲಾಗುತ್ತಿದ್ದು, ಯಾವುದೇ ವೇಳೆ ಹೆಚ್ಚಿಸುವ ಸಾಧ್ಯತೆ ಇದೆ ಎಂದು ಕಟ್ಟೆಚ್ಚರ ನೀಡಲಾಗಿದೆ.

ಆಲಮಟ್ಟಿ ಜಲಾಶಯದಿಂದ ದಾಖಲೆ ಪ್ರಮಾಣದ ಹೊರಹರಿವು

3 ಲಕ್ಷ ಕ್ಯುಸೆಕ್ ಹೊರಕ್ಕೆ; ಜಮೀನು ಜಲಾವೃತ

ಆಲಮಟ್ಟಿ; ಮಹಾರಾಷ್ಟದ ಕೃಷ್ಣಾ ತೀರದಲ್ಲಿ ಮಹಾಪೂರ ಸೃಷ್ಟಿಯಾಗುತ್ತಿದ್ದು, ಆಲಮಟ್ಟಿ ಜಲಾಶಯದಿಂದ ಈ ವರ್ಷದ ಅತ್ಯಧಿಕ 3 ಲಕ್ಷ ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಒಳಹರಿವು ಮತ್ತಷ್ಟು ಹೆಚ್ಚಿದರೇ ಹೊರಹರಿವನ್ನು 3.25 ಲಕ್ಷ ಕ್ಯುಸೆಕ್ ಗೆ ಹೆಚ್ಚುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಲಾಶಯದ ಎಲ್ಲಾ 26 ಗೇಟ್ ಗಳ ಮೂಲಕ ನೀರು ಬಿಡಲಾಗುತ್ತಿದೆ. ಸಂಜೆ 6 ಕ್ಕೆ ಜಲಾಶಯಕ್ಕೆ 2,09,817 ಕ್ಯುಸೆಕ್ ಒಳವ ವು ಇದೆ. ಜಲಾಶಯದ ಮಟ್ಟ 516.68ಮೀ ಗೆ ಕಡಿಮೆಯಾಗಿದೆ. ಜಲಾಶಯದಲ್ಲಿ 80 ಟಿಎಂಸಿ ನೀರು ಸಂಗ್ರಹವಾಗಿದೆ. ಇಷ್ಟೇ ಪ್ರಮಾಣದ ನೀರನ್ನು ನಾರಾಯಣಪುರ ಜಲಾಶಯದಿಂದಲೂ ಬಿಡಲಾಗುತ್ತಿದೆ,

ಭಾರಿ ಮಳೆ: ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದೆ. ಅನೇಕ ಕಡೆ ನಿತ್ಯ 20 ಸೆಂ.ಮೀಗೂ ಅಧಿಕ ಮಳೆ ಸುರಿಯುತ್ತಿದೆ. ಮಹಾಬಲೇಶ್ವರದಲ್ಲಿ ಸೆಂ.ಮೀ ಸೋಮವಾರ ಆಗಿದೆ. ಕರ್ನಾಟಕಕ್ಕೆ ಬಂದು ಸೇರುವ ಕಲ್ಲೋಳ ಬ್ಯಾರೇಜ್ ಬಳಿ ಕೃಷ್ಣೆಯ ಹರಿವು 2.10 ಲಕ್ಷ ಕ್ಯುಸೆಕ್ ಗೂ ಅಧಿಕವಿದೆ. ಆಲಮಟ್ಟಿ ಜಲಾಶಯದ ಹಿನ್ನೀರಿನ ಘಟಪ್ರಭಾ ನದಿಯಿಂದಲೂ 50,000 ಕ್ಯುಸೆಕ್ ಹರಿವು ಇದೆ. ಹೀಗಾಗಿ ಮುಂದಿನ ಮೂರ್ನಾಲ್ಕು ದಿನ ಜಲಾಶಯದ ಒಳಹರಿವು 2.50 ಲಕ್ಷ ಕ್ಯುಸೆಕ್ ದಾಟಲಿದೆ.

ಡಿಸಿ ಭೇಟಿ; ಶುಕ್ರವಾರ ಬಾಗಲಕೋಟೆ ಜಿಲ್ಲಾಧಿಕಾರಿ ಕೆ.ಎಂ. ಜಾನಕಿ, ಜಿ.ಪಂ ಸಿಇಓ ಶಶಿಧರ ಕುರೇರ ಮತ್ತಿತರ ಅಧಿಕಾರಿಗಳು ಭೇಟಿ ನೀಡಿದರು. ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು ಆಲಮಟ್ಟಿ ಜಲಾ ಶ ಯದಮಟ್ಟ, ಮಾಹಿತಿಗಳನ್ನು ಪಡೆದರು. ನಂತರ ಮಾತನಾಡಿದ ಜಿಲ್ಲಾಧಿಕಾರಿ ಕೆ.ಎಂ. ಜಾನಕಿ, ಕೃಷ್ಣಾ ತೀರದಲ್ಲಿ ಪ್ರವಾಹ ಸೃಷ್ಟಿಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದರು.

ಆಲಮಟ್ಟಿ ಜಲಾಶಯದಿಂದ ದಾಖಲೆ ಪ್ರಮಾಣದ ನೀರು ಬಿಡುಗಡೆ

ರಾಷ್ಟ್ರೀಯ ಹೆದ್ದಾರಿಯಲ್ಲಿ ಮತ್ತೆ ಕುಸಿತದ ಭೀತಿ

ಚಿಕ್ಕಮಗಳೂರು: ಶೃಂಗೇರಿಯ ಹತ್ತಿರ ಆನೆಗುಂದ ಬಳಿ ತುಂಗಾ ನದಿಯ ತಟದಲ್ಲಿರುವ ರಾಷ್ಟ್ರೀಯ ಹೆದ್ದಾರಿ 169 ಅನ್ನು ಅಗಲೀಕರಣಕ್ಕಾಗಿ ತೆಗೆದ ರಸ್ತೆಬದಿಯ ಗುಡ್ಡ ಜಡಿಮಳೆಗೆ ದಿನೇ ದಿನೇ ಕುಸಿದು ಬರುತ್ತಿದೆ. ಇಲ್ಲಿ ಪ್ರತಿನಿತ್ಯ ನೂರಾರು ಪ್ರವಾಸಿಗರು, ರೈತರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕರು, ವಯೋವೃದ್ಧರು ಸಂಚರಿಸುತ್ತಾರೆ. ಅಲ್ಲದೆ ಸುತ್ತಮುತ್ತ ಸುಸಜ್ಜಿತ ಆಸ್ಪತ್ರೆ ಇಲ್ಲದ ಕಾರಣ, ಅನಿವಾರ್ಯವಾಗಿ ರೋಗಿಗಳು/ಅಪಘಾತದ ಸಂದರ್ಭದಲ್ಲಿ ದಕ್ಷಿಣ ಕನ್ನಡ ಅಥವಾ ಉಡುಪಿ ಜಿಲ್ಲೆಯ ಆಸ್ಪತ್ರೆಗೆ ಹೋಗಲು ಇರುವ ಏಕೈಕ ರಸ್ತೆ ಮಾರ್ಗವಾಗಿದೆ. ಆದ್ದರಿಂದ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಹಾಸನದಲ್ಲಿ ಮುಂದುವರಿದ ಮಳೆ, ವಸತಿ ಪ್ರದೇಶ ಜಲಾವೃತ । ಜಲಾಶಯಗಳು ಭರ್ತಿ

ಧುಮ್ಮಿಕ್ಕುತ್ತಿದೆ ಜಲಧಾರೆ: ಜನಜೀವನಕ್ಕೆ ತೊಂದರೆ

ಹಾಸನ: ಜಿಲ್ಲೆಯಲ್ಲಿ ಮಳೆ ಆರ್ಭಟ ಬಲು ಜೋರಾಗಿದ್ದು, ಎಲ್ಲೆಲ್ಲೂ ನೀರೇ ಕಾಣುತ್ತಿದೆ. ಜಿಲ್ಲೆಯ ಮೂರು ಜಲಾಶಯಗಳಾದ ಹೇಮಾವತಿ, ಯಗಚಿ ಮತ್ತು ವಾಟೆಹೊಳೆ ಜಲಾಶಯಗಳು ಭರ್ತಿಯಾಗಿದ್ದು, ಅಪಾರ ಪ್ರಮಾಣದ ನೀರನ್ನು ಹೊರ ಬಿಡಲಾಗುತ್ತಿದೆ.

ಹೇಮಾವತಿ ಜಲಾಶಯದಿಂದ ಸುಮಾರು 65 ಸಾವಿರಕ್ಕೂ ಹೆಚ್ಚಿ ಕ್ಯುಸೆಕ್ ನೀರನ್ನು ಆರು ಕ್ರಸ್ಟ್‌ಗೇಟ್‌ಗಳ ಮೂಲಕ ಹೊರ ಬಿಡಲಾಗುತ್ತಿದ್ದು, ಮುಂಜಾಗ್ರತಾ ಕ್ರಮವಾಗಿ ಹೇಮಾವತಿ ಜಲಾಶಯ ಬಳಿಗೆ ಜನರ ಪ್ರವೇಶ ನಿರ್ಬಂಧಿಸಲಾಗಿದೆ. ಇದರಿಂದ ಜಲಾಶಯ ವೀಕ್ಷಣೆಗೆ ಬಂದ ಸಹಸ್ರಾರು ಮಂದಿ ದೂರದಿಂದಲೇ ಜಲವೈಭವ ಕಣ್ತುಂಬಿಕೊಂಡು ತೆರಳಿದರು. ಜಲಾಶಯದಿಂದ ಹೆಚ್ಚಿನ ಪ್ರಮಾಣದ ನೀರನ್ನು ಹೊರ ಬಿಡುತ್ತಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಹೇಮಾವತಿ ಜಲಾಶಯ ಆಸುಪಾಸಿನ ಜನರಿಗೆ ಮುನ್ನೆಚ್ಚರಿಕೆ ಸೂಚನೆ ನೀಡಲಾಗಿದೆ.

ಬಡಾವಣೆ ಜಲಾವೃತ: ಹೇಮೆಯಿಂದ ಹೆಚ್ಚು ನೀರು ಹೊರ ಹೋಗುತ್ತಿರುವುದರಿಂದ ಹೊಳೆನರಸೀಪುರ ಪಟ್ಟಣದ ಅನೇಕ ಬಡಾವಣೆಗಳಿಗೆ ನೀರು ನುಗ್ಗಿದೆ. ಪಟ್ಟಣದ ಕೆಎನ್‌ಎ ಬಡಾವಣೆ ಸೇರಿದಂತೆ ಅನೇಕ ಬಡಾವಣೆ ಜಲಾವೃತವಾಗಿವೆ. ಮನೆಗಳಿಗೂ ನೀರು ನುಗ್ಗಿವೆ.

ಉಕ್ಕಿದ ಹೇಮೆ ನದಿ: ಮತ್ತೊಂದೆಡೆ ಮಲೆನಾಡು ಸಕಲೇಶಪುರ, ಮೂಡಿಗೆರೆ ಭಾಗದಲ್ಲಿ ಮಳೆ ಜೋರಾಗಿರುವುದರಿಂದ ಹೇಮೆ ನದಿ ಉಕ್ಕಿ ಹರಿಯುತ್ತಿದೆ. ಇದರಿಂದ ಸಕಲೇಶಪುರ ಪಟ್ಟಣದ ಹೊಳೆ ಮಲ್ಲೇಶ್ವರ ದೇಗುಲ ಜಲಾವೃತವಾಗಿದೆ.

ಹೊಳೆಮಲ್ಲೇಶ್ವರಸ್ವಾಮಿ ದೇಗುಲಕ್ಕೆ ಜಲ ದಿಗ್ಬಂಧನ: ಹೇಮಾವತಿ ನದಿ ಪಾತ್ರದಲ್ಲಿ ಭಾರೀ ಮಳೆ ಸುರಿಯುತ್ತಿರುವುದರಿಂದ ಗೊರೂರು ಮೂಲಕ ಮರಡಿ, ಅತ್ನಿ, ಹೆಬ್ಬಾಲೆ ಮಾರ್ಗವಾಗಿ ಹೊಳೆನರಸೀಪುರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಜಲಾವೃತಗೊಂಡಿದೆ. ರಸ್ತೆ ಮೇಲೆ ಐದಾರು ಅಡಿಯಷ್ಟು ನೀರು ಹರಿಯುತ್ತಿದ್ದು, ಬ್ಯಾರಿಕೇಡ್ ಹಾಕಿ ಪೊಲೀಸರು ರಸ್ತೆ ಬಂದ್ ಮಾಡಿದ್ದಾರೆ. ಇದರಿಂದ ಗೊರೂರು, ಅತ್ನಿ, ಮರಡಿ, ಹೆಬ್ಬಾಲೆ ಗ್ರಾಮಗಳ ನಡುವೆ ಸಂಪರ್ಕ ಕಡಿತಗೊಂಡಿದೆ. ಅಲ್ಲದೆ ನೂರಾರು ಎಕರೆ ಪಭತ್ತದ ಗದ್ದೆಗಳು ಜಲಾವೃತವಾಗಿವೆ.

ಅಜಾದ್ ರಸ್ತೆ ಜಲಾವೃತ: ಇನ್ನು ಸಕಲೇಶಪುರ ಪಟ್ಟಣದ ಅಜಾದ್ ರಸ್ತೆ ಜಲಾವೃತಗೊಂಡು, ಆರು ವರ್ಷಗಳ ಬಳಿಕ ಮತ್ತೆ ಹಲವು ವಾಣಿಜ್ಯ ಮಳಿಗೆ ಜಲಾವೃತಗೊಂಡಿವೆ. ಲಕ್ಷಾಂತರ ಮೌಲ್ಯದ ವಸ್ತು ಹಾನಿಯಾಗಿವೆ.

ಕೊಚ್ಚಿಹೋದ ಸೇತುವೆ-ರಸ್ತೆ: ಭಾರಿ ಮಳೆಗೆ ಬೇಲೂರು ತಾಲ್ಲೂಕಿನ ಕೋಗೊಡು ಗ್ರಾಮದ ಜಾಕನಹಳ್ಳಿ ಎಸ್ಟೇಟ್ ಬಳಿ ಸೇತುವೆ ಹಾಗೂ ಕಾಂಕ್ರಿಟ್ ರಸ್ತೆ ಕೊಚ್ಚಿ ಹೋಗಿದೆ. ಇದರಿಂದ ಹಲವು ಗ್ರಾಮಗಳಿಗೆ ರಸ್ತೆ ಸಂಪರ್ಕ ಕಡಿತ. 3 ತಿಂಗಳ ಹಿಂದಷ್ಟೇ 1 ಕೋಟಿ ರೂ.ವೆಚ್ಚದಲ್ಲಿ ಸೇತುವೆ ಹಾಗೂ ಕಾಂಕ್ರಿಟ್ ರಸ್ತೆ ನಿರ್ಮಿಸಲಾಗಿತ್ತು. ಆದರೆ ಹುಚ್ಚು ಮಳೆಗೆ ಸೇತುವೆ ಹಾಗೂ ಕಾಂಕ್ರೀಟ್ ರಸ್ತೆ ಕೊಚ್ಚಿ ಹೋಗಿದೆ. ಇದರಿಂದ ಶಿರಗೂರು-ಚೀಕನಹಳ್ಳಿ-ಬೇಲೂರು ಮಾರ್ಗಕ್ಕೆ ರಸ್ತೆ ಸಂಪರ್ಕ ಕಡಿತಗೊಂಡಿದೆ. ಸ್ಥಳಕ್ಕೆ ಬೇಲೂರು ತಹಸೀಲ್ದಾರ್ ಮಮತಾ, ತಾ.ಪಂ. ಇಒ ಹಾಗೂ ಪಿಡಬ್ಲ್ಯುಡಿ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಕುಸಿದ ಮನೆಗೋಡೆ: ಹೊಳೆನರಸೀಪುರ ತಾಲೂಕು ಚಾಕನಹಳ್ಳಿಯಲ್ಲಿ ಮನೆಯ ಗೋಡೆ ಬಿದ್ದು, ಕುಟುಂಬ ಅದೃಷ್ಟವಶಾತ್ ಅಪಾಯದಿಂದ ಪಾರಾಗಿದೆ. ಮಹಿಳೆಗೆ ಸಣ್ಣಪುಟ್ಟ ಗಾಯಗಳಾಗಿವೆ. ಪರಮೇಶ್-ಸುಜಾತ ದಂಪತಿಗೆ ಸೇರಿದ ಮನೆ ಕುಸಿದಿದ್ದು, ಪುತ್ರ ರಾಕೇಶ್ ಸೇರಿ ಎಲ್ಲರೂ ತಕ್ಷಣ ಹೊರಗೆ ಓಡಿ ಬಂದು ಪಾರಾಗಿದ್ದಾರೆ.

ಕಾರ್ಯಕ್ರಮವೇ ಆಗಲಿ, ತರಗತಿಯೇ ಆಗಲಿ ಮುಂದಿನ ಮೂರು ಸಾಲಿನಲ್ಲಿ ಕುಳಿತವರು ಪ್ರಮುಖ ಎನಿಸುತ್ತಾರೆ. ಪ್ರಶ್ನೆ ಕೇಳುವುದು ಸುಲಭ ಮತ್ತು ವೇದಿಕೆಯ ಮೇಲಿರುವವರು ಸ್ಫೂರ್ತಿಯಿಂದ ಮಾತನಾಡಲು ಮುಂದಿನ ಸಾಲಿನವರ ಶಿಸ್ತು, ಏಕಾಗ್ರತೆ, ಆಸ್ತೆ ಬಹು ಮುಖ್ಯ ಎನಿಸುತ್ತದೆ!



ಮುಂದಿನ ಸಾಲಿನ ಹುಡುಗರು ನೀವು!

● ಡಾ. ಎನ್ ಜಯರಾಮ ಶೆಟ್ಟಿ

ಸಭೆ ಸಮಾರಂಭಗಳಲ್ಲಿಯ ಅನೇಕ ಸವಾಲುಗಳಲ್ಲಿ ಹೆಚ್ಚು ಕಷ್ಟವಾದುದು ಯಾವುದು ಗೊತ್ತೆ? ಅಲ್ಲಿಗೆ ಬರುವ ಮಂದಿಯನ್ನು ಮುಂದಿನ ಸಾಲುಗಳಲ್ಲಿ ಕೂರಿಸುವುದು. ಸ್ವಯಂಪ್ರೇರಿತರಾಗಿ ಬಂದ ಹಾಗೆ ಮುಂದೆ ಕುಳಿತುಕೊಳ್ಳುವವರು ಬೆರಳೆಣಿಕೆಯಷ್ಟಿರಬಹುದು. ಗುಡುಗುಡು ಹಿಂದೆ ಹೋಗಿ ಕಾಣದಂತೆ ಕುಕ್ಕರಿಸುವವರನ್ನು ಸಂಘಟಕರು ಪುಸಲಾಯಿಸುತ್ತಾರೆ, ಒತ್ತಾಯಕ್ಕೆ ಒಳಪಡಿಸುತ್ತಾರೆ, ಆದರೂ ಹಿಂದಿನ ಸಾಲುಗಳ ಮಂದಿ ಮುಂದೆ ಸರಿಯಲು ಸುತಾರಾಂ ಕೇಳುವುದಿಲ್ಲ. ಕೆಲವೊಮ್ಮೆ ಜಗಳಕ್ಕೆ ನಿಲ್ಲುವವರನ್ನು, ಸಭಾಮರ್ಯಾದೆಗಾಗಿ ಸಹಿಸಿಕೊಳ್ಳುತ್ತಾರೆ.

ಸರಿಸುಮಾರು ಕಾರ್ಯಕ್ರಮ ಆರಂಭವಾಗುವ ಸಮಯ: ಆದರೆ ಮಂದಿಯೆಲ್ಲ ಹಿಂದೆಯೆ ಜಮಾಯಿಸಿರುವಾಗ, ನೀವು ಸಂಘಟಕರಾಗಿದ್ದರೆ ಹೇಗನ್ನಿಸಬೇಡ! ಕೆಲವೊಮ್ಮೆ ಆ ದಿನದ, ಮುಖ್ಯ ಅತಿಥಿಯೊ, ಭಾಷಣಕಾರರೊ ಸಭಿಕರನ್ನು ಮುಂದೆ ಬನ್ನಿರೆಂದು ಹೇಳುವುದುಂಟು, ಆಗಲೂ ಮಿಸುಕಾಡದಿದ್ದರೆ ನಿಮಗೆಷ್ಟು ಮುಜುಗರ ಆಗಲಿಕ್ಕಿಲ್ಲ? ಹೆಚ್ಚಾಗಿ ತರಗತಿ, ಸಭೆ-ಸಮಾರಂಭಗಳಲ್ಲಿ ಇಷ್ಟಪಟ್ಟು ಮುಂದೆ ಕುಳಿತು ಕೊಳ್ಳುವವರ ವ್ಯಕ್ತಿತ್ವ ಮಿಕ್ಕವರಿಗಿಂತ ಹೇಗೆ ಭಿನ್ನವಾಗಿರುತ್ತದೆ ಎನ್ನುವುದರ ಕುರಿತು ಸಂಶೋಧನೆ ಕೆಲವು ಪ್ರಮುಖ ಅಂಶಗಳನ್ನು ಬೆಳಕಿಗೆ ತಂದಿದೆ.

ನಡವಳಿಕೆಯಲ್ಲಿ ಇತಿ-ಮಿತಿ

ಪರೀಕ್ಷಿಸಿ ಬೇಕಾದರೆ, ಮುಂದಿನ ಮೂರು ಸಾಲುಗಳಲ್ಲಿ ಕೂರುವವರು ಸ್ಟೇಜ್‌ನಲ್ಲಿ ಕುಳಿತಿರುವವರ ಕೇಂದ್ರ ಗಮನದಲ್ಲೇ ಇರುತ್ತಾರೆ. ನಿಮ್ಮ ಮತ್ತು ಅತಿಥಿಗಳ ಮಧ್ಯೆ ಕಣ್ಣುಗಳ ಸಂಪರ್ಕ ಆಗಿಯೇ ಇರುತ್ತದೆ. ಕುಳಿತುಕೊಳ್ಳುವ ರೀತಿ, ನೋಡುವ ದೃಷ್ಟಿ, ಚಲನವಲನ ಎಲ್ಲದರ ಮೇಲೆ ಒಂದು ಶಿಸ್ತು, ಅಚ್ಚುಕಟ್ಟುತನ ನೀವೇ ಮೈಮೇಲೆ ಎಳೆದು ಕೊಳ್ಳುತ್ತೀರಿ. ಹಿಂದಿನ ಕೊನೆಯ ಸಾಲುಗಳಲ್ಲಿ ಕುಳಿತವರಲ್ಲಿ ಈ ಬದ್ಧತೆಯನ್ನು ನಿರೀಕ್ಷಿಸಲಾಗದು. ಆ ರೀತಿ ಕುಳಿತುಕೊಂಡು ಆಲಿಸುವ ಒಂದು ರೂಢಿ ನಿಮ್ಮಲ್ಲಿ ಆಗಿದ್ದೇ ಆದರೆ, ಮತ್ತೆಂದೂ ನೀವು ಹಿಂದಿನ ಸೀಟುಗಳಿಗೆ ಬರಲಾರಿರಿ ಅಂದು ಸಂಶೋಧನೆ ತಿಳಿಸುತ್ತದೆ.

ಆಲಿಸುವ ಗುಣಮಟ್ಟ

ಇನ್ನೊಬ್ಬರನ್ನು ಕೇಳಿಸಿಕೊಳ್ಳುವುದೇ ಪರಮ ಸುಖ ಮತ್ತು ಪರಿಣಾಮಕಾರಿಯಾದುದು. ಒಂದು ವಿಷಯದ ಕುರಿತು ಮಾತನಾಡಲು ಬರುವವರು ಸುಮ್ಮನೆ ಬರುವುದಿಲ್ಲವಲ್ಲ. ಅದೆಷ್ಟೊ ಮಾಹಿತಿ ಕಲೆಹಾಕಿ, ಅಧ್ಯಯನ ನಡೆಸಿ, ಪರಿಣತರನ್ನು ಸಂಪರ್ಕಿಸಿ ಬಂದು, ಆ ಮಾಹಿತಿಯನ್ನು ಆಪ್ತವಾಗಿ ನಿಮ್ಮಲ್ಲಿ ಹಂಚುತ್ತಾರಲ್ಲ, ಅದನ್ನು ನೀವು ಯಾಕೆ ಕೇಳಿಸಿಕೊಳ್ಳಬಾರದು? ಕೇಳಿಸಿಕೊಳ್ಳುವ ಮಂದಿಗೆ ಹಿಂದಿನ ಸಾಲುಗಳಲ್ಲಿ ಜನರ ಗಿಜಿಗಿಜಿ ಯಲ್ಲಿ ಸಾಧ್ಯವಾಗದಿರಬಹುದು. ಆದರೆ ಮುಂದಿನ ಸಾಲು ಗಳಲ್ಲಿ ಕುಳಿತವರಿಗೆ ಆ ಲಾಭವಿದೆ. ಯಾರಾದರೂ ಮನಮುಟ್ಟುವಂತೆ ಮಾತನಾಡುವಾಗ, ಮನಸಾರೆ ಹಂಚಿಕೊಳ್ಳುವಾಗ ನಾವು ತಂತಾನೆ ಮುಂದೆ ಸರಿಯುವುದೇಕೆ? ಅಂತಹ ಮಾತುಗಳ ರಸಸ್ವಾದ ಹತ್ತಿರದಿಂದಲೇ ಆಗಬೇಕಂದಲ್ಲವೆ? ಟೀವಿಯಲ್ಲಿ ನೀವು ಅತಿ ಇಷ್ಟ ಪಡುವ ಕಾರ್ಯಕ್ರಮ ಪ್ರಸಾರವಾಗುವಾಗಲೂ ಅಷ್ಟೆ. ದೂರದಿಂದ ಸ್ಪಷ್ಟವಾಗಿ ಕೇಳಿಸಿದರೂ, ಟೀವಿಗೆ ನೀವು ಅಂತು ನಿಲ್ಲುವುದಿಲ್ಲವೆ? ಇಷ್ಟಪಡುವ ವ್ಯಕ್ತಿಯ ಅಥವಾ ವಿಷಯದ ಮೇಲಿನ ಮಾತುಗಳೂ ಅಷ್ಟೆ. ಇಷ್ಟಪಟ್ಟು ಒಂದು ಕಾರ್ಯಕ್ರಮಕ್ಕೆ ಹೋಗುತ್ತೀರಾ, ಅವಕಾಶವಿದ್ದಾಗ ನೀವು ಎಲ್ಲಿ ಕೂರುತ್ತೀರಾ ನೀವೇ ಯೋಚಿಸಿ.

ಭಾಗವಹಿಸುವಿಕೆ ಸುಲಭ

ಎಂದೂ ಪ್ರಶ್ನೆಯೊಂದನ್ನು ಕೇಳದವರು, ಸಲಹೆಯೊಂದನ್ನು ನೀಡದವರರು, ನೂರಕ್ಕೆ ತೊಂಭತ್ತರಷ್ಟಿರಬಹುದು. ಅಂತಹವರಿಗೆ ಹಿಂದೂ ಒಂದೆ, ಮುಂದೂ ಒಂದೆ. ಆ ರೀತಿ ಬಾಯಿ ಬಿಡದ, ನಸುನಗದ ಮಂದಿಯಿಂದ ಬಾಷಣಕಾರರಿಗೆ ಪ್ರೇರಣೆ ಬಿಡಿ, ಹಿಂಸೆಯೇ ಆಗಬಹುದು. ಆದರೆ, ಲವಲವಿಕೆಯಿಂದ ಭಾಗವಹಿಸುವ, ಮಿಡಿಯುವ, ಪ್ರಶ್ನಿಸುವವರೆ ನೀವು? ಹಾಗಿದ್ದರೆ ಮುಂದಿನ ಸಾಲುಗಳಲ್ಲೇ ನೀವು ಕಾಣಿಸಿಕೊಳ್ಳಬೇಕು. ಅಂತಹ ಸಭಿಕರು ಸಭೆಯ ಜೀವಾಳ ಮತ್ತು ಭಾಷಣಕಾರರ ಅಂತರಾಳ. ಸಾರ್ಥಕವಾಗಿ, ಸಮರ್ಪಕವಾಗಿ ಭಾಗವಹಿಸುವ ಸಭಿಕರೇ ಕಾರ್ಯಕ್ರಮಕ್ಕೆ ಶೋಭೆ ತರುವವರು. ಪ್ರಥಮ ಮೂರು ಸಾಲುಗಳಲ್ಲಿ ಅವರು ಕಾಣಿಸಿಕೊಂಡರೆ, ಹಿಂದಿನ ಸಾಲಿನವರೂ ಅವರನ್ನು ಸೇರಿಕೊಳ್ಳುವ ಸಾಧ್ಯತೆ ಹೆಚ್ಚು. ಮುಂದಿನ ಸಾಲು ಗಳಿಂದ ಮಾತನಾಡುವುದು ಕೂಡಾ ಸುಲಭ. ಗಾಬರಿಯಿರದು, ಸ್ವರ ಏರಿಸ ಬೇಕಿಲ್ಲ.

ಒಂದು ಅನುಭವ

ಎರಡು ದಶಕಗಳ ಹಿಂದಿನ ಮಾತು. ಅದೊಂದು ಸಂಜೆ ಉಡುಪಿ ಒಂದು ಕಾಲೇಜಿನ ಸಭಾಂಗಣದಲ್ಲಿ 'ಬದುಕಲು ಕಲಿಯಿರಿ' ಕರ್ತೃ ಸ್ವಾಮಿ ಜಗದಾತ್ಮಾನಂದರ ಉಪನ್ಯಾಸವಿತ್ತು. ಇಷ್ಟ ಪಟ್ಟ ಪುಸ್ತಕದ ಲೇಖಕರ ಮಾತುಗಳಿಗಾಗಿ ಸಭೆಗೆ ಧಾವಿಸಿ, ಮೊದಲನೆ ಸಾಲಿನಲ್ಲಿ ಕುಳಿತು ಅವರ ಒಂದೊಂದು ನುಡಿಮುತ್ತಿಗೆ ಕಿವಿಯಾಗಿದ್ದೆ. ಸುಮಾರು ಒಂದೂವರೆ ತಾಸಿನ ಪ್ರವಚನದ ಕೊನೆಯಲ್ಲಿ, ಸಭಿಕರ ಕೆಲವು ಪ್ರಶ್ನೆಗಳಿಗೆ ಅವಕಾಶವಿತ್ತು. ಮುಂದಿನ ಸಾಲಿನಲ್ಲಿದ್ದ ನಾನು ಕೈ ಏರಿಸುತ್ತಲೆ ಮೈಕ್ ಸಿಕ್ಕಿತು. ನಾನು ಕೇಳಿದೆ, 'ಸ್ವಾಮೀಜಿ, ಬದುಕಲು ಕಲಿಯಿರಿ ಎನ್ನುವ ಕೃತಿ ಇಂದು ಸಾವಿರಾರು ಮನೆಯ ಸಂಗ್ರಹದ ಭಾಗವಾಗಿದೆ. ವಿಶ್ವವಿದ್ಯಾನಿಲಯಗಳು ಇದನ್ನು ಪಠ್ಯಪುಸ್ತಕವೆಂದು ಪರಿಗಣಿಸಿ ಗೌರವಿಸಿವೆ. ಈ ಹೊತ್ತಗೆ ತಿಳಿಹೇಳುವ ಸಮಗ್ರ ಮನೋವಿಜ್ಞಾನ ಮಾಹಿತಿ ಬೇರೊಂದರಲ್ಲಿ ಇರಲಿಕ್ಕಿಲ್ಲ. ಇಂತಹ ಇನ್ನೊಂದು ಕೃತಿ ಬಗ್ಗೆ ಏನಾದರೂ ಯೋಜನೆಯಿದೆಯೆ?'

ಮಾನ್ಯರು ಅತಿ ವಿನಯತೆಯಿಂದ ಹೇಳಿದ್ದೇನು ಗೊತ್ತೆ? 'ಪ್ರಾಮಾಣಿಕವಾಗಿ ಹೇಳ ಬೇಕೆಂದರೆ, ನಾನು ಏನು ಬರೆಯಬೇಕೆಂದಿದ್ದೆನೊ ಅದೆಲ್ಲವನ್ನು ಆ ಪುಸ್ತಕದಲ್ಲಿ ಬರೆದುದಾಗಿದೆ. ಉಳಿದುದನ್ನು ನಿಮ್ಮಲ್ಲೆ ಯಾರಾದರೂ ಪ್ರಯತ್ತಿಸಿ'. ಆ ಸಂಜೆ ಸ್ವಾಮೀಜಿಯವರ ಪ್ರಾಂಜಲ ಮನಸ್ಸು, ಔದಾರ್ಯಕ್ಕೆ ಸಭೆ ತಲೆಬಾಗಿತ್ತು. ಕೊನೆಯಲ್ಲಿ ಅವರ ಬಳಿ ಸಾರಿದಾಗ, ಅವರು ನುಡಿದ ಪಿಸುಮಾತುಗಳು ಕಿವಿಯಲ್ಲಿ ರಿಂಗಣಿಸುತ್ತಿವೆ, 'ನಿಮ್ಮನ್ನು ಪ್ರವಚನದ ವೇಳೆ ಗಮನಿಸಿದ್ದೆ. ಒಂದು ಕ್ಷಣವೂ ಆಚೀಚೆ ನೋಡಲಿಲ್ಲವಿತ್ತು. ಆ ಮೇಲೆ ನೀವು ಕೇಳಿದ ಪ್ರಶ್ನೆ ನನ್ನ ಮನಸ್ಸಿನಲ್ಲಿರುತ್ತದೆ'.

ಈ ಲೇಖನ ಬರೆಯುವ ವೇಳೆಗೆ ದಿವಂಗತ ಸ್ವಾಮೀಜಿಯವರ ನೆನಪಾಗಲು ಇನ್ನೂ ಒಂದು ಕಾರಣವಿದೆ. ನಾನು ಮುಂದಿನ ಸಾಲಿನಲ್ಲಿ ಕುಳಿತಿದ್ದು, ಅಲ್ಲಿಂದಲೇ ಒಂದು ಪ್ರಶ್ನೆ ಕೇಳಿದ್ದು ಮತ್ತು ಮಾನ್ಯರು ನಾನು ಸ್ಟೇಜ್‌ಗೆ ಹೋದಾಗ ನನ್ನನ್ನು ಗುರುತಿಸಿ ಎರಡು ಮಾತನ್ನಾಡಿದ್ದು, ಮುಂದಿನ ಸಾಲಿನ ಮಹಿಮೆಯಿದ್ದಿರಬಹುದೇನೊ!

ಚಿತ್ತ ವಿಹಾರ

ಅರಳುವ ಹೂವುಗಳ ಬಾಡಿಸದಿರಿ

ನಮ್ಮೆಲ್ಲರ ಬದುಕಿನ ಅತ್ಯಮೂಲ್ಯ ಹಾಗೂ ಅವಿಸ್ಮರಣಿಯ ಘಟ್ಟವೇ ಬಾಲ್ಯ. ಸಾಮಾನ್ಯವಾಗಿ ಬಾಲ್ಯವು ಸಂತೋಷ, ಆಶ್ಚರ್ಯ, ತಲ್ಲಣ ಮತ್ತು ಚೇತರಿಸಿಕೊಳ್ಳುವಿಕೆಯ ಮಿಶ್ರಣವಾಗಿರುತ್ತದೆ. ಅಲ್ಲಿ ಕಳೆದ ಪ್ರತಿಯೊಂದು ನಿಮಿಷವು ಈಗಲೂ ನಮಗೆ ರಸನಿಮಿಷಗಳಂತೆ ಭಾಸವಾಗುತ್ತವೆ. ಈ ಸಮಯದಲ್ಲಿ ಹಾರಾಟ, ತೂರಾಟ, ತುಂಟಾಟಗಳ ಮಾಡುತ್ತ ಅನೇಕರಿಂದ ಅನೇಕ ಬಗೆಯ ನಿಂದನೆಗಳ ತಿನ್ನುತ್ತ ಬದುಕುವ ಕಾಲವದು. ಮಗುವಿನ ಮನಸ್ಸು ಮಾತ್ರ ಶುದ್ಧ ಹಸಿಗೋಡೆಯಂಥದ್ದು. ನಾವು ತಿಳಿದೋ, ತಿಳಿಯದೆಯೋ ಗೋಡೆಗೆ ಎಸೆದ ಸಕಾರಾತ್ಮಕ ಹಾಗೂ ನಕಾರಾತ್ಮಕ ಅಂಶಗಳನ್ನೆಲ್ಲ ನೆನಪಿನೊಳಗೆ ಬಿಡದೇ ಹಿಡಿದಿಡುವ ಅವಧಿಯದು.

ನಮ್ಮ ಜನಪದರು ಹೇಳುವಂತೆ 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ'? ಎಂಬಂತೆ ಏನೇ ಶಿಕ್ಷಣ ಕೊಟ್ಟರೂ ಅದು ಚಿಕ್ಕ ವಯಸ್ಸಿನಲ್ಲೆ ಕೊಡಬೇಕು. ಉತ್ತಮ ಶಿಕ್ಷಣ, ಸಂಸ್ಕೃತಿ, ಸಂಸ್ಕಾರಗಳನ್ನು ನೀಡಿ ಉತ್ತಮ ನಾಗರಿಕರನ್ನಾಗಿ ರೂಪಿಸುವ ಮಹತ್ವದ ಜವಾಬ್ದಾರಿ ಹೆತ್ತವರ ಹೆಗಲ ಮೇಲಿರುತ್ತದೆ. ಸಕಲ ರೀತಿಯ ಸವಲತ್ತುಗಳ ನೀಡಿ ಮಗುವಿನ ಸರ್ವತೋಮುಖ ವ್ಯಕ್ತಿತ್ವ ವಿಕಾಸದ ಜೊತೆಗೆ ಸಮಾಜದಲ್ಲಿ ಸಮಾಜಮುಖಿಯಾಗಿ ಬೆಳೆಸುವ ದೊಡ್ಡ ಕೈಂಕರ್ಯ ನಮ್ಮಿಂದ ಆಗಬೇಕಿದೆ. ಮಗುವನ್ನು ಬರೀ ಓದಿಗೆ ಮಾತ್ರವೇ ಪರಿಮಿತ ಗೊಳಿಸಿದ್ದೇವೆ. ದಿನದ ಮೂರು ಹೊತ್ತು ಓದು, ಬರಹವೆನ್ನುವ ಸಜೆಯಿಂದ ಮಗುವಿನ ಮುಗ್ಧ ಮನಸ್ಸನ್ನು ಅರಿಯದೆ ಅವರೆದುರು ದಣಿದು ಹೋಗಿದ್ದೇವೆ. ಇದರಿಂದ ಮಗುವಿನ ದೈಹಿಕ, ಮಾನಸಿಕ, ಸಾಮಾಜಿಕ ಯೋಗಕ್ಷೇಮಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.

ಪ್ರಸ್ತುತ ಪ್ರಪಂಚದ ಯಾವುದೇ ಪರಿಜ್ಞಾನವಿಲ್ಲದೆ, ಹಗಲಿರುಳು ಆಧುನಿಕ ಮಾಧ್ಯಮಗಳ ಬಳಕೆಯಲ್ಲಿಯೇ ಕೆಲವರು ಜೀವನ ಕಳೆಯುತ್ತಿರುವುದು ನಿಜಕ್ಕೂ ಇದೊಂದು ಕಳವಳದ ಸಂಗತಿ. ಮಕ್ಕಳ ಆಸಕ್ತಿ, ಅಭಿರುಚಿಗೆ ತಕ್ಕಂತೆ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸುವುದರ ಮೂಲಕ ಅರಳುವ ಮುನ್ನ ಮಕ್ಕಳೆಂಬ ಹೂವುಗಳು ಬಾಡದಂತೆ ನೋಡಿಕೊಳ್ಳುವ ಹೊಣೆ ನಮ್ಮದಾಗಿದೆ.

● ರಂಗನಾಥ್ ಗುಡಿಮನಿ

ಪದಬಂಧ



ಎಡದಿಂದ ಬಲಕ್ಕೆ

1. ಚೊಕ್ಕವಾದ ಚಿನ್ನ (4)
4. ಎರಡು ತಂಡಗಳ ನಡುವೆ ನಡೆಯುವ ಹೊಡೆದಾಟ (4)
6. ತಾವರೆಗೆ ಮತ್ತೊಂದು ಹೆಸರು (3)
7. ಸಂಪೂರ್ಣವಾದ ಅಥವಾ ಎಲ್ಲವನ್ನು ತಿಳಿದವನು (3)
9. ಜಮದಗ್ನಿಯ ಮಗನ ಕೈಯಲ್ಲಿರುವ ಕೊಡಲಿ (3)
12. ಮೂಲಕೃತಿಯಿಂದ ಸ್ಥೂಲವಾಗಿ ಮಾಡಿದ ಭಾಷಾಂತರ (5)
13. ಭರವಲ್ಲದ್ದು ದಿಕ್ಕು ತಪ್ಪಿಸಿ ಬಂದಿದೆ (3)
15. ನಯವಾಗಿಯೇ ಬಂದಿರುವ ಮಗ (3)
18. ಹಕ್ಕಿಗಳ ಧ್ವನಿ ಮಂದಿಯೊಂದಿಗೆ ಬಂದಿದೆ (3)
19. ಮನಸ್ಸುಗಳ ನಡುವಿನ ವಿರಸ (4)
20. ಮಧುರವಾದ ಧ್ವನಿ ತಿರುಗಿ ಬಂದಿದೆ (4)

ಮೇಲಿನಿಂದಕೆಳಕ್ಕೆ

2. ಪರಿಪರಿಯಾಗಿ ಮಾಡಿದ ತಿದ್ದುಪಡಿ (4)
3. ಉದ್ದವಾಗಿರುವ ಕತ್ತಿನ ಪ್ರಾಣಿ (3)
4. ತಾಯಿಯ ಸಹೋದರ (2)
5. ಅಳೆಯುವ ಸಾಧನ (3)
7. ಒಡಹುಟ್ಟಿದವನು (4)
8. ಬಳ್ಳಿಯ ಮಂಟಪವಿದು (4)
9. ಪಂದ್ಯದಲ್ಲಿ ಸೋತವನು (4)
10. ಒಳ್ಳೆಯದಾಗಲೆಂದು ಹಾರೈಸುವಿಕೆ (4)
11. ವಿರಳವಾಗಿ ಬಂದಿರುವ ಹುಟ್ಟು (3)
14. ಹಿಂದಿನ ಕಾಲದ ಶಿಕ್ಷಣ ಕೇಂದ್ರ (4)
16. ಎರಡು ಕಡೆಯಿಂದ ನೋಡಿದರೂ ಹೊಸದೇ (3)
17. ಮಾನವನಲ್ಲ, ರಾಕ್ಷಸ (3)
18. ಮಂಡೂಕವಿದ್ದ ಬಾವಿ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 5. ಕವಾಯತು 6. ಗಡಿಯಾರ 7. ದಿನಸಿ 9. ಪಂಡಿತ 10. ಡಿರಕ 11. ಚಕಿತ 13. ಜವಾಬು 17. ಪಶುಪತಿ 18. ಸವಿನುಡಿ

ಮೇಲಿನಿಂದ ಕೆಳಕ್ಕೆ: 1. ಪಕಳೆ 2. ಜಾಯಮಾನ 3. ಗಡಿಯಾರ 4. ಸುರಭಿ 8. ಸಿಡಿತ 9. ಪಂಕಜ 12. ಕಿತಾಪತಿ 14. ವಾಸ್ತವಿಕ 15. ಶಪಥ 16. ಸಡಿಲು

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ತಪಸ್ಸಿನ ಫಲದಕ್ಕಿಂತ ದೊಡ್ಡದು ಸತ್ಸಂಗದ ಫಲ!

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ವಶಿಷ್ಠ ಮಹರ್ಷಿಗಳು ಒಂದು ಸಾರಿ ಒಂದು ಸಪ್ತಾಹ ಮಾಡಿದರು, ವಿಶ್ವಾಮಿತ್ರ ಋಷಿಗಳನ್ನು ಅದರ ಅಧ್ಯಕ್ಷತೆಗೆ ಕರೆದಿದ್ದರು. ಸಪ್ತಾಹವೆಲ್ಲ ಮುಗಿದು ಪೂರ್ಣಾಹುತಿಯಾದ ಮೇಲೆ ಅಧ್ಯಕ್ಷರು ಹೊರಡುವಾಗ ವಶಿಷ್ಠರು ಸಂಭಾವನೆಯಾಗಿ ತಮ್ಮ ಸತ್ಸಂಗದ 1/4 ಘಳಿಗೆಯ ಫಲವನ್ನು ಸಂಕಲ್ಪ ಪೂರ್ವಕವಾಗಿ ಧಾರೆ ಎರೆದರು. ವಿಶ್ವಾಮಿತ್ರರಿಗೆ ಇದು ತೃಪ್ತಿಕೊಡಲಿಲ್ಲ, ಹಠವಾದಿಯಾದ ವಿಶ್ವಾಮಿತ್ರರು ತಾವೂ ಒಂದು ಸಪ್ತಾಹವನ್ನು ಮಾಡಲು ನಿಶ್ಚಯಿಸಿ ಅದರ ಅಧ್ಯಕ್ಷತೆಗೆ ವಶಿಷ್ಠರನ್ನೇ ಕರೆದರು ಸಪ್ತಾಹದ ಅಂತ್ಯದಲ್ಲಿ. ತಮ್ಮ ಹನ್ನೆರಡು ವರ್ಷದ ತಪಸ್ಸಿನ ಫಲವನ್ನೇ ಧಾರೆ ಎರೆದರು, ತಪಸ್ಸು ನಿನ್ನ ಕರ್ಮದ ಫಲ ಅದನ್ನು ನೀನೆ ಭೋಗಿಸಬೇಕು ವಿನಃ ಹೀಗೆ ಧಾರೆ ಎರೆಯಬಾರದು. ಮೇಲಾಗಿ ನಿನ್ನ ತಪಸ್ಸಿನ ಫಲ ಸತ್ಸಂಗದ ಫಲಕ್ಕಿಂತ ಹೆಚ್ಚಿನದೇನಲ್ಲ ಎಂದು ವಶಿಷ್ಠರು ತಿರಸ್ಕರಿಸಿದರು ಇದರಿಂದ ಉಂಟಾದ ಜಗಳದಲ್ಲಿ ಪಂಚಾಯಿತಿ ನಡೆದು ಸತ್ಸಂಗದ ಫಲ ದೊಡ್ಡದೇ ತಪಸ್ಸಿನ ಫಲ ದೊಡ್ಡದೇ ಎಂದು ನ್ಯಾಯ ತೀರ್ಮಾನ ಕೊಡಲು ಸೂರ್ಯ, ವಾಯು, ಅಗಸ್ತ್ಯ, ಆದಿಶೇಷನನ್ನು ಕರೆಸುವುದು. ಇವರನ್ನು ಕರೆತರಲು ವಿಶ್ವಾಮಿತ್ರರೇ ಹೋಗಿ ಬರಬೇಕೆಂದು ಪಂಚಾಯಿತಿ ಯಲ್ಲಿ ತೀರ್ಮಾನವಾಯಿತು.

ವಿಶ್ವಾಮಿತ್ರರು ನೇರವಾಗಿ ಸೂರ್ಯನಲ್ಲಿ ವಿಚಾರ ತಿಳಿಸಿ ತಾವು ಪಂಚಾಯ್ತಿ ಹೇಳಲು ಬರ ಬೇಕೆಂದು ಕೇಳಿಕೊಂಡರು. ಅಗ ಸೂರ್ಯ ಜಗತ್ತಿಗೆ ಬೆಳಕು ಮತ್ತು ಶಾಖ ಪ್ರಸಾರಕ್ಕೆ ಭಗವಂತ ನನ್ನ ನೇಮಿಸಿದ್ದಾನೆ, ಈ ಕಾರ್ಯಕ್ಕೆ ಬೇರೆ ಯಾರನ್ನಾದರೂ ಕೂರಿಸಿದರೆ ನಾನು ಇಲ್ಲಿಂದ ನಿಮ್ಮಲ್ಲಿಗೆ ಬರುವೆನು ಎಂದನು. ಈ ಕೆಲಸ ಯಾರಿಂದ ಮಾಡಲು ಸಾಧ್ಯ? ಅಲ್ಲಿಂದ ವಾಯು ದೇವನು ಸಹ ನನ್ನ ಕಾರ್ಯಕ್ಕೆ ಯಾರನ್ನಾದರೂ ಕಳುಹಿಸು ಎಂದನು. ಅಲ್ಲಿಂದ ನೇರವಾಗಿ ಅಗಸ್ತ್ಯ ಬಳಿ ಬಂದು ಆಹ್ವಾನಿಸಲು ಅವರು ಹೇಳಿದರು ನಾನು ಬೆಳೆಯುತ್ತಿರುವ ಈ ವಿಂಧ್ಯಾ ಪರ್ವತದ ತಲೆಯ ಮೇಲೆ ಕೈ ಇಟ್ಟು ಕೊಂಡಿದ್ದೇನೆ. ನಾನು ಕೈತೆಗೆದರೆ ಅದು ಪುನಃ ಬೆಳೆಯಲು ಪ್ರಾರಂಭಿಸಿ ಜನತೆಗೆ ತುಂಬಾ ತೊಂದರೆ ಕೊಡುತ್ತದೆ ಆದ್ದರಿಂದ ಈ ಕೆಲಸಕ್ಕೆ ಬೇರೆ ಯಾರಾದರೂ ಸಿಕ್ಕರೆ ನಾನು ಬರುವೆನೆಂದರು. ನಾಲ್ಕನೆಯವ ಆದಿಶೇಷನಲ್ಲಿ ಹೋಗಿ ಕರೆಯಲಾಗಿ ಅವನೆಂದನು ನಾನು ಈ ಭೂಮಿಯನ್ನು ತಲೆಯಮೇಲೆ ಹೊತ್ತಿದ್ದೇನೆ, ಬೇರೆಯಾರಾದರೂ ಬಂದು ಹೊರಲು ಸಿದ್ಧರಾ ದರೆ ನಾನು ಬರುವೆನೆಂದರು. ಅವಮಾನಿತನಾದ ವಿಶ್ವಾಮಿತ್ರರು ವಶಿಷ್ಠರಲ್ಲಿಗೆ ಬಂದು ಪಂಚಾಯಿತಿಸ್ಥರು ನನ್ನ ಮಾತಿಗೆ ಬರಲಿಲ್ಲ. ನೀವೇ ಕರೆದುಕೊಂಡು ಬನ್ನಿರಿ ಎಂದು ತನ್ನ ಭಾರ ಇಳಿಸಿ ಕೊಂಡರು. ಹೇಗೆ ಈ ವಶಿಷ್ಠ ಕರೆತರುತ್ತಾರೋ ನಾನು ನೋಡೇ ಬಿಡುವೆ ಎಂದು ಕುಳಿತುಕೊಂಡರು.

ಮಾರನೇ ದಿನ ವಶಿಷ್ಠರು ನೇರವಾಗಿ ಸೂರ್ಯ ನಲ್ಲಿಗೆ ಹೋಗಿ ಕರೆಯಲು ಅದೇ ಉತ್ತರ ಬಂತು, ತಕ್ಷಣ ವಶಿಷ್ಠರು ತಮ್ಮ ಜಪಮಾಲೆಯನ್ನು ತೆಗೆದು ಅಭಿಮಂತ್ರಿಸಿ ನಾನು ಸತ್ಸಂಗ ಮಾಡಿದ್ದು ನಿಜವಾದರೆ ಸೂರ್ಯನ ಕಾರ್ಯವನ್ನು ಈ ಜಪಸರ ಮಾಡಲಿ ಎಂದು ಸಂಕಲ್ಪ ಮಾಡಲು ಸೂರ್ಯನ ಕೆಲಸಕ್ಕೆ ಜಪಮಾಲೆ ನಿಂತುಕೊಂಡಿತು. ನಂತರ ವಶಿಷ್ಠರು ವಾಯುವಿನ ಬಳಿ ಬಂದು, ವಾಯುವಿನ ಕೆಲಸಕ್ಕೆ ತಮ್ಮ ಬೀಸಣಿಕೆಯನ್ನು ನಿಯಮಿಸಿ ಕೆಲಸ ಮಾಡು ಎಂದು ಸಂಕಲ್ಪ ಮಾಡಲು ಸತ್ಸಂಗದ ಪ್ರಭಾವದಿಂದ ಬೀಸಣಿಕೆ ಕೆಲಸ ಪ್ರಾರಂಭ ಮಾಡಿತು. ಅದೇ ರೀತಿ ಅಗಸ್ತ್ಯ ಕಾರ್ಯಕ್ಕೆ ತಮ್ಮ ಕಮಂಡಲನ್ನೂ, ಆದಿಶೇಷನ ಕಾರ್ಯಕ್ಕೆ ತಮ್ಮ ಯೋಗ ದಂಡವನ್ನೂ ನೇಮಿಸಿ ಅವರೆಲ್ಲರನ್ನೂ ಕರೆದು ಕೊಂಡು ವಿಶ್ವಾಮಿತ್ರರ ಹತ್ತಿರ ಬಂದರು. ಈ ಚಮತ್ಕಾರವನ್ನು ನೋಡು ತ್ತಿದ್ದಂತೆಯೇ ವಿಶ್ವಾಮಿತ್ರರಿಗೆ ಅರ್ಥವಾಯಿತು ಸತ್ಸಂಗದ ಫಲವು ತಪಸ್ಸಿನ ಫಲಕ್ಕಿಂತಲೂ ಹೆಚ್ಚಿನದೆಂದು. ಅಲ್ಲಿ ಮತ್ತೇನು ಪಂಚಾಯತಿಗೆ ಅವಕಾಶವೇ ಇರಲಿಲ್ಲ ತಮ್ಮ ತಪ್ಪನ್ನು ತಾವೇ ಒಪ್ಪಿಕೊಂಡರು. ಸತ್ಸಂಗವು ಮಾನವರನ್ನು ಮಾಧವನನ್ನಾಗಿ ಮಾಡುತ್ತದೆಂಬ ವಿಚಾರವನ್ನು ಶಂಕರಾಚಾರ್ಯರು ತಮ್ಮ ಭಜಗೋವಿಂದಂ ಸ್ತೋತ್ರದಲ್ಲಿ ಹೇಳಿದ್ದಾರೆ. ಈ ಮಾತು ನಮ್ಮೆಲ್ಲರಿಗೂ ಅನ್ವಯಿಸುತ್ತದೆ ಅಲ್ಲವೇ?

ಹೆಲ್ತ್ ಕಾರ್ನರ್

ಮನೆಯಲ್ಲೇ ಲಭ್ಯವಿರುವ, ಪೌಷ್ಟಿಕಾಂಶಗಳ ಕಣಜ ಎಂದೇ ಹೇಳಬಹುದಾದ ಮೊಳಕೆಕಾಳುಗಳ ಮಹತ್ವವನ್ನು ಎಲ್ಲರೂ ಅರಿತಿಲ್ಲ. ಹೆಸರು ಕಾಳು, ಮೆಂತೆ, ಹುರುಳಿ ಕಾಳುಗಳನ್ನು ಅರ್ಧ ದಿನ ನೆನೆಸಿ, ನೀರು ಬಸಿದು, ಬಟ್ಟೆಯಲ್ಲಿ ಕಟ್ಟಿ ಇಟ್ಟರೆ ಉತ್ತಮ ಗುಣಮಟ್ಟದ ಮೊಳಕೆ ಕಾಳುಗಳು ದೊರೆಯುತ್ತವೆ. ಇದನ್ನು ಹಸಿ ತಿನ್ನಬಹುದು ಅಥವಾ ಬೇಯಿಸಿಯೂ ಪಲ್ಯ, ಉಸಲಿಯ ರೂಪದಲ್ಲಿ ತಿನ್ನಬಹುದು. ಮೊಳಕೆ ಕಾಳುಗಳಲ್ಲಿ ವಿಟಮಿನ್ ಬಿ, ವಿಟಮಿನ್ ಸಿ ಹೇರಳವಾಗಿದೆ. ಕೂದಲುಗಳ ಆರೋಗ್ಯಕ್ಕೆ, ಕಣ್ಣುಗಳ ಆರೋಗ್ಯ ಕಾಪಾಡಲು ಇವುಗಳ ಉಪಯೋಗವಿದೆ. ಪ್ರತಿದಿನ ಬೆಳಗ್ಗೆ ಒಂದು ಮುಷ್ಟಿ ಮೊಳಕೆ ಕಾಳು ತಿನ್ನುವುದು ಉತ್ತಮ ಅಭ್ಯಾಸ ಎನಿಸಿದೆ.

● ಅಜಯ್ ಅಂಚೆಪಾಳ್ಯ

ದಿನಕ್ಕೊಂದು ಮಾಹಿತಿ

ಮೊದಲ ಅನಿಮೇಟೆಡ್ ಸಿನಿಮಾ

ವಿಶ್ವದ ಮೊದಲ ಅನಿಮೇಟೆಡ್ ಚಲನಚಿತ್ರವನ್ನು ಅರ್ಜೆಂಟೀನಾದಲ್ಲಿ ನಿರ್ಮಿಸಲಾಯಿತು.

1917ರಲ್ಲಿ 58,000 ರೇಖಾಚಿತ್ರಗಳಿಂದ ಮಾಡಲಾದ ಎಲ್ ಅಪೋಸ್ಟೋಲ್ ಎಂಬ ರಾಜಕೀಯ ವಿಡಂಬನೆಯ ಸಿನಿಮಾ ಇದಾಗಿದೆ. 70 ನಿಮಿಷಗಳ ಕಾಲಾವಧಿಯ ಈ ಚಿತ್ರ ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲೂ ದಾಖಲಾಗಿದೆ. ಇಟಾಲಿಯನ್-ಅರ್ಜೆಂಟೀನಾದ ಕ್ವಿರಿನೊ ಕ್ರಿಸ್ಟಿಯಾನಿ ಮತ್ತು ಫೆಡೆರಿಕೊ ವ್ಯಾಲೆ ಕೇವಲ ಒಂದೇ ವರ್ಷದೊಳಗೆ ಈ ಸಿನಿಮಾ ನಿರ್ದೇಶಿಸಿ, ನಿರ್ಮಿಸಿದ್ದಾರೆ. ವಿಪರ್ಯಾಸವೆಂದರೆ ವ್ಯಾಲೆ ಸ್ಟುಡಿಯೊದಲ್ಲಿ 1926 ರಲ್ಲಿ ಸಂಭವಿಸಿದ ಬೆಂಕಿ ಅನಾಹುತದ ಸಂದರ್ಭ ಚಲನಚಿತ್ರವು ಸಂಪೂರ್ಣವಾಗಿ ನಾಶವಾಯಿತು.

ಪುಸ್ತಕ ಲೋಕ

ಬಣ್ಣವೊರೆಸುವ ಎಣ್ಣೆಗನ್ನಡಿ

'ಬಣ್ಣವೊರೆಸುವ ಎಣ್ಣೆಗನ್ನಡಿ' ಹನ್ನೊಂದು ಲಲಿತ ಪ್ರಬಂಧಗಳನ್ನು ಒಳಗೊಂಡ ಕೃತಿ. ತಾವು ಕಂಡ ಪ್ರಸಂಗಗಳನ್ನೇ ಲೇಖನಿ ಮೂಲಕ



ಹುರಿಗೊಳಿಸಿ ಓದುಗರಿಗೆ ನೀಡಿದ್ದಾರೆ ಪ್ರಜ್ಞಾ ಮತ್ತಿಹಳ್ಳಿ. ನಾಟಕ ಮತ್ತು ಬದುಕು ಒಂದೇ ನಾಣ್ಯದ ಎರಡು ಮುಖಗಳು ಎನ್ನುವುದನ್ನು ಅಲ್ಲಿ ಬಣ್ಣಕಳಚುವ ಪಾತ್ರಗಳೇ ಹೇಳಿಬಿಡುವುದರಿಂದ ಕೃತಿ ವಿಶಿಷ್ಟ ಎನಿಸುತ್ತದೆ. ನೆನಪಿನ ರಂಗಸ್ಥಳದಲ್ಲಿ ಆಟ ಕುಣಿದು ಹೋದ ಮೇಲೆ ಬಿದ್ದ ಒಂದೊಂದೇ ಮಣಿಮುತ್ತುಗಳನ್ನು ಬಣ್ಣದ ಜರಿಗಳನ್ನು ಹೆಕ್ಕಿ ಒಂದು ಸರ ಪೋಣಿಸಿದಂತೆ ಲೇಖಕಿ ಮನಸಿಗಿಷ್ಟವಾಗುವ ನುಡಿಚಿತ್ರಗಳನ್ನು ಪೋಣಿಸಿ ಓದುಗರ ಮುಂದಿಟ್ಟಿದ್ದಾರೆ.

ಟ್ವೀಟ್‌ಮೆಂಟ್

ಡಾ. ರಿಯಾ: ಭಾರತದಲ್ಲಿ ಯಾವುದಕ್ಕೆ ತೆರಿಗೆ ಇಲ್ಲ?
ಬ್ರೈನ್ ಬೈಟ್ಸ್: ರಾಜಕಾರಣಿಗಳ ಭರವಸೆಗಳು